ಶ್ರೀ

ಸಾಸ್ವಸ್ಕಂದಾವನಾಖ್ಯಾನವು ಪಂಡಿತರಿಂದಲೂ ಪಾರಾಯಣಾರ್ಹ

ಕ್ರೈ ಪಿ ಡಿ

ಹೆಚ್. ಸುಬ್ಬರಾವ್, ಎಂ. ಎ.

ಸಂಪಾದಕರು.

ಪ್ರಕಾಶಕರು :

ಪರ್ಯಾಯ ಶ್ರೀ ಸೋದೆ ವಾದಿರಾಜಮಠ, ಉಡುಪಿ ದ. ಕ.

1980.

ವಿಷಯಾನುಕ್ರಮಣಿಕೆ

ಶ್ರೀಶ್ರೀಗಳವರ ಮುನ್ನುಡಿ i

ಸಂಪಾದಕರ ಬಿನ್ನಹ iii

ಭಾಗ I. ಅಧ್ಯಾಯ 1 ಸ್ವತಃಪ್ರಮಾಣ ಗ್ರಂಥ 1

ಅಧ್ಯಾಯ 2 ಆಖ್ಯಾನದ ಸ್ವರೂಪ ಮಹತ್ವ 8

ಅಧ್ಯಾಯ 3 ವಾದಿರಾಜ ಗುರುಗಳ ಅವತಾರ ಪ್ರಯೋಜನಗಳು 16

ಅಧ್ಯಾಯ 4 ಗುರುರಾಜರಿಂದ ಆದ ವಿಶೇಷ ದೇವಕಾರ್ಯ 22

ಅಧ್ಯಾಯ 5 ಉತ್ತಮ ಗ್ರಂಥದ ಅವಿಶ್ವಾಸದಿಂದ ಹಾನಿ 26

ಅಧ್ಯಾಯ 6 ಸಫಲದೇವತೋಷಣವು ಹೇಗಿರಬೇಕು ? 28

ಅಧ್ಯಾಯ 7 ಪ್ರಮೇಯ ಶೋಧನೆ 33

ಅಧ್ಯಾಯ 8 ಸೇವಿಸುವ ಪಂಡಿತರೇ ಮುಂತಾದವರಿಗಾಗುವ ಫಲ 41

ಅಧ್ಯಾಯ 9 ಮಹಾತ್ಮರ ಮಹತ್ವವನ್ನು ಎಷ್ಟು ಕೊಂಡಾಡಿದರೂ ಸಾಲದು 52

ಅಧ್ಯಾಯ 10 ವಿಭ್ರಮವಂತರಿಗೆ ವಿಪರೀತ ಫಲವನ್ನೇ ದೇವರು, ದೇವತೆಗಳು
ಮತ್ತು ವೃಂದಾವನಸ್ಥ ಗುರುಗಳೂ ಕೊಡುತ್ತಾರೆ 54

ಭಾಗ II.

ಪ್ರಥಮಾಧ್ಯಾಯ	58
ದ್ವಿತೀಯಾಧ್ಯಾಯ	60
ತೃತೀಯಾಧ್ಯಾಯ	60
ನಾಲ್ಕನೇ ಅಧ್ಯಾಯ	62
ಐದನೇ ಅಧ್ಯಾಯ	64
ಆರನೇ ಅಧ್ಯಾಯ	65
ಏಳನೆಯ ಅಧ್ಯಾಯ	67
ಎಂಟನೆಯ ಅಧ್ಯಾಯ	69
ಒಂಭತ್ತನೆಯ ಅಧ್ಯಾಯ	70
ದಶಮಾಧ್ಯಾಯ	73
ಹನ್ನೊಂದನೇ ಅಧ್ಯಾಯ	75
ಹನ್ನೆರಡನೇ ಅಧ್ಯಾಯ	76
ಹದಿಮೂರನೇ ಅಧ್ಯಾಯ	78
ಹದಿನಾಲ್ಕನೇ ಅಧ್ಯಾಯ	80
ಹದಿನೈದನೇ ಅಧ್ಯಾಯ	81
ಹದಿನಾರನೇ ಅಧ್ಯಾಯ	83
ಹದಿನೇಳನೇ ಅಧ್ಯಾಯ	86
ಹದಿನೆಂಟನೇ ಅಧ್ಯಾಯ	88
ಹತ್ತೊಂಭತ್ತನೇ ಅಧ್ಯಾಯ	90
ಇಪ್ಪತ್ತನೇ ಅಧ್ಯಾಯ	93
ಇಪ್ಪತ್ತೊಂದನೇ ಅಧ್ಯಾಯ	95
ಇಪ್ಪತ್ತೆರಡನೇ ಅಧ್ಯಾಯ	97

ಭಾಗ III.

ಅಧ್ಯಾಯ 1 – ಆಖ್ಯಾನದ ಅದ್ಭುತತ್ವ	100
ಅಧ್ಯಾಯ 2 - ಪೂರ್ವಪಕ್ಷ ಪ್ರಕ್ರಿಯೆಗಳು	102
ಅಧ್ಯಾಯ 3 - ಸಹಾಯಕ ಗ್ರಂಥಗಳು	110
ಅಧ್ಯಾಯ 4 – ವಾದಿರಾಜರ ಮಹಿಮೆಗಳು	113

ಶ್ರೀಕೃಷ್ಣಾರ್ಪಣಮಸ್ತು

ಸ್ವಸ್ತಿಕ ಪ್ರಿಂಟಿಂಗ ಪ್ರೆಸ್, ಬೆಳಗಾವಿ.

ಶ್ರೀ

ಶ್ರೀಶ್ರೀಗಳವರ ಮುನ್ನುಡಿ

ವ್ಯಾಸಾಯ ಭವನಾಶಾಯ ಶ್ರೀಶಾಯ ಗುಣರಾಶಯೇ ।
ಹೃದ್ಯಾಯ ಶುದ್ಧ ವಿದ್ಯಾಯ ಮಧ್ವಾಯ ಚ ನಮೋ ನಮಃ ॥
ತಪೋವಿದ್ಯಾವಿರಕ್ತ್ಯಾದಿ ಸದ್ಗುಣೌಘಾಕರಾನಹಂ ।
ವಾದಿರಾಜಗುರೂನ್ ವಂದೇ ಹಯಗ್ರೀವದಯಾಶ್ರಯಾನ್ ॥

ಶ್ರೀವಾದಿರಾಜತೀರ್ಥಗುರುಗಳು.

ಶ್ರೀವಿಶ್ವೋತ್ತಮತೀರ್ಥ ಶ್ರೀಪಾದಂಗಳವರು

ಭಾವಿ ಸಮೀರ ಶ್ರೀ ವಾದಿರಾಜ ಗುರುವರೇಣ್ಯರು, ಋಜುಗಳಲ್ಲವೆಂದು ದಿವ್ಯ ಚಕ್ಷುಸ್ಸಿನ ಪ್ರತ್ಯಕ್ಷ ಪ್ರಮಾಣವಾಗಲೀ, ಆಗಮ ಪ್ರಮಾಣವಾಗಲೀ ಯಾವುದೊಂದೂ ಇಲ್ಲದಿದ್ದರೂ ತಮ್ಮ ಶುಷ್ಕ ಯುಕ್ತಿಗಳಿಂದ ಕೆಲವು ಜನ ಪಂಡಿತರು ಭಕ್ತರ ಬುದ್ಧಿಯನ್ನು ಕೆಡಿಸಿ ಶ್ರೀ ಗುರುರಾಜರ ಭಕ್ತರು ಮಾಡುತ್ತಿರುವ ಸೇವೆಗೆ ಯೋಗ್ಯ ಫಲ ಬಾರದಂತೆ ಮಾಡುತ್ತಿದ್ದಾರೆ. ಈ ವಿಷಯದಲ್ಲಿ ಯಥಾರ್ಥವಾದ ವಿಷಯ ನಿರೂಪಣೆಯಾಗಬೇಕು ಎಂದು ಅನೇಕ ಭಕ್ತರು ಕೇಳಿಕೊಂಡಿದ್ದರಿಂದ ಹಿಂದೆ ಋಜುತ್ವ ಸಿದ್ಧಾಂತವನ್ನು ಬರೆದಿದ್ದ ಶ್ರೀಗುರುರಾಜರ ನಿಸ್ಸೀಮ ಭಕ್ತರೂ, ಪಂಡಿತೋತ್ತಮರೂ ಆಗಿರುವ ಶ್ರೀ. H. ಸುಬ್ಬರಾವ್, M. A. ಇವರಿಂದಲೇ, ಈಗಲೂ ಸಂಸ್ಕೃತದಲ್ಲಿ ಮುದ್ರಿತವಾದ ಸ್ವಾಪ್ನ ವೃಂದಾದನಾಖ್ಯಾನ ಪ್ರತಿಗೆ ಸಹಾಯಕವಾಗುವಂತೆ ಕನ್ನಡದಲ್ಲಿ ಗ್ರಂಥ ಒಂದು ಈ ನಮ್ಮ ಪರ್ಯಾಯ ಕಾಲದಲ್ಲೇ ಮುದ್ರಣಗೊಂಡು ಪ್ರಕಾಶಿತವಾಗುತ್ತಿರುವುದು ಸಂತೋಷದ ಸಂಗತಿ. ಮೂಲಗ್ರಂಥದ ಅರ್ಥ ಸಾಮಾನ್ಯವಾಗಿ ಎಲ್ಲರಿಗೆ ತಿಳಿಯಲೆಂದು ವೃಂದಾವನಾಖ್ಯಾನದ ಪ್ರತಿ ಅಧ್ಯಾಯದ ಸಾರಾಂಶವನ್ನೂ ಇದರಲ್ಲಿ ಕೊಡಲಾಗಿದೆ. ಸಜ್ಜನರಿಗೆ ಅತ್ಯುಪಯುಕ್ತವಾದ ಈ ಗ್ರಂಥದಲ್ಲಿ "ಆಖ್ಯಾನವು ಸ್ವತಃ

ಪ್ರಮಾಣಗ್ರಂಥ, ಆಖ್ಯಾನದ ಮಹತ್ವ - ವೈಶಿಷ್ಟಗಳು, ಶ್ರೀವಾದಿರಾಜ ಗುರುಗಳ ಅವತಾರ ಮತ್ತು ಪ್ರಯೋಜನ, ವಿಶೇಷ ದೇವಕಾರ್ಯದ ವಿತರಣೆ, ಉತ್ತಮ ಗ್ರಂಥದ ಅವಿಶ್ವಾಸದಿಂದಾಗುವ ಹಾನಿ, ಪ್ರಮೇಯ ಶೋಧನೆ, ಸೇವಿಸುವ ಪಂಡಿತರೇ ಮುಂತಾದವರಿಗಾಗುವ ಫಲ, ವಿಭ್ರಮವಂತರಿಗೆ ವಿಪರೀತ ಫಲವನ್ನೇ ದೇವರು - ದೇವತೆಗಳು ಮತ್ತು ವೃಂದಾವನಸ್ಥ ಗುರುಗಳೂ ಕೊಡುತ್ತಾರೆಂಬ ಅನೇಕ ಪ್ರಮುಖ ಸಂಗತಿಗಳು ಸಪ್ರಮಾಣೋದಾಹರಣೆಗಳಿಂದ ನಿರೂಪಿಸಲ್ಪಟ್ಟಿವೆ. ಕೊನೆಯಲ್ಲಿ ಲೇಖಕರು ಸ್ವಾಪ್ನವೃಂದಾವನಾಖ್ಯಾನದ ಸಾರಾಂಶವನ್ನು ಅರ್ಥವತ್ತಾಗಿ ವಿವರಿಸಿ " ಇದು ವಿಶೇಷತಃ ಮಂತ್ರ ರೂಪವಾಗಿ, ಪಾರಾಯಣಕ್ಕಾಗಿಯೇ ರಚಿತವಾದದ್ದೆಂದು ತಿಳಿದು ಈ ದೈವಿಕ ಆಖ್ಯಾನದನ್ನು ಸೇವಿಸಬೇಕು. ಸರ್ವ ಆಪತ್ತುಗಳೂ ಮಂಜಿನಂತೆ ಕರಗಿ ಹೋಗುತ್ತವೆ. ಅನಿರೀಕ್ಷಿತ ಸಿದ್ಧಿಗಳು ಮನಃಪ್ರಸಾದವಾಗುವಂತೆ ಒದಗಿ ಬರುತ್ತವೆ. ಈ ಮರ್ಮಗಳನ್ನು ತಿಳಿಯದೆ ಇದರಲ್ಲಿ ತಾತ್ಸಾರಮಾಡಿ ಇತರರಿಗೂ ತಲೆ ಪ್ರತಿಷ್ಠೆ ಮಾತುಗಳಿಂದ ಅನುಪಾದೇಯತ್ವ ಬುದ್ಧಿ ಹುಟ್ಟಿಸಿದರೆ ಹಾಗೆ ಮಾಡುವವನು ಮಾಡಿದ ಸಾಧನೆಯನ್ನು ಹಾಳುಮಾಡಿಕೊಂಡು ದೇವ - ಗುರು ದ್ರೋಹವನ್ನು ಹೊಂದುತ್ತಾನೆ. ಆದ್ದರಿಂದ ದೊಡ್ಡವರ ಉಪದೇಶ ಹೊಂದಿ ಭಯಭೀತಿಗಳಿಂದ ಸಾತ್ವಿಕ ವಿಮರ್ಶೆಯನ್ನು ಮಾಡಬೇಕು " ಎಂಬ ತಮ್ಮ ಸಿದ್ಧಾಂತವನ್ನು ತರ್ಕಬದ್ಧವಾಗಿ ಸಮರ್ಥಿಸಿದ್ದಾರೆ. ಉಪಸಂಹಾರದಲ್ಲಿ ಮುಂದೆ ಯಾರಾದರೂ ಮನಸ್ಸು ಬಂದಂತೆ ಮಾತಾಡಿದರೂ ಸಜ್ಜನ ಸೇವಕರಿಗೆ ಭಕ್ತಿ, ಸ್ಥೈರ್ಯ ಹೋಗದಂತೆ ಇರಬೇಕೆಂದು '' ಸ್ತೋತ್ರ ಮಂಜರೀ ''. " ನಯ ಸಿದ್ಧಾಂತ ಸಂಗ್ರಹ " ಮುಂತಾದ ನಿರಾಧಾರ ಗ್ರಂಥಗಳಿಗೆ ಸಮುತ್ತರ ಕೊಡುವ ರೀತಿಯನ್ನು ತೋರಿಸಿ ಶ್ರೀವಾದಿರಾಜಗುರುವರೇಣ್ಯರ ಮಹಿಮಾತಿಶಯವನ್ನೂ ಶ್ರೀ ಸುಬ್ಬರಾಯರು ತಮ್ಮ ಗ್ರಂಥದಲ್ಲಿ ಪ್ರಶಂಸನೀಯವಾಗಿ ವಿವರಿಸಿರುತ್ತಾರೆ.

ವೃಂದಾವನಾಖ್ಯಾನವು ದಿವ್ಯ ಸ್ವತಃ ಪ್ರಮಾಣ ಲೋಕೋಪಕಾರಿಯಾದ ಶಾಸ್ತ್ರಗಂಥ. ಅನೇಕ ಪ್ರಮಾಣಗಳಿಂದ, ಯುಕ್ತಿಗಳಿಂದ, ಅನುಭವದಿಂದ ಇದನ್ನು ನಾವು ಸ್ಪಷ್ಟವಾಗಿ ತಿಳಿದುಕೊಳ್ಳಬಹುದು. ಮಾತ್ರವಲ್ಲ, ಅಧ್ಯೇತೃ ಜನರ ಸಾಕ್ಷಿಯೂ, ಸೇವಾಮಾಡುವ ಋಜುತ್ವ ಭಾವುಕರ ಅನುಭವಗಳೂ, ಗ್ರಂಥ ಪ್ರಾಮಾಣ್ಯಕ್ಕೆ ಸಾಕಷ್ಟು ದಾರ್ಢ್ಯವನ್ನೇ ಉಂಟು ಮಾಡುತ್ತವೆ. ಕರ್ನಾಟಕದ ಜ್ಞಾನಿಜನರ ನಿರೂಪಣೆ, ಆಖ್ಯಾನೋಕ್ತ ಭವಿಷ್ಯಗಳ ಉಪಲಬ್ಧಿ, ಸಾತ್ವಿಕ ಪ್ರಮೇಯ ಭರಿತತ್ವ, ವೃಂದಾವನಾಚಾರ್ಯರೇ ಮುಂತಾದ ಬಹು ಮಹನೀಯರ ಸಂವಾದಗಳೂ ಸಹ ಪ್ರಾಮಾಣ್ಯ ದಾರ್ಢ್ಯವನ್ನು ಮತ್ತಷ್ಟು ಪುಷ್ಟೀಕರಿಸುತ್ತವೆ. ಶ್ರೀಗುರುರಾಜರ ಮಾಹಾತ್ಮ್ಯದ್ಯೋತಕ ಈ ವೃಂದಾವನಾಖ್ಯಾನ ಗ್ರಂಥದ ಸಾರವನ್ನು ಕೆಲವೇ ಮಂದಿ ಸಂಪ್ರತಿಪನ್ನ ಸಂಶೋಧಕ ವಿದ್ವಾಂಸರಲ್ಲೊಬ್ಬಪ್ರಮುಖರೂ, ತತ್ವಶಾಸ್ತ್ರ ಪ್ರಮೇಯಾಭಿಜ್ಞರೂ, ಆದ ಶ್ರೀ. H. ಸುಬ್ಬರಾಯರು – ಶ್ರೀ ವಾದಿರಾಜ ಭಕ್ತರೆಲ್ಲರೂ ಅವರ ಋಜುತ್ವ ವಿಷಯದಲ್ಲಿ ನಿಶ್ಚಲ ಚಿತ್ತರಾಗಿ ಸಫಲವಾದ ರೀತಿಯಲ್ಲಿ ಗ್ರಂಥದಲ್ಲಿ ಹೇಳಿರುವಂತೆ ಸೇವೆಮಾಡಿ ಸರ್ವಾಭೀಷ್ಟಗಳನ್ನು ಪಡೆದು ಕೃತಾರ್ಥರಾಗಬೇಕೆಂಬ ಸದುದ್ದೇಶದಿಂದ ಕನ್ನಡದಲ್ಲಿ ಬರೆದು ಸಜ್ಜನರಿಗೆ ಮಹೋಪಕಾರ ಮಾಡಿರುತ್ತಾರೆ. ಅದೇ ರೀತಿಯಲ್ಲಿ ಈ ಸದ್ಗ್ರಂಥದ ಮುದ್ರಣದ ವೆಚ್ಚದ ಭಾರವನ್ನು ಶ್ರೀ. ಆರ್. ಪಿ. ರಾವ, ಬಿ. ಎ. ಹಿಂದೂಸ್ತಾನ ಟೈಂಮ್ಸ್ ಕರೆಸ್ಪಾಂಡೆಂಟ್, ಹೈದರಾಬಾದ ಇವರು ಪೂರ್ತಿಯಾಗಿ ವಹಿಸಿಕೊಂಡು ತನ್ಮೂಲಕ ಶ್ರೀ ಗುರುರಾಜರ ಪರಮಾನುಗ್ರಹಕ್ಕೆ ಪಾತ್ರರಾಗಿದ್ದಾರೆ. ಈ ಪ್ರಯತ್ನ ಯಶಸ್ವಿಯಾಗಿ ಸಜ್ಜನರ ಆದರಣೆಗೆ ಪಾತ್ರವಾಗಲೆಂದೂ, ಮೇಲ್ಕಂಡ ಲೇಖಕರಿಗೆ ಮತ್ತು ಪ್ರಕಾಶ ಸಹಾಯಕರಿಗೆ ಶ್ರೀ ಹರಿಗುರುಗಳ ಪರಮಾನುಗ್ರಹ ಉಂಟಾಗಲೆಂದೂ ನಾವು ನಮ್ಮ ಉಪಾಸ್ಯ ದೇವರಾದ ಶ್ರೀಕೃಷ್ಣ - ಭೂವರಾಹ - ಹಯಗ್ರೀವ - ವೇದವ್ಯಾಸ ದೇವರಲ್ಲಿ ತಥಾ ಶ್ರೀ ಗುರುರಾಜರಲ್ಲಿ ಹೃತ್ಪೂರ್ವಕ ಪ್ರಾರ್ಥಿಸುತ್ತೇವೆ.

ಶ್ರೀ ವಿಶ್ವೋತ್ತಮ ತೀರ್ಥ ಶ್ರೀಪಾದಂಗಳವರು.
ದಿ. 24-6-1980.
ಪರ್ಯಾಯ ಶ್ರೀ ಸೋದೆ ವಾದಿರಾಜ ಮಠ, ಉಡುಪಿ ದ. ಕ.

ಶ್ರೀರಸ್ತು

ಶ್ರೀಮದ್ಧನುಮದ್ಭೀಮಮಧ್ವಾಂತರ್ಗತ ರಾಮಕೃಷ್ಣ ವೇದವ್ಯಾಸಾತ್ಮಕ

ಶ್ರೀಲಕ್ಷ್ಮೀಹಯಗ್ರೀವಾಯ ನಮಃ

ಶ್ರೀವಾದಿರಾಜ ಗುರುಭ್ಯೋ ನಮಃ

ಸಂಪಾದಕನ ಬಿನ್ನಹ

1. ಶ್ರೀ ಹರಿವಾಯುಗಳ ದಯದಿಂದ ಗುರುಗಳು ಹೇಳಿದಂತೆ ಸ್ವಾಪ್ನವೃಂದಾವನಾಖ್ಯಾನದ ಪಾರಾಯಣ ಪ್ರತಿ ಮುದ್ರಿತವಾಯಿತು. ಕೆಲವು ಶ್ಲೋಕಗಳಲ್ಲಿ ಮೂರು ಪಂಕ್ತಿ, ಕೆಲವಲ್ಲಿ ಒಂದೇ ಪಂಕ್ತಿ ಇದೆ. ಒಂದು ಕಡೆ 31A, 31B ಎಂದು ಪಾಠಾಂತರ ಕೊಟ್ಟಿದೆ. ಇತರ ಪಾಠಾಂತರಗಳು ( ) ಬ್ರಾಕೆಟ್‌ನಲ್ಲಿ ಕೊಡಲಾಗಿದೆ. ಈ ವ್ಯತ್ಯಾಸಗಳಿಗೆ ಮೂಲ ಗ್ರಂಥಗಳೇ ಕಾರಣ. ಹಾಗೇ ಶ್ರೀ ಮುಷ್ಣಾಚಾರ್ಯರ ಮೂಲವ್ಯಾಖ್ಯಾನದಲ್ಲೇ ಶ್ಲೋಕಸಂಖ್ಯಾನಿರ್ದೇಶಕದಲ್ಲೂ ವ್ಯತ್ಯಾಸವಿರುವುದರಿಂದ ಅದರ ಅನುಗುಣ್ಯಕ್ಕಾಗಿ ಪ್ರಾಯೇಣ ಅದೇ ಸಂಖ್ಯೆಗಳ ನಿರ್ದೇಶಗಳನ್ನು ಇಲ್ಲೂ ಅನುಸರಿಸಲಾಗಿದೆ. ಈಗ ನಾವು ಸಂಖ್ಯಾವ್ಯತ್ಯಾಸಮಾಡಿ ಬಿಟ್ಟರೆ ಪೂರ್ವೋದಾಹೃತ ಸರ್ವ ವಾಕ್ಯಗಳೂ ಇಲ್ಲಿ ಸಿಕ್ಕದಂತೆ ಆಗಿ ಓದುವವರಿಗೆ ಪರದಾಟವಾಗುತ್ತದೆ. ಆ ತೊಂದರೆ ತಪ್ಪಿಸಲು ಪೂರ್ವಿಕರ ಸಂಖ್ಯಾನಿರ್ದೇಶವನ್ನೇ ಇಲ್ಲೂ ಪ್ರಾಯಿಕವಾಗಿ ಉಪಯೋಗಿಸಿದ್ದೇವೆ. ವಾಚಕರು ಮನ್ನಿಸಬೇಕು.

2. ವೃಂ-ವೃಂದಾವನಾಚಾರ್ಯರೇ ಬರೆದಿಟ್ಟಿದ್ದ ತುಳುಪ್ರತಿ. ಸ್ವಾ-ಸ್ವಾದಿಮಠದಲ್ಲಿ ಉಪಲಬ್ಧವಾದ ಲಿಖಿತ ಪ್ರತಿ; ಕೃ–ವಾಯಿ ಕೃಷ್ಣಾಚಾರ್ಯರ ಲಿಖಿತ ಪ್ರತಿ; ಪ್ರಿಂ–1925 ರಲ್ಲಿ ಪ್ರಿಂಟಾದ ಆಖ್ಯಾನ ಪ್ರತಿ; ಗುಂ–ಮೈಸೂರು ಗುಂಡಾಚಾರ್ಯರ ಮನೆಯ ಲಿಖಿತಪ್ರತಿ, ಹೀಗೆ ಅನೇಕ ಪ್ರತಿಗಳನ್ನು ನೋಡಿ ಪಾರಾಯಣಪಾಠವನ್ನು ನಿಶ್ಚಯಿಸಿ ಬರೆದು ಇಟ್ಟುಕೊಂಡಿದ್ದುದನ್ನು ಈಗ ಮುದ್ರಣಮಾಡಿಸಲಾಗಿದೆ. ಬೇರೆ ಪಾಠವಿದ್ದರೂ ಇದು ಶೋಧಿತವೆಂದು ನಂಬಬಹುದು,

3. ಪ್ರಾಮಾಣ್ಯಶ್ರದ್ಧೆ ಇಲ್ಲದಿದ್ದರೆ ಪಾರಾಯಣಾದಿ ಸೇವೆಗಳು ವ್ಯರ್ಥವಾಗುತ್ತವೆ, ಈಚೆಗೆ ಕೆಲವು ದುಡುಕಿನ ಜನರು ವಾದಿರಾಜ ಋಜುತ್ವದಲ್ಲಿ ಸಂಶಯ ಹುಟ್ಟಿಸುವ ಲೇಖನಗಳನ್ನು ಬರೆದಿರುತ್ತಾರೆ. ಶ್ರೀಶ್ರೀಗಳವರು ಅಪ್ಪಣೆ ಕೊಡಿಸಿರುವಂತೆ ಅವರಿಗೆ ಯಾವ ಆಧಾರವೂ ಇಲ್ಲ. ಆ ಪೂರ್ವ ಪಕ್ಷ ಗ್ರಂಥಗಳೆಲ್ಲಾ ತತ್ವನಿರ್ಣಯಕ್ಕೆ ವಿರೋಧಿಯಾದ ಸಂಶಯ ಅಥವಾ ಮಿಥ್ಯಾಜ್ಞಾನಜನಕ. ಈ ವಿಷಯವನ್ನು ಜನತೆಗೆ ತೋರಿಸಿ ತತ್ವನಿರ್ಣಯೋಪಯೋಗಿ ವಿಚಾರವನ್ನು ಒಳಗೊಂಡ ಈ ಕೈಪಿಡಿಯನ್ನು ಋಜುತ್ವ ಸಿದ್ಧಾಂತಾದಿ ಸಹಾಯಕ ಗ್ರಂಥಗಳಿಂದ ಸಂಗ್ರಹಿಸಿ ಗುರ್ವಾಜ್ಞೆಯಿಂದ ಆಖ್ಯಾನದ ಜೊತೆಯಲ್ಲಿ ಕನ್ನಡದಲ್ಲಿ ಅಚ್ಚುಮಾಡಿಸಲಾಗಿದೆ. ಸ್ವಾಪ್ನವೃಂದಾವನಾಖ್ಯಾನದಲ್ಲಿ ಅಪ್ರಾಮಾಣ್ಯ ಶಂಕಾಮಾಡಲು ಸಮೀಚಿನ ಕಾರಣಗಳು ಯಾವವೂ ಇಲ್ಲವೆಂದು ಇದರ ಹತ್ತು ಅಧ್ಯಾಯಗಳಲ್ಲಿ ತೋರಿಸಲ್ಪಟ್ಟಿದೆ. ವಿಚಾರಸರಣಿಯು ಸರಿಯೋ ತಪ್ಪೋ ಎಂಬುದನ್ನು ಪಂಡಿತರೇ ನೋಡಲಿ.

4. ಸಾಮಾನ್ಯ ರೀತಿಯಿಂದ ಆಖ್ಯಾನದ ಸಾರಾಂಶವನ್ನೂ ಶ್ರೀಶ್ರೀಗಳವರ ಆಜ್ಞೆಯಿಂದಲೇ ಎರಡನೇ ಭಾಗದಲ್ಲಿ ಪ್ರಕಟಿಸಲಾಗಿದೆ. ಮೂರನೇ ಭಾಗದಲ್ಲಿ ಆಖ್ಯಾನವು ಸಾಮಾನ್ಯ ಗ್ರಂಥವಲ್ಲವೆಂದು ವಿವರಿಸಿ ದುಷ್ಟಗ್ರಂಥಗಳ ಖಂಡನೆಯ ರೀತಿಯನ್ನು ತೋರಿಸಲಾಗಿದೆ. ಸಹಾಯಕ ಗ್ರಂಥಗಳ ಪಟ್ಟಿಕೊಟ್ಟು ಅವುಗಳನ್ನೂ ಉಪಯೋಗ ಮಾಡಿಕೊಳ್ಳುವ ರೀತಿಯನ್ನೂ ಗುರ್ವಾಜ್ಞೆಯಿಂದ ಬೋಧಿಸಲಾಗಿದೆ. ಕೊನೆಯಲ್ಲಿ ಪ್ರಾಚೀನ ಕಾಲದ ವಾದಿರಾಜ ಮಹಿಮಾ ಪಟ್ಟಿಯನ್ನೂ ಗುರುರಾಜ ಭಕ್ತರ

ಮನೋರಂಜನೆಗಾಗಿ ಮುದ್ರಣ ಮಾಡಿಸಿರುತ್ತೇನೆ. ಹೀಗೆ ಶ್ರೀಶ್ರೀಗಳವರ ಈ ಮೂರನೇ ಪರ್ಯಾಯೋತ್ಸವದ ಸಂಚಿಕೆಯಾಗಿ ಆಖ್ಯಾನ, ಕೈಪಿಡಿಗಳೆಂಬ ಈ ಎರಡು ಪುಸ್ತಕಗಳೂ ಗುರುರಾಜ ಭಕ್ತರ ಸೌಕರ್ಯಕ್ಕಾಗಿ ಶ್ರೀಶ್ರೀಗಳವರಿಂದ ಪ್ರಚಾರಕ್ಕೆ ಕೊಡಲ್ಪಟ್ಟಿವೆ. ಈ ವಿಷಯದಲ್ಲಿ ಇನ್ನೇನಾದರೂ ಆಗಬೇಕೆಂದು ಹಾರೈಸಿ ಸ್ವಾಮಿಗಳವರಿಗೆ ಅರಿಕೆ ಮಾಡಿಕೊಂಡರೆ ಈ ಮಹೋತ್ಸವ ಕಾಲದಲ್ಲಿ ಕರುಣಾಪೂರ್ಣ ಸ್ವಾಮಿಗಳವರು ಅದನ್ನೂ ಮಾಡಿಸುತ್ತಾರೆ.

5. ಕೊನೆಯಲ್ಲಿ ದುರ್ಬಲ ಸಂಪಾದಕನಾದ ನಾನು ಬಹುಜನ ಸಹಾಯಕರ ಸ್ಮರಣೆ ಮಾಡಬೇಕಾಗಿದೆ. ಅಲ್ಪ ಮನುಷ್ಯನಾದವನು ಅತ್ಯಂತಾಭಾವಾದಿ ವಿಷಯಗಳಲ್ಲಿ ವಾದಿರಾಜ ಸ್ವಾಮಿಗಳ ಮತ ನಿರೂಪಣೆ ಮಾಡಿ ಅವರ ಋಜುತ್ವ ನಿರ್ಣಯಾದಿ ಕಾರ್ಯಮಾಡುವುದು ಆ ಗುರುದೇವತೆಗಳ ಮತ್ತು ಶ್ರೀಶ್ರೀಗಳವರ ಪರಮಾನುಗ್ರಹದ ಫಲವೇ ಹೊರತು ನನ್ನ ಕಲ್ಪನೆ ಏನೂ ಇಲ್ಲ ಎಂದು ನನಗೆ ಸುದೃಢ ನಂಬಿಕೆ ಇದೆ. ಶ್ರೀಶ್ರೀಗಳವರ ಪರ್ಯಾಯೋತ್ಸವ ಕಾಲದಲ್ಲಿ ಅವರ ನೇತೃತ್ವದಲ್ಲಿ ನಡೆದ ಈ ಗುರುರಾಜ ಗ್ರಂಥಪ್ರಕಾಶನವೆಂಬ ದೊಡ್ಡ ಜ್ಞಾನ ಯಜ್ಞದಲ್ಲಿ ಮುಂದಾಳಾಗಿ ನನ್ನ ಹೆಸರು ಕಂಡರೂ ನಾನು ನಿಮಿತ್ತಮಾತ್ರ. ಪ್ರಿಂಟಿಗೆ ಬರೆದವರು, ಕರಡು ತಿದ್ದಿದವರು, ವ್ಯಾಖ್ಯಾನ ಮಾಡಿ ನನ್ನನ್ನು ಪೋಷಿಸಿದವರು, ಮಳೆಯಲ್ಲಿಯೇ ಮುದ್ರಣಾಲಯಕ್ಕೆ ಹೋದವರು, ಚಿಕಿತ್ಸೆ ಮಾಡಿದವರು, ಉಡುಪಿಯಿಂದ ಎಲ್ಲಾ ಏರ್ಪಾಡು ಮಾಡಿ ಕಳುಹಿಸಿ ಕೊನೆಯವರಿಗೂ ಸರ್ವ ಸಹಾಯಗಳನ್ನು ಒದಗಿಸಿದವರು ಹೀಗೆ ಬಹುಜನರಿಗೆ ಮೇರು ಪ್ರಮಾಣದಲ್ಲಿ ಪುಣ್ಯಸಂದಾಯವಾಗುತ್ತೆ. ನಾನು ಹೆಸರು ಹೇಳಿ ಏತಕ್ಕೆ ಅವರ ಪುಣ್ಯಹ್ರಾಸ ಮಾಡಲಿ ? ಗುರು ವಾದಿರಾಜರೇ ಅವರ ಸೇವೆಯನ್ನು ಶ್ರೀ ಹಯಗ್ರೀವ ಸ್ವಾಮಿಗೆ ಸಮರ್ಪಿಸಿ ಅವರನ್ನು ಉದ್ಧರಿಸಲಿ. ಆರ್. ಪಿ. ರಾವ್ ಕರೆಸ್‌ಪಾಂಡೆಂಟ್ ಇವರ ಹೆಸರನ್ನು ಎತ್ತಿ ಹಿಡಿದು ಹೇಳಬೇಕಾಗಿದೆ. ಏಕೆಂದರೆ ಅವರು ಈ ಪ್ರಕಾಶನ ಖರ್ಚು ಸರ್ವಸ್ವವನ್ನೂ ಶ್ರೀಶ್ರೀಗಳವರು ತಮ್ಮ ಮುನ್ನುಡಿಯಲ್ಲಿ ಬರೆದಿರುವಂತೆ ವಹಿಸಿಕೊಂಡೂ, ಇನ್ನೂ ಏನಾಗಬೇಕು ಎಂಬ ಹೃದಯದಿಂದಲೇ ವೃಂದಾವನದ ಮುಖ ನೋಡುತ್ತಿದ್ದಾರೆ. ಈ ಜ್ಞಾನಯಜ್ಞಸಹಾಯದ ಅದ್ಭುತ ಫಲವನ್ನು ಶ್ರೀವಾದಿರಾಜ ಗುರ್ವಂತರ್ಗತ ಲಕ್ಷ್ಮೀಹಯಗ್ರೀವ ಸ್ವಾಮಿಯಿಂದ ಅವರು ಏಕಾಂತವಾಗಿ ಪಡೆಯಲಿ.

ಸ್ವಸ್ತಿಕ ಪ್ರಿಟಿಂಗ್ ಪ್ರೆಸ್ಸಿನ ಮಾಲೀಕರು ನೌಕರರೂ ಸಹ ಎಷ್ಟು ತಿದ್ದಿದರೂ ಮುನಿಸಿಕೊಳ್ಳದೆ ಉತ್ಸಾಹದಿಂದ ಮುದ್ರಣ ಕಾರ್ಯವನ್ನು ಹೆಚ್ಚು ತಪ್ಪಿಲ್ಲದಂತೆ * ಮುಗಿಸಿಕೊಟ್ಟಿದ್ದಾರೆ, ಅವರಿಗೆ ಧನ್ಯವಾದಗಳು.

6. ಇತಿ ಶ್ರೀಶ್ರೀಗಳವರ ಚರಣಸೇವಕ.

ಮೊಕ್ಕಾಂ, ಬೆಳಗಾಂವ.
1-8-1980.

ಎಚ್. ಸುಬ್ಬರಾವ್, ಎಮ್. ಎ.

---

* ಕೈಪಿಡಿ ಪುಟ 34, ಪಂಕ್ತಿ 24 ರಲ್ಲಿ ಪರಸ್ಪರ ಅತ್ಯಂತ ಭೇದ ಎಂದಿದೆ. ಅದು ಅತ್ಯಂತಾಭೇದ ಎಂದಿರಬೇಕು. ಪುಟ 89, ಪಂಕ್ತಿ 2 ರಲ್ಲಿ ಆಷಾಢದಲ್ಲಿ ಎಂದಿದೆ. ಅದನ್ನು ಆಷಾಢಕ್ಕೆ ಹಿಂದೆ ಎಂದು ಓದಿಕೊಳ್ಳಬೇಕು. ಇತರ ತಪ್ಪುಗಳನ್ನೆಲ್ಲಾ ವಾಚಕರೇ ತಿದ್ದಿಕೊಳ್ಳಬಹುದು. ಸಂಸ್ಕೃತ ಗ್ರಂಥಕ್ಕೆ ಶುದ್ಧಾಶುದ್ಧ ಪತ್ರಿಕೆ ಅದರ ಕೊನೆಯಲ್ಲಿದೆ.

ಶ್ರೀ:

ಶ್ರೀಮದ್ಧಂಸಮುದ್ಭೀಮಮಧ್ವಾಂತರ್ಗತ ರಾಮಕೃಷ್ಣ ವೇದವ್ಯಾಸಾತ್ಮಕ
ಶ್ರೀ ಲಕ್ಷ್ಮೀಹಯಗ್ರೀವಾಯ ನಮಃ ॥

ನರಸಿಂಹೋsಖಿಲಾಜ್ಞಾನ ಮತಧ್ವಾಂತ ದಿವಾಕರಃ ।
ಜಯತ್ಯಮಿತ ಸಜ್ಜ್ಞಾನ ಸುಖಶಕ್ತಿ ಪಯೋನಿಧಿಃ ॥

ಸ್ವಾಪ್ನವೃಂದಾವನಾಖ್ಯಾನವು ಪಂಡಿತರಿಂದಲೂ ಪಾರಾಯಣಾರ್ಹ ಕೈಪಿಡಿ

ಅಧ್ಯಾಯ ೧

ಸ್ವತಃ ಪ್ರಮಾಣ ಗ್ರಂಥ

1. ಶಾಸ್ತ್ರಗಳ ಅಧ್ಯಯನವು ಅವಶ್ಯ ಕರ್ತವ್ಯವೆಂದು ಪಂಡಿತರು ಒಪ್ಪುತ್ತಾರೆ. " ಸ್ವಾಧ್ಯಾಯ ಪ್ರವಚನೇ ಏವೇತಿ ನಾಕೋಮೌದ್ಗಲ್ಯಃ । ತದ್ಧಿ ತಪಃ । " ಎಂದು ಪ್ರಮಾಣ ಇದೆ. ಶಾಸ್ತ್ರದ ಅಧ್ಯಯನವೂ, ಶಾಸ್ತ್ರಗಳ ಉಪದೇಶಕಾರ್ಯವೂ ತಪಸ್ಸೆನಿಸುತ್ತದೆ. ಆ ಶಾಸ್ತ್ರಗಳು ಯಾವುದೆಂಬುವುದನ್ನು ಶ್ರೀಮಧ್ವಾಚಾರ್ಯರೇ ಅನೇಕ ಗ್ರಂಥಗಳಲ್ಲಿ ಹೇಳಿದ್ದಾರೆ. ಪರಸ್ಪರ ವಿರುದ್ಧವಾಗಿ ಆಚಾರ್ಯರು ಬರೆದಿಲ್ಲವಾದ್ದರಿಂದ ಯಾವ ಒಂದೆರಡು ಸ್ಥಳಗಳ ವಾಕ್ಯಗಳನ್ನಾದರೂ ವಿಮರ್ಶಿಸಿದರೆ ಸಾಕು. ಬ್ರಹ್ಮಸೂತ್ರಭಾಷ್ಯ 1-1-3 ರಲ್ಲಿ ಶಾಸ್ತ್ರದಿಂದ ದೇವರನ್ನು ತಿಳಿಯಬೇಕೆಂದು ನಿರ್ಣಯಿಸಿದ್ದಾರೆ. **" ಋಗ್ಯಜುಃ ಸಾಮಾಥರ್ವಾಶ್ಚ ಭಾರತಂ ಪಂಚರಾತ್ರಕಂ । ಮೂಲ ರಾಮಾಯಣಂ ಚೈವ ಶಾಸ್ತ್ರಮಿತ್ಯಭಿಧೀಯತೇ ॥ ಯಚ್ಚಾನುಕೂಲಮೇತಸ್ಯ ತಚ್ಚ ಶಾಸ್ತ್ರಂ ಪ್ರಕೀರ್ತಿತಂ । ಅತೋsನ್ಯೋ ಗ್ರಂಥವಿಸ್ತಾರೋ ನೈವಶಾಸ್ತ್ರಂ ಕುವರ್ತ್ಮ ತದಿತಿ ಸ್ಕಾಂದೇ "** (ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ, ಭಾರತ, ಪಂಚರಾತ್ರಾಗಮ, ಮೂಲ ರಾಮಯಣವೂ ಸಹ ಶಾಸ್ತ್ರವೆಂದು ಕರೆಯಲ್ಪಡುತ್ತವೆ. ಇದಕ್ಕೆ ಅನುಕೂಲವಾದದ್ದೆಲ್ಲಾ ಶಾಸ್ತ್ರವೆಂದು ಹೇಳಲ್ಪಡುತ್ತದೆ. ಇದಕ್ಕೆ ವಿರುದ್ಧವಾದ ಅನಂತ ಗ್ರಂಥಗಳಾದರೂ ಶಾಸ್ತ್ರವಲ್ಲ. ಅವು ದೇವರನ್ನು ತಿಳಿಯುವುದಕ್ಕೆ ಕೆಟ್ಟಮಾರ್ಗ; ವಿಪರೀತ ಜ್ಞಾನ ಜನಕ ಎಂದರ್ಥ.) ಈ ವಾಕ್ಯದಿಂದ ನಾಲ್ಕು ವೇದಗಳೂ, ಭಾರತ, ಪಂಚರಾತ್ರ, ಮೂಲ ರಾಮಾಯಣಗಳೆಂಬ ಮೂರು ಇತಿಹಾಸಗಳೂ ಸೇರಿ ಒಟ್ಟು ಏಳು ಗ್ರಂಥಗಳು ಶಾಸ್ತ್ರವೆನ್ನಿಸುತ್ತವೆ. ಇದೇ ವಿಷಯವನ್ನು ವಿಸ್ತರಿಸಿ ಹೇಳುವಾಗ ವಿಷ್ಣುತತ್ವ ನಿರ್ಣಯದಲ್ಲಿ **" ಮೂಲ ರಾಮಾಯಣಂಚೈವ ಪುರಾಣಂ ಚೈತದಾತ್ಮಕಂ ಯೇಚಾನುಯಾಯಿನಸ್ತೇಷಾಂ "** ಎಂದು ಆಚಾರ್ಯರೇ ಸ್ಪಷ್ಟಪಡಿಸಿದ್ದಾರೆ. ಅದಕ್ಕೆ ಟೀಕಾಚಾರ್ಯರು ಅರ್ಥಮಾಡುತ್ತಾ **" ಏತದಾತ್ಮಕಂ**

ಋಗಾದ್ಯನುಕೂಲಂ । ಏಷಾಂ ಋಗಾದೀನಾಮನುಯಾಯಿನೋ ಅನುಕೂಲ ಗ್ರಂಥಾಃ ಮಾನವಾದ್ಯಾಃ ॥ ಎಂದು ಬರೆದಿದ್ದಾರೆ. (ಋಗಾದಿಗಳಿಗೆ ಅನುಕೂಲವಾಗಿರುವ ಪುರಾಣಗಳು, ಮತ್ತು ಅನುಕೂಲ ಮನುಸ್ಮೃತಿ ಮುಂತಾದ ಸ್ಮೃತಿಗಂಥಗಳೂ ಸದಾಗಮವೆನ್ನಿಸುತ್ತವೆ ಎಂದರ್ಥ) ಇದರಿಂದ ಸಾತ್ವಿಕ ಪುರಾಣ ಗ್ರಂಥಗಳೂ, ಸಾತ್ವಿಕ ಸ್ಮೃತಿಗ್ರಂಥಗಳೂ ಸೇರಿ ಒಂಭತ್ತು ಶಾಸ್ತ್ರಗಳಾದವು. ಇವೆಲ್ಲಾ ಒಂಭತ್ತು ನಿರ್ಣೇಯ ಶಾಸ್ತ್ರಗಳು.[1] ಇನ್ನೊಂದು ಶಾಸ್ತ್ರವು ಇವೆಲ್ಲಕ್ಕೂ ಮೇಲೆ ಚಕ್ರವರ್ತಿಯಂತೆ ನಿರ್ಣಾಯಕವಾಗಿ ಮೆರೆಯುತ್ತಿದೆ. ಅದು " ಬ್ರಹ್ಮಸೂತ್ರಂ ಮಾನಂ ಸ್ವತಃ ಸ್ಮೃತಂ ", ಎಂದು ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಆಚಾರ್ಯರಿಂದಲೇ ಹೇಳಲ್ಪಟ್ಟಿದೆ. ನಿರ್ಣಯದ ಒಂದನೇ ಅಧ್ಯಾಯದ 42, 43, 44 ನೇ ಶ್ಲೋಕಗಳಲ್ಲಿ ಬ್ರಹ್ಮಸೂತ್ರ ಶಾಸ್ತ್ರದ ಉತ್ತಮತ್ವವನ್ನು ಉಪಪಾದಿಸಿದ್ದಾರೆ. (ಅರ್ಥ—ಕೇವಲ ನಿರ್ಣಯಕ್ಕೋಸ್ಕರವೇ ವ್ಯಾಸರೂಪೀ ವಿಷ್ಣುವಿನಿಂದ ಹೇಳಲ್ಪಟ್ಟಿರುವುದರಿಂದ ಅಲ್ಲಿ ಹೇಳಲ್ಪಟ್ಟದ್ದೆಲ್ಲಾ ಗ್ರಾಹ್ಯವು. ಅಲ್ಲಿ ಸರ್ವ ನಿರ್ಣಯಗಳೂ ಹೇಳಲ್ಪಟ್ಟಿವೆ. ಯಥಾರ್ಥ ವಚನಗಳಿಗೂ ಮೋಹಕ ವಾಕ್ಯಗಳಿಗೂ ವಿರೋಧ ಕಂಡು ಸಂಶಯ ಬಂದರೆ, ಆ ಸಂಶಯ ಪರಿಹಾರಕ್ಕಾಗಿಯೇ ಭಗವಂತನು ಬ್ರಹ್ಮಸೂತ್ರ ಶಾಸ್ತ್ರವನ್ನು ಸೃಷ್ಟಿಸಿದನು. ಆದ್ದರಿಂದ ಸೂತ್ರಾರ್ಥವನ್ನು ಪರಿಗ್ರಹಿಸಿಯೇ ಸರ್ವ ನಿರ್ಣಯಗಳನ್ನೂ ಮಾಡಬೇಕು-ಎಂದರ್ಥ) " ಸತ್ಯಂ " ಎಂದರೆ ಬ್ರಹ್ಮ ಮೀಮಾಂಸಾ ಎಂದು ತಲವಕಾರೋಪನಿಷದ್ಭಾಷ್ಯದಲ್ಲಿದೆ. ಪರವಿದ್ಯಾ ಎಂದರೂ ಬ್ರಹ್ಮವಿದ್ಯಾ ಎಂದರೂ ಈ ಉತ್ತರ ಮೀಮಾಂಸಾ ಶಾಸ್ತ್ರವೇ ಎಂದು ಅಥರ್ವಣೋಪಷತ್ತಿನಲ್ಲಿದೆ. ಸದರೀ ಅಥರ್ವಣೋಪ ನಿಷತ್ತಿನ ವಾಕ್ಯಕ್ಕೆ ಅನುವ್ಯಾಖ್ಯಾನದಲ್ಲಿ ಅರ್ಥಮಾಡಿ ಪರವಿದ್ಯಾ ಎಂದರೆ ಉಪನಿಷತ್ತುಗಳಲ್ಲ ಮತ್ತೇನೆಂದರೆ ಬ್ರಹ್ಮ ಮೀಮಾಂಸಾ ಶಾಸ್ತ್ರವೇ ಎಂದೂ ತೋರಿಸಿದ್ದಾರೆ. ನ್ಯಾಯ ಸುಧಾ ವಚನವೂ ಹಾಗೆಯೇ ಇದೆ. ಹೀಗೆ " ಸತ್ಯಂ " " ಪರವಿದ್ಯಾ " ಎಂದು ಪ್ರಸಿದ್ಧವಾದ ಈ ಹತ್ತನೇ ಸರ್ವೋತ್ತಮ ಪ್ರಮಾಣವೂ ಸೇರಿ ಶಾಸ್ತ್ರವು ಹತ್ತು ಗುಂಪಿನ ಗ್ರಂಥಸಮುದಾಯವಾಯಿತು. ಈ ಹತ್ತು ಶಾಸ್ತ್ರಗಳ ಪಾರಾಯಣ, ಪ್ರವಚನಗಳು ತಪಸ್ಸೆಂದು ಸಿದ್ಧವಾಯಿತು.

2. ಅಷ್ಟೇ ಅಲ್ಲ. ಇನ್ನೆರಡು ವಿಷಯಗಳೂ ಸಿದ್ಧವಾಗುತ್ತವೆ. " ಯಚ್ಚಾನುಕೂಲಮೇತಸ್ಯ ತಚ್ಚ ಶಾಸ್ತ್ರಂ ಪ್ರಕೀರ್ತಿತಂ " ಎಂದೂ, " ಯೇಚಾನುಯಾಯಿನಸ್ತೇಷಾಂ ಸರ್ವೇ ತೇ ಚ ಸದಾಗಮಾಃ " ಎಂದೂ, " ಅವಿರುದ್ಧಂತು ಯತ್ತ್ವಸ್ಯ ಪ್ರಮಾಣಂ ತಚ್ಚನಾನ್ಯಥಾ " ಎಂದೂ ಹೇಳಿ ಆಚಾರ್ಯರು ಹನ್ನೊಂದನೇ ಶಾಸ್ತ್ರಗ್ರಂಥವನ್ನೂ ಒಪ್ಪಿರುತ್ತಾರೆ. " ಏಷಾಂ ಋಗಾದೀನಾಂ ಅನುಯಾಯಿನೋ ಅನುಕೂಲಗ್ರಂಥಾಃ ಮಾನವಾದ್ಯಾಃ " ಎಂದು ಟೀಕಾಚಾರ್ಯರು ಒಪ್ಪಿರುತ್ತಾರೆ. " ಅವಿರುದ್ಧಂತು ಯತ್ತ್ವಸ್ಯೇತ್ಯನೇನ ಕಿಂ ಸಂಗೃಹೀತಮಿತಿ ನ ಶಂಕನೀಯಂ । ಅನ್ವೈಷ್ಣವ ಪುರಾಣಾದಿಷು ವಿದ್ಯಮಾನ ವೇದಾನುಕೂಲ ವಾಕ್ಯಾನಾಮೇತದನುಕೂಲ ಭಾಷ್ಯಾನುವ್ಯಾಖ್ಯಾನಾದಿ ಶಿಷ್ಟಕೃತ ಗ್ರಂಥಾನಾಂ ಚ ಸಂಗ್ರಾಹ್ಯತ್ವ ಸೂಚನಾಯ ಸಾರ್ಥಕ್ಯಾತ್ " ॥[2] ಎಂದು ಬರೆದು ಶ್ರೀವಾದಿರಾಜ ಸ್ವಾಮಿಗಳೂ ಒಪ್ಪಿರುತ್ತಾರೆ.

---

1) ಈ ಒಂಭತ್ತರಲ್ಲಿ ಭಾರತವು ಉತ್ತಮವು. " ವೇದಾದಪಿ ಪರಂ ಚಕ್ರೇ ಭಾರತಂ ಶಾಸ್ತ್ರ ಮುತ್ತಮಂ " ಎಂದಿದೆ. " ನಿರ್ಣೇಯೇಷು ತದಿತ್ಯವಿರೋಧಃ " ಎಂದು ಸುಧಾ । । । 2) ಮ. ತಾ. ನಿ, I-31.

ಈ ವಿಷಯವನ್ನು ಬೆಳೆಯಿಸಿ ಬರೆದರೆ ಇನ್ನೂ ಐದಾರು ಪುಟಗಳಷ್ಟು ಬರೆಯುಬಹುದು. ಆದರೆ ಎಷ್ಟು ವಿಸ್ತಾರ ಮಾಡಿದರೂ ತಾತ್ಪರ್ಯ ವ್ಯತ್ಯಾಸವಾಗುವುದಿಲ್ಲ. ಆದ್ದರಿಂದ ತಾತ್ಪರ್ಯವನ್ನೇ ವರ್ಣಿಸಿ ಈ ವಿಷಯವನ್ನು ಮುಗಿಸುತ್ತೇನೆ. ತಾತ್ಪರ್ಯವೇನೆಂದರೆ ಋಗಾದಿ ಹತ್ತು ಶಾಸ್ತ್ರಗಳಿಗೆ ಅನುಕೂಲವಾದ ಗ್ರಂಥಗಳೂ ಕೂಡಾ ಶಾಸ್ತ್ರವೆನ್ನಿಸುತ್ತವೆ. ಸಾತ್ವಿಕ ಪುರಾಣಗಳಂತೆ ಅವು ಶಾಸ್ತ್ರ ಗ್ರಂಥಗಳು, ಸಾತ್ವಿಕ ಸ್ಮೃತಿಗಳಂತೆ ಅವು ಶಾಸ್ತ್ರಗ್ರಂಥಗಳು. ವೇದಾದಿ ಹತ್ತು ಶಾಸ್ತ್ರಕ್ಕೆ ಅವಿರುದ್ಧವಾಗಿದ್ದರೆ ಸಾಕು; ಅದೂ ಕೂಡ ವೇದದಂತೆ ಶಾಸ್ತ್ರಗ್ರಂಥ. ದೇವರನ್ನು ತೋರಿಸುವ ಗ್ರಂಥ. ಈ ಶಾಸ್ತ್ರ ಸಮುದಾಯವನ್ನು ಹನ್ನೊಂದನೇ ಶಾಸ್ತ್ರವನ್ನಾಗಿ ತಿಳಿಯುಬಹುದು. ಪೂರ್ವದ ಹತ್ತರಂತೆಯೇ ಇದೂ ಮಾನ್ಯವೇ. ಈ ಗುಂಪಿಗೆ ಆಚಾರ್ಯರ ಗ್ರಂಥಗಳೂ, ವಾದಿರಾಜರೇ ಮುಂತಾದ ವೈಷ್ಣವ ಜ್ಞಾನಿಗಳ ಟೀಕಾ ಟಿಪ್ಪಣಿಗಳ ಗ್ರಂಥಗಳೂ, ಪುರಂದರಾದಿ ದಾಸರ ಪದಗಳೂ, ಹರಿಕಥಾಮೃತಸಾರಾದಿ ವೈಷ್ಣವ ಜ್ಞಾನಿಗಳು ರಚಿಸಿರುವ ಕಾವ್ಯಗಳೂ, ವಾಯುಸ್ತುತಿ, ಮಧ್ವವಿಜಯಾದಿ ಪಂಡಿತಾಚಾರ್ಯಾದಿಗಳು ಬರೆದಿರುವ ಮತಗ್ರಂಥಗಳೂ ಸೇರಿವೆ. ಸ್ವಾಪ್ನವೃಂದಾವನಾಖ್ಯಾನವೂ ಈ ಹನ್ನೊಂದನೇ ಶಾಸ್ತ್ರದ ಒಂದು ಮಾನ್ಯಗ್ರಂಥ. ಈ ಹನ್ನೊಂದರ ವಿಷಯದಲ್ಲೂ ಆಚಾರ್ಯರು ಹೇಳಿದ್ದಾರೆ. **" ಸಚ್ಛಾಸ್ತ್ರಂ ಅಭ್ಯಸೇನ್ನಿತ್ಯಂ "**[1] (ಅರ್ಥ-ಅಶೇಷವೇದ, ಪಂಚರಾತ್ರ, ಮೂಲರಾಮಾಯಣ, ಭಾರತ, ಮನ್ವಾದಿ ಸ್ಮೃತಿ, ವೈಷ್ಣವ ಪುರಾಣಗಳು, ಕಪಿಲ ದೇವರ ಸಾಂಖ್ಯ, ದತ್ತ ಸ್ವಾಮಿಯ ಯೋಗ, ಬ್ರಹ್ಮ ತರ್ಕ, ಮೀಮಾಂಸಾ ಶಾಸ್ತ್ರ ಈಶ್ವರ ಪ್ರತ್ಯಕ್ಷ, ರಮಾದಿಗಳ ಪ್ರತ್ಯಕ್ಷ. ಮತ್ತು ಮುಕ್ತಾಮುಕ್ತ ಜ್ಞಾನಿಗಳ ಪ್ರತ್ಯಕ್ಷ. ಈ ಪ್ರತ್ಯಕ್ಷಾಗಮ ಮೂಲಕ ಯುಕ್ತಿ-ಇವೆಲ್ಲಾ ದೇವರನ್ನು ತೋರಿಸುತ್ತವೆ. ಇದೇ ಸಚ್ಛಾಸ್ತ್ರ. ಏತದ್ಭಿನ್ನವಾದದು ದುಃಶಾಸ್ತ್ರ. ಸಚ್ಛಾಸ್ತ್ರವನ್ನು ಸರ್ವದಾ ಅಭ್ಯಾಸ ಮಾಡಬೇಕು. ದುಶ್ಶಾಸ್ತ್ರವನ್ನು ತ್ಯಜಿಸಬೇಕು. ಖಂಡಿಸಬೇಕು.

3. ಇನ್ನೊಂದು ವಿಷಯವೂ ಅವಿಸ್ಮರಣೀಯವಾದುದು. ಪೂರ್ವೋಕ್ತ ಹತ್ತು ಶಾಸ್ತ್ರಕ್ಕೆ ಹೇಗೆ ಆಚಾರ್ಯರು ಸ್ವತಃ ಪ್ರಾಮಾಣ್ಯವನ್ನು ಒಪ್ಪಿದ್ದಾರೆಯೋ, ಹಾಗೆಯೇ ಈ ಹನ್ನೊಂದನೆಯ ಶಾಸ್ತ್ರಕ್ಕೂ ಸ್ವತಃ ಪ್ರಾಮಾಣ್ಯ ಇರುತ್ತದೆ. ಹನ್ನೊಂದು ಶಾಸ್ತ್ರವೂ ದೇವರನ್ನು ನೋಡಲಿಕ್ಕೆ ಹೊರಟವರಿಗೆ ಸನ್ಮಾರ್ಗ. **" ವಿಲಕ್ಷಣತ್ವಾತ್, ನಿತ್ಯತ್ವಾತ್, ತದನುಸಾರಿತ್ವಾಚ್ಚ । ನಹಿ ನಿತ್ಯೇ ದೋಷಾಃ ಕಲ್ಪ್ಯಾಃ । ಸ್ವತಶ್ಚ ಪ್ರಾಮಾಣ್ಯಂ "** ಎಂದು ಬ್ರಹ್ಮಸೂತ್ರ ಭಾಷ್ಯ 2-1-4 ರಲ್ಲಿದೆ. ಅಲ್ಲೇ ಭಾಷ್ಯದೀಪಿಕೆಯಲ್ಲಿ **" ನಿತ್ಯೆ ವೇದೇ । ಉಪಲಕ್ಷಣಮೇತತ್ । ತದನುಸಾರಿ ಸ್ಮೃತೌ ಚೇತ್ಯಪಿ ದ್ರಷ್ಟವ್ಯಂ । ಅತಏವಪ್ರಾಕ್ ತದನುಸಾರೀತ್ಯುಕ್ತಂ । ನಿತ್ಯೇ ಇತಿ ಹೇತುಗರ್ಭಂ । ದೋಷಾಃ ವಕ್ತೃ ದೋಷಾಃಕಲ್ಪ್ಯಾಃ ಅಪ್ರಾಮಾಣ್ಯ ನಿಮಿತ್ತತಯೇತಿ ಶೇಷಃ । ಅಸ್ಯಾತೋ ನಾಪ್ರಾಮಾಣ್ಯಮಿತಿ ಪೂರ್ವೇಣ ಅನ್ವಯಃ । ತಥಾ ಚ ನಿತ್ಯತ್ವಾದೇಃ.......... ನೋಕ್ತ ದೋಷಃ ಇತಿ ಭಾವಃ "** ಎಂದಿದೆ. (ತಾತ್ಪರ್ಯ–ವೇದಾದಿ ಹನ್ನೊಂದು ಶಾಸ್ತ್ರವು ವಿಲಕ್ಷಣವು. ಏಕೆಂದರೆ ನಾಲ್ಕು ನಿತ್ಯವು. ಇನ್ನುಳಿದ ಏಳು ನಿತ್ಯಾನುಸಾರಿ, ನಿತ್ಯಾನುಕೂಲ, ನಿತ್ಯಾವಿರುದ್ಧ ಎಂದೆನಿಸಿ ದೋಷಶಂಕೆಗೇ ಅವಕಾಶವಿಲ್ಲದಂತೆ ಇವೆ. ನಿತ್ಯವಾದ ವೇದದಲ್ಲಿ ಪುರುಷ ಕೃತತ್ವವೇ ಇಲ್ಲವಾದ್ದರಿಂದ

---

1) ಅನುವ್ಯಾಖ್ಯಾನ 3-3-1.

ದೋಷ ಕಲ್ಪನೆ ಮಾಡಬಾರದು. ಅದು ಉಪಲಕ್ಷಣವು; ಭಾರತ, ಪಂಚರಾತ್ರ, ಮೂಲ ರಾಮಾಯಣ ಗಳಲ್ಲಿ ವೇದಾನುಸಾರಿತ್ವ ಇದೆ. ವೇದ ಪರಿಗೃಹೀತತ್ವವೂ ಇದೆ. ಸಾತ್ವಿಕ ಪುರಾಣ ಸ್ಮೃತಿಗಳಲ್ಲಿ ವೇದೇತಿಹಾಸಾನುಕೂಲತ್ವವಿದೆ. ಮೀಮಾಂಸಾ ಶಾಸ್ತ್ರದಲ್ಲಿ ವೇದ ಸಂವಾದಿತ್ವ, ವೇದ ಗೃಹೀತತ್ವ, ಅನುಸಾರಿತ್ವ, ಅವಿರುದ್ಧತ್ವಗಳಿವೆ, ಹನ್ನೊಂದನೇ ಶಾಸ್ತ್ರವಾದ ಅನುವ್ಯಾಖ್ಯಾನಾದಿಗಳಲ್ಲಿ ವೇದಾನು ಸಾರಿತ್ವವಿದೆ. ಸರ್ವ ಶಾಸ್ತ್ರಾನುಸಾರಿತ್ವ, ಸರ್ವಶಾಸ್ತ್ರಾವಿರುದ್ಧತ್ವ, ವೇದೋಕ್ತ, ಆಪ್ತೋಕ್ತತ್ವಾದಿಗಳಿವೆ. 1 ಆದ್ದರಿಂದ ಈ ಹನ್ನೊಂದು ಶಾಸ್ತ್ರಗಳೂ ಸ್ವತಃ ಪ್ರಮಾಣ ಎನಿಸುತ್ತವೆ. ಇವುಗಳಲ್ಲಿ ಆಪಾತ ಪ್ರತೀತಿ ಯಿಂದ ದೋಷ ಏನಾದರೂ ಕಂಡು ಬಂದರೂ, ಅವುಗಳಲ್ಲಿ ಹೇಳಿದಂತೆ ನಡೆದು ಫಲೋಪಲಬ್ಧಿಯಾಗ ದಿದ್ದರೂ, ಅವುಗಳಲ್ಲಿ ಪ್ರಾಮಾಣ್ಯ ಶಂಕೆ ಮಾಡಬಾರದು. ನಮ್ಮ ಬುದ್ಧಿಯಲ್ಲಿ ಅಥವಾ ಕರ್ತೃವಿನಲ್ಲಿ ಏನೋ ದೋಷವಿದೆ ಎಂದು ಶಂಕಿಸಬೇಕು. ಸೂಕ್ಷ್ಮಾರ್ಥ ಉಪಕ್ರಮಾದಿಗಳ ಅನುಸಂಧಾನದಿಂದ ನಿರ್ಣಯಿಸಬೇಕು. ಅಂತೂ ವಿಚಾರದಿಂದ ನಿರ್ಣಯ ತಿಳಿಯಬೇಕು. ಹಾಗೆ ನಮ್ಮ ಅಧಿಕಾರದಲ್ಲಿ ಏನೋ ನ್ಯೂನತೆ ಇದೆ, ಆದ್ದರಿಂದ ದೋಷ ಕಾಣುತ್ತದೆ. ಅದರಿಂದ ಪುತ್ರಪ್ರಾಪ್ತಿ ಮುಂತಾದ ಫಲ ಆಗಿಲ್ಲ ಎಂದು ನಿಶ್ಚಯಿಸಬೇಕು. ಆ ಹನ್ನೊಂದು ಶಾಸ್ತ್ರಗಳಲ್ಲಿ " ಅಪ್ರಾಮಾಣ್ಯವಿದೆ, ಸುಳ್ಳು ಹೇಳಿದೆ " ಎಂದು ತಿಳಿಯಬಾರದು. ಎಲ್ಲಾ ಗ್ರಂಥಗಳಿಗೂ ಈ ಮಾಹಾತ್ಮ್ಯ ಇಲ್ಲ. ಹನ್ನೊಂದು ಶಾಸ್ತ್ರದಲ್ಲಿ ಮಾತ್ರ ಈ ವ್ಯವಸ್ಥೆ ಎಂದು ತಾತ್ಪರ್ಯ.) ಇತರ ಗ್ರಂಥಗಳಲ್ಲಿ ವ್ಯವಸ್ಥೆ ಹೇಗೆಂದರೆ ಆಚಾರ್ಯರು 2-1-6 ರಲ್ಲಿ ಹೇಳಿದ್ದಾರೆ. ಇತಃ ಪ್ರಾಮಾಣ್ಯಮನ್ಯೇಷಾಂ ನ ಸ್ವತಸ್ತು ಕಥಂಚನ । ಅದೃಶ್ಯೋಕ್ತೌ ತತಸ್ತೇಷಾಮಪ್ರಾಮಾಣ್ಯಂ ನ ಸಂಶಯಃ ॥ " (ಅರ್ಥ-ಈ ಹನ್ನೊಂದು ಶಾಸ್ತ್ರಭಿನ್ನವಾದ ಪಾಶುಪತಾದಿ ಮತ್ತು ಅವೈದಿಕ ಮತ ಗ್ರಂಥಗಳಲ್ಲಿ; ದೇವದತ್ತಾದಿ ಸಂಪ್ರತಿಪನ್ನ ಅನಾಪ್ತ ಐಂದ್ರಜಾಲಿಕಾದಿ ರಚಿತ ಗ್ರಂಥದಲ್ಲಿ; ಸ್ವತಃ ಪ್ರಾಮಾಣ್ಯವು ಇಲ್ಲವೇ ಇಲ್ಲ. ಆ ಗ್ರಂಥಗಳಲ್ಲಿ ಹೇಳಿದಂತೆ ನಡೆದು ಫಲವಾಗದಿದ್ದರೆ ಆಗ್ರಂಥಕ್ಕೆ ಅಪ್ರಾಮಾಣ್ಯವನ್ನು ಹೇಳಬಹುದು. ಸಂಶಯವಿಲ್ಲ.) " **ಯತೋ ಅನ್ಯೇಷಾಂ ಪ್ರಾಮಾಣ್ಯಂ ಫಲ ಸಂವಾದಾಧೀನಂ** " ಎಂದು ಭಾಷ್ಯದೀಪಿಕೆಯಲ್ಲಿಯೂ ಇದೆ. (ಅರ್ಥ-ಹನ್ನೊಂದು ಶಾಸ್ತ್ರಕ್ಕೆ ಸೇರದ ಪಾಶುಪತಾದಿ ಗ್ರಂಥಗಳ ಪ್ರಾಮಾಣ್ಯವು ಫಲ ಸಂವಾದದಿಂದಲೇ ನಿಶ್ಚಯಿಸಲ್ಪಡಬೇಕಾದ್ದರಿಂದ, ಫಲವಾಗದಿದ್ದರೆ ಪ್ರಾಮಾಣ್ಯವೇ ಅದಕ್ಕಿಲ್ಲವೆಂದು ಸಿದ್ಧವಾಗುತ್ತದೆ. ಹೀಗೆ ಭವಿಷ್ಯತ್ಪರ್ವದಲ್ಲಿದೆ. ಆದರೆ ಒಂದು ವ್ಯವಸ್ಥೆ ಇದೆ. ಹನ್ನೊಂದು ಶಾಸ್ತ್ರಕ್ಕೆ ಸೇರದ ಕೆಟ್ಟ ಗ್ರಂಥವಾದರೂ ಯಾವ ವಾಕ್ಯಗಳಲ್ಲಿ ಹೇಳಿದ್ದು ನಡೆಯಲಿಲ್ಲವೋ ಅಥವಾ ಯಾವ ವಾಕ್ಯಗಳು ಶಾಸ್ತ್ರವಿರುದ್ಧವಾದವೋ ಆ ಬಾಧಿತ ವಾಕ್ಯಗಳು ಅಪ್ರಮಾಣವೆಂದು ವ್ಯಾಪ್ತಿಯನ್ನು ತಿಳಿಯಬೇಕು. ಒಂದು ವಾಕ್ಯದಲ್ಲಿ ಹೇಳಿದಂತೆ ಫಲವಾಗದಿದ್ದರೆ ಸಮಗ್ರಗ್ರಂಥವು ಅಪ್ರಮಾಣವೆಂದು ತೀರ್ಮಾನ ಮಾಡಬಾರದು. ಅಂಥ ವ್ಯಾಪ್ತಿ ಇಲ್ಲ; ಸ್ಥಾಲೀ ಪುಲಾಕ ನ್ಯಾಯವು ವಾಕ್ಯ ಪ್ರಾಮಾಣ್ಯ ವಿಷಯದಲ್ಲಿ ಸಮಂಜಸವಲ್ಲ. ಒಂದು ವಾಕ್ಯವು ಅಪ್ರಮಾಣವೆಂದು ಸಿದ್ಧವಾದರೆ ಆ ಗ್ರಂಥದ ಸರ್ವವಾಕ್ಯಗಳೂ ಅಪ್ರಮಾಣವೆಂದು ಸಿದ್ಧವಾಗುವುದಿಲ್ಲ. ಆದರೆ ಪ್ರಾಮಾಣ್ಯ ಸಂದೇಹ ಬರುತ್ತದೆ. ಅಷ್ಟನ್ನು ಒಪ್ಪಬಹುದು.

---

1) ಶಾಂಕರಾದಿ ಇಪ್ಪತ್ತೊಂದು ಸೂತ್ರಭಾಷ್ಯಗಳೂ, ವೇದ ಮತ್ತು ಸೂತ್ರಕ್ಕೆ ವಿರುದ್ಧವಾದವು. ವೇದ ತಾತ್ಪರ್ಯ ಜ್ಞಾನ ರಹಿತತ್ವಾತ್, ವ್ಯಾಸಪ್ರಸಾದರಹಿತತ್ವಾಚ್ಚ ತತ್ಕರ್ತೄಣಾಂ.

4. ಆದ್ದರಿಂದ ಈ ಹನ್ನೊಂದು ಶಾಸ್ತ್ರದಲ್ಲಿ ಸೇರಿದ ಯಾವ ಗ್ರಂಥದ ವಿಷಯದಲ್ಲಾಗಲೀ ಯಾವ ಪಂಡಿತನೂ ಒಂದು ಪಂಕ್ತಿಯನ್ನು ಓದಿ " ಇದಕ್ಕೆ ಪ್ರಮಾಣ ಏನು ? ಈ ಫಲವನ್ನು ಯಾರು ಅನುಭವಿಸಿದ್ದಾರೆ ? " ಇತ್ಯಾದಿ ರೂಪವಾದ ಉದ್ಧತ ಪ್ರಶ್ನೆಗಳನ್ನು ಮಾಡಬಾರದು. ಅದು ಅಶಾಸ್ತ್ರೀಯ ವ್ಯವಹಾರ. ಅಂಥ ಪ್ರಶ್ನೆಗಳನ್ನು ಸ್ವತಃ ಪ್ರಾಮಾಣ್ಯ ರಹಿತ ಗ್ರಂಥಗಳಲ್ಲಿ ಮಾಡಬಹುದು. ಸ್ವತಃ ಪ್ರಾಮಾಣ್ಯ ಶಾಸ್ತ್ರ ಗ್ರಂಥಗಳು ಸ್ವೋಕ್ತ ಫಲವನ್ನು ಪಾರಾಯಣಾದಿಗಳಿಂದ ಸೇವಿಸುವ ಅಧಿಕಾರಿಗಳಿಗೆ ಕೊಟ್ಟೇ ಕೊಡುತ್ತವೆ. ಆದರೂ ವೇದ ಚತುಷ್ಟಯ ಭಿನ್ನವಾದ ಏಳು ಸ್ವತಃ ಪ್ರಮಾಣ ಗ್ರಂಥಗಳೂ ಒಂದು ಜವಾಬ್ದಾರಿಯನ್ನು ಹೊತ್ತಿವೆ. ಏನೆಂದರೆ ಅವು ತಾವುಗಳು ವೇದಾನುಸಾರಿ, ವೇದಾವಿರುದ್ಧ, ಅಥವಾ ವೇದ ಸಂವಾದಿ. ಅಥವಾ ವೇದ ಪರಿಗೃಹಿತ ಅಥವಾ ವೇದೋಕ್ತ ಆಪ್ತಪ್ರಣೀತ ಎಂದು ಜ್ಞಾತವಾಗಬೇಕು. ಇಲ್ಲೇ ಉದಾಹೃತವಾದ ಪುರಾಣ ವಾಕ್ಯಗಳಿಂದ ಹಾಗೆ ಜ್ಞಾತವಾಗಿದೆ. ಮ. ತಾ. ನಿ. I-31 ವಾಕ್ಯ ಮತ್ತು ಭಾವ ಪ್ರಕಾಶಿಕಾ ಸಹ ಜ್ಞಾಪಕವೇ. ತಥಾ ಚ ಆ ಹನ್ನೊಂದು ಶಾಸ್ತ್ರಗ್ರಂಥಗಳನ್ನು ಮಾನಮಾಡಿ ಶ್ರದ್ಧೆಯಿಂದ ಅಭ್ಯಾಸ ಮಾಡಬೇಕು. ಬಾಧಕವನ್ನು ಕಾಣದೆ ಶಂಕಿಸಬಾರದು.

ಪ್ರಕೃತ ಸ್ವಾಪ್ನ ವೃಂದಾವನಾಖ್ಯಾನವು ದಶಶಾಸ್ತ್ರಾನುಸಾರಿ, ದಶಶಾಸ್ತ್ರಾವಿರುದ್ಧ, ಆಪ್ತ ಪರಶುಕ್ಲತ್ರಯಸ್ಥ ಋಜು ರಚಿತ ಪ್ರಮಾಣ ಗ್ರಂಥ. ಅದರಂತೆ ನಡೆದರೆ ದೇವರ ದರ್ಶನಕ್ಕೆ ಯೋಗ್ಯವಾದ ಧ್ಯಾನಮಾರ್ಗ ಸಿಗುತ್ತದೆ. ಅದನ್ನು ಉಪೇಕ್ಷೆಮಾಡಿ, ಅದರ ಪ್ರಾಮಾಣ್ಯದಲ್ಲಿ ಶಂಕಿಸಲು ಪ್ರಯೋಜಕವಾದ ಯಾವ ಕಾರಣವೂ ಇಲ್ಲ. " ತತ್ಪ್ರಮಾಣಸ್ಯ ನಿಂದಾ ಚ " ಎಂಬ ದೋಷವೂ ಪ್ರಸಕ್ತವಾಗುತ್ತದೆ. ಆದ್ದರಿಂದ ಅದರ ಪಾರಾಯಣ ವಿಹಿತವೇ ಸರಿ.

5. ಶ್ರೀವಾದಿರಾಜ ಸ್ವಾಮಿಗಳ ಸನ್ನಿಧಿಗೆ ಅವರ ವಾರ್ಧಕ್ಯದಲ್ಲಿ ಒಬ್ಬ ಸತ್ಕುಲ ಪ್ರಸೂತನಾದ ತುಳುದೇಶದ ಏಡಮೂಕ ಬ್ರಹ್ಮಚಾರಿಯು ಸೇವೆಗಾಗಿ ಬಂದನು. ಆ ವಟುವು ಗುರುರಾಜರಿಗೆ ವಂಡಿಯಲ್ಲಿ ಸ್ನಾನಕ್ಕೆ ನೀರು ಕೊಡುವ ಸೇವೆ ಮಾಡಿಕೊಂಡಿದ್ದನು. ಬಹುಕಾಲದ ಮೇಲೆ ಆ ಸತ್ಕರ್ಮ ದಿಂದ ಆತನಿಗೆ ಅಂತರಂಗದಲ್ಲಿ ಜ್ಞಾನೋದಯವಾಗಿ " ತನ್ನನ್ನು ಉದ್ಧರಿಸಬೇಕು, ತಮ್ಮ ಮತ್ತು ನನ್ನ ಸ್ವರೂಪ ತಿಳಿಸಿ ಧ್ಯಾನ ಮಾಡಿಸಿ ಕಾಪಾಡಬೇಕು " ಎಂದು ಸೂಚನೆ ಮಾಡುತ್ತಾ ಅತ್ತನು. ಕರುಣೆ ಯಿಂದ ಗುರುಗಳು " ಆಗಲಿ " ಎಂದು ಸೂಚಿಸಿ ಸಮಾಧಾನ ಮಾಡಿದರು. ಹೀಗೆ 2-3 ಸಲ ಆಗಿದ್ದರೂ, ಗುರುಗಳು ವೃಂದಾವನ ಸೇರಿ ಬಿಟ್ಟರು. ಶಿಷ್ಯನು, ಅದೇ ಮಠದಲ್ಲಿ ವಾದಿರಾಜರ ಪೀಠಕ್ಕೆ ಬಂದ ವೇದವೇದ್ಯರನ್ನೂ ಹದಿನಾರು ವರ್ಷ ಸೇವಿಸಿ, ಆ ವೇದವೇದ್ಯರೂ ವೃಂದಾವನಸ್ಥರಾದ ಮೇಲೆ, ಆ ಪೀಠಕ್ಕೆ ಬಂದ ವೇದನಿಧಿಗಳನ್ನು ಸೇವಿಸಿ ಕೊಂಡಿದ್ದನು. ಈ ವೇದನಿಧಿಗಳು ವಾದಿರಾಜರಿಗೂ ಶಿಷ್ಯರು, ವೇದವೇದ್ಯರಿಗೂ ಶಿಷ್ಯರು, ಮಂತ್ರ ಸಿದ್ಧರು. ಹಯಗ್ರೀವ ದೇವರನ್ನು ಪ್ರತ್ಯಕ್ಷ ನೋಡುವವರು. ಇಂಥವರ ಕಾಲದಲ್ಲಿ ಸುಮಾರು ಎಪ್ಪತ್ತು ವರ್ಷದ ವೃದ್ಧ ಏಡಮೂಕನಿಗೆ 1630 ರಲ್ಲಿ ಸ್ವಪ್ನದಲ್ಲಿ ವೃಂದಾವನಸ್ಥ ಗುರುರಾಜರು ಕಾಣಿಸಿಕೊಂಡು ದಿನಕ್ಕೆ ಎರಡು ಮೂರು ಶ್ಲೋಕದಂತೆ ಹಾಡಿ ಆವನಿಗೆ ಜ್ಞಾನದಾನಮಾಡಿದರು. ಆ

ಮೂಕನು ಬೆಳಿಗ್ಗೆ ಎದ್ದು ಗುರುರಾಜರ ಅನುಗ್ರಹದಿಂದ ವಾಕ್ಛಕ್ತಿಯನ್ನು ಹೊಂದಿ ತಾನು ಶ್ರವಣ ಮಾಡಿದ ಶ್ಲೋಕಗಳನ್ನು ವೇದನಿಧಿಗಳ ಮುಂದೆ ಹೇಳಲು, ಅವರು ಆ ಶ್ಲೋಕಗಳನ್ನು ಬರೆಯಿಸಿ ಇಟ್ಟರು. [1] ಹೀಗೆ 10-12 ವರ್ಷಗಳ ಅವಧಿಯಲ್ಲಿ 2239 ಶ್ಲೋಕಗಳ ದೊಡ್ಡ ಸಂಸ್ಕೃತ ಗ್ರಂಥವು ತಾಳವಾಲದಲ್ಲಿ ಬರೆಯಿಸಲ್ಪಟ್ಟು ಲೋಕದಲ್ಲಿ 1642 ರಿಂದ ಈಚೆಗೆ ಪ್ರಚಾರಕ್ಕೆ ಬಂದಿದೆ. ಆ ಗ್ರಂಥದಲ್ಲಿ ವಿಪ್ರ ವಾದಿರಾಜರ ವಿಷಯದಲ್ಲಿ ವಾಚಕರು ಕೇಳಬಹುದಾದ ಪ್ರಶ್ನೆಗಳಿಗೆಲ್ಲಾ ಉತ್ತರವಿದೆ. ಎಲ್ಲಾ ಮಧ್ವಶಾಸ್ತ್ರ ಸಂಕ್ಷೇಪವೂ, ಅನುಷ್ಠಾನ ಪ್ರಕಾರವೂ, ಧ್ಯಾನಪ್ರಕಾರವೂ ಅಲ್ಲಿ ಹೇಳಲ್ಪಟ್ಟಿದೆ. ಮೂಲ ಶಾಸ್ತ್ರಗಳಿಗೂ ಮಧ್ವಶಾಸ್ತ್ರಕ್ಕೂ ಅವಿರುದ್ಧವಾದ ಸದರೀ ಗ್ರಂಥ ವಕ್ತ್ರಾನುಕೂಲ್ಯ, ಶ್ರೋತ್ರಾನುಕೂಲ್ಯ, ಪ್ರಸಂಗಾನುಕೂಲ್ಯಗಳಿಂದ ಕೂಡಿ ಪ್ರಕಾಶಕ್ಕೆ ಬಂದಿದೆ. ಶ್ರುತಿ ಸಂವಾದಿಯೋ ಎಂಬಂತೆ ಅನೇಕ ಕಡೆಗಳಲ್ಲಿ ಕಾಣುತ್ತದೆ. ಸಾತ್ವಿಕಯುಕ್ತಿ ಭರಿತವಾಗಿಯೂ ಇದೆ. ಆದರೆ 1642 ರಲ್ಲಿ ಆ ಗ್ರಂಥವು ಅರ್ಥವಾಗುತ್ತಿರಲಿಲ್ಲ, ಪುನರುಕ್ತಿಗಳಿಗೆ ಕಾರಣ ಗೊತ್ತಾಗಲಿಲ್ಲ. ಒಗಟು ಶ್ಲೋಕಗಳು ಬಹಳವಾಗಿದ್ದವು. ಹೀಗಿದ್ದಾಗ 140 ವರ್ಷಗಳ ಮೇಲೆ ಅದ್ಭುತ ನಡೆಯಿತು. 1776 ರಲ್ಲಿ ಈ ಏಡಮೂಕ ವಿಪ್ರನೇ ಉಡುಪಿ ಪ್ರಾಂತ್ಯದಲ್ಲಿ ಹುಟ್ಟಿದರು. 1788 ರಲ್ಲಿ ಅವರಿಗೆ ಸೋದೆ ಮಠದ ಅಧೀಶ್ವರರಾಗುವ ಸನ್ಯಾಸವಾಯಿತು. ಆರು ವರ್ಷಕಾಲ ಪರಮಗುರುಗಳಲ್ಲಿ ವಿದ್ಯಾಭ್ಯಾಸ ಆಯಿತು. 1794 ರಲ್ಲಿ ಶ್ರೀ ವಿಶ್ವಪ್ರಿಯ ತೀರ್ಥರೆಂಬ ಹೆಸರಿನಿಂದ ಪಟ್ಟಕ್ಕೆ ಬಂದರು. ಅವರು ಸೋದೆಗೆ ಹೋಗಿ 48 ದಿನ ವಾದಿರಾಜರ ವೃಂದಾವನ ಸೇವೆ ಮಾಡುತ್ತಾ ಸರ್ವಮೂಲ ಪಾರಾಯಣ ಮಾಡಿದರು. 48ನೇ ದಿನ ಪ್ರಯಾಣ ಹೊರಡಲು ಅಪ್ಪಣೆ ಕೇಳಲು ವೃಂದಾವನ ಪ್ರದಕ್ಷಿಣೆ ಕೈಯಲ್ಲಿ ದಂಡ ಹಿಡಿದು ಮಾಡಿ ನಮಸ್ಕರಿಸಿದರು. ಆಗ ವಾದಿರಾಜರ ವೃಂದಾವನದಿಂದ ಪ್ರತ್ಯಕ್ಷವಾಗಿ ಮಂತ್ರಾಕ್ಷತೆಗಳು ಅವರ ತಲೆಯ ಮೇಲೆ ಬಿದ್ದವು. " ಪೇತುರ್ಮಂತ್ರಾಕ್ಷತಾಃ ಕಿಲ " (ತಲೆ ಮೇಲೆ ಮಂತ್ರಾಕ್ಷತೆ ಬಿದ್ದವು) ಎಂದು ವಿಶ್ವಪ್ರಿಯ ಲೀಲಾ ವಿಲಾಸದಲ್ಲಿದೆ. ಅವರಿಗೆ ಕೂಡಲೇ ಜಾತಿ ಸ್ಮೃತಿ ಬಂತು. ಮೂಕ ಜನ್ಮದ ಜ್ಞಾನವೆಲ್ಲಾ ಪ್ರಕಾಶವಾಯಿತು. ವೃಂದಾವನದಿಂದ ಜ್ಞಾನ ಬಂದದ್ದರಿಂದ " ವೃಂದಾವನಾಚಾರ್ಯ " ರೆಂಬ ಹೆಸರು ಬಂತು. ಅವರು ಸರ್ವಜ್ಞರಾಗಿ ಪಾಠ ಪ್ರವಚನಾದಿ ತಪಸ್ಸು ಮಾಡಿದರು. ವಾದಿರಾಜರ ಋತುತ್ವವನ್ನು ಪ್ರಚಾರ ಮಾಡಿದರು. ಸ್ವಾಪ್ನ ವೃಂದಾವನಾಖ್ಯಾನಕ್ಕೆ ವ್ಯಾಖ್ಯಾನವನ್ನು ಶ್ರೀ ಮುಷ್ಣಾಚಾರ್ಯರೆಂಬ ಶಿಷ್ಯರಿಂದ ಮಾಡಿಸಿದರು. ಇನ್ನೊಬ್ಬ ಶಿಷ್ಯರಾದ ರಘುಪ್ರವೀರರೆಂಬ ಭೀಮನ ಕಟ್ಟೆ ಮಠದ ಸ್ವಾಮಿಗಳಿಂದ "ಪ್ರಾಮಾಣ್ಯ ಬೋಧಿನಿ" ಎಂಬ ಗ್ರಂಥವನ್ನು 1834 ರಲ್ಲಿ ಬರೆಯಿಸಿದರು. ಪುನರುಕ್ತಿಗೆ ಕಾರಣ ಪ್ರಕರಣಭೇದ ಎಂದು ತೋರಿಸಿದರು. ವಾದಿರಾಜರು ವಿಪ್ರನಿಗೆ ಹೇಳುತ್ತಿರುವಾಗ ಶೇಷನು ಕಾಣಿಸಿದರೆ ಅವನಿಗೂ ಬೋಧಿಸಿದರು. ಬಹುಭಕ್ತರು ಕಾಣಿಸಿದರೆ ಅವರಿಗೂ ಅದನ್ನೇ ಬೋಧಿಸಿದರು. ಹೀಗೆ ಬಹು ಪ್ರಕರಣಗಳಾದವು. ಒಬ್ಬರಿಗೆ ಹೇಳಿದ್ದನ್ನೇ ಕ್ವಚಿತ್ ಇನ್ನೊಬ್ಬರಿಗೂ ಹೇಳಿದ್ದಾರೆ. ವಿಪ್ರನು ಸಂತತ ಶ್ರೋತೃವು. ವೃಂದಾವನಾಚಾರ್ಯರು ಒಗಟು ಶ್ಲೋಕಗಳಿಗೆಲ್ಲಾ ಅರ್ಥ ಹೇಳಿದ್ದಾರೆ. ಅವರ ಜನ್ಮ ಚರಿತ್ರೆಯೇ ಈ ಗ್ರಂಥ ಪ್ರಾಮಾಣ್ಯಕ್ಕೆ ಮತ್ತು ಈ ಗ್ರಂಥದ ಮಹತ್ವಕ್ಕೆ ಒಂದು ಅದ್ಭುತ ಸಾಕ್ಷಿ.

1) ವಾ. ಗು. ಚ. ವಾದಿರಾಜ ಗುರುವರ ಚರಿತಾಮೃತ VII. 17 ರಿಂದ 23 ವರೆಗೆ.

ಇನ್ನೊಂದು ಕಾರಣದಿಂದಲೂ ಆಖ್ಯಾನವು ಅದ್ಭುತ ಗ್ರಂಥವೆಂದು ಗೊತ್ತಾಗುತ್ತದೆ. ಯಾವ ಅಧಿಕಾರಿಗಳು ಯಾವ ಭಗವದ್ರೂಪವನ್ನು ಯಾವ ಈ ಗ್ರಂಥದ ಶ್ಲೋಕಗಳಿಂದ ಉಪಾಸನೆ ಮಾಡ ಬೇಕೆಂಬುದು ಇದರಲ್ಲಿ ಹೇಳಿದೆ. ವೃಂದಾವನಾಚಾರ್ಯರು ಸ್ವಶಿಷ್ಯರಿಗೆ ಹೇಳಿಕೊಟ್ಟರೆಂದು "ಉದ್ಧೃತ್ಯ ಸುಖದೋಹಿನಃ" ಎಂದು ವಿಶ್ವಪ್ರಿಯ ಲೀಲಾ ವಿಲಾಸದಲ್ಲಿದೆ. ಈಗಲೂ ಗುರುರಾಜರ ಸೇವೆಮಾಡಿ ಸ್ವಪ್ನಾದಿಗಳಿಂದ ತಿಳಿಯುತ್ತಾರೆ. ಅವೆಲ್ಲಾ ಹೇಳಲ್ಪಟ್ಟಂತೆ ನಡೆದಿವೆ. ಸದರೀ ಗ್ರಂಥದ ಸೇವೆಯಿಂದ ಜಂಬುಖಂಡಿ ವಾದಿರಾಜಾಚಾರ್ಯಾದಿಗಳು ದೊಡ್ಡ ತಪಸ್ವಿಗಳೆನ್ನಿಸಿದರು. ಅವರ ಆಜ್ಞೆಯಿಂದ ಅವರ ಪುತ್ರನು 1925 ರಲ್ಲಿ ಬೆಳಗಾವಿಯಲ್ಲಿ ರಾಮತತ್ವ ಪ್ರಕಾಶಿಕಾ ಪ್ರೆಸ್ಸಿನಲ್ಲಿ ಸ್ವಾಪ್ನವೃಂದಾವನಾಖ್ಯಾನವನ್ನು ಅಚ್ಚು ಮಾಡಿಸಿದನು. ಈಚೆಗೆ ಶ್ರೀ ಗೋವಿಂದರಾಯರು ದ್ವಿತೀಯಾವರ್ತಿ ||ತಾತ್ಪರ್ಯ ಸಮೇತ ಕನ್ನಡ ಅಕ್ಷರದಲ್ಲಿ ಪ್ರಿಂಟು ಮಾಡಿಸಿದ್ದಾರೆ. ಗ್ರಂಥ ಮಂಜುಳವಾದ ಶೈಲಿಯಲ್ಲಿದೆ. "ಮಂತ್ರತುಲ್ಯಂ ಮಹಾಗ್ರಂಥಂ ರಚಯಾಮಾಸವಾದಿರಾಟ್" ಎಂದು ವೇದನಿಧಿಗಳ ಶಿಷ್ಯರಾದ ರಾಮಚಂದ್ರ ಪಂಡಿತರು ವಾ. ಗು. ಚ. ಪುಟ 39 ರಲ್ಲಿ ವರ್ಣಿಸಿದ್ದಾರೆ. (ಅರ್ಥ-ಮಂತ್ರ ಸದೃಶವಾದ ದೊಡ್ಡಗ್ರಂಥ ವಾದಿರಾಜರು ರಚಿಸಿದ್ದಾರೆ ಎಂದರ್ಥ). ಮುನುಶಬ್ದವಾಚ್ಯರು ಋಜುಗಳು "ತೇವಾಯುವೇಮನವೇ" ಎಂದು ಶ್ರುತಿ ಇದೆ. ಅವರು ಕಲಿ ಪ್ರವೇಶ ರಹಿತರು. ನಿತ್ಯಾಪರೋಕ್ಷಿಗಳು. ಸರ್ವಶಾಸ್ತ್ರಜ್ಞಾನ ಸಂಪೂರ್ಣರು. ಬಳಿತ್ಥಾದಿಸೂಕ್ತ ಪ್ರತಿಪಾದ್ಯರು. ಅಂಥವರು ಉಪದೇಶ ಮಾಡಿದ ಈ ಗ್ರಂಥವನ್ನು ಸ್ವತಃ ಪ್ರಮಾಣ ಶಾಸ್ತ್ರ ಗ್ರಂಥವೆಂದು ನಂಬುವುದಕ್ಕೆ ಬಾಧಕವೇನೂ ಇಲ್ಲ.

ಅಧ್ಯಾಯ ೨.

ಆಖ್ಯಾನದ ಸ್ವರೂಪ ಮಹತ್ವ

ಸಹಕಾರಿ ಪ್ರಮಾಣ ವೈಶಿಷ್ಟ್ಯ

1. ವೇದವು ಕೃಷ್ಣ, ವ್ಯಾಸ, ಹಯಗ್ರೀವಾದಿ ಮಹಾಜನ ಪರಿಗೃಹೀತವಾಗಿದೆ. ಭಾರತಾದಿಗಳು ವಿರಿಂಚ, ವೈಶಂಪಾಯನ, ನಾರದಾದಿ ಪರಿಗೃಹೀತವಾಗಿವೆ. ಭಾಗವತವು ಶುಕಮುನಿಗಳಿಂದ ಕೊಂಡಾಡಲ್ಪಟ್ಟಿದೆ. ಹಾಗೇ ಸ್ವಾಪ್ನವೃಂದಾವನಾಖ್ಯಾನವೂ ಸ್ವಜನನಕಾಲದಿಂದ ವೇದನಿಧಿ, ರಾಮಚಂದ್ರಾಚಾರ್ಯರು, ವಿಶ್ವಪ್ರಿಯ ತೀರ್ಥರು, ರಘುಪ್ರವೀರರು, ಕೊಚ್ಚಿ ರಂಗಪ್ಪಾಚಾರ್ಯರು, ವೇದಗರ್ಭ ಸೇತು ಮಾಧವಾಚಾರ್ಯರು, ಸಂಕರ್ಷಣ ಒಡೆಯರು, ಜಂಬುಖಂಡಿ ವಾದಿರಾಜಾಚಾರ್ಯರು, ಗೌಡಗೇರಿ ವಾಸುದೇವಾಚಾರ್ಯರು, ಸತ್ಯ ಪರಾಕ್ರಮ ತೀರ್ಥರು, ಸತ್ಯಧರ್ಮ ತೀರ್ಥರು, ಕಾಣೂರು ಮಠದ ವಿಶ್ವಸಮುದ್ರ ತೀರ್ಥರು, ಕೃಷ್ಣಾಪುರ ಮಠದ ವಿದ್ಯಾನಿಧಿ ತೀರ್ಥರು, ಅಟ್ಟಾಜಿ ವೆಂಕಟರಾಯರು ಮುಂತಾದ ಪ್ರಾಜ್ಞಮಣಿಗಳಿಂದ ಪರಿಗೃಹೀತವಾಗಿದೆ. ಸ್ವಾಪ್ನವೃಂದಾವನಾಖ್ಯಾನದಲ್ಲಿ ಹೇಳಲ್ಪಟ್ಟಿರುವ ವಾದಿರಾಜ ಋಜುತ್ವವು ಸಾಕ್ಷಾತ್ ಅವರ ಶಿಷ್ಯರೇ ಆಗಿ 108 ವರ್ಷದ ಮೇಲೆ ಬಾಳಿ ಜ್ಞಾನಿಗಳೆಂದು ಪ್ರಸಿದ್ಧರಾಗಿದ್ದ ವೇದವೇದ್ಯರಿಂದಲೇ ವಾದಿರಾಜರು ವೃಂದಾವನಸ್ಥರಾದ ದಿವಸವೇ ತಮ್ಮ ಮಠದ ಪೂಜಾಂಗವಾಗಿಯೂ, ಅರಸಪ್ಪ ನಾಯಕನ ಪುತ್ರನ ಅರಮನೆ ಪೂಜಾಕಾಲದ ಪ್ರವರವಾಗಿಯೂ, ನಿತ್ಯವೂ ಪರಾಕುರೂಪದಲ್ಲಿ ಹೇಳಲ್ಪಡಬೇಕೆಂದು ಘೋಷಿತವಾಗಿ ಆ ಸಂಪ್ರದಾಯವು ಸೋದೆ ಮಠದಲ್ಲಿ 380 ವರ್ಷಗಳಿಂದ ನಡೆದುಕೊಂಡು ಬಂದಿದೆ. [1]

1, ಈ ಪರಾಕುಗಳೆರಡೂ "ವಾದಿರಾಜ ಗುರು ಸಾರ್ವಭೌಮರು" ಎಂಬ ಪುಸ್ತಕದ ಪುಟ 314 ರಲ್ಲಿದೆ. ಅವುಗಳ ಕಂಠಪಾಠವು ಅವಶ್ಯಕವಾದ್ದರಿಂದ ಇಲ್ಲಿ ಕೊಡಲ್ಪಡಲಾಗಿದೆ.

1. ಉದ್ದಂಡೋದ್ದಂಡ, ಪರವಾದಿಪ್ರಚಂಡ, ಗಂಡಭೇರುಂಡ, ಮಾಯಿಮತವಿಧ್ವಂಸಕ, ಮಧ್ವಮತೋದ್ಧಾರಕ, ಸುಧಾರಸಾಸ್ವಾದ, ದಿಗ್ವಿಜಯೀಕೃತಾಸೇತುಮರ್ಯಾದ, ಭಾವಿಹನುಮಚ್ಚಕ್ರವರ್ತಿನ್, ಗುರುಸಾರ್ವಭೌಮ, ಹಂಸಾರೂಢ. ವಾದಿರಾಜ ಭೋ ಪರಾಕ್ ಎಂದು ಮಠದಲ್ಲಿ.

2. ಒಂದು ಕ್ಷಣದಲಿ ಶ್ರೀ ವಾದಿರಾಜರ ದ್ವಂದ್ವಪದವನುಭಜಿಸಿದವರಿಗೆ ಬೆಂದು ಹೋಗ್ವದು ಪೂರ್ವಜನ್ಮದ ದುರಿತ ಕಾನನವು, ಈ ಮಂದಮತಿಗಳು ಬಲ್ಲರೇ ಗೋವಿಂದ ಭಕ್ತರ ಮಹಿಮೆಯನು. ಪುರಂದರಾದಿಗಳರಿವರಲ್ಲದೆ ಮಿಕ್ಕವರರಿಯಬಹುದೇ ? ಪಾರಮೇಷ್ಠಿ ಪದಾಧಿಕಾರಿ ಋಜುಪದಸ್ಥ ಗುರುರಾಜ ಪಟ್ಟಭದ್ರವ್ಯಾಖ್ಯಾನ ಸಿಂಹಾಸನಾಧೀಶ್ವರ, ಅಜ್ಞಾನತಿಮಿರ ಮಾರ್ತಾಂಡ, ಸುಜ್ಞಾನ ತೇಜೋಮಯ ಎಂದು ಅರಮನೆಯಲ್ಲಿ ಹೇಳುತ್ತಿದ್ದ ಪರಾಕು.

ಅರಮನೆಯಲ್ಲಿ ಆ ರಾಜವಂಶ ಸಮಾಪ್ತಿ ಪರ್ಯಂತ ನಡೆದಿದೆ. ಮಠದಲ್ಲಿ ಈಗ ಎರಡು ಪ್ರಕಾರಗಳನ್ನೂ ನಿತ್ಯವೂ ಹೇಳುತ್ತಾರೆ. ಅಂಥ ಐತಿಹ್ಯಕ್ಕೆ ಪೋಷಕವಾಗಿ, ನಿರಪವಾದವಾಗಿ ಎಲ್ಲಾ ದಾಸಕೂಟದ ವಾದಿರಾಜ ಮಹಿಮಾ ಗಾಯಕರೂ ಅವರನ್ನು ಋಜುಗಳೆಂದೇ ಹೇಳಿದ್ದಾರೆಂದು ಕರ್ನಾಟಕ ಭಕ್ತವಿಜಯದಲ್ಲಿದೆ.[1] ಇಷ್ಟು ಪ್ರಮಾಣಗಳಿದ್ದರೂ ಋಜುಗಳಲ್ಲವೆಂದು ಸಂಶಯ ಪಡುವವರು ಯಾರಾದರೂ ಕ್ಷೀಣಪುಣ್ಯರು ಇದ್ದರೆ, ಅವರ ಮಾತೇನೆಂದರೆ " ನಾನು ಅವರನ್ನು ಅಪರೋಕ್ಷಿಗಳೆಂದು ಹೇಳುತ್ತೇನೆ. ಅವರು ಯಾರೆಂದರೆ ನನಗೆ ಗೊತ್ತಿಲ್ಲ. ಆದರೂ ಅವರು ಋಜುಗಳಲ್ಲವೆಂದು ನಾನು ಹೇಳುವವನಿದ್ದೇನೆ " ಎನ್ನುತ್ತಾರೆ. ಇಂಥ ಮಾತು ಜನ್ಮಾಧಿಕರಣ ಸುಧೆಯಲ್ಲಿ ಖಂಡಿಸಲ್ಪಟ್ಟಿದೆ. **ಪುಟ 106 " ವಿರೋಧ್ಯಾಕಾರ ಸಮರ್ಪಣೇನ ಹಿ ವಿರೋಧಾಕಾರಾಂತರಂ ವ್ಯಾವರ್ತನೀಯಂ "** (ಅವರು ಇಂಥವರು ಎಂಬ ವಿರೋಧಿ ನಿಶ್ಚಯ ಜ್ಞಾನ ಮಾಡಿಕೊಂಡೇ ತದ್ವಿರೋಧಿ ನಿಶ್ಚಯವನ್ನು ಖಂಡಿಸಬೇಕು.) ಹಾಗಿಲ್ಲದೆ ಸುಮ್ಮನೆ ಖಂಡಿಸಿದರೆ " ನನಗೆ ಮೈಸೂರಿನಿಂದ ಬೆಂಗಳೂರಿಗೆ ಎಷ್ಟು ದೂರ ಎಂಬುದು ಗೊತ್ತಿಲ್ಲ. ಆದರೆ ನೀವು ಅದು 80 ಮೈಲಿ ಇದೆ ಎಂದು ಹೇಳುವುದನ್ನು ನಾನು ಒಪ್ಪುವುದಿಲ್ಲ. " ಎಂದು ಹೇಳಿದಂತೆ ಹಾಸ್ಯಾಸ್ಪದವಾಗುತ್ತದೆ. ಅಂಥವರನ್ನು " Weakminded Partisans " (ಮಂಕು ಬುದ್ಧಿಯ ಪಕ್ಷಪಾತಿಗಳು) ಎಂದು ದತ್ತನೆಂಬ ನ್ಯಾಯಾಧಿಪತಿಯು ಕರೆಯುತ್ತಿದ್ದನು. ನಿಜವಾಗಿಯೂ ಇದೊಂದು ದೊಡ್ಡ ತಪ್ಪು. ನಮಗೆ ಒಬ್ಬ ಸಾಧುವಿನ ವಿಷಯದಲ್ಲಿ ಏನೂ ತಿಳಿಯದಿದ್ದರೂ ಅವನ ವಿಷಯದಲ್ಲಿ ಬಹು ಪರಿಚಯಾದಿ ಕಾರಣಗಳಿಂದ ಮಹತ್ವಜ್ಞಾನವುಳ್ಳವರನ್ನು ನೋಡಿ ಸಹಿಸದೆ ಅವನನ್ನು ಸಾಮಾನ್ಯ ಪುರುಷನೆಂದು ನಿಂದಿಸಲಿಕ್ಕೆ ತೊಡಗುವುದು ತುಂಬ ಅಸಭ್ಯ ಕೆಲಸ. ನಿರ್ಣಾಯಕ ಪ್ರಮಾಣವಿಲ್ಲದಿದ್ದರೆ ನಾವು ಮೌನ ತಾಳಬೇಕು ಎಂದು ಟೀಕಾವಾಕ್ಯವಿದೆ.[2] ಹಾಗೇ ಮಾಡದೆ ಕೆಲವು ದ್ವೇಷಿಗಳು ಈ ವಾದದಲ್ಲಿ ಯುಕ್ತಿಯನ್ನು ಮಾಡುತ್ತಾರೆ. ಅತೀಂದ್ರಿಯವಾದ ಸ್ವರೂಪ ಮಹತ್ವ ವಿಷಯದಲ್ಲಿ ಯುಕ್ತಿಯಿಂದ ವಿರುದ್ಧ ನಿರ್ಣಯ ಮಾಡುವವನು " ಕೃಷ್ಣನು ಭೂಮಿಯಲ್ಲಂತೂ ಮನುಷ್ಯನು. ಕ್ಷೌರ ಮಾಡಿಸಿಕೊಂಡಿದ್ದರಿಂದ, ನಮ್ಮಂತೆ " ಎಂದು ಯುಕ್ತಿವಾದ ಮಾಡಿದವನಂತೆ ಪತಿತನಾಗುತ್ತಾನೆ. ವ್ಯಾಸರಾಜ ಮಠದಲ್ಲಿ ತ್ರಯೋದಶೀ ಹತ್ತು ಘಳಿಗೆ ಇದ್ದು ಮೇಲೆ ಚತುರ್ದಶಿ ಬಂದಾಗ ಇಬ್ಬರು ವಟುಗಳಿಗೆ ಶ್ರೀ ಪಯೋನಿಧಿ ಸ್ವಾಮಿಗಳ ನೇತೃತ್ವದಲ್ಲೇ 1976ರಲ್ಲಿ ಉಪನಯನವಾಯಿತು. ವೇದಾಧ್ಯಯನಕ್ಕೆ ನಿಷಿದ್ಧ ದಿನವಾದ್ದರಿಂದ ಗಾಯತ್ರೀ ಉಪದೇಶಕ್ಕೂ ಆ ದಿನ ನಿಷಿದ್ಧವೆಂದು ಪಂಡಿತರೊಬ್ಬರ ವಾದವಾಯಿತು. ಆಗ ಸ್ವಾಮಿಗಳು " ಬ್ರಾಹ್ಮಣರಿಂದ ಅಧ್ಯಯನ ವಾಗುತ್ತಿರುವಾಗ ನಾವು ಒಂದು ಮನೆಗೆ ಹೋದರೆ ಆ ದಿನ ಅಲ್ಲಿ ಅನಧ್ಯಯನ. ನಮ್ಮ ಪೂಜೆಯನ್ನು ಅವರು ಮಾಡುತ್ತಾರೆ. ಆದರೆ ನಾವು ಆಗಲೇ ವಟುಗಳಿಗೆ ಉಪನಯನ ಮಾಡಿಸಿ ಗಾಯತ್ರೀ ಉಪದೇಶ ಮಾಡುತ್ತೇವೆ. **" ವಿಶಿಷ್ಟಂ ಪದಾರ್ಥಾಂತರಂ "** ತಲೆಗೆಲ್ಲಾ ಒಂದೇವಾರ ಎಂಬಂತೆ ಚರ್ಚಿಸಬೇಡಿ. ಓಲಗ ಊದಿದರೆ ವೇದಕ್ಕೆ ಅನಧ್ಯಯನ, ಮುಂಜಿಗೆ ಮಂಗಳ " ಎಂದು ಸಮಾಧಾನ ಹೇಳಿದರು. ಪ್ರಮಾಣ ವಾಕ್ಯವಿಲ್ಲದ ಯುಕ್ತಿ, ಗಂಡನಿಲ್ಲದ ಮುತ್ತೈದೆಯ ಐಶ್ವರ್ಯದಂತೆ, ಅದು

---

1) ಕರ್ನಾಟಕ ಭಕ್ತವಿಜಯ **Vol. I 127.**

2) ಕಥಾ ಲಕ್ಷಣ ಟೀಕಾ.

ಶುಷ್ಕ ತರ್ಕವೆನ್ನಿಸುತ್ತದೆ. ಅಂತೂ ಸ್ವಾಪ್ನವೃಂದಾವನಾಖ್ಯಾನೋಕ್ತ ವಾದಿರಾಜ ಋಜುತ್ವ ವಿಷಯದಲ್ಲಿ ಪ್ರತಿವಾದಿಗಳಿಗೆ ಸ್ವಲ್ಪವೂ ನಿರ್ಣಾಯಕ ವಾಕ್ಯ ಪ್ರಮಾಣವಿಲ್ಲ. ಶುಷ್ಕಯುಕ್ತಿವಾದ ನರಕ ಪ್ರಾಪಕ, '' ವಾದಿರಾಜರು ಅಪರೋಕ್ಷಿಗಳೇ ಅಲ್ಲ. ಜ್ಞಾನ ಶೂನ್ಯರು '' ಎಂದು ಹೇಳುತ್ತದೆ. ಅಂಥ ಮಾರ್ಗಕ್ಕೆ ಹೋಗಬಾರದು. ಸ್ವಾಪ್ನವೃಂದಾವನಾಖ್ಯಾನವು ವಾದಿರಾಜ ರಚಿತ ಸ್ವತಃ ಪ್ರಮಾಣ ಶಾಸ್ತ್ರ ಗ್ರಂಥವೇ.[1]

2. ಫಲೋಪಲಬ್ಧಿ ಪ್ರಮಾಣವೂ ಆಖ್ಯಾನ ಗ್ರಂಥದ ಪ್ರಾಮಾಣ್ಯ ದಾರ್ಢ್ಯಕ್ಕೆ ಸಾಧಕವಾಗಿದೆ. ಸ್ವಾಪ್ನ ವೃಂದಾವನಾಖ್ಯಾನ ಗ್ರಂಥದಲ್ಲಿ ಮುಂದಿನ ಒಂದು ಜನ್ಮದಲ್ಲಿ ಇದೇ ಏಡಮೂಕ ಬ್ರಾಹ್ಮಣನು ಸಂನ್ಯಾಸಿಯಾಗಿ ವಾದಿರಾಜ ಸ್ವಾಮಿಗಳ ಮಠದ ಪೀಠಕ್ಕೆ ಬರುತ್ತಾರೆಂದು ಹೇಳಿ, ಆ ಜನ್ಮದಲ್ಲಿ **" ಪರಮದರ್ಶನ ಗುಹ್ಯಸಾರಂ ವ್ಯಾಖ್ಯೇಯಮೇಯಮನಿಶಂ ಪ್ರದಿಶಾಮಿ ತೇಽದ್ಯ "** (ಸ್ವಾಪ್ನ ವೃಂದಾವನಾಖ್ಯಾನ ॰ 4-24. ಎಂದರೆ ನಿನ್ನಿಂದ ಮಧ್ವ ಶಾಸ್ತ್ರದ ಪಾಠ ಪ್ರವಚನವನ್ನು ನನ್ನ ಪಾದುಕಾ ಸನ್ನಿಧಿಯಲ್ಲಿ ಮಾಡಿಸುತ್ತೇನೆ) ಎಂದಿದ್ದಾರೆ. **" ಮತ್ಪ್ರಸಾದಾಚ್ಚ ಭೂಪೇನ ಶಿಬಿಕಾರೋಹಣಂ ಕೃತಂ । ತವವಿಪ್ರ ನ ಸಂದೇಹಶ್ಚೇತ್ಸರ್ವಂ ಹಿ ನಿದರ್ಶನಂ "** ॥2॥ (ಎಂದರೆ ನನ್ನ ಅನುಗ್ರಹದಿಂದ ರಾಜನು ನಿನ್ನನ್ನು ಪಲ್ಲಕ್ಕಿಯಲ್ಲಿ ಕೂರಿಸಿ ಉತ್ಸವ ಮಾಡಿ ಮರ್ಯಾದೆ ಮಾಡುತ್ತಾನೆ. ಈ ದೃಷ್ಟಾಂತದಿಂದ ಸರ್ವ ಶುಭಗಳೂ ನಿನಗೆ ಆ ಜನ್ಮದಲ್ಲಿ ನನ್ನ ಪ್ರಸಾದದಿಂದ ಒದಗುತ್ತವೆಂದು ತಿಳಿ). ಎಂದು ಹೇಳಿದ್ದಾರೆ. ಇದೆಲ್ಲವೂ ನಡೆದಿದೆ.

ಆ ಏಡಮೂಕ ಬ್ರಾಹ್ಮಣನು ವಿಶ್ವಪ್ರಿಯ ತೀರ್ಥರೆಂಬ ಸ್ವಾಮಿಗಳಾಗಿ ಸೋದೆ ಮಠವನ್ನು 1788 ರಿಂದ 1865 ರ ವರೆಗೆ ಅಧೀಶ್ವರರಾಗಿ ಅಲಂಕರಿಸಿದರು. ಅವರ ಚರಿತ್ರೆಯು (1776-1865) ಶ್ರೀ ಗೋವಿಂದರಾಯರಿಂದ ಪ್ರತ್ಯೇಕವಾಗಿ ಪ್ರಕಟಿತವಾಗಿದೆ. ಇಲ್ಲೂ ಹಿಂದಿನ ಅಧ್ಯಾಯದಲ್ಲಿ ಅವರ ಮಹಿಮೆಯನ್ನು ಸ್ವಲ್ಪ ಹೇಳಲಾಗಿದೆ. ವಿಶ್ವಪ್ರಿಯ ತೀರ್ಥರ ಪ್ರತ್ಯಕ್ಷಾನುಭವವೇ ಗ್ರಂಥ ಪ್ರಾಮಾಣ್ಯಕ್ಕೆ ಸುದೃಢವ್ಯವಸ್ಥಾಪಕವಾಗಿದೆ. ಅವರು ಶ್ರೀ ಮುಷ್ಣಾಚಾರ್ಯರಿಂದ ಬರೆಯಿಸಿದ ದೊಡ್ಡ ವ್ಯಾಖ್ಯಾನವೂ ಶ್ರೀ ರಘುಪ್ರವೀರ ತೀರ್ಥರಿಂದ ಬರೆಯಿಸಿದ ಪ್ರಾಮಾಣ್ಯ ಬೋಧಿನೀ ಗ್ರಂಥವೂ ಈ ವಿವಕ್ಷೆಯಿಂದಲೇ ಮಹತ್ವವನ್ನು ಹೊಂದಿದೆ. ಆಖ್ಯಾನದಲ್ಲಿ ಉಕ್ತವಾದ ಉಪವಾಸ ವ್ರತ, ವ್ಯಾಸ ಪೂಜಾ ವಿಶೇಷ ಮುಂತಾದುವನ್ನು ವಿಶ್ವಪ್ರಿಯ ತೀರ್ಥರು ಮಾಡಿದ್ದಾರೆ. ಆಖ್ಯಾನೋಕ್ತ ವೈಭವವನ್ನೆಲ್ಲಾ ಅನುಭವಿಸಿದ್ದಾರೆ, ಈ ವಿಷಯದಲ್ಲಿ ವೃಂದಾವನಾಚಾರ್ಯರ ಇಬ್ಬರು ಮಹನೀಯ ಶಿಷ್ಯರು ಬರೆದಿರುವ ವಿಶ್ವಪ್ರಿಯ ವಿಲಾಸ ಎಂಬ ಎರಡು ಜೀವನ ಚರಿತ್ರೆಗಳೂ ಪ್ರಮಾಣವಾಗಿ ಇವೆ. **" ಆಖ್ಯಾನ ಪ್ರೋಕ್ತ ಸಲ್ಲಿಂಗೈಃ ನ್ಯಾಸಾನಯನ ಪೂರ್ವಕೈಃ । ನಿರನ್ನತ್ವವ್ರತ ಮುಖ್ಯೈರಯಂ ವೃಂದಾವನಾಚಾರ್ಯಕಃ ॥6॥ "** ಇತಿ ವ್ಯಜಾನನ್ನಾಮೋದೋ ಮೃಗನಾಭೇರವಾರಣಃ ॥ " ಮೂರನೇ ಅಧ್ಯಾಯ ಕೊಚ್ಚಿ ರಂಗಪ್ಪಾಚಾರ್ಯ ಕೃತ. (ಅರ್ಥ-ಸ್ವಾಪ್ನ ವೃಂದಾವನಾಖ್ಯಾನದಲ್ಲಿ

1) ವಾ. ಗು. ಚ. VII ನೇ ಅಧ್ಯಾಯದಲ್ಲಿ ಪುರಾಣ ಆಧಾರ ಸಹ ತೋರಿಸಲ್ಪಟ್ಟಿದೆ.

2) 4-89 ಮತ್ತು 3-52 ಸಹ ಓದಿ.

10-71; 10-104 ರಲ್ಲಿ ಹೇಳಿದ ವ್ಯಾಸಾನಯನವೇ ಮುಂತಾದ ಉತ್ಕೃಷ್ಟ ಲಿಂಗಗಳಿಂದಲೂ, ನಿರನ್ನತ್ವ ವ್ರತವೇ ಮುಂತಾದುವುಗಳಿಂದಲೂ ಇವರೇ ಏಡಮೂಕ ಬ್ರಾಹ್ಮಣನಾಗಿದ್ದ ವೃಂದಾವನಾ ಚಾರ್ಯರು ಎಂದು ಜನರು ತಿಳಿದರು. ಕಸ್ತೂರಿಯ ಸುಗಂಧವು ಅಡಗಿರಲು ಸಾಧ್ಯವಿಲ್ಲ.) ವೇದಗರ್ಭ ಸೇತುಮಾಧವ ಸೂರಿ ವಿರಚಿತ ವಿಶ್ವಪ್ರಿಯ ಗುರುಲೀಲಾ ವಿಲಾಸದಲ್ಲೂ 2ನೇ ಅಧ್ಯಾಯದಲ್ಲಿ ಹೀಗಿದೆ. **" ಅಥ ವೃಂದಾವನಾಖ್ಯಾನ ಪ್ರೋಕ್ತ ಲಕ್ಷಣ ದರ್ಶನಾತ್ । ಅಯಂ ವೃಂದಾವನಾಚಾರ್ಯ ಇತಿ ಖ್ಯಾತಿಮಗಾದ್ಗುರುಃ ॥3॥** ನಾಲ್ಕನೇ ಅಧ್ಯಾಯ - **" ಕಲಿಂ ತು ದೂರತಃ ಕೃತ್ವಾ ಗುರುರಾಲಸ್ಯ ವರ್ಜಿತಃ । ಸಪ್ತತ್ರಿಂಶನ್ಮೂಲ ಕೋಶೇ ಯಸ್ತು ಪೃಚ್ಛತಿ ತದ್ವದೇತ್ ॥6॥ ಯದ್ವೃಂದಾವನಮಾವಿಶ್ಯ ವಾದಿರಾಜೋಽವದದ್ದ್ವಿಜೇ । ನಿಧೇಸ್ತುಲ್ಯಂ ತದಾಖ್ಯಾನಮುದ್ಧೃತ್ಯ ಸುಖ ದೋಹಿನಃ ॥7॥ ನಿತ್ಯಂ ಸುಧಾದಿ ಗ್ರಂಥಾನಾಂ ಪ್ರವಕ್ತೄಷ್ವದ್ಯ ಸೂರಿಷು । ನ್ಯೂಗ್ಯಮಾನೇಷ್ವನಂತಾಯಾಂ ಕಃ ಸಮೋಽಸ್ಯ ಕ್ವಚಾಧಿಕಃ ॥8॥** (ಅರ್ಥ–ಸ್ವಾಪ್ನ ವೃಂದಾವನಾಖ್ಯಾನದಲ್ಲಿ ಹೇಳಲ್ಪಟ್ಟಿರುವ ಲಕ್ಷಣಗಳು ಇವರಲ್ಲಿ ಕಂಡಿದ್ದರಿಂದ ಇವರೇ ಏಡಮೂಕ ಬ್ರಾಹ್ಮಣರಾಗಿದ್ದ ವೃಂದಾವನಾ ಚಾರ್ಯರು ಎಂದು ಶ್ರೀ ವಿಶ್ವಪ್ರಿಯ ತೀರ್ಥರು ಖ್ಯಾತಿಯನ್ನು ಹೊಂದಿದರು ॥7॥ ನಾಲ್ಕನೆಯ ಅಧ್ಯಾಯದಲ್ಲೂ ಹೀಗಿದೆ : " ಕಲಿಯನ್ನು ದೇಹದಿಂದ ದೂರಮಾಡಿ ಆಲಸ್ಯವರ್ಜಿತರಾದ ಗುರುಗಳು ಸರ್ವಮೂಲದ 37 ಗ್ರಂಥಗಳಲ್ಲಿ ಯಾರು ಏನು ಕೇಳಿದರೂ ಅದನ್ನು ಹೇಳುತ್ತಿದ್ದರು. ವೃಂದಾವನ ಪ್ರವೇಶಮಾಡಿದ ಮೇಲೆ ವಾದಿರಾಜ ಗುರುಗಳು ದ್ವಿಜನಿಗೆ ಸ್ವಪ್ನದಲ್ಲಿ ಮಾಡಿದ್ದ ನಿಧಿತುಲ್ಯವಾದ ಯಾವ ಆಖ್ಯಾನ ಗ್ರಂಥವಿತ್ತೋ ಆದರಿಂದ ನಮ್ಮ ಪಾರಾಯಣಕ್ಕೆ ಉಪಯುಕ್ತ ಶ್ಲೋಕಗಳನ್ನು ಉದ್ಧರಿಸಿ ತೋರಿಸಿ ನಮ್ಮನ್ನು ಸುಖಪಡಿಸಿರುತ್ತಾರೆ. ನಿತ್ಯ ಸುಧಾದಿ ಗ್ರಂಥ ಪ್ರವಚನ ಮಾಡುವ ಭೂಮಿಯ ಮೇಲೆ ಈಗಿರುವ ಯಾವ ಪಂಡಿತರೂ ಇವರಿಗೆ ಸಮರಲ್ಲ. ಇನ್ನು ಅಧಿಕರೆಲ್ಲಿ ?) ಈ ಎರಡೂ ಗ್ರಂಥಗಳಲ್ಲಿ **ಕೊಚ್ಚಿ** ರಂಗಪ್ಪಾಚಾರ್ಯರದ್ದು 1889ರಲ್ಲಿ ಪ್ರಿಂಟಾಗಿ ಈಗ ಅವರ ಪ್ರಪೌತ್ರ ಡಾ॥ ಬಿ. ಎನ್. ಕೆ. ಶರ್ಮ ಇವರಲ್ಲಿ ಸಿಗುತ್ತದೆ. ಇನ್ನೊಂದು ಪ್ರಿಂಟಾಗಿಲ್ಲ. ತುಮಕೂರು ಬಿ. ಪಿ. ನಾರಾಯಣಮೂರ್ತಿರಾಯರಲ್ಲಿರುವ ಪ್ರತಿನೋಡಿ ಪ್ರತಿಮಾಡಿಕೊಳ್ಳಬಹುದು. ಇಬ್ಬರು ಗ್ರಂಥ ಕರ್ತರೂ ವೇದಾಂತವಿದ್ಯಾಪಾರಂಗತರಾದ ಬುದ್ಧಿ ಸಂಪನ್ನ ದಿಗ್ಗಜರು. ಅವರ ಸಾಕ್ಷಿತನದಿಂದ ಸ್ವಾಪ್ನ ವೃಂದಾವನಾಖ್ಯಾನ ಗ್ರಂಥಕ್ಕೆ ನಿಃಶಂಕ ಸುದೃಢ ಉತ್ತಮ ಪ್ರಾಮಾಣ್ಯವು ಸಿದ್ಧಿಸುತ್ತದೆ.

3. ಸುಧಾ ಪಾಠಕ ರಾಮಚಂದ್ರಾಚಾರ್ಯರ 1645ರಲ್ಲಿ ರಚಿತವಾದ " ವಾದಿರಾಜ ಗುರುವರ ಚರಿತಾಮೃತದ " 7ನೇ ಅಧ್ಯಾಯದ 25-27ನೇ ಶ್ಲೋಕಗಳೂ ಹಾಗೆಯೇ ಮಾಡುತ್ತವೆ: **" ಸ್ವಾಪ್ನ ವೃಂದಾವನಾಖ್ಯಾನಂ ದಿವ್ಯಾದ್ಭುತ ಕಥಾಶ್ರಯಂ । ಪಠತಾಂ ಶೃಣ್ವತಾಂ ಚೈವ ಕಾಮಿತ ಪ್ರದಮಂಜಸಾ ॥25॥ ಭೂತ ರಾಜಾವೇಕ್ಷಣಂ ಪ್ರಾಕ್ ಫಲದ್ವಯ ನಿವೇದನಂ । ತ್ರಿವಿಕ್ರಮಾವೇಕ್ಷಣಂ ಚ ಗಂಗಾ ಪಂಚಕ ಸೇವನಂ ॥26॥ ಪಂಚವೃಂದಾವನಸ್ಯಾತ್ರ ಭಜನಂ ವ್ಯಾಸ ದರ್ಶನಂ । ಸ್ವಾಪ್ನ ವೃಂದಾವನಾಖ್ಯಾನ ಪಠನಂ ಸರ್ವ ಕಾಮದಂ ॥27॥**[1]

---

1) ಸ್ವಾ. ವೃಂ ಆಖ್ಯಾನವು ದೈವಪ್ರೇರಿತ ಅವತಾರ ಪುರುಷರು ಮಾಡಿದ ದೈವಿಕ ಗ್ರಂಥ ಎಂದು ಕೂಡ ಇಲ್ಲೂ ಹೇಳಲ್ಪಡುತ್ತೆ. ಪುಟ 11 ಅಧ್ಯಾಯ I " ಋಜುತ್ವ ಸಿದ್ಧಾಂತದಲ್ಲಿದೆ ".

(ಅರ್ಥ - ಸ್ವಾಪ್ನ ವೃಂದಾವನಾಖ್ಯಾನವು ದಿವ್ಯಾದ್ಭುತ ಕಥೆಗಳಿಗೆ ಆಶ್ರಯವು ಪಾರಾಯಣ ಮಾಡು ವವರಿಗೂ, ಶ್ರವಣ ಮಾಡುವವರಿಗೂ ಚೆನ್ನಾಗಿ ಅಭೀಷ್ಟ ಪ್ರದವು. ಸೇವೆ ಮಾಡುವವರು ಮೊದಲು ಭೂತರಾಜರನ್ನು ನೋಡಿ, ಎರಡು ಕಾಯಿಗಳನ್ನು ಸಮರ್ಪಿಸಬೇಕು. ನಂತರ ತ್ರಿವಿಕ್ರಮ ಸ್ವಾಮಿ ದರ್ಶನ, ಗಂಗಾ ಪಂಚಕ ಸೇವೆ, ಪಂಚ ವೃಂದಾವನದ ಸೇವೆ, ವೇದವ್ಯಾಸ ದೇವರ ದರ್ಶನ, ಸ್ವಾಪ್ನ ವೃಂದಾವನಾಖ್ಯಾನ ಪಾರಾಯಣ ಇಷ್ಟು ಇಟ್ಟುಕೊಂಡರೆ ಸರ್ವಕಾಮಿತ ಪ್ರಾಪ್ತಿಯಾಗುತ್ತದೆ.)

ಇದೇ ಗ್ರಂಥದ 7ನೇ ಅಧ್ಯಾಯದ 17 ರಿಂದ ಆರು ಶ್ಲೋಕಗಳಲ್ಲಿ ಸ್ವಾಪ್ನ ವೃಂದಾವನಾಖ್ಯಾನದ ಉತ್ಪತ್ತಿ ಪ್ರಕಾರವನ್ನು ಹಿಂದೆ ನಾವು ಹೇಳಿರುವಂತೆ ತಿಳಿಸಿದ್ದಾರೆ.

ಶ್ರೀ ವೇದನಿಧಿ ಗುರುಗಳ ಆಜ್ಞೆಯಿಂದಲೇ ರಚಿತವಾದ್ದರಿಂದ ಈ ವಾ. ಗು. ಚ. ಗ್ರಂಥವು ಸ್ವತಃ ಪ್ರಮಾಣ ಶಾಸ್ತ್ರ ಗ್ರಂಥವೆಂದು ಶೋಧಕರಿಗೆ ಗೊತ್ತಾಗುತ್ತದೆ. ಅದು 1954 ರಲ್ಲಿ ಮುದ್ರಿತ ವಾಗಿ ಉಡುಪಿ ವಾದಿರಾಜ ಗ್ರಂಥ ಪ್ರಕಾಶನ ಸಮಿತಿಯಿಂದ ಪ್ರಕಟಿತವಾಗಿದೆ.

ಹೇಗೆ ವಿಮರ್ಶಿಸಿದರೂ ಸ್ವಾಪ್ನ ವೃಂದಾವನಾಖ್ಯಾನವು ದಿವ್ಯವಾದ ಸ್ವತಃ ಪ್ರಮಾಣ ಗ್ರಂಥ ವೆಂದೇ ಸಿದ್ಧಿಸುವುದು.[1]

---

1) ಆದರೆ " ವಾದಿರಾಜ ಸ್ತೋತ್ರಮಂಜರೀ " ಎಂಬ V. ಪ್ರಭಂಜನ M. A. ಇವರಿಂದ ಸಂಪಾದಿತವಾದ ಐತರೇಯ ಪ್ರಕಾಶನ, ವ್ಯಾಸನಕೆರೆಯಿಂದ ಪ್ರಕಾಶಿತವಾದ ಶ್ರೀವಾದಿರಾಜ ಪಂಚಜನ್ಮಶತಮಾನೋತ್ಸವ ಸ್ಮಾರಕ ಪ್ರಕಟನೆಯೂ ಆದ 16 ಪುಟದ ಸಣ್ಣ ಗ್ರಂಥವು 8 ಪುಟದ ಅವತಾರಿಕೆಯುಕ್ತವಾಗಿ ಪ್ರಚಾರ ಮಾಡಲ್ಪಟ್ಟಿದೆ. ಅದರ ಪುಟ vi ರಲ್ಲಿ—

" ವಾದಿರಾಜರು ವೃಂದಾವನ ಪ್ರವೇಶಿಸಿದ ಕೆಲವು ದಶಕಗಳ ಅನಂತರ ರಚಿತವಾದ " ಸ್ವಾಪ್ನ ವೃಂದಾವನಾಖ್ಯಾನ " ಎಂಬ ಸಂಸ್ಕೃತ ಗ್ರಂಥವನ್ನು ಕೆಲವರು ಸ್ವಯಂ ವಾದಿರಾಜರೇ ಸ್ವಪ್ನದಲ್ಲಿ ಏಡಮೂಕ ಬ್ರಾಹ್ಮಣನೊಬ್ಬನಿಗೆ ಉಪದೇಶಿಸಿದ ಗ್ರಂಥ ಎಂದು ನಂಬುತ್ತಾರೆ. " ಎಂದಿದೆ. ಅರ್ಥಾತ್ ಸಂಪಾದಕರಿಗೆ ವಾದಿರಾಜರೇ ಅದನ್ನು ರಚಿಸಿದರೆಂದು ನಂಬಿಕೆಯಿಲ್ಲ ಎಂದು ಸೂಚಿತವಾಗುತ್ತದೆ. ಅವರು ನಂಬಲಿ, ಬಿಡಲಿ, 1642 ರಲ್ಲಿ ಪೂರ್ತಿಯಾದ ಆ ಗ್ರಂಥವು ಸ್ವತಃ ಪ್ರಮಾಣ ಶಾಸ್ತ್ರ ಗ್ರಂಥವು. ಅದರಲ್ಲಿಯೇ ಅಧ್ಯಾಯ I ಶ್ಲೋಕ 58 ರಲ್ಲಿ " ವಾದಿರಾಜಾಖ್ಯ ಯತಿನಾ ; ವಾಗೀಶ ಕರಜೇನ ಚ । ವೃಂದಾವನ ಗತೇನೈವ ಬ್ರಾಹ್ಮಣ ಸ್ವಾಪ್ನ ಮೂರ್ತಿನಾ । ಕೃತಂ ಸ್ತೋತ್ರಮಿದಂ ಪುಣ್ಯಂ ಪಠತಾಂ ಸಂಪದಾಂ ಪದಂ " ಎಂದಿದೆ. (ಅರ್ಥ-ವಾಗೀಶ ತೀರ್ಥರ ಕರಕಮಲ ಸಂಜಾತರಾದ ವೃಂದಾವನಸ್ಥ ವಾದಿರಾಜಯತಿಗಳಿಂದಲೇ ಈ ಪುಣ್ಯ ಆಖ್ಯಾನವು ಕೃತವಾಗಿದೆ. ಇದು ಪಾರಾಯಣ ಮಾಡುವವರಿಗೆ ಸಂಪತ್ಪ್ರದ.) ಈ ವಿಷಯವು ಆಖ್ಯಾನದಲ್ಲಿ ಅನೇಕಾವರ್ತಿ ಬಂದಿದೆ. ಈ ಗ್ರಂಥದಲ್ಲಿ ವಾದಿರಾಜರು ಋಜುಗಳೆಂದು ಪುನಃ ಪುನಃ ಹೇಳಲ್ಪಟ್ಟಿದೆ. ವಾದಿರಾಜ ಋಜುತ್ವ, ಆಖ್ಯಾನ ಪ್ರಾಮಾಣ್ಯ ಎಂಬ ಈ ಎರಡೂ ವಿಷಯಗಳನ್ನೂ ಒಪ್ಪದವರು ನಿಂದಿತರಾಗಿದ್ದಾರೆ. ಅಷ್ಟೇ ಅಲ್ಲ, " ಯದ್ವಕ್ತಿ ಬ್ರಾಹ್ಮಣಃ ಶ್ಲೋಕೈಃ ತತ್ಸರ್ವಂ ಸತ್ಯಮೇವ ಚ । ತತ್ಕರ್ತವ್ಯಮವಶ್ಯಂತು ಮಮ ಶಾಸನಮೇವ ಚ । ಮಮ

ರೋಷಾತ್ಸರ್ವಪುಣ್ಯೈಶ್ಚ ವಂತೇ ನಾತ್ರ ಸಂಶಯಃ ॥ ಪಿತೃಭಿಃ ಸಹ ಮಜ್ಜಂತೇ ನರಕೇ ಪುಣ್ಯ ಸಂಕ್ಷಯೇ ॥ " (ಅರ್ಥ-ಬ್ರಾಹ್ಮಣನು ಸ್ವಪ್ನದಲ್ಲಿ ಕೇಳಿ ಏನು ಹೇಳಿದ್ದಾನೆಯೋ ಅದೆಲ್ಲವೂ ನನ್ನ (ವಾದಿರಾಜರ) ಶಾಸನ. ಅವನ್ನು ಅನುಷ್ಠಾನ ಮಾಡಿಯೇ ತೀರಬೇಕು. ಮಾಡದಿದ್ದರೆ ಪುಣ್ಯಕ್ಷಯವಾಗಿ ಪಿತೃಗಳೊಂದಿಗೆ ನರಕಕ್ಕೆ ಬೀಳುತ್ತಾರೆ.) ಎಂದು 10ನೇ ಅಧ್ಯಾಯ 127 ಶ್ಲೋಕದಲ್ಲಿದೆ. ಬಹು ಪ್ರಮಾಣಗಳಿದ್ದರೂ ವಾದಿರಾಜರ ಋಜುತ್ವವನ್ನೂ, ವೃಂದಾವನಾಖ್ಯಾನ ಪ್ರಾಮಾಣ್ಯವನ್ನೂ ಕೆಲವರು ಒಪ್ಪುವುದೇ ಇಲ್ಲ ಎಂದು ಗ್ರಂಥವೇ ಹೇಳಿ ಅಂಥವರ ಸ್ವರೂಪವನ್ನೇ ಹೇಳುತ್ತದೆ. (VII-97-98) " ಅಧಿಕಾರಿಷು ಸರ್ವೇಷು ಚೋತ್ತಮೋಹಂ ನ ಸಂಶಯಃ । ಇದಂ ಸರ್ವೇಪಿ ಜಾನಂತಿ ದೇವಾಶ್ಚ ಋಷಯಸ್ತಥಾ । ಗಂಧರ್ವಾ ಅಪಿ ಸರ್ವೇಪಿ ದಾನವಾ ಮಾನವಾಶ್ಚ ನ ॥ " (ಅರ್ಥ–ನಾನು ಜೀವೋತ್ತಮನೆಂಬಲ್ಲಿ ಸಂಶಯವಿಲ್ಲ. ಇದನ್ನು ದೇವತೆಗಳೂ, ಋಷಿಗಳೂ, ಎಲ್ಲಾ ಗಂಧರ್ವರೂ ಕೂಡಾ ತಿಳಿದಿದ್ದಾರೆ. ದಾನವರೂ, ಮಾನವರೂ ತಿಳಿದಿಲ್ಲ.) ಅಪಕ್ವಾಧಿಕಾರಿಗಳೂ ತಿಳಿದಿಲ್ಲವೆಂದು ಉಪಲಕ್ಷಣ ತಿಳಿಯಬಹುದು. ಆದ್ದರಿಂದ ಆಖ್ಯಾನವನ್ನು ವಾದಿರಾಜರು ಮಾಡಿಲ್ಲವೆನ್ನಬಾರದು. ಅಧ್ಯಾಯ X ಶ್ಲೋಕ 126 – " ವೃಂದಾವನಸ್ಯ ವಿಭವಮುಕ್ತಂ ವೈ ಲೇಶತೋ ಮಯಾ । ಅಸಂಭಾವಿತಮೇತಚ್ಚ ನಿತ್ಯಂ ಸ್ವಪ್ನೇರಿತಂ ಮಯಾ । ಇತಿಹಾಸ್ಯಂ ಪ್ರಕುರ್ವಂತಿ ಯೇ ಜನಾ ಮಮರೋಷಿಣಃ ॥ " (ನಾನು ಸ್ವಲ್ಪವೇ ವೃಂದಾವನದ ಮಹಿಮೆಯನ್ನು ಹೇಳಿರುತ್ತೇನೆ. ಸ್ವಪ್ನದಲ್ಲಿ ಹೀಗೆ ನಿತ್ಯ ಹೇಳಿ ಬರೆಯಿಸುವುದು ಅಸಂಭಾವಿತವು ಎಂದು ಹಾಸ್ಯಮಾಡಿ ಗ್ರಂಥವನ್ನು ಅಪ್ರಮಾಣವನ್ನಾಗಿ ತಿಳಿಯುವವರು ನನ್ನ ದ್ವೇಷಿಗಳು). ಅಂಥವರು ವಾದಿರಾಜರು ಮಹಾಯೋಗಿಗಳೆಂದು ನಂಬಿಲ್ಲ ಎಂದು ಭಾವ. ದ್ವಿತೀಯಾಧ್ಯಾಯದಲ್ಲಿ ವೇದಾಂತ ಶಾಸ್ತ್ರಜ್ಞರಾದ ಯತಿಗಳೂ ನನ್ನ ವೃಂದಾವನವನ್ನು ಸೇವಿಸುತ್ತಾರೆಂದಿದೆ. ಅಧ್ಯಾಯ VIII-39 ರಲ್ಲಿ ಕೊನೆಯ 12 ಅಧ್ಯಾಯಗಳು " ಬುಧಾಗ್ರತಃ " ಪಠನ ಯೋಗ್ಯವು, ಉತ್ತಮಾಧಿಕಾರಕವು ಎಂದಿದೆ. ಇಂಥ ಗ್ರಂಥಸ್ಥ ವಾದಿರಾಜ ಋಜುತ್ವವು ವೇದವೇದ್ಯರಿಂದ 1600ರಲ್ಲಿಯೇ ಎರಡು ಪರಾಕುಗಳಲ್ಲಿ ಘೋಷಿತವಾಗಿ ಮಠದ ಸಂಪ್ರದಾಯಗಳಲ್ಲಿ ಸೇರಿಸಲ್ಪಟ್ಟು ಹೋಗಿದೆ. ಅನಂತರ 1642ರಲ್ಲಿ ಶ್ರೀ ವೇದನಿಧಿಗಳಿಂದ ಋಜುತ್ವವೂ, ಆಖ್ಯಾನ ಪ್ರಾಮಾಣ್ಯವೂ ಅಂಗೀಕರಿಸಲ್ಪಟ್ಟು ಶಿಲಾದಲ್ಲಿ ಗುರ್ವಾಜ್ಞೆಯಿಂದ ಕೆತ್ತಲ್ಪಟ್ಟು ಅದ್ಯಾಪಿ ಆ ಶಿಲಾ ಪೂಜಿತವಾಗಿದೆ. ಅದೇ ಗುರುಗಳು 1640ರಲ್ಲಿ ಸ್ವಪ್ನ ಆಗಿ ಹಂಸವಾಹನ ವಾದಿರಾಜರ ಪ್ರತಿಮೆಯನ್ನು ಗರುಡಸ್ಥಂಭದ ಮೇಲೆ ಕೆತ್ತಿಸಿದ್ದಾರೆ. " ವಾದಿರಾಜಾಖ್ಯಯತಿನಾ ಬ್ರಾಹ್ಮಣ ಸ್ವಾಪ್ನಮೂರ್ತಿನಾ । ಕೃತಂ ವೃಂದಾವನಾಖ್ಯಾನಂ ಪಠತಾಂ ಸಂಪದಾಂ ಪದಂ ॥ ವೇದನಿಧ್ಯಾಖ್ಯ ಯತಿನಾ ವಾದಿರಾಜೇನ ಚೋದಿತಂ । ಸ್ವಾಪ್ನಂ ವೃಂದಾವನಾಖ್ಯಾನಂ ಲಿಖಿತಂ ಪ್ರೀತಯೇ ಗುರೋಃ ॥ " ಎಂದು ಅವರ ಎರಡು ಶ್ಲೋಕಗಳು ಶಿಲೆಯ ಮೇಲಿವೆ. 1645ರಲ್ಲಿ " ವಾದಿರಾಜ ಗುರುವರ ಚರಿತಾಮೃತ " ಸಹಾ ಬರೆಸಿದ್ದಾರೆ. ಆ ಗ್ರಂಥ ಇದೆ. ನಂತರ 1794ರಲ್ಲಿ ವಿಶ್ವಪ್ರಿಯ ತೀರ್ಥರು ವೃಂದಾವನ ಸೇವೆಮಾಡಿ ಜಾತಿಸ್ಮೃತಿ ಹೊಂದಿ " ವೃಂದಾವನಾಖ್ಯಾನವು ಏಡಮೂಕ ಬ್ರಾಹ್ಮಣನಾಗಿದ್ದ ನನಗೇ ಸ್ವಪ್ನದಲ್ಲಿ ವಾದಿರಾಜರಿಂದ ಉಪದಿಷ್ಟವಾಗಿತ್ತೆಂದು " ತಿಳಿದು ಸದರೀ ಗ್ರಂಥಕ್ಕೆ ಪ್ರಕರಣ ಭೇದ ತೋರಿಸಿ ಅರ್ಥ ಬರೆಯಿಸಿ ಪ್ರಾಮಾಣ್ಯ ಸಮರ್ಥನೆಯನ್ನೂ ಮಾಡಿಸಿದ್ದಾರೆ. ಆ ಎರಡು ಕಾರ್ಯ ಮಾಡುವ ಎರಡು ಗ್ರಂಥಗಳೂ ಈಗಲೂ ಇವೆ. ನಂತರ ಯಾವ ಜ್ಞೀವವೂ ವೃಂದಾವನಾಚಾರ್ಯರೂ, ರಘುಪ್ರವೀರ ತೀರ್ಥರೂ, ಜಂಬುಖಂಡಿ

ವಾದಿರಾಜಾಚಾರ್ಯರೂ ಈ ಪ್ರಮೇಯಗಳನ್ನು ಬೋಧಿಸುತ್ತಾ ಅನೇಕರಿಗೆ ಜ್ಞಾನಪ್ರದರಾಗಿದ್ದಾರೆ. ವೃಂದಾವನಾಚಾರ್ಯರ ಶಿಷ್ಯರಾದ ಕೊಚ್ಚಿ ರಂಗಪ್ಪಾಚಾರ್ಯರೂ, ಸೂರಿ ಸೇತುಮಾಧವಾಚಾರ್ಯರೂ ವಾದಿರಾಜ ಋಜುತ್ವ, ಆಖ್ಯಾನ ಪ್ರಾಮಾಣ್ಯ ಎಂಬ ಎರಡು ಪ್ರಮೇಯಗಳನ್ನು ತಮ್ಮ ಗುರುವರರ ಚರಿತ್ರೆ ರೂಪ ಎರಡು '' ವಿಶ್ವಪ್ರಿಯ ವಿಲಾಸ '' ಗಳಲ್ಲಿ ತಿಳಿಸಿದ್ದಾರೆ. ಎರಡು ಪರಾಕಂಗಳೂ, ಸಾಮ್ಯ ಸೇವೆಗಳೂ ಮಠದಲ್ಲಿ ಅದ್ಯಾಪಿ ನಡೆಯುತ್ತಲೇ ಇವೆ. ಗ್ರಂಥವು ಪಾರಾಯಣ ಮಾಡಲ್ಪಟ್ಟು ಅನೇಕರನ್ನು ಪಂಡಿತರನ್ನಾಗಿ ಮಾಡಿದೆ. ಅನೇಕ ವಿಧ ಸಂಪತ್ತನ್ನೂ ಕೊಟ್ಟಿದೆ. ಅದು ಮಂತ್ರಬಂಧದ ಗ್ರಂಥ, ಪುರುಷ ಸೂಕ್ತ ತುಲ್ಯವೆಂದೇ ಹೇಳಲ್ಪಟ್ಟಿದೆ. '' ಮಂತ್ರತುಲ್ಯಂ ಮಹಾಗ್ರಂಥಂ '' ಎಂದು ರಾಮಚಂದ್ರ ಪಂಡಿತರು ಹೊಗಳಿದ್ದಾರೆ. ಮಂತ್ರಬಂಧ ಶ್ಲೋಕಗಳೆಂದು ಧ್ಯಾನ ಯೋಗಿಗಳಿಗೆ ಪ್ರತ್ಯಕ್ಷಾನುಭವವಾಗುತ್ತದೆ. ಶಾಸ್ತ್ರಜ್ಞರಿಗೂ ಕೂಡಾ ಜ್ವರ ಪರಿಹಾರಾದಿ ಲಿಂಗ ಗಳಿಂದ ಗೊತ್ತಾಗುತ್ತದೆ. " ಸರ್ವೇ ಶ್ಲೋಕಾಃ ಶೋಕಮೂಲಸ್ಯ ನಾಶಕಾಃ " ಎಂದರೆ ಪಾರಾಯಣ ಮಾಡಿದರೆ ಪಾಪಹರಣ ಮಾಡುವ ಶ್ಲೋಕಗಳೆಂದು 6-34 ಆಖ್ಯಾನದಲ್ಲಿ ಹೇಳಲ್ಪಟ್ಟಿದೆ. ವಿಷಯಂ ಗಳಂತೂ ಯಾರಿಗೂ ಜ್ಞಾತವಾದ್ದಲ್ಲ. ವಾದಿರಾಜರ ದೇವಕಾರ್ಯ, ಅವರ 14 ಲೋಕ ಸಂಬಂಧಿ ಗುರುತ್ವ. ಮಧ್ವ ಗುರುಗಳ ಸೇವೆಗಾಗಿ ಅಂಗತಯಾ ಅವತರಿಸಿದ್ದು, ಭಾವಿ ಲಾತವ್ಯ; ಗರುಡ, ರುದ್ರ, ಇಂದ್ರ, ದಿಕ್ಪಾಲಕ ಜೀವರುಗಳ ಉದ್ಧಾರ ಮಾಡಿದ ರೀತಿ, ಗೀತೆಯಂತೆ ಆಖ್ಯಾನದ **ಉಪದೇಶ** ನಡೆದದ್ದು ಇದೆಲ್ಲಾ ಅಚಿಂತ್ಯ ವಿಷಯ. ಯಾವ ಇನ್ನೊಬ್ಬರಿಂದಲೂ ವರ್ಣನೆ ಮಾಡಲ್ಪಡಲು ಅಸಾಧ್ಯ. ಅಂಥವರು ಯಾರು ಇರಲೂ ಇಲ್ಲವಾದ್ದರಿಂದ—ವೇದನಿಧಿಗಳಂತೂ ಗ್ರಂಥಕಲ್ಪಕರಲ್ಲ – ವಾದಿರಾಜರೇ ಆಖ್ಯಾನಕರ್ತರೆಂದು ನಾವೆಲ್ಲ ನಂಬಿದ್ದೇವೆ. ಪ್ರಮಾಣ ವಿರೋಧವಿಲ್ಲ. ಶೈಲಿಯೂ ಗುರುರಾಜರದ್ದೇ. ಮಧ್ವಶಾಸ್ತ್ರದ ರೀತಿಯಾಗಿ ಯಾರೂ ನಿಂದಿಸಲು ಕಾರಣವಿಲ್ಲ. ಬ್ರಹ್ಮಜ್ಞಾನವನ್ನೇ ಕೊಡಿಸಲು ಸಾಧಕವಾದ ಗ್ರಂಥವನ್ನು ಅವಜ್ಞೆ ಮಾಡಿ ಮಹಾಯೋಗಿ ಎಂದು ಪ್ರಸಿದ್ಧರನ್ನೇ ಋಜು ಎಂದು ಸಕಾರಣ ವಾಗಿ ತೋರಿಸಿದರೂ, ಸಂವಾದಗಳಿದ್ದರೂ, ಸಂಕರ್ಷಣ ಒಡೆಯರಂಥ ನೂರಾರು ಜನರಿಂದ ಅಂಗೀ ಕರಿಸಲ್ಪಟ್ಟಿದ್ದರೂ ಒಪ್ಪದೆ ಹಠಮಾಡಿ ಋಜುತ್ವ ರಹಿತ ವಿಶೇಷಣಗಳಿಂದ '' ಸ್ತೋತ್ರ ಮಂಜರೀ '' ಮಾಡಿ ಸ್ತುತಿಸಿದರೆ '' ದ್ವೇಷ ಮಂಜರೀ '' ಯಾಗಿ ಕೆಟ್ಟ ಜನ್ಮ ಕೊಡಿಸುತ್ತದೆ. '' ಗುಣಾನಾಂ ಅಲ್ಪತಾ ಜ್ಞಾನಂ ...... ತ್ರಿವಿಧೋ ದ್ವೇಷ ಉಚ್ಯತೇ '' ಎಂದು ಬೃ. ಭಾಷ್ಯವಿದೆ. ದ್ವೇಷಕ್ಕೆ ಫಲ ಅಜ್ಞಾನ ವೃದ್ಧಿ, ಕೆಟ್ಟ ಜನ್ಮ, ಆಯುಸ್ಸಿಗೆ ಹಾನಿ ಎಂದೂ ಗ್ರಂಥದಲ್ಲಿದೆ.

ಪ್ರಮಾಣ :– ಅಧ್ಯಾಯ XII – 12.

ಯಶ್ಚಾಕ್ಷೇಪಂ ಕರೋತ್ಯತ್ರ ಮತ್ಕೃತೌ ದೋಷ ಶಂಕಯಾ ।
ತತ್ಪ್ರಾಣಸ್ಯೈವ ಚಾಕ್ಷೇಪಂ ಮುಖ್ಯಪ್ರಾಣಃ ಕರೋತ್ಯಹೋ ॥
ಸತ್ಯಂಸತ್ಯಂ ಪುನಃ ಸತ್ಯಂ ತ್ರಿವಾಚಾಪಿ ಮಯೋಚ್ಯತೇ ॥12॥
ವಿಪ್ರಾಂತರ್ಯಾಮಿಣಾಚೇಯಂ ಸತ್ಕೃತಿಶ್ಚ ಮಯಾಕೃತಾ ॥

XVII. 5. ತಸ್ಮಾದ್ದ್ವಿಪ್ರಕೃತಿರ್ನೈವ ಮತ್ಕೃತಿಃ ಸರ್ವಥಾ ಸುತ ।

ಆದ್ದರಿಂದ ಇಂಥ ಸ್ತೋತ್ರ ಮಂಜರೀ, ಅಂಥ ಗ್ರಂಥಕಾರರ ಪರಾಗಳು, ಉಪನ್ಯಾಸಗಳು ಮುಂತಾದುದಕ್ಕೆ ಸಜ್ಜನರು ಬೆಲೆ ಕೊಡಬಾರದು. ಅಧ್ಯಾಯ X – 104 – ಆಖ್ಯಾನ ವಚನವಿದೆ. '' ಏವಂ ವೃಂದಾವನಾಖ್ಯಾನಂ ಶ್ರುತ್ವಾ ಸುಜನ ವೃತ್ತಯಃ । ಯಾತ್ರಾಂ ಕುರ್ವಂತು ಮದ್ಭಕ್ತ್ಯಾ ಯಚ್ಛಂತು ಸದುಪಾಯನಂ । ಯಾಚಯಂತು ವರಂ ತಸ್ಮಾತ್ತದ್ವರಂ ಪ್ರಾಪ್ನುವಂತು ತೇ '' (ಅರ್ಥ - ಹೀಗೆ ಸಾತ್ವಿಕ ಮನೋಭಾವವುಳ್ಳ ಸಜ್ಜನರು ವೃಂದಾವನಾಖ್ಯಾನವನ್ನು ಗುರುಗಳಿಂದ ಶ್ರವಣಮಾಡಿ ಎಂದರೆ ನನ್ನಲ್ಲಿ ಋಜುತ್ವ ಮಹಿಮೆ ತಿಳಿದು ಭಕ್ತಿಮಾಡಿ, ಯಾತ್ರೆಮಾಡಿ, ಅಲ್ಲಿಯೂ ಋಜುತ್ವ ದಾರ್ಢ್ಯಪ್ರಯುಕ್ತ ಉದ್ರಿಕ್ತವಾದ ಭಕ್ತಿಯಿಂದ ಸೇವಿಸಿ ಕಾಣಿಕೆಯನ್ನು ಅರ್ಪಿಸಲಿ. ಗುರುಗಳನ್ನೂ ವರ ಬೇಡಲಿ. ಆ ಗುರುಗಳಿಂದ ವರದ ಫಲವನ್ನು ಪಡೆಯಲಿ.) ಋಜುತ್ವ ಜ್ಞಾನವಿದ್ದರೆ ಫಲ ಬರುತ್ತದೆ. ಇಲ್ಲದಿದ್ದರೆ ಫಲವಿಲ್ಲ ಎಂದು ಭಾವ. ಆಖ್ಯಾನ ಶ್ರವಣದಿಂದ ಆ ವಿಷಯವು ಚೆನ್ನಾಗಿ ಮನದಟ್ಟಾಗುತ್ತದೆ. ವಾದಿರಾಜರ ವಾಕ್ಯದಿಂದಲೇ ಈ ಟಿಪ್ಪಣಿ ಮುಗಿಸಬಹುದು. ಅಧ್ಯಾಯ XI - 44 ಮದ್ವಾಕ್ಯಮಾನ ಸಂಸಿದ್ಧಂ ಸರ್ವಂ ಸಂಗ್ರಾಹ್ಯಮೇವ ಹಿ । ಚೋದ್ಯಾನರ್ಹೇತು ಮದ್ವಾಕ್ಯೇ ಚೋದ್ಯಂ ಕುರ್ವನ್ ಪತತ್ಯಧಃ ॥ (ಉತ್ತಮ ಪ್ರಮಾಣವಾದ ನನ್ನ ವೃಂದಾವನಾಖ್ಯಾನ ವಾಕ್ಯಗಳಿಂದ ಉಪದೇಶಿಸಲ್ಪಟ್ಟ ಸರ್ವವೂ ಅಂಗೀಕಾರಾರ್ಹವು. ಖಂಡನೆಗೆ ಅನರ್ಹವಾದ ನನ್ನ ವಾಕ್ಯದಲ್ಲಿ ಖಂಡನೆಯ ಪ್ರಶ್ನೆಗಳನ್ನು ಮಾಡುವವನು ಅಧಃ ಪತನವನ್ನು ಹೊಂದುತ್ತಾನೆ). ಎಲ್ಲರೂ ತಮ್ಮ ತಮ್ಮ ಗ್ರಂಥಗಳನ್ನು ಹೀಗೆ ಹೊಗಳುತ್ತಾರೆ ಎನ್ನಲಾಗುವುದಿಲ್ಲ. ಇತರ ಮತಗಳ ಎಲ್ಲಾ ಗ್ರಂಥಗಳೂ ವೇದಬಾಹ್ಯಗಳಾದ್ದರಿಂದಲೇ ನಮ್ಮಿಂದ ಗ್ರಾಹ್ಯವಲ್ಲ. ವೇದವಿರುದ್ಧವೂ ಆಗಿವೆ ಎಂದು ಆಚಾರ್ಯರು ಬೌದ್ಧ, ಶೈವ, ಜೈನಾದಿಗಳ ಸರ್ವಗ್ರಂಥಗಳನ್ನೂ ಪ್ರಮಾಣಕೊಟ್ಟು ಖಂಡಿಸಿರುತ್ತಾರೆ. ವೇದಬಾಹ್ಯರನ್ನು ನಮ್ಮ ಖಂಡನೆಗಳಿಗೇ ಬಿಟ್ಟಿರುತ್ತಾರೆ. ಎಂಥ ಪ್ರಬಂಧಾದಿ ವೈದಿಕಗ್ರಂಥವಾದರೂ ವೇದವಿರುದ್ಧಭಾಗವು ತ್ಯಾಜ್ಯವೇ. ಮೇಲಾಗಿ ಮಂತ್ರವೀರ್ಯತನದಿಂದ ಪುಣ್ಯವನ್ನಿಟ್ಟು ಕೃಪೆಯಿಂದ ಪಾತ್ರ ಶಿಷ್ಯರಿಗಾಗಿ ರಚಿತವಾದ ಪವಮಾನ ಪದವಾಚ್ಯರಾದ, ಸರ್ವಜ್ಞ ವಾದಿರಾಜರ ಕೃತಿಯೆಂದರೆ ಪಾರಾಯಣದಿಂದ ಪರಮ ಪಾವನವನ್ನಾಗಿ ಮಾಡುತ್ತದೆ; ಅರ್ಥವಿಚಾರದಿಂದ ಶಾಸ್ತ್ರ ನಿರ್ಣಯಜ್ಞನನ್ನಾಗಿ ಮಾಡುತ್ತದೆ. ಜ್ಞಾನವೃದ್ಧಿಗೆ ಸೋಪಾನವಾಗುತ್ತದೆ. ಇನ್ನು ಮುಕ್ತಿಯನ್ನೇ ಕೊಡಿಸಬಹುದು. ತಪೋಹೀನರಾದ ಅಜ್ಞಾನಿಗಳ ಗ್ರಂಥ ಪಾರಾಯಣದಿಂದ ಏನಾಗುತ್ತೆ ? ಆದ್ದರಿಂದ ಇದನ್ನು ಕಾಳಿ ಕಂಗಾಳಿ ಪುಸ್ತಕಗಳಿಗೆ ಹೋಲಿಸಬಾರದು. ಮೂಲ ಶಾಸ್ತ್ರವಿರೋಧದ ಗಂಧವೂ ವೃಂದಾವನಾಖ್ಯಾನದಲ್ಲಿಲ್ಲ. " ವಿಪ್ರಪ್ರಾಣಾವಧಿರ್ಯಾವತ್ ಸತ್ಪ್ರಮಾಣಾವಿರೋಧತಃ " ಎಂದು ಪ್ರತಿಜ್ಞೆಮಾಡಿ ಆ ಗ್ರಂಥವು ಅವರಿಂದಲೇ ಆ ಭಾವದಿಂದಲೇ ಪೂರ್ತಿ ಮಾಡಲ್ಪಟ್ಟಿದೆ, ಬೇರೆಯವರ ಕೈವಾಡ ಊಹಿಸುವುದು ನಿರಾಧಾರಯುತ್ತ.

ಅಧ್ಯಾಯ ೩

ವಾದಿರಾಜ ಗುರುಗಳ ಅವತಾರ ಪ್ರಯೋಜನಗಳು

1. ಶ್ರೀಕೃಷ್ಣ ಭೀಮರು ಅವತಾರ ಕಾರ್ಯವನ್ನು ಪರಿಪೂರ್ತಿ ಮಾಡಿ ಪರಂಧಾಮಕ್ಕೆ ತೆರಳಿದ ಮೇಲೆ ಭೂಲೋಕದಲ್ಲಿ ಅಧರ್ಮ ನಷ್ಟವಾಯಿತು. ಆಗ ತಮ್ಮ ವ್ಯಾಪ್ತಿಯು ಭೂಮಿಯಲ್ಲಿ ನಷ್ಟ ವಾದದ್ದನ್ನು ಸಹಿಸದೆ ದೈತ್ಯರು ಸಭೆಮಾಡಿ ಮಣಿಮಂಜರಿಯಲ್ಲಿ ಉಕ್ತವಾಗಿರುವಂತೆ ಹರಿವಾಯುಗಳ ಮಹಿಮೆಯನ್ನು ಪ್ರತಿಪಾದಿಸುವ ಶಾಸ್ತ್ರವನ್ನು ತಲೆ ಕೆಳಗುಮಾಡಿ ಅಪವ್ಯಾಖ್ಯಾನದಿಂದ ಆಸುರವಾದ ಅದ್ವೈತ ತತ್ವವನ್ನೇ ನಿಜ ತತ್ವವೆಂದು ಅದರಲ್ಲೂ ತೋರಿಸಿ ಬಿಡಬೇಕೆಂದು ನಿಶ್ಚಯಿಸಿದರು. ಸುಮಾರು 800 A. D. ಯಲ್ಲಿ ಮಣಿಮಂತಾದಿಗಳು ಅವತರಿಸಿದರು. ಈಶ್ವರಾದಿಗಳ ವರಬಲ, ಹುಟ್ಟಿದ ವರ ತಾಮಸ ತಪಸ್ಸು, ಬುದ್ಧಿ ಬಲಾದಿ ಕಾರಣಗಳಿಂದ ವಿಷವು ಮೈಗೆ ವ್ಯಾಪಿಸುವಂತೆ ಅದ್ವೈತವೂ, ಭಾಸ್ಕರಾದಿಗಳ ಮತವೂ ಲೋಕದಲ್ಲಿ ಹರಡಿಕೊಂಡವು. ಆಗ ಜ್ಞಾನ ರಕ್ಷಕ ದೇವತೆಗಳ ಪ್ರಾರ್ಥನೆಯಿಂದ ಶ್ರೀಹರಿಯು ವಾಯುದೇವರನ್ನು ಕಳುಹಿಸಿ ಅವರಿಂದ ದ್ವೈತ ಮತ ಪ್ರಚಾರವನ್ನು ಮಾಡಿಸಿದನು. ಆ ವಿವರ "ಸುಮಧ್ವ ವಿಜಯ" ದಲ್ಲಿದೆ. 1238 ವಿಳಂಬಿ ಸಂವತ್ಸರದ ವಿಜಯದಶಮಿ ಶ್ರೀಮಧ್ವಾಚಾರ್ಯರು ಅವತರಿಸಿ 1317 ಮಾಘ ಮಕರ ನವಮಿ ಅವರು ಅನಂತೇಶ್ವರ ಗುಡಿಯಲ್ಲಿ ಐತರೇಯವನ್ನು ಹೇಳಿ ಅದರ್ಶನ ಹೊಂದಿದರು. ಅನೇಕರು ಮಧ್ವಗುರುಗಳ ಅನುಗ್ರಹದಿಂದ ಅಪರೋಕ್ಷವನ್ನೇ ಹೊಂದಿದರು. 37 ಗ್ರಂಥಗಳು ಅಪರೋಕ್ಷ ಸಾಧನೆಗಳಾಗಿ ಉಳಿದವು. ಆ ಸಂಪ್ರದಾಯದಿಂದ ಸುಮಾರು 1417 ರ ವರೆಗೆ – ಅಂದರೆ ಒಂದು ಶತಮಾನ ಅನೇಕ ಸಾಧಕರು ಅವತರಿಸಿ ಸಾಕ್ಷಾತ್ಕಾರವನ್ನು ಪಡೆದುಕೊಂಡು ಕೃತಾರ್ಥರಾದರು. ಇಂಥ ವೈಷ್ಣವ ಧರ್ಮದ ಅಭ್ಯುದಯವನ್ನು ದೈತ್ಯರು ಸಹಿಸಲಿಲ್ಲ. ತಮ್ಮ ಗ್ರಂಥಗಳೆಲ್ಲಾ ಹಾಸ್ಯಾಸ್ಪದವಾದವು. ತಾವು ನಿರ್ವೀರ್ಯರೆಂದೂ, ಅಪಂಡಿತರೆಂದೂ ಅಪಖ್ಯಾತಿ ಬಂತು. ತತ್ಪರಿಹಾರಾರ್ಥವಾಗಿ ಈಶ್ವರಾದಿಗಳನ್ನು ಭಜಿಸಿ ಪ್ರಾತ್ಯಕ್ಷಿಕ ಶಕ್ತಿ, ಮಂತ್ರಸಿದ್ಧಿ, ಸೌಜನ್ಯತಂತ್ರ ಎಂದರೆ ವೈಷ್ಣವರಲ್ಲೇ ಹುಟ್ಟಿ ಅಥವಾ ಬಾಂಧವ್ಯಹೊಂದಿ ಅವರಿಗೆ ಉಪಕಾರ ಮಾಡಿ, ಐಕ್ಯದಿಂದಿದ್ದು, ಆ ವೈಷ್ಣವ ಧರ್ಮಗಳನ್ನೂ, ಗ್ರಂಥಗಳನ್ನೂ ನಾಶಪಡಿಸಬೇಕೆಂದೂ, ಶೈವಾದ್ಯನುಷ್ಠಾನ, ತರ್ಕಾದಿ ವಿದ್ಯೆಗಳನ್ನು ಪ್ರಚಾರ ಮಾಡಬೇಕೆಂದೂ, ತಪೋಬಲ ಸಂಪಾದಿಸಿ ಭೂಮಿಯಲ್ಲಿ ಅವತರಿಸಿದರು. ತುರುಕರಾಗಿಯೂ ವೈಷ್ಣವ ಧರ್ಮಗಳನ್ನು ನಾಶಪಡಿಸಿದರು. ವೈಷ್ಣವರಿಗೆ ಅಧಿಕಾರ ನಾಶಮಾಡಿ ಅವರ 37 ಗ್ರಂಥಗಳು ಅವರಿಗೆ ಸಾಕ್ಷಾತ್ಕಾರಾನುಪಯೋಗಿಯಾಗುವಂತೆ ಮಾಡಬೇಕು, ಕೃಷ್ಣ ಪ್ರತಿನಿಧಿ ಭಾಗವತ ಪುರಾಣಾರ್ಥವೂ ವ್ಯಾಪಾರಾಕ್ಷಮವಾಗುವ ಹಾಗೆ ಮಾಡಬೇಕೆಂದೂ, ತಾವೂ ಮತ್ತು ಅನೇಕ ದೈತ್ಯರೂ ಮಾಧ್ವರಾಗಿ ಹುಟ್ಟಿ ರಾಮಕೃಷ್ಣಾದಿಗಳ ಸೇವೆ, ಮಾಧ್ವಗ್ರಂಥಾಭ್ಯಾ-

ಗಳಲ್ಲಿ ತೊಡಗಿ ಅವೆಲ್ಲವೂ ನಿಷ್ಪ್ರಯೋಜನವೆಂದು ತೋರಿಸಿದರು. ದುಷ್ಟರಲ್ಲಿ ಅಭಿಮಾನ, ವೈರಾಗ್ಯಾಭಾಸ, ಶಾಸ್ತ್ರದಲ್ಲಿ ಫಲೋಪಲಬ್ಧ್ಯಭಾವದಿಂದ ಅಪ್ರಾಮಾಣ್ಯಶಂಕಾ, ದೀಕ್ಷಾಭಾವಾದಿಗಳು ಹೆಚ್ಚಿ ಯಾರಿಗೂ ಏನೂ ಕಾಣದಂತಾಯಿತು ಸುಜನರು ಮಲಿನಚಿತ್ತರಾದರು. 37 ಗ್ರಂಥಗಳು ಮುಟ್ಟಾದವರು ಮುಟ್ಟಿದ ಅನ್ನದಂತೆ ದೇವಕಾರ್ಯ, ಭಕ್ಷ್ಯಾದಿ ದಾನದಲ್ಲಿ ಅಸಮರ್ಥವಾದವು. ದೈತ್ಯರು ತಮಗೂ ತಮ್ಮ ಮತಗಳಿಂದ ಸಿದ್ಧಿ ಉಂಟೆಂದು ತೋರಿಸಲು ಉಪಕ್ರಮಿಸಿದರು. ಹೀಗೆ 1475ರ ವರೆಗೆ ಬಹಳ ಅಜ್ಞಾನ ಪ್ರಚಾರ, ಶಾಸ್ತ್ರಾನಭ್ಯಾಸದ ಕಾಲ, ವಿದ್ಧ ಏಕಾದಶ್ಯಾದಿ ಅನುಕ್ತ ವ್ರತಾನುಷ್ಠಾನ ಬಂದು ಸಜ್ಜನರು ಮಾಡಿದ್ದೆಲ್ಲಾ ಹಾಳು ಆಯಿತು. ಅವೈಷ್ಣವಾಭಿಮಾನದಿಂದ ಕೇಡೂ ಸಹ ಆಗಲು ಪ್ರಾರಂಭಿಸಿದವು.

ಶ್ರೀ ಮಧ್ವಾಚಾರ್ಯರು ಉಡುಪಿಯಲ್ಲಿ ಮಾಡಿದ ಎರಡು ತಿಂಗಳ ಪರ್ಯಾಯ ವ್ಯವಸ್ಥೆ; ಅನ್ನ ತೀರ್ಥಗಳ ದಾನ, ಕೃಷ್ಣನ ಉತ್ಸವಗಳೂ ಸಹ ಸುಗಮವಾಗಿ ನಡೆಯಲಿಕ್ಕೆ ತುಂಬಾ ಕಷ್ಟ ಒದಗಿತು, ವೈಷ್ಣವರಲ್ಲಿ ಪರಸ್ಪರ ಕಲಹ ಹೆಚ್ಚಾಯಿತು. ಘಟ್ಟದ ಮೇಲಿನವರು ದ್ರವ್ಯಾದಿಗಳನ್ನು ಒದಗಿಸಲಿಲ್ಲ.

ಆಗ ಸುಮಾರು 1475 ರ ಸಮಯದಲ್ಲಿ ದೇವತೆಗಳು ದೇವರನ್ನು ಪ್ರಾರ್ಥನೆ ಮಾಡಲು, ಶ್ವೇತದ್ವೀಪವರ್ತಿ ದೇವರು ತನ್ನ ಸಮೀಪದಲ್ಲಿ ಪ್ರವಚನರತರಾಗಿದ್ದ ಲಾತವ್ಯ ದೇವರನ್ನು ಅವತರಿಸುವಂತೆ ಆಜ್ಞಾಪಿಸಿದನು. ತಾನೂ ಹಯಗ್ರೀವ ಪ್ರತಿಮಾವತಾರ ಮಾಡುವುದಾಗಿ ಹೇಳಿದನು. ಆ ಲಾತವ್ಯರು ರೂಪಾಂತರದಿಂದ ಸತ್ಯಲೋಕದಲ್ಲಿ ತಪಸ್ಸು ಮಾಡುತ್ತಿದ್ದರು. ಅಂಡಾದ್ಬಹಿಃ ಮಹತ್ತತ್ತ್ವದಲ್ಲೂ ತಪೋನಿರತರಾಗಿದ್ದರು. ಈ ರೂಪಗಳು " ಮತಿ " ಎಂದು ವೇದದಲ್ಲೂ ಕೊಂಡಾಡಲ್ಪಡುತ್ತವೆ.

ದ್ವಾಪರ ಯುಗದಲ್ಲಿ ಕೃಷ್ಣ ರುಕ್ಮಿಣೀ ಸೇವೆ ಮಾಡಿದ್ದ ಆ ಲಾತವ್ಯರು ವೃಕ್ಷನಾಮಕರು. ಸುದೇವ ನಾಮಕ ಬ್ರಾಹ್ಮಣ. ಭೀಷ್ಮಕರಾಯನ ಪುರೋಹಿತ ಪುತ್ರ. ಈಗ ಅವರ ಅವತಾರ ಕಲಿ ಯುಗದಲ್ಲಿ 1480 ರಲ್ಲಿ ಪ್ರಸಕ್ತವಾಯಿತು. ಬ್ರಹ್ಮವಾಯುಗಳು ಹರಸಿ ತಮ್ಮ ಸತತ ಆವೇಶ, ಅವರ ಕಾರ್ಯಕ್ಕೆ ಒಪ್ಪಿಗೆ ಸಹಾ ಕೊಟ್ಟು ಬೀಳ್ಕೊಡುಗೆ ಸಮಾರಂಭ ಮಾಡಿ ಕಳುಹಿಸಿದರು. ಹೂವಿನಕೆರೆಯಲ್ಲಿ ರಾಮಾಚಾರ್ಯ ದಂಪತಿಗಳು ಸಾಮವೇದಿಗಳು. ಅವರ ದೆಸೆಯಿಂದ ಮಾಘ ಶುದ್ಧ ದ್ವಾದಶೀ ಅವತಾರ. ಅವತಾರ ದಿವಸದಿಂದ ದೈತ್ಯರ ಮಂತ್ರ ಶಕ್ತಿಗೆ ಸ್ತಂಭನ, ವಿಘ್ನಾದಿಗಳು ಆರಂಭವಾದವು. ವೈಷ್ಣವರಲ್ಲಿ ಐಕ್ಯವುಂಟಾಯಿತು. ಅಧಿಕಾರ ಸಿದ್ಧಿಹೊಂದಿ ಸರ್ವಮೂಲದ ಅಭ್ಯಾಸಮಾಡಬೇಕೆಂಬ ದೀಕ್ಷಾ ವೃದ್ಧಿಯಾಯಿತು. ಅನೇಕರ ಎಂದರೆ ಕನಕ, ಪುರಂದರ ದಾಸಾದಿಗಳ ಜ್ಞಾನಪ್ರಚಾರವೂ ನಿಷ್ಪ್ರತ್ಯೂಹವಾಗಿ ಹರಡಿತು. ವ್ಯಾಸಕೂಟದ ಯತಿಗಳೂ, ಪಂಡಿತರೂ ಮತಪ್ರಚಾರ ಮಾಡಿ ಜಯಶೀಲರಾದರು.

ಅಷ್ಟಮಠದ ಪರ್ಯಾಯ ವ್ಯವಸ್ಥೆ, ಅಷ್ಟಮಠದವರಿಗೆ ದ್ರವ್ಯ ಸಂಪಾದನೆಗೆ ಅನುಕೂಲ, ವಾಸಕ್ಕೆ ಪ್ರತ್ಯೇಕ ಮಠ, ಉತ್ಪತ್ತಿಗೆ ಗ್ರಾಮ, ಜಮೀನುಗಳು, ವಿಶೇಷ ಪೂಜೆಗೆ ಸ್ವಪೂಜಿತ ಹಯಗ್ರೀವ ಪ್ರತಿಮೆ, ಇತ್ಯಾದಿ ಎಲ್ಲಾ ಸೌಕರ್ಯಗಳನ್ನೂ ಭ್ರಾತೃವಾತ್ಸಲ್ಯದಿಂದ ವಾದಿರಾಜರೇ ಮಾಡಿಕೊಟ್ಟರು.

ಕಲಿನಿರಸಕ ಬಹು ಗ್ರಂಥಗಳನ್ನೂ ಬರೆದರು.[1] ಯಾವ ಚಕ್ರವರ್ತಿಯಿಂದಲೂ ಸಾಧ್ಯವಾಗದ ಅದ್ಭುತ ಕಾರ್ಯಗಳನ್ನೂ, ದಾನಗಳನ್ನೂ ಅವರು ಅನಾಯಾಸದಿಂದ ಮಾಡಿದ್ದಾರೆಂದು ರಘುನಾಥ ಪಂಡಿತ ಕವಿ ಜೋಡಿ ವೃತ್ತರತ್ನ ಸಂಗ್ರಹದಲ್ಲಿ ವರ್ಣಿಸಿದ್ದಾರೆ. ಕೃಷ್ಣಪೂಜೆ, ನವವಿಧವಾದ ದೈನಂದಿನ ಪೂಜೆ, ಚಾತುರ್ಮಾಸ್ಯ ವಿಧಾನ ಮುಂತಾದ ಸರ್ವ ಸಮಾರಾಧನ ರೀತಿಯು ನಿತ್ಯವೂ ನಿರ್ವಿಘ್ನವಾಗಿ ನಡೆದೋ ತೀರುವ ರೀತಿಯಲ್ಲಿ ಏರ್ಪಡಿಸಲ್ಪಟ್ಟಿತು. ಶ್ರೀ ವಾದಿರಾಜರು ಸ್ವಸನ್ನಿಧಾನ ಮಹಿಮೆಯಿಂದ ಕಲಿಯನ್ನು ದೂರಕ್ಕೆ ತಳ್ಳಿ ಬಿಡಲು, ಸಾಧಕರೂ, ಯತಿಗಳೂ ಸಹ ನಿರ್ಮಲ ಚಿತ್ತರಾಗಿ ಶ್ರೀಹರಿಯ ವೈಭವ ಪ್ರಶಂಸೆಯಲ್ಲಿ ತತ್ಪರರಾದರು. ಅವೈಷ್ಣವ ದುರ್ವಾದಿಗಳಾದ ಶೈವ, ಜೈನ, ಪೂರ್ವಮೀಮಾಂಸಾದಿ, ಅದ್ವೈತಾದಿ ಸರ್ವಪ್ರತಿಪಕ್ಷಗಳೂ ಮಾತಾಡುವುದಕ್ಕೆ ತೋರದೆ ಸ್ತಬ್ಧರಾದರು.

ಕಾಲಿನ ಮುಳ್ಳು ಹೋದಮೇಲೆ ಆನೆಯು ಶೀಘ್ರವಾಗಿ ನಡೆಯುವಂತೆ ವಿಘ್ನಗಳಿಲ್ಲದೆ ಮಾಧ್ವರಾದ ಕರ್ಮಿಗಳು, ಜಿಜ್ಞಾಸುಗಳು, ತಪಸ್ವಿಗಳು, ಸಿದ್ಧರು ಇವರೆಲ್ಲರೂ ಪ್ರಗತಿಪರವಾದ ತಪಸ್ಸಿನಲ್ಲಿ ನಿರತರಾದರು. ಆಡು ಮುಟ್ಟದ ಸೊಪ್ಪಿಲ್ಲ ಎನ್ನುತ್ತಾರೆ. ಹಾಗೇ ವಾದಿರಾಜ ಸ್ವಾಮಿಗಳ ಅನುಗ್ರಹ ಹೊಂದದ ಅಧಿಕಾರಿ ಇಲ್ಲ ಎಂಬಂತೆ ಸಾಕ್ಷಾದ್ವಾ, ಪರಂಪರಯಾ ವಾ ಸರ್ವರೂ ಅವರ ಅನುಗ್ರಹದಿಂದ ಶುದ್ಧ ಧರ್ಮದಲ್ಲಿ ಮತ್ತು ಯುಕ್ತಿಮಲ್ಲಿಕಾದಿ ಗ್ರಂಥಾಭ್ಯಾಸದಲ್ಲಿ ನಿರತರಾದರು. ವಾದಿರಾಜ ಗುಣ ರತ್ನಮಾಲಾ ಮುಂತಾದ ಗ್ರಂಥಗಳಲ್ಲಿ ಈ ವಿವರವಿದೆ.

2. ಆದರೆ ಇಷ್ಟು ಯೋಜನೆಮಾಡಿ, ಮಾಡಿದ ವ್ಯವಸ್ಥೆಯು ಮುಂದೆ ನಿಲ್ಲುವುದಕ್ಕೆ, ಕಲಿನಿವರ್ತಕವಾದ ಸುಲಭವಾದ ಒಂದು ಮಂತ್ರ ಗ್ರಂಥವನ್ನೂ ರಚಿಸಬೇಕೆಂದು ಹರಿಚತುರ್ಮುಖರ ಅಭಿಪ್ರಾಯ ಇತ್ತು. " ಮುಕುಂದ ಶತಾನಂದಾವಸಿತಂ ಚ ಯತ್ " ಎಂದು 3-97 ರಲ್ಲಿ ತಾವೇ ಹೇಳಿದ್ದಾರೆ. (ಅರ್ಥ :- ವಿಷ್ಣು ಮತ್ತು ಚತುರ್ಮುಖರು ತೀರ್ಮಾನಿಸಿದ್ದನ್ನು ಹೇಳಿ ಪೂರ್ತಿ ಮಾಡುತ್ತಾ ವಿಷ್ಣು ಲೋಕದಲ್ಲಿ ವಿಹರಿಸುತ್ತೇನೆ). XIX – 15 ರಲ್ಲಿ " ಮನ್ಯೇವಂ ದೈವಿಕ ಗ್ರಂಥಂ ಹೃದಯ ಗ್ರಂಥಿ ಸಂಯುತಾಃ । ಯೇ ನ ಗೃಹ್ಣಂತಿ ತಾನ್ ಸರ್ವಾನ್ ಗೃಹ್ಣಂತಿ ಯಮಕಿಂಕರಾಃ " ಎಂದಿದೆ. (ಅರ್ಥ: – ನನ್ನ ಈ ರೀತಿ ಇರುವ ದೈವಿಕ ಗ್ರಂಥವನ್ನು ಎಂದರೆ ದೇವರು ಮತ್ತು ದೇವತೆಗಳಿಗೆ ಸಮ್ಮತವಾದ ಕಾರ್ಯವನ್ನು ಪೂರ್ತಿ ಮಾಡುವ ಗ್ರಂಥವನ್ನು ಹೃದಯಗ್ರಂಥಿ ಎಂದರೆ ದುರಭಿಮಾನದ ಹಟದಿಂದ ಯಾರು ಸ್ವೀಕರಿಸುವುದಿಲ್ಲವೋ ಅವರೆಲ್ಲರನ್ನೂ ಯಮ ಕಿಂಕರರು ನರಕಕ್ಕೆ ಒಯ್ಯುತ್ತಾರೆ.) XVIII - I ರಲ್ಲೂ ಸ್ವಾಪ್ನ ವೃಂದಾವನಾಖ್ಯಾನವು ದೇವತೆಗಳ ಪ್ರಾರ್ಥನಾನುಸಾರವಾಗಿ ಮಾಡಲ್ಪಟ್ಟಿದೆ ಎಂದಿದ್ದಾರೆ. " ಇದಂ ಸರ್ವಂ ಶರ್ವ ಗುರ್ವಿಂದ್ರ ಪೂರ್ವೈಃ ಗೀರ್ವಾಣೇಂದ್ರೈಃ ಗರ್ವರಾಹಿತ್ಯಸದ್ಭಿಃ । ಸರ್ವೋತ್ತಮಃ ಪರ್ವಣಿ ಪ್ರಾರ್ಥಿತೀಯೈಃ ಮೌರ್ವ್ಯಾದಪ್ಯಾರ್ಥಿತಸ್ತತ್ಕೃತಂ ಮೇ " (ಶರ್ವ, ಗುರು, ಇಂದ್ರ ಮೊದಲಾದ ದೇವಶ್ರೇಷ್ಠರು

1) ವಾದಿರಾಜ ಗ್ರಂಥ ಪ್ರಕಾಶನ ಸಮಿತಿ, ಉಡುಪಿ, ಇವರಿಂದ ಪ್ರಕಾಶಿತವಾದ ತಾತ್ಪರ್ಯ ನಿರ್ಣಯದ ಕೊನೆಯಲ್ಲಿ ವಾದಿರಾಜರು ಮಾಡಿದ ಗ್ರಂಥಾದಿಗಳ ಪಟ್ಟಿ ಇದೆ, ನೋಡಿ.

ಗರ್ವಬಿಟ್ಟು ಮಂದರ ಪರ್ವತಕ್ಕೆ ಬಂದು ಯಾಗಮಾಡಿ ದರ್ಭೆಯ ಸೌಟಿನಿಂದ ಪರ್ವ ದಿನ ಆಹುತಿ ಕೊಟ್ಟು ಸರ್ವೋತ್ತಮ ಹರಿಯನ್ನು ಸಂತೋಷಪಡಿಸಿ ಅವನ ಅಪ್ಪಣೆಯಿಂದ ಅವರಿಂದ ಪ್ರಾರ್ಥಿತನಾದ ನಾನು ಈ ಆಖ್ಯಾನೋಕ್ತ ಮಹಿಮೆ ಎಲ್ಲವನ್ನೂ ಹೇಳಿದ್ದೇನೆ.) ಅಧ್ಯಾಯ V – 25 ರಲ್ಲಿ **"ತಸ್ಮಾದ್ವೃಂದಾವನಾಖ್ಯಾನಂ ಮುಕುಂದಾನಂದ ಕಾರಣಂ। ಮಂದಾನಾಂ ಬೋಧನಾರ್ಥಾಯ ಕಂದಾಶನ ಕೃತಂತ್ವಭೂತ್"** (ನನ್ನ ಸನ್ನಿಧಿಯಿಂದ ಶಿಷ್ಯರಲ್ಲಿ ಪ್ರೇರಣೆಯಾಗಿ, ಹರಿಪೂಜೆ ನಡೆಯುವುದರಿಂದ, ವೃಂದಾವನಾಖ್ಯಾನವು ಮುಕುಂದನಿಗೆ ತನ್ನ ಅಪ್ಪಣೆಯಂತೆ ಆಗಿರುವುದು ಎಂದು ಆನಂದಕಾರಣವಾಗಿದೆ. ಮಂದರಿಗೆ ಯಥಾರ್ಥಜ್ಞಾನ ಹುಟ್ಟಲೆಂದು ತಪೋನಿರತ ಮುನಿಯಿಂದ ರಚಿತವಾದದ್ದು.) ಮುನಿರಚಿತವಾದ್ದರಿಂದ ಮಂತ್ರರೂಪವಾಗಿದೆ ಎಂದು ಸೂಚನೆ. ಆದ್ದರಿಂದ 92ನೇ ಶ್ಲೋಕದಲ್ಲಿ ಈ ವೃಂದಾವನಾಖ್ಯಾನವನ್ನು ಪಠಿಸುವವರಿಗೆ **"ಮುಕುಂದಾವನಮೇವಾಸ್ತು"** ಎಂದರೆ ಮುಕುಂದನ ನಿತ್ಯ ರಕ್ಷಣೆ ಆಗಲಿ ಎಂದು ವರವನ್ನಿತ್ತಿದ್ದಾರೆ. ಪುರುಷ ಸೂಕ್ತಕ್ಕೆ ಸಮವೆಂದೂ 93ರಲ್ಲಿ ಹೇಳಿದ್ದಾರೆ. ಅಧ್ಯಾಯ VI - 34 ರಲ್ಲಿ **"ಸರ್ವೇ ಮಯೋಕ್ತಾಃ ಶ್ಲೋಕಾಸ್ತೇ ಶೋಕ ಮೂಲಸ್ಯ ನಾಶಕಾಃ"** (ಈ ನನ್ನಿಂದ ಹೇಳಲ್ಪಟ್ಟ ಶ್ಲೋಕಗಳೆಲ್ಲವೂ ಶೋಕಮೂಲವಾದ ಪಾಪವನ್ನು ನಾಶಮಾಡತಕ್ಕವು) ಎಂದು ಹೇಳಿರುವುದರಿಂದ ಈ ಮಂತ್ರರೂಪ ಶ್ಲೋಕಗಳು ಮುಮುಕ್ಷು ಪಂಡಿತರಿಗೆ ಬೇಗ ಅಂತಃಕರಣ ಶುದ್ಧಿಯನ್ನು ಉಂಟುಮಾಡುತ್ತವೆ ಎಂದಿರುವುದರಿಂದ ಪುರುಷಸೂಕ್ತ ಸಾಮ್ಯವನ್ನು ಸ್ಪಷ್ಟಪಡಿಸಿದಂತಾಯಿತು. VII ನೇ ಅಧ್ಯಾಯದ 2 ರಿಂದ 11 ರ ಹತ್ತು ಶ್ಲೋಕಗಳಲ್ಲಿ ಈ ಆಖ್ಯಾನವು ಹಯಗ್ರೀವ ವೇದವಿದ್ಯೆಯೆಂದೇ ನಿರೂಪಿಸಿದ್ದಾರೆ. **"........ಸತ್ಯ ಲೋಕಮಿತೋಽಗಮಂ ॥1॥ ಇತ್ಥಂ ಮನೋಕ್ತಿ ರೇವೇಯಂ ಕಥಂ ಕೃತ್ರಿಮವಾರ್ತಯಾ। ವ್ಯರ್ಥತಾಂ ಯಾತಿ ತತ್ತ್ವಜ್ಞ ಪಾರ್ಥಿವೇಷ್ವಪಿ ಸಾರ್ಥಿಕಾ॥11॥ ಅತಿ ಗೋಪ್ಯಾನಿ ಪದ್ಯಾನಿ ಮಯೋಕ್ತಾನ್ಯಪಿ ಕಾನಿಚಿತ್।** ಜನಸ್ಯ ಅಯೋಗ್ಯತಾಂ ದೃಷ್ಟ್ವಾ ಹೃತವಾನ್ ವಿಪ್ರವಾಕ್ಯತಃ ॥12॥ (ಅರ್ಥ :– ನಾನು ಇಲ್ಲಿಂದ ಸತ್ಯಲೋಕಕ್ಕೆ ಹೋದೆನು, ಶುದ್ಧಾಂತಃಕರಣವುಳ್ಳವನಾಗಿ ಶ್ರೀಹಯಗ್ರೀವ ಸ್ವಾಮಿಯ ಪಾದವನ್ನು ಹಿಡಿದುಕೊಂಡು ಶ್ರದ್ಧಾಯುಕ್ತನಾಗಿ ಏನು ಹೇಳುತ್ತಾನೋ ಎಂದು ಸುಸ್ಥಿರನಾಗಿದ್ದೆ. ಆ ಸ್ವಾಮಿ ಸರ್ವ ಶ್ರುತ್ಯರ್ಥವನ್ನೂ ನನಗೆ ಬೋಧಿಸಿಬಿಟ್ಟನು. ಸರ್ವಜ್ಞ, ಸರ್ವವೇದಾರ್ಥ ಬಲ್ಲವ. ಸ್ವಾಮಿ ಹೇಳಿದನು. "ಪ್ರತಿ ಪ್ರತಿ ಸೃಷ್ಟಿಯಲ್ಲೂ ಹುಡುಕುತ್ತಾ ಸ್ವರ್ಗಕ್ಕೆ ಹೋಗುತ್ತೇನೆ. ಕ್ರೂರರಾದ ಆ ದೈತ್ಯ ಶ್ರೇಷ್ಠರು ಮಧುಕೈಟಭ ನಾಮಕರು ಕಣ್ಣಿಗೆ ಬೀಳುತ್ತಾರೆ. ಅವರನ್ನು ಕೊಂದು ಅವರ ದೇಹವನ್ನು ಭೂಮಿಗೆ ಸೇರಿಸಿ ನಂತರ ಭೂಲೋಕಾದಿ ನಿರ್ಮಾಣ ವ್ಯವಸ್ಥೆ ಮಾಡಿ ಪಾಲಿಸುತ್ತೇನೆ. ಕುಂಬಾರ ತಾನು ಮಾಡಿದ ಗಡಿಗೆಗಳನ್ನು ಪಾಲಿಸುವಂತೆ ಪಾಲಿಸುತ್ತೇನೆ. ಎಲೈ ಶ್ರೇಷ್ಠನೇ ! ಹೀಗೆ ಸೃಷ್ಟ್ಯಾದ್ಯಷ್ಟಕಗಳನ್ನು ಅನಾಯಾಸೇನ ಮಾಡುತ್ತಾ ಭಕ್ತರನ್ನು ಸದ್ಗತಿ ಹೊಂದಿಸಿ ಬಿಡುತ್ತೇನೆ." ಇತ್ಯಾದಿ ರೀತಿಯಾಗಿ ಶ್ರುತಿಗೃಹದಲ್ಲಿ ಸಮರ್ಥನಾದ ನನಗೆ ತಿಳಿಸಿ ನನ್ನ ಅನುವಾದ ರೂಪವಾದ ಸಾವಿರ ಪದ್ಯದ ಹಾಡೆಂಬ ಪದ್ಮವನ್ನು ಪ್ರೀತಿಯಿಂದ ಆಘ್ರಾಣಿಸಿ ಶಿರಸ್ಸಿನಲ್ಲಿಟ್ಟುಕೊಳ್ಳಲು ಕೊಟ್ಟನು. ಅದನ್ನು ವಿಪ್ರನ ಮುಖವೆಂಬ ಸರೋವರದ ದೆಸೆಯಿಂದ ಹೊರಗೆ ಬರುವಂತೆ ಮಾಡಿದ್ದೇನೆ. ಬ್ರಾಹ್ಮಣರು ಶಿರಸಾ ಧರಿಸಲಿ. ಸದಾದರಕರಾಗಿ ಶ್ರವಣಮಾಡಿ ದೇವರ ಪಾದಧೂಳಿಯನ್ನು ತಲೆಯಲ್ಲಿಟ್ಟುಕೊಂಡು ಪವಿತ್ರರಾಗಲಿ. ಇಂಥ

ಆಖ್ಯಾನ ಸರ್ವ ಪೃಥ್ವೀ ಮತ್ತು ತತ್ಪಾಲಕರನ್ನು ಪಾವನ ಮಾಡುವುದು. ಹೇಗೆ ಕಾಕದಂತ ಪರೀಕ್ಷಾ ಗ್ರಂಥದಂತೆ ನಿಷ್ಪ್ರಯೋಜನವಾಗುತ್ತದೆ ? ಅತಿ ಗೋಪ್ಯವಾದ ಕೆಲವು ಪ್ರಮೇಯಗಳನ್ನು ವಿಪ್ರನಿಗೆ ಹೇಳಿದ್ದರೂ ಬರೆಯಿಸುವಾಗ ಜನರ ಅಲ್ಪಾಧಿಕಾರಿತನವನ್ನು ನೋಡಿ ಹಾರಿಸಿಬಿಟ್ಟೆ). ಹೀಗೆ ಇದು ಹಯಗ್ರೀವ ಬ್ರಹ್ಮವಿದ್ಯೆ ಆಗಿದೆ. ಸ್ವಾಮಿಯ ವೇದಾರ್ಥ ಉಪದೇಶದ ಸಾರ, ನಮ್ಮ ಅಧಿಕಾರಾನು ಸಾರತಃ ವಾದಿರಾಜರು ನಮಗೆ ಉಪದೇಶ ಮಾಡಿದ್ದಂದು ಸಿದ್ಧವಾಗುತ್ತದೆ. ಮುಕ್ತಿಪ್ರಾಪಕ ವಿದ್ಯೆ ಎಂಬಲ್ಲಿ ಸಂಶಯವಿಲ್ಲ. ಆದ್ದರಿಂದ ಇದು ಗೀತೆಯಂತೆ ದೈವಿಕಗ್ರಂಥ. ಲೋಕೋಪಕಾರಕ್ಕಾಗಿ ಉಪದೇಶಮಾಡಿದ್ದು ಎಂದು ಸ್ಪಷ್ಟವಾಗಿ ಅವರ ಮುಖದಿಂದಲೆ ಬಂದಿದೆ.

3. " ವಾದಿರಾಜರು ಋಜುಗಳೆಂದು ಸ್ವಪ್ನದಲ್ಲಿ ಹೇಳಿದ್ದಾರೆ; ಹೇಗೆ ನಂಬುವುದು ? ಸ್ವಪ್ನದಲ್ಲಿ ಸಾಲತೀರಿಸಿಕೋ ಎಂದು ಸಾವಿರ ರೂಪಾಯಿ ಕೊಟ್ಟರೆ ಆ ಸಾವಿರ ರೂಪಾಯಿನ ದೆಸೆಯಿಂದ ಸಾಲ ತೀರುವುದಿಲ್ಲ. ಜಾಗ್ರದ್ದೆಶೆಯಲ್ಲಿ ಆ ಧನ ಇರುವದಿಲ್ಲವಷ್ಟೆ ? ಹೀಗೆ ಸ್ವಪ್ನದಲ್ಲಿ ಹೇಳಿದ ಗುರುರಾಜರ ಮಹಿಮೆ ಎಲ್ಲಿ ಪ್ರತ್ಯಕ್ಷವಾಗುತ್ತದೆ ? ಎಂದು ಶಂಕಿಸಕೂಡದು. ಸ್ವಪ್ನದಲ್ಲಿ ಹಣಪ್ರಾಪ್ತಿಯು ಸೂಚಕ ವೆಂದಿದೆ. ಬೇರೆ ಅರ್ಥಕ್ರಿಯಾಕಾರಿತ್ವ ಸ್ವಾಪ್ನನಿಧಿಗೆ ಇಲ್ಲ. ಆದರೆ ಸ್ವಾಪ್ನ ಶಬ್ದಗಳು ಹಾಗಲ್ಲ. ಶಬ್ದಗಳು ಎರಡು ವಿಧ. ಕೆಲವು ಶಬ್ದಗಳು ಸೂಚಕಗಳೇ. ಆದರೆ ಬ್ರಾಹ್ಮಣ, ದೇವತಾ, ಯತಿ, ಗುರು, ರಾಜಾ, ದೇವರು ಮುಂತಾದವರು ಹೇಳಿದ ಶಬ್ದ ಸತ್ಯವೇ. " ಯದ್ಯಾಪಿ ಬ್ರಾಹ್ಮಣೋ ಬ್ರೂಯಾತ್ ದೇವತಾ ವೃಷಭೋಪಿವಾ। ಸ್ವಪ್ನಸ್ಥ ಮಥವಾರಾಜಾ ತತ್ತಥೈವ ಭವಿಷ್ಯತಿ ॥ " ಎಂದು ಬ್ರಹ್ಮ ಸೂತ್ರ ಭಾಷ್ಯದ ಮೂರನೇ ಅಧ್ಯಾಯದ ಪ್ರಮಾಣವಿದೆ. ಆದ್ದರಿಂದ ಈ ಗ್ರಂಥವೆಲ್ಲವೂ ಪ್ರಮಾಣವೇ. ಪ್ರಮಾಣವಾದರೂ ಉಪಕ್ರಮಾದಿಲಿಂಗಗಳಿಂದ ವಿಚಾರ ಮಾಡಿ ಸಂದಿಗ್ಧ ವಾಕ್ಯಗಳ ಅರ್ಥ ನಿರ್ಣಯ ಮಾಡಬೇಕು. ಆ ಮೀಮಾಂಸಾಕಾರ್ಯವು ತಪ್ಪಿದ್ದಲ್ಲ. ಎಲ್ಲಾ ವಾಕ್ಯಗಳ ವಿಷಯದಲ್ಲೂ ಬಹುತರ ಮೀಮಾಂಸೆ ಬೇಕಿಲ್ಲ, ಅನೇಕ ವಾಕ್ಯಗಳು ನಿರವಕಾಶವಾಗಿ ಯಥಾರ್ಥ ಜ್ಞಾನ ಜನಕವಾಗಿವೆ. ಅಂಥ ವಾಕ್ಯಗಳ ಅರ್ಥ ನಿರ್ಣಯದಲ್ಲಿ ಹೆಚ್ಚಾಗಿ ಮೀಮಾಂಸೆಯು ಆಗತ್ಯವಿಲ್ಲ. ಇಂಥ ಗ್ರಂಥವನ್ನೂ ಅದು ಮುಗಿದ ಮೇಲೆ ಸ್ವರ್ಗದಲ್ಲಿ ಇಂದ್ರನ ಮನೆಯಲ್ಲಿ ಲಕ್ಷ್ಮೀ ಉಪೇಂದ್ರರ ಸನ್ನಿಧಿಯಲ್ಲಿ ಶಚ್ಯಾದಿ ಮುತ್ತೈದೆಯರು ಆರ್ತಿಮಾಡಿದ್ದಾರೆ. ವಿಘ್ನಗಳನ್ನೂ ದೂರಿಕರಿಸಿ ಅಧಿಕಾರಿಗಳು ಸಾಧನೆ ಮಾಡಲಿಕ್ಕೆ ಅನುಕೂಲಿಸಿತೆಂದು ವಾದಿರಾಜ ಗುರುಗಳು ಸಂತುಷ್ಟರಾಗಿದ್ದಾರೆ: XIII :- ತಸ್ಮಾದಲಂತಾವ ದೇವ ಯಾವದೀಶ್ವರ ಪ್ರೇರಿತಂ । ಕಾರಿತಂ ಚೇತನೇ ದಂತು ತಾರಿತುಂಭವಸಾಗರಾತ್ ॥56॥ ಮಾರಿತುಂ ದೈತ್ಯಕೂಟಂ ಚ ಪಾರತಂತ್ರ್ಯಾದ್ದ್ವಿಷರೂಪತಃ ॥ ಇದು ವೃಂದಾವನಾಖ್ಯಾನಂ ಯೇ ನ ಶೃಣ್ವಂತಿ ಮಾನವಾಃ ॥ ದಾನವನಾಂ ಗತಿಂ ಪ್ರಾಪ್ಯಶ್ವಾನ ಜನ್ಮಾನಿ ಯಾಂತುತೇ ॥57॥ X. ಶ್ಲೋ 129 : ತಸ್ಮಾದ್ಘೋರೇ ಕಲೌ ಕಾಲೇಹ್ಯಲನೋತಾವತಾ ದ್ವಿಜ ॥ ಎಂದಿದ್ದಾರೆ. (ತಾತ್ಪರ್ಯ : ತುಂಬಾ ಸೂಕ್ಷ್ಮ ವಿಷಯಗಳ ಉಪದೇಶಕ್ಕೆ ಜನರು ಅನರ್ಹ ರಾಗಿರುವುದರಿಂದ ಶ್ರೀಹರಿಯು ಎಷ್ಟು ಪ್ರೇರಣೆ ಮಾಡಿ ಶ್ಲೋಕ ಮಾಡಿಸಿದನೋ ಅಷ್ಟೇ ಭವಸಾಗರ ದೆಸೆಯಿಂದ ಚೇತನರನ್ನೂ ಉದ್ಧಾರ ಮಾಡುವುದಕ್ಕೂ ಸಾಕಾಗಿದೆ, ಸಾಧಕರ ಶತ್ರುಗಳಾದ

ದೈತ್ಯಕೂಟವನ್ನು ನಾಶಹೊಂದಿಸುವುದಕ್ಕೂ ಈ ಶ್ಲೋಕಗಳು ಸಾಕಾಗಿವೆ. ದ್ವಿರೂಪ ಪಾರತಂತ್ರ್ಯ
ವನ್ನೂ ಸಾಧಕರಿಗೆ ತಿಳಿಸಿ ಕೊಡುವುದಕ್ಕೂ ಸಾಕಾಗಿದೆ. ಇಂಥ ವೃಂದಾವನಾಖ್ಯಾನವನ್ನು
ದೇವರು ಒದಗಿಸಿದಾಗಲೂ ಯಾವ ಮಾನವರು ಶ್ರವಣ ಮಾಡುವುದಿಲ್ಲವೋ ಅವರು
ದಾನವರಿಗಾಗುವ ಗತಿಯನ್ನೂ ಹೊಂದಿ ಶ್ವಾನ ಜನ್ಮವನ್ನೂ ಹೊಂದಲಿ ॥ 57 ॥ X. 129
ಪೂರ್ವೋಕ್ತ ಕಾರಣದಿಂದ ಈ ಘೋರ ಕಲಿಯುಗದಲ್ಲಿ ಜನರ ಉದ್ಧಾರಕ್ಕೆ ಈಗ ಪ್ರಕಾಶ ಮಾಡಿರುವಷ್ಟೇ
ಸಾಕಂ). ಸಾಧಕನು ಇಷ್ಟನ್ನು ಅನುಷ್ಠಾನಮಾಡಿ ಹೆಚ್ಚಿನ ಯೋಗ್ಯತೆ ತೋರಿಸಿದರೆ ಸ್ವಪ್ನಾದಿ
ಮಾರ್ಗದಿಂದ ಆತನಿಗೆ ಹೆಚ್ಚು ತಿಳಿಸಿದರಾಯಿತು. ಅಥವಾ ವಿಪ್ರನನ್ನು ಅನುಗ್ರಹಿಸಿದಂತೆ ಅಂಥವರನ್ನು
ಅನುಗ್ರಹಿಸಿದರಾಯಿತು ಎಂದು ಭಾವ. ದೇವರು ಭಾರತ ಭೂಮಿಯಲ್ಲಿ ಮಾನವದೇಹ ಸಾಧನೆಗಾಗಿ
ಕೊಟ್ಟು ಸಂತೋಷ ಪಟ್ಟಂತೆ ಈ ಗ್ರಂಥವನ್ನೂ ತಮ್ಮ ಭಕ್ತರ ಸಾಧನೆಗಾಗಿ ರಚಿಸಿ ವಾದಿರಾಜ ಗುರುಗಳು
ಅಲಂಬುದ್ಧಿಯನ್ನು ಹೊಂದಿದ್ದಾರೆಂದು ಪ್ರಮಿತವಾಗುತ್ತೆ. XVIII 78 ದ್ವೇಸಹಸ್ರೇ ಚ ಪದ್ಯಾನಾಂ
ಖದ್ಯೋತೋಪಮತೇಜಸಾಂ । ದೇಹಿನಾಂ ಬೋಧನೋದ್ದಾಮಸಾಧನಂತು ಭವಿಷ್ಯತಿ ॥ (ಅರ್ಥ:
ಸೂರ್ಯಸದೃಶತೇಜಸ್ಸುಳ್ಳ ಎರಡು ಸಾವಿರ ಪದ್ಯಗಳೂ ಸಾಧಕ ದೇಹಿಗಳ ಜ್ಞಾನೋತ್ಪತ್ತಿಗೆ ಉತ್ತಮ
ಸಾಧನೆಯಾಗಿ ಆಗುವವು). ಹೀಗೆ ಸ್ವಾಪ್ನ ವೃಂದಾವನಾಖ್ಯಾನವು ಸಾಧನ ಸೌಕರ್ಯಕ್ಕಾಗಿ ರಚಿತ
ವಾಗಿದೆ ಎಂದು ಗೊತ್ತಾಗುತ್ತೆ. ಕಲಿ ನಿರಸಕ ಉತ್ಸವ ವಾರ್ಷಿಕ ತ್ರಿವಿಕ್ರಮಸ್ವಾಮಿ ರಥೋತ್ಸವ ಮತ್ತು
ಕಲಿ ನಿರಸಕ ಪಾರಾಯಣಗ್ರಂಥ, ಆಖ್ಯಾನ ಇವೆರಡನ್ನೂ ಏರ್ಪಡಿಸಿ ಶ್ರೀವಾದಿರಾಜರು ದೇವಕಾರ್ಯ
ವನ್ನು ಸಾಧಿಸಿ ಸಂತೋಷಪಟ್ಟಿದ್ದಾರೆ. ಏಕೆಂದರೆ ಕಲಿಯನ್ನು ತಬ್ಬಿಕೊಂಡು ಯಾವ ಸಾಧನೆ
ಮಾಡಿದರೂ ಸಿದ್ಧಿಯಾಗುವುದಿಲ್ಲ.

ಅಧ್ಯಾಯ ೪

ಗುರುರಾಜರಿಂದ ಆದ ವಿಶೇಷ ದೇವಕಾರ್ಯ

1. ಇನ್ನೊಂದು ವಿಧವಾಗಿಯೂ ಇದು ದೈವಿಕ ಗ್ರಂಥ. ದ್ರೌಪದೀ ದೇವಿಯು ತನ್ನ ಅವತಾರ ಕಾಲದಲ್ಲಿ ತನ್ನ ದೇಹದಲ್ಲಿ ಇನ್ನೂ ನಾಲ್ಕು ಸ್ತ್ರೀ ದೇವತೆಗಳನ್ನು ಇಟ್ಟುಕೊಂಡು ಅವರುಗಳ ಪಾರಬ್ಧವನ್ನು ಪರಿಹರಿಸಿ ಅವರುಗಳನ್ನು ಉದ್ಧರಿಸಿದಂತೆ, ವಾದಿರಾಜ ಗುರುಗಳೂ ಕೂಡಾ ತಮ್ಮ ಅವತಾರ ಕಾಲದಲ್ಲಿ ಅನೇಕ ಭಾವಿ ಗರುಡ, ರುದ್ರ, ದಿಕ್ಪಾಲಕಾದಿ ದೇವತೆಗಳ ಪಾರಬ್ಧ ಪರಿಹಾರಕ್ಕೆ ಒಪ್ಪಿಕೊಂಡಿದ್ದರೆಂದು ಕಾಣುತ್ತದೆ. ಅವರುಗಳಲ್ಲಿ ಮುಖಂಡನೇ ಏಡಮೂಕನಾಗಿ ಹುಟ್ಟಿ ಮಠಕ್ಕೆ ಬಂದು ಗುರು ಸೇವೆ ಮಾಡುತ್ತಾ ಸ್ಥಿತನಾದನು. ಅವನಿಗೆ ಗುರುಗಳಾಗಿ ಭಾವಿ ಗರುಡನಾಗುವ ವೇದನಿಧಿಗಳು ವಾದಿರಾಜರ ಶಿಷ್ಯರೂ ಮತ್ತು ಪ್ರಶಿಷ್ಯರೂ ಆದವರು, ಇತರರೂ ಅಲ್ಲಲ್ಲಿ ಹುಟ್ಟಿ ವಾದಿರಾಜ ಸ್ವಾಮಿಗಳಲ್ಲಿ ಭಕ್ತಿ ಮಾಡುತ್ತಾ ಜನ್ಮ ಜನ್ಮದಲ್ಲೂ ಏಡಮೂಕ ದ್ವಿಜನನ್ನು ಸಂಬಂಧ ಮಾಡಿಕೊಂಡು ಋಣಾನುಬಂಧವುಳ್ಳವರಾಗಿದ್ದರು. ಭೂತರಾಜರಾಗಿ ಭಾವಿ ರುದ್ರರು ವೃಂದಾವನಾಚಾರ್ಯರಿಗೆ ಉಪಕಾರ ಶೀಲರಾದರು. ಇವರೆಲ್ಲರ ಉದ್ಧಾರಕ್ಕಾಗಿಯೂ ವೃಂದಾವನಾಖ್ಯಾನವು ಪ್ರಚಾರವಾಗಿದೆ. ಅವರುಗಳು ಇದಕ್ಕೆ ಮುಖ್ಯ ಶ್ರೋತೃಗಳು. ಅಧ್ಯಾಯ VI-53 " ಮತ್ಸುತಸ್ಯ ಸುವಿಶ್ವಾಸಂ ಪಶ್ಯತ್ವಂ ವಿಪ್ರಸತ್ತಮ ||53|| ಸೀತಾಪತೇಶ್ಚ ಭಕ್ತಸ್ಯ ವ್ಯಾಸಶೇಷಸ್ಯ ಚೈವ ಹಿ | ಚತುರ್ಣಾಮಪಿ ವಿಶ್ವಾಸೇ ಸ್ವರ್ಣಲಾಭಂ ಯಥಾ ತಥಾ ||54|| ಕರ್ಣಶ್ರಾವ್ಯಂಭವತ್ಯೇವ ವರ್ಣಾತ್ಮಕಮಿದಂ ವಚಃ | ಮತ್ಪ್ರೇರಿತಾಃ ಸುವಿಶ್ವಾಸಂ ಕುರ್ವಂತ್ಯೇತೇ ನ ಸಂಶಯಃ ||55|| ಪಶ್ಯಂತಿ ವಿಶ್ವಾಸ ಫಲಂ ಐಹಿಕಾಮುಷ್ಮಿಕಂ ಚ ಯತ್ | ವರ್ಣಾತ್ಮಕಮಿತಿ ಪ್ರೋಕ್ತಂ ಕರ್ಣೇನ ಶೃಣು ನಂದನ ||56 || ಸ್ವರ್ಣ ವರ್ಣ ಶಿಲಾಯಾಂ ಮೇ ಚೀರ್ಣೇನ ಲಿಖಿತಂ ಕುರು| ವರ್ಣಾನಾಂ ಬ್ರಾಹ್ಮಣಾದ್ಯಾನಾಂ ಕರ್ಣಶ್ರಾವ್ಯಂ ತಥಾ ಕುರು ||57|| " (ಭಾವ :– ವಿಪ್ರನೇ ! ನಾಸ್ತಿಕರು ನಿಂದಿಸಿದರೆ ಹೆದರಬೇಡ. ವೇದನಿಧಿಗಳು ವಿಶ್ವಾಸವುಳ್ಳವರು. ಅವರನ್ನು ಭಜಿಸು. ಹಾಗೇ ಭಕ್ತ ಸೀತಾಪತಿ, ವ್ಯಾಸಭಕ್ತ ನಾಮಕ ಲಕ್ಷ್ಮೀಪತಿ, ಶೇಷ – ಇವರುಗಳ ವಿಶ್ವಾಸವನ್ನು ನೋಡು. ಈ ನಾಲ್ವರ ಕಿವಿಗೆ ಬಿದ್ದರೆ ಸ್ವರ್ಣಲಾಭವಾದಂತೆ ದೇವಕಾರ್ಯವಾಗುತ್ತದೆ. ನನ್ನ ಪ್ರೇರಣೆಯಿಂದ ಅವರಿಗೆ ಇದು ಕರ್ಣಶ್ರಾವ್ಯವಾಗುತ್ತದೆ. ಗ್ರಂಥ ವಿಶ್ವಾಸಫಲವನ್ನು ಇಹದಲ್ಲೂ, ಪರದಲ್ಲೂ ಹೊಂದುತ್ತಾರೆ. ನೀನು ಜನ್ಮಾಂತರದಲ್ಲಿ ಕಿವಿಯಿಂದ ಕೇಳು. ಕಲ್ಲಿನ ಮೇಲೆ ಚೀರ್ಣದಿಂದ ಕೆತ್ತಿಸು. ಬ್ರಾಹ್ಮಣಾದಿ ನಾಲ್ಕು ವರ್ಣದ ಭಕ್ತರನ್ನು ಶ್ರವಣ ಮಾಡಿಸಿ ಆನಂದ ಪಡಿಸು) ತಥಾ ಚ ಇದು ಗುರುರಾಜರು ಲೋಕೋಪಕಾರತನದಿಂದ ವಿಪ್ರನ ದ್ವಾರಾ ಅವನೂ ಅವನ ಸಂಬಂಧಿ ದೇವತೆಗಳೂ ಇತರ ಸಾಮಾನ್ಯ ಭಕ್ತರೂ ಪ್ರಾರಬ್ಧ ಪರಿಹರಿಸಿ

ಕೊಂಡು ಸುಖಿಯಾಗಲೆಂದು ಪ್ರಕಾಶಪಡಿಸಿದ ಗ್ರಂಥ ಎಂದು ಸ್ವಲ್ಪ ವಿಮರ್ಶೆಯಿಂದಲೇ ತಿಳಿದು ಬರುತ್ತದೆ. 'ವಿಪ್ರನು ಪ್ರಧಾನ ಪ್ರಚಾರಕನು, ಅವನನ್ನೂ ರಕ್ಷಿಸು' ಎಂದು ವೇದವ್ಯಾಸರೇ ವಾದಿರಾಜರಿಗೆ 4-89 ರಿಂದ 92 ರಲ್ಲಿ ಹೇಳಿದ್ದಾರೆ.

2. ಇದು ಹೇಗೆ ಸಾಧನೆಮಾಡಿ ಅಧಿಕಾರಿಗಳನ್ನು ಸಂಸಾರದಿಂದ ದಾಟಿಸುತ್ತದೆ ? ಮಾಧ್ವ ಶಾಸ್ತ್ರದ ಯೋಗವನ್ನು ಸಫಲವಾಗುವಂತೆ ಹೇಗೆ ಮಾಡಂತ್ತದೆ ? ಇತ್ಯಾದಿ ಮರ್ಮಗಳನ್ನು ಅಲ್ಲಲ್ಲಿ ಗ್ರಂಥದಲ್ಲಿ ಸೂಚಿಸಿದ್ದಾರೆ. ಈ ವಿಷಯದಲ್ಲಿ ತಮ್ಮ ಅವತಾರ ಸಮಾಪ್ತಿಯಾದ ಮೇಲೆ ತಮ್ಮ ಪ್ರತಿನಿಧಿಯಾಗಿ ವಾದಿರಾಜ ಸ್ವಾಮಿಗಳು ತಮ್ಮ ಈ ಗ್ರಂಥವನ್ನು ಉಪಯೋಗಿಸಿಕೊಂಡು ಭಕ್ತರ ವಿಘ್ನ ಪರಿಹಾರಮಾಡಿ ಮಧ್ವಶಾಸ್ತ್ರದ ಅಭ್ಯಾಸ ಮಾಡಿಸಿ, ದುಷ್ಟ ಸಂಗವನ್ನು ದೂರಮಾಡಿಸಿ, ಕಲಿಯನ್ನು ಹೊರಗೆ ಹಾಕಿಸಿ ರಕ್ಷಿಸುತ್ತಾರೆಂದು ಅನೇಕ ಜ್ಞಾನಿಕೃತ ಗ್ರಂಥಗಳಲ್ಲಿದೆ. ಅವೆಲ್ಲವನ್ನೂ ವಾದಿರಾಜ ಗುಣರತ್ನಮಾಲೆಯಲ್ಲಿ ಸೇರಿಸಿ ಷಟ್ಪುರಾಚಾರ್ಯರು ಕಥೆಯಂತೆ ಹೇಳಿದ್ದಾರೆ. ಅವರ ಸಿದ್ಧಾಂತವೂ ಇದೇನೇ. ಈ ಕಲಿಗಾಲದಲ್ಲಿ ನಿರ್ವಿಘ್ನ ಸಾಧನೆಮಾಡಿಕೊಳ್ಳಬೇಕಾದರೆ, ವಾದಿರಾಜ ಗುರುಗಳನ್ನೇ ಶರಣು ಹೊಂದಬೇಕು. "ಮಧ್ವಾಚಾರ್ಯರಲ್ಲಿ ಭಕ್ತಿ ಮಾಡುತ್ತೇವೆ. ಅವರ ಶಾಸ್ತ್ರ ನಮಗೆ ಸಾಕು. ಇವರಿಂದೇನು ?" ಎನ್ನಬಾರದು. "**ತದ್ಧೇತೋರೇವ ತದ್ಧೇ ತುತ್ವೇ ಮಧ್ಯೇ ಕಿಂ ತೇನ**" ಎನ್ನ ಬಾರದು. ವಾದಿರಾಜ ಗುರುಗಳ ಅನುಗ್ರಹ ಸಂಪಾದಿಸಿ ಬಂದವರಿಗೇನೇ ಸಿದ್ಧಿಪ್ರದವಾದ ತಮ್ಮ ಪ್ರಸಾದ, ಅನ್ಯಥಾ ದುಃಖವೆಂದು ಮಧ್ವಾಚಾರ್ಯರದ್ದೇ ಅಭಿಪ್ರಾಯ. ಕೃಷ್ಣ ರೂಪದಿಂದಲೇ ನರಕ ಮಥನಮಾಡಿ, ದೇವ ರಕ್ಷಣೆ ಮಾಡಬೇಕೆಂದು ವರಾಹ ಸ್ವಾಮಿಯ ಅಭಿಪ್ರಾಯ ಇತ್ತು. ಸಾಲ್ವನನ್ನು ಕೃಷ್ಣನೇ ಕೊಲ್ಲಲೆಂದು ಪರಶುರಾಮರು ಕೊಲ್ಲಲಿಲ್ಲ. ಇಲ್ಲೂ ಹಾಗೆ ಎಂದು ತಿಳಿದರೆ ಕಾಲೋಪಾಧಿಕವಾದ ದೇವ ಮರ್ಮಗಳಿಗೆ ಬೆಲೆಕೊಟ್ಟು ಜಾಣರೆಂದು ಕರೆಯಲ್ಪಡುತ್ತಾರೆ. ಆದ್ದರಿಂದ ಸೋದೆ ಕ್ಷೇತ್ರ, ಸೋದೆ ಮಠದ ಗುರುಗಳು, ವೃಂದಾವನ – ಇವೆಲ್ಲವೂ ಪೂಜ್ಯ. ಸ್ವಾಪ್ನ ವೃಂದಾವನಾಖ್ಯಾನ ಪ್ರವಚನ ಪಾರಾಯಣಾದಿಗಳೆಲ್ಲವೂ ಅಪರೋಕ್ಷಕ್ಕೆ ಸಾಧನವಾಗುತ್ತವೆ. "ಶ್ರುತ್ಯುಕ್ತ ಪ್ರಕಾರವೇ ನಾವು ಅನುಷ್ಠಾನ ಮಾಡುತ್ತೇವೆ. ಇನ್ನು ವಿದ್ಧ ಏಕಾದಶಿ ಪರಿತ್ಯಾಗ, ಅವಿದ್ಧಾನುಷ್ಠಾನದ ನಿಯಮ ಇವೇ ಮೊದಲಾದ ನೂತನ ಗೊಂದಲಗಳೆಲ್ಲಾ ನಮಗೇಕೆ ?" ಎಂದು ಕೇಳುವವನು ಹಾಸ್ಯಾಸ್ಪದನಾಗುವನು. ಹಾಗೇ ಪ್ರಕೃತ ಕಲಿಯುಗದಲ್ಲಿ ಮಧ್ವಾಚಾರ್ಯರೇ ಸಾಕು; ವಾದಿರಾಜರ ಋಜುತ್ವ ಶೋಧನೆ, ನಿರ್ಣಯ, ಉಪಾಸನೆಗಳು ಏತಕ್ಕೆ ಎಂಬುವವನು ದೇವತೆಗಳ ಸಭೆಯಲ್ಲಿ ಹಾಸ್ಯಾಸ್ಪದನಾಗುವನು. ಸ್ವಾಪ್ನ ವೃಂದಾವನಾಖ್ಯಾನವು ಪ್ರಮಾಣ ಗ್ರಂಥ. ಶಿಷ್ಟಕೃತ ಸಕಲ ಸಂಶಯ ಪರಿಹಾರಕ. ಪೂರ್ವೋಕ್ತ ಸಂಶಯಗಳಿಗೆಲ್ಲಾ ಅದರ ಪಾರಾಯಣ, ಪ್ರವಚನಗಳೇ ಔಷಧಿ. ಬ್ರಹ್ಮಾಂಡದ ಸರ್ವ ಅಧಿಕಾರಿಗಳೂ ಅವರ ದಯೆಯನ್ನು ಸಂಪಾದಿಸಿಯೇ ಕೃತಾರ್ಥರಾಗಬೇಕು. ಅದೇ ಮಾಂಡವ್ಯ, ಶಾಂಡಿಲ್ಯ, ಕೌಂಡಿನ್ಯ ಮತ್ತು ಉದ್ಧಾರಕ ಗುರು – ಹೀಗೆ ಚತುರ್ವಿಧ ರಚಿತವಾದ ಅನ್ನವೇ ಅವರಿಗೆ ಪ್ರಿಯ. ಅದೇ ಸ್ವಾಪ್ನ ವೃಂದಾವನಾಖ್ಯಾನ (VII-93 94, 95). ಅದರ ಶ್ರವಣ, ಮನನಗಳಿಂದ ಅವರಿಗೆ ಭೋಜನ ಸಂತೋಷವಾಗುತ್ತದೆ.

3. ಏವಂಚ ಸ್ವಾಪ್ನ ವೃಂದಾವನಾಖ್ಯಾನವನ್ನೂ, ವಾದಿರಾಜ ಸ್ವಾಮಿಗಳನ್ನೂ, ಉದಾಸೀನ ಮಾಡಿ ಸಾಧನೆ ಮಾಡಲು ಹೋದರೆ ಅಧಿಕಾರ ಪ್ರಯೋಜಕ ಗುಣಗಳನ್ನು ಕಳೆದುಕೊಳ್ಳುತ್ತಾನೆ. ಸತ್ಸಂಗಾದಿ ಹೀನನಾಗಿ ವಿಘ್ನಪ್ರಭಾವದಿಂದ ವಿದ್ಯಾಸಂಪಾದನೆಯಾಗದೆ ಸಾಯುತ್ತಾನೆ. ವಿದ್ಯಾ ಬಂದರೂ ದುರ್ವಿನಿಯೋಗಾದಿಗಳಿಂದ ಅಥವಾ ಅನಧಿಕಾರಿ ಸಂಗದಿಂದ ಪತಿತನಾಗುತ್ತಾನೆ. ಸಿದ್ಧಿಯಾಗುವುದು ಎಲ್ಲಿಂದ ಬಂತು ? ತದರ್ಥವಾಗಿಯೇ (ತಮ್ಮ ಭಕ್ತರನ್ನು ಸುಮಾರ್ಗದಲ್ಲಿರಿಸುವುದಕ್ಕೇ) ಜಗದ್ಗುರುತ್ವವನ್ನು ಬ್ರಹ್ಮ ವಾಯುಗಳು ಗುರುರಾಜರಿಗೆ ಕೊಟ್ಟಿರುತ್ತಾರೆ. ವಾದಿರಾಜರೇ ಹೇಳುತ್ತಾರೆ. ಅಧ್ಯಾಯ VII–73, 74, 75, 76, 77 ಮತ್ತು 78 "**ವಿಶ್ವಾಸಿನಾಂ ಸಮಾಜೀಚ ನ ಪಶ್ಯಾಮಿ ಹಿ ತಾದೃಶಂ । ಯಾದೃಶಂ ವ್ಯಾಸ ಭಕ್ತೇಶಂ ತಥಾ ಸೀತಾಪತೇರ್ಮತಂ ॥72॥ ತಯೋರ್ವಿಶ್ವಸತೋರ್ವಿಶಾಧೀಶಃ ಶ್ರೀಶೋತ್ರ ಶೋಭನಂ । ದಾಸ್ಯತ್ಯ ಸಂಶಯಂ ಪಶ್ಯ ಮತ್ಪ್ರಸಾದಾತ್ಸ ವಿಶ್ವಕೃತ್ ॥73॥ ಗುರು ಪ್ರಸಾದತಃ ಕಸ್ಯ ಫಲಂ ನಸ್ಯಾದವಶ್ಯತಃ। ಕರಿಷ್ಯತ್ಯೇವ ತತ್ಸ್ವಾಮೀ ತತ್ಪ್ರಸಾದಾನುಸಾರತಃ ॥74॥ ಪ್ರಸಾದಂ ಮತ್ಪ್ರಸಾದೇನ ಪ್ರಸಾದಂ ಸ ಕರಿಷ್ಯತಿಃ । ಕಃ ಪ್ರಸಾದಮೃತೇ ಕ್ವಾಪಿ ಪ್ರಸೀದತಿ ನಸೀದತಿ ॥75॥ ತಸ್ಮಾದ್ಗುರೌ ಸದಾ ಧೀರ ರತಿಂ ಕುರು ಹರೌ ಪ್ರಿಯ । ಗುರುದ್ವಾರಾ ಪ್ರಸನ್ನಸನ್ ಭರತಿ ತ್ವಾಂ ರಮಾಪತಿಃ ॥76॥ ಶುದ್ಧ ಸದ್ಧರ್ಮ ಸಿದ್ಧಾನಾಂ ಪದ್ಧತಿಂ ಬುದ್ಧಿಮಾನ್ ಕುರು । ಕ್ರುದ್ಧೋ ಮದ್ಧರ್ಮ ರುದ್ಧಾನಾಂ ಪದ್ಧತೌ ಸ್ತಬ್ಧತಾಂ ಕುರು ॥77॥ ಸಿದ್ಧ ಮದ್ಧರ್ಮ ಪದ್ಧತ್ಯಾ ಶ್ರದ್ಧಾವಾನ್ ಮಧುಸೂದನಂ । ಆರಾಧಯ ಬುಧಾರಾಧ್ಯಂ ವಿಬುಧೇಶ್ವರ ಬುದ್ಧಿಗಂ ॥78॥** ಅರ್ಥ :- ಅವತಾರಿಕಾ :- ''ಭವಿಷ್ಯತ್ಕಾರ್ಯ ಸಿದ್ಧಿಂ ಭಗವತ್ಕಥಾಂ ವಕ್ಷ್ಯೇ ಇತ್ಯುಕ್ತಂ ಭವತಿ '' ಎಂದು 49 ನೇ ಶ್ಲೋಕಕ್ಕೆ ಶ್ರೀ ಮಂಪ್ಪಣ್ಣಾಚಾರ್ಯರ ಅವತಾರಿಕೆ ಇದೆ. "**ತಿಥೌ ತಿಥೌ ಮಾಕೃಥಾಸ್ತ್ವಂ ವ್ಯಥಾಂ ತಾತ ವೃಥಾ ವೃಥಾ। ತಥಾ ತಥಾ ಭವತ್ಯೇವ ಹರಿಃ ಕರ್ತಾ ಯಥಾ ಯಥಾ ॥49॥ ಹರೇರಾಜ್ಞಾಂ ಪುರಸ್ಕೃತ್ಯ ಸವಿಧಿರ್ವರ್ತತೇ ವಿಧೌ । ಹರೇಶ್ಚ ಹರತೇ ಸರ್ವಂ ಸ್ವಯಂ ಚಾಸ್ಯ ಸ್ಥಿತೌ ತಥಾ ॥50॥**" ಎಂದು ಬ್ರಹ್ಮೋಪದೇಶ ಮಾಡಿ ಅಂಥ ಶ್ರೀ ಹರಿಯ ಆಜ್ಞಾನುಸಾರ ತಾವು ಜಗದ್ಗುರು ಕಾರ್ಯನಿರ್ವಾಹಕರಾದರೆಂದೂ; ಗಂಧರ್ವರು ತಮ್ಮ ಸ್ವರೂಪ ತಿಳಿಯಲಾರದೇ, ದೇವರ ಸೂಚನೆಯನ್ನು ಅರ್ಥ ಮಾಡಿಕೊಳ್ಳದೇ, ವಾದಿರಾಜರನ್ನು ಸ್ವಲ್ಪ ಮನಸ್ಸಿನಿಂದ ಅವಜ್ಞೆ ಮಾಡಿದ್ದಕ್ಕೆ ಕ್ರೂರ ಶಾಪ ಹೊಂದಿ ಭೂಮಿಯಲ್ಲಿ ಹುಟ್ಟಿ ಗುರುರಾಜರ ಅನುಗ್ರಹದಿಂದಲೇ ಸುಖ ಹೊಂದಿದರೆಂದೂ ಕಥೆ ಹೇಳಿದರು. ದುರಹಂಕಾರದ ಫಲ ಇಂತಹುದು ಎಂದು ವರ್ಣಿಸಿದರು. ಗುರೂಕ್ತಿಯಲ್ಲಿ ಅವಜ್ಞೆ ಬೇಡ ಎಂದು 69ರಲ್ಲಿ ಸ್ಪಷ್ಟವಾಗಿಯೂ ಹೇಳಿದರು. ಗುರೂಕ್ತಿಯಲ್ಲಿ ವಿಶ್ವಾಸವಿದ್ದರೆ ಚೆನ್ನಾಗಿ ಗುರುಗಳ ಆಶೀರ್ವಾದ ಫಲಿಸುತ್ತದೆ. ವ್ಯಾಸಭಕ್ತ, ಸೀತಾಪತಿ ಹಾಗಿದ್ದಾರೆ. ಗುರು ಪ್ರಸಾದ ಅವರಲ್ಲಿ ಚೆನ್ನಾಗಿ ಕಾರ್ಯವನ್ನು ಮಾಡುತ್ತದೆ ಎಂದು ಹೇಳಿ ಈ ವಿಷಯದಲ್ಲಿ ಸಾರ್ವಜನಿಕ ಉಪದೇಶವನ್ನೇ ಮಾಡುತ್ತಾರೆ ॥72॥ ತಥಾಹಿ :– ವಿಶ್ವಾಸಮಾಡುವ ಸೀತಾಪತಿ, ವ್ಯಾಸ ಭಕ್ತರಿಗೆ ನನ್ನ ಪ್ರಸಾದದಿಂದ ಶುಭವನ್ನು ಶ್ರೀ ಹರಿಯು ಮಾಡಿಯೇ ಮಾಡುತ್ತಾನೆ. ವಿಪ್ರನೇ ನೀನು ಅದನ್ನು ನೋಡು ॥73॥

ಗುರು ಪ್ರಸಾದದಿಂದ ಅವಶ್ಯವಾಗಿ ಆಗಿಯೇ ಆಗುವ ಫಲವು ಯಾರಿಗೆ ಆಗಿಲ್ಲ ತೋರಿಸು. ಹಾಗೆಲ್ಲೂ ವ್ಯತ್ಯಾಸವಾಗಿ ಆಗಿಲ್ಲ. ಆ ಸ್ವಾಮಿಯು ನನ್ನ ಪ್ರಸಾದಾನುಸಾರವಾಗಿ ಭಕ್ತರಿಗೆ ತನ್ನ ಅನುಗ್ರಹವನ್ನು ಮಾಡಿಯೇ ಮಾಡುತ್ತಾನೆ. (ನನ್ನ ಪ್ರಸಾದವು ಆಗಿಯೇ ತೀರಬೇಕೆಂದು ಈ ಏಳನೇ ಅಧ್ಯಾಯದ ಮೊದಲು 10 ಶ್ಲೋಕಗಳಲ್ಲಿ ತೋರಿಸಿ ಬಿಟ್ಟಿದ್ದಾರೆ.) ॥74॥ ನನ್ನ ಪ್ರಸಾದವು ಆಗದೆ ಅವನು ಯಾವನು ಭಗವತ್ಪ್ರಸಾದವನ್ನು ಹೊಂದಿದ್ದಾನೆ ? ಅವನು ಯಾವನು ದುಃಖಿಯಾಗದೆ ಇದ್ದಾನೆ, ಹೇಳು ? ॥75॥ ಹೀಗೆ ನನ್ನ ಪ್ರಸಾದವಿಲ್ಲದಿದ್ದರೆ ದುಃಖವು ತಪ್ಪುವುದಿಲ್ಲವಾದ್ದರಿಂದ ಎಲೈ ಬುದ್ಧಿವಂತನಾದ ಬ್ರಾಹ್ಮಣನೇ ! ಪ್ರಿಯನೇ ! ನೀನು ಸದಾ ಗುರುವಾದ ನನ್ನಲ್ಲಿ ಮತ್ತು ಶ್ರೀ ಹಯಗ್ರೀವ ಸ್ವಾಮಿಯಲ್ಲಿ ರತಿಯನ್ನು ಮಾಡು. ಗುರುದ್ವಾರಾ ಪ್ರಸನ್ನನಾದ ರಮಾಪತಿಯು ನಿನ್ನನ್ನೂ ಭರಣ ಮಾಡುತ್ತಾನೆ. ॥76॥ ನೀನು ಶುದ್ಧ ಮಾನಸ್ಕನಾಗಿ ಸದ್ಧರ್ಮದಲ್ಲಿ ಸಿದ್ಧರಾದ ಋಜುಗಳ ಪದ್ಧತಿಯನ್ನು ನಿನ್ನ ಬುದ್ಧಿಬಲದಿಂದಲೇ ತಿಳಿದುಕೊಂಡು ಅನುಸರಿಸು. ಆದ್ದರಿಂದಲೇ ನನ್ನ ಧಾರಣಕಾರ್ಯದ ಶಾಸನಗಳನ್ನು ಮೀರಿದ ಜನರಲ್ಲಿ ಕ್ರೋಧ ತಾಳಿ ಅವರ ವಿಷಯದಲ್ಲಿ ಅನಮ್ರನಾಗಿರು. ಮತ್ತು ಅವರ ಚಟುವಟಿಕೆಯನ್ನು ಸ್ತಂಭನ ಮಾಡಿಬಿಡು ॥77॥ ಸಿದ್ಧಿಗೆ ಕಾರಣವಾದ ನನ್ನ ಧರ್ಮ ಪದ್ಧತಿಯಲ್ಲಿ ಎಂದರೆ ನನ್ನಲ್ಲಿ ಶರಣಾಗತನಾಗಿ ನನ್ನ ಅನುಗ್ರಹ ಸಂಪಾದಿಸಿ ಮಧ್ವ ಗುರುಗಳನ್ನು ಸೇವಿಸಿ ಶ್ರವಣಾದಿಗಳನ್ನು ಮಾಡುವುದೆಂಬ ಮಾರ್ಗದಲ್ಲಿ ಶ್ರದ್ಧೆಯುಳ್ಳವನಾಗು. ಹಾಗೆಯೇ ಮಧು ಘಾತಕ ಶ್ರೀ ಲಕ್ಷ್ಮೀ ಹಯಗ್ರೀವ ಸ್ವಾಮಿಯನ್ನು ಆರಾಧಿಸು. ದೇವ ಶ್ರೇಷ್ಠ ಹನುಮ, ಭೀಮ, ಮಧ್ವಾಂತರ್ಗತನಾದ ವರಾಹಾಭಿನ್ನ ಗೋಪಾಲಕೃಷ್ಣನನ್ನು ಆರಾಧಿಸು. ಅದೇ ಈಗ ಮುಕ್ತಿಗೆ ಸೋಪಾನ ಎಂದರ್ಥ ॥78॥. ಆದ್ದರಿಂದ ಋಜುಗುರುಗಳಾದ ವಾದಿರಾಜರಲ್ಲಿ ಭಕ್ತಿ ಮಾಡಿ ಸಾಧನೆ ಮಾಡಿಕೊಳ್ಳಬೇಕೆಂದಿರುವ ಮುಮುಕ್ಷುಗಳಿಗೆ ಸ್ವಾಪ್ನವೃಂದಾವನಾಖ್ಯಾನವು ಒಂದು ಕಲ್ಪವೃಕ್ಷ. ಅದನ್ನು ಉದಾಸೀನ ಮಾಡಿ ಪ್ರಯತ್ನಿಸುವವನಿಗೆ " ಅಶುಭಂ ಭವತ್ಯೇವ " ಅಮಂಗಳಗಳೂ ವಿಘ್ನಗಳೂ ಜನ್ಮವನ್ನೇ ವ್ಯರ್ಥ ಮಾಡುತ್ತವೆಂದು ಬಹು ಪ್ರಮಾಣಗಳಿವೆ. ದ್ವಿತೀಯಾಧ್ಯಾಯದ ಕೊನೆಯ ಶ್ಲೋಕಗಳು ವಾದಿರಾಜರ ವೃಂದಾವನವನ್ನು ಸೇವಿಸದವನ ತಪಸ್ಸೆಲ್ಲವೂ ವ್ಯರ್ಥವೆಂದೇ ಹೇಳುತ್ತವೆ.

ಅಧ್ಯಾಯ ೫

ಉತ್ತಮ ಗ್ರಂಥದ ಅವಿಶ್ವಾಸದಿಂದ ಹಾನಿ

ಹೀಗೆ ದೇವತಾಕಾರ್ಯ ನಿರ್ವಾಹಾರ್ಥವಾಗಿ ಸಾಧಕರ ಸೌಕರ್ಯಕ್ಕಾಗಿಯೇ ರಚಿತವಾದ ಮಹಾಗ್ರಂಥವಾದ್ದರಿಂದಲೂ, ಅಪ್ತಿವಿಶಿಷ್ಟವಾದ ಹನ್ನೊಂದನೆಯ ಗುಂಪಿನ ಶಾಸ್ತ್ರಗ್ರಂಥವಾದ್ದರಿಂದಲೂ, ಪಾಶುಪತಾದಿ ಭಿನ್ನ ಸ್ವತಃ ಪ್ರಮಾಣ ಮಾಧ್ವ ಗ್ರಂಥವಾದ್ದರಿಂದಲೂ, ಫಲೋಪಲಬ್ಧಿಯಿಂದ ಶಂಕೆಗೇ ಆಸ್ಪದವಿಲ್ಲದ ಪ್ರಮಾಣತಮ ಗ್ರಂಥವಾದ್ದರಿಂದಲೂ, ಅದರಿಂದ ಪ್ರಾಪ್ತವಾದ ಫಲವೂ ಮಹತ್ವವುಳ್ಳದ್ದಾದ್ದರಿಂದಲೂ, ಮಹಾಜನ ಪರಿಗ್ರಹೀತವಾಗಿ ವೃಂದಾವನಾಚಾರ್ಯ ಶಿಷ್ಯರಿಂದಲೇ ವ್ಯಾಖ್ಯಾತವಾಗಿರುವುದರಿಂದಲೂ, ಸ್ವಾಪ್ನವೃಂದಾವನಾಖ್ಯಾನವು ಸಜ್ಜನರಿಂದ ಆದರಣೀಯವೇ ಸರಿ. ಸದರೀ ಗ್ರಂಥವನ್ನು ಆದರ ಮಾಡದಿದ್ದರೆ ಪುರುಷಾರ್ಥ ಹಾನಿಯೂ, ದುರ್ಗತಿಯೂ ಸಹ ತಪ್ಪುವುದಿಲ್ಲವೆಂದು ಆ ಶಾಸ್ತ್ರಗ್ರಂಥವೇ ಹೇಳುತ್ತದೆ. ಒಂದೆರಡು ವಾಕ್ಯಗಳನ್ನು ಉದಾಹರಿಸುತ್ತೇನೆ. ಅಧ್ಯಾಯ III 79 "ಮತ್ಕೃತೌ ಯಸ್ಯ ವಿಶ್ವಾಸೋ ನಾಸ್ತಿ ತಸ್ಯ ಯಶಃ ಶ್ರಿಯಃ। ಆಯುಷ್ಯಂ ಸ್ರವತೇ ಭಿನ್ನ ಘಟಾಂತಸ್ಥೋದಕಂ ಯಥಾ"॥ ಅಧ್ಯಾಯ V-I "ಅಸ್ಯಾಂ ಮಮ ಕೃತೌ ಯಸ್ಯ ವಿಶ್ವಾಸೋ ನಾಸ್ತಿ ದುರ್ಮತೇಃ। ತಸ್ಮಿನ್ ಅಶಾಸ್ಯತಾ ನ ಸ್ಯಾತ್ ವ್ಯಾಸಸ್ಯೈವಾಜ್ಞಯಾ ಹರೇಃ॥" ಅಧ್ಯಾಯ XIII-57 "ಇದಂ ವೃಂದಾವನಾಖ್ಯಾನಂ ಯೇ ನ ಶೃಣ್ವಂತಿ ಮಾನವಾಃ। ದಾನವಾನಾಂ ಗತಿಂ ಪ್ರಾಪ್ಯ ಶ್ವಾನ ಜನ್ಮಾನಿ ಯಾಂತು ತೇ"॥ (ಅರ್ಥ- ಅಧ್ಯಾಯ III-79 ನನ್ನ ಆಖ್ಯಾನ ಗ್ರಂಥದಲ್ಲಿ ಪ್ರಾಮಾಣ್ಯಬುದ್ಧಿಹೀನನ ಯಶಸ್ಸು, ಸಂಪತ್ತು, ಆಯುಸ್ಸುಗಳು ಒಡೆದ ಗಡಿಗೆಯ ದೆಸೆಯಿಂದ ನೀರು ಸೋರಿ ಹೋಗುವಂತೆ ಸ್ರವಿಸಿ ಹೋಗುತ್ತವೆ. ಅಧ್ಯಾಯ V-I ನನ್ನ ಆಖ್ಯಾನ ಕೃತಿಯಲ್ಲಿ ಪ್ರಾಮಾಣ್ಯ ಬುದ್ಧಿ ಇಲ್ಲದ ದುರ್ಮತಿಗೆ ಶ್ರೀವೇದವ್ಯಾಸರೂಪೀ ಶ್ರೀಹರಿಯ ಆಜ್ಞೆಯಿಂದ ಮೋಕ್ಷ ಸಿದ್ಧಿಗೆ ಕಾರಣವಾದ ಬ್ರಹ್ಮವಿದ್ಯೆಯ ಉಪದೇಶಕ್ಕೆ ಅನರ್ಹತ್ವವು ಪ್ರಾಪ್ತವಾಗುತ್ತದೆ. ಅಧ್ಯಾಯ XIII-57 ಯಾವ ಅಧಿಕಾರಿ ಮನುಷ್ಯರು ಈ ವೃಂದಾವನಾಖ್ಯಾನವನ್ನು ಅವಕಾಶ ಒದಗಿದಾಗಲೂ ಶ್ರವಣ ಮಾಡುವುದಿಲ್ಲವೋ, ಅವರು ದಾನವರಿಗಾಗುವ ದುರ್ಗತಿ ಹೊಂದಿ ಭೂಮಿಯಲ್ಲಿ ನಾಯಿ ಜನ್ಮಗಳನ್ನು ಹೊಂದಲಿ). ಇದಲ್ಲದೆ ಖಜುತ್ವ ಸಿದ್ಧಾಂತ ಪುಟ 168, 169, 170, ಗಳಲ್ಲಿ ಅನೇಕ ವಾಕ್ಯಗಳು ಅಂಕಿತವಾಗಿ ಕೆಲವು ಉದಾಹೃತವಾಗಿಯೂ ಇವೆ. ಯಮನ ಹೇಳಿಕೆಯೂ ಇದೆ. ಇವೆಲ್ಲವನ್ನೂ ನೋಡಿದರೆ ಸ್ವತಃ ಪ್ರಮಾಣ ಶಾಸ್ತ್ರಗ್ರಂಥವಾದ್ದರಿಂದಲೂ, ಮೂಲ ಶಾಸ್ತ್ರ ಬಾಧಕ ಹೀನವಾದ್ದರಿಂದಲೂ; ಸ್ವೋತ್ತಮ ದ್ರೋಹಕ್ಕೆ, ಸ್ವೋತ್ತಮಾವಜ್ಞೆಗೆ ಕೆಟ್ಟ ಫಲವು ತಪ್ಪುವದಿಲ್ಲವೆಂಬ ಯುಕ್ತಿಯಿಂದಲೂ ಆ ಗ್ರಂಥವನ್ನು ಆದರಮಾಡಬೇಕೆಂಬ ಬುದ್ಧಿ ಹುಟ್ಟುತ್ತದೆ. ಮಾಧ್ವ ವಾಚಕರಿಗೂ ಹಾಗೆಯೇ ಆಗುತ್ತದೆಂದು

ನಂಬಿದ್ದೇನೆ. **"ಗುಣಾನಾಂ ಅಲ್ಪತಾ ಜ್ಞಾನಂ ತತ್ಸ್ತ್ರೀರಾಗಃ ತಥೈವ ಚ । ತತ್ಪ್ರತೀಪೇಚಯಾ ಬುದ್ಧಿಃ ತ್ರಿವಿಧೋ ದ್ವೇಷಉಚ್ಯತೇ ॥"** ಎಂದು ಬೃಹದ್ಭಾಷ್ಯ ಪ್ರಮಾಣವಿದೆ. (ಮಹಾತ್ಮರ ದೊಡ್ಡ ಗುಣಗಳನ್ನು ತಿಳಿಯದೆ ಅಪ್ರಧಾನ ಗುಣಗಳನ್ನು ಮಾತ್ರ ತಿಳಿದು ಅವರನ್ನು ಅಸತ್ಕರಿಸುವುದು, ಅವರ ಸ್ತ್ರೀಜನರಲ್ಲಿ ಅನುರಾಗ, ಅವರ ಇಷ್ಟಕ್ಕೆ ವಿರೋಧವನ್ನು ಆಚರಿಸುವುದು ಇವು ಮೂರು ದೊಡ್ಡವರ ದ್ವೇಷವೆನ್ನಿಸುತ್ತದೆ.) ಯೋಗ್ಯವಸ್ತುವನ್ನು ಅಯೋಗ್ಯ ಎಂದು ನಿರ್ಣಯಿಸುವವನು ಸ್ಥೂಲ ಪಂಡಿತನೆಂದೂ, ಸೂಕ್ಷ್ಮಜ್ಞನಲ್ಲವೆಂದೂ ರಾಮಾಯಣದಲ್ಲಿ ತೋರಿಸಲ್ಪಟ್ಟಿದೆ. ವಿಭೀಷಣನು ಪ್ರತಿಪಕ್ಷದ ದ್ರೋಹಿ ಎಂದು ಎಲ್ಲಾ ಕಪಿಗಳೂ ಹೇಳಿದರು. ಸೂಕ್ಷ್ಮಜ್ಞನಾದ ಹನುಮಂತನು ಅವನ ಉಪಾದೇಯತ್ವವನ್ನು ನಿಶ್ಚಯಿಸಿ ರಾಮನಿಗೆ ವಿಜ್ಞಾಪಿಸಿಕೊಂಡನು. ಆ ನ್ಯಾಯವನ್ನು ಇಲ್ಲೂ ಅನ್ವಯಿಸಿದರೆ ಯಥಾರ್ಥ ನಿಶ್ಚಯವೇ ಫಲಿಸುತ್ತದೆ. ಹೆಚ್ಚು ಹೇಳುವುದೇನು ? ಮಹಾಭಾರತ ತಾತ್ಪರ್ಯ ನಿರ್ಣಯ 1-113 **" ತತ್ಪ್ರಮಾಣಸ್ಯ ನಿಂದಾಚ "** ಎಂದು ಯೋಗ್ಯ ಪ್ರಮಾಣದ ತಿರಸ್ಕಾರವನ್ನು ನವವಿಧ ದ್ವೇಷಗಳಲ್ಲಿ ಒಂದೆಂದು ತಿಳಿಸಿದ್ದಾರೆ. ಆಖ್ಯಾನ XVIII-72 ರಲ್ಲೂ ಅಖ್ಯಾನದಲ್ಲಿ ಸಂಶಯ ಪಟ್ಟರೆ ವಾದಿರಾಜರ ಅವಜ್ಞೆ ಮಾಡಿದಂತಾಗುತ್ತೆ; ಉತ್ತಮಾವಜ್ಞೆಯಿಂ ದೇವತೆಯನ್ನಾದರೂ ಸ್ವರ್ಗದಿಂದ ಕೆಳಕ್ಕೆ ತಳ್ಳಿಬಿಡುತ್ತೆ ಎಂದಿದೆ.

ಅಧ್ಯಾಯ ೬

ಸಫಲ ದೇವತೋಷಣವು ಹೇಗಿರಬೇಕು ?

1. ಅನೇಕರು " ನಾವು ವಾದಿರಾಜ ಸ್ವಾಮಿಗಳನ್ನು ದೊಡ್ಡ ಸ್ವಾಮಿಗಳೆಂದು ನಿಃಸಂಶಯವಾಗಿ ನಂಬಿದ್ದೇವೆ, ಹೇಳುತ್ತೇವೆ. ಋಜುತ್ವ ವಿಚಾರ ನಮಗೆ ಬೇಡ. ನಮಗೆ ಹಾನಿ ಎಲ್ಲಿ " ? ಎನ್ನುತ್ತಾರೆ. ಹಿಂದೆ ಅಧ್ಯಾಯ 4 ರಲ್ಲಿ ಒಂದು ರೀತಿಯಲ್ಲಿ ಹಾನಿ ತೋರಿಸಲಾಗಿದೆ. ಈಗ ವಾದಿರಾಜ ಸ್ವಾಮಿಗಳ ಭಾರತ ತಾತ್ಪರ್ಯ ನಿರ್ಣಯ ವಾಕ್ಯದಿಂದಲೂ ತಿಳಿಯಬಹುದು ಎಂದು ನಿರೂಪಿಸುತ್ತೇನೆ. XVII ನೇಯ ಅಧ್ಯಾಯ 135 ನೇ ಶ್ಲೋಕದಲ್ಲಿ " ನ ದೇವ ತೋಷಣಂ ವೃಥಾ " ಎಂದಿದೆ " ನ ದೇವ ತೋಷಣಂ ವೃಥೇತ್ಯತ್ರ ದೇವಾನಾಂ ತಾರತಮ್ಯಂ ಜ್ಞಾತ್ವಾ ಯತ್ತೋಷಣಂ ತದೇವ ದೇವ ತೋಷಣಂ | ಹಿರಣ್ಯಕಶಿಪು ರಾವಣಾದೀನಾಂ ಬ್ರಹ್ಮ ಶಿವಾದಿ ದೇವ ತೋಷಣಸ್ಯ ವೈಯರ್ಥ್ಯ ದರ್ಶನಾತ್ ಇತ್ಥಮೇವ ಅರ್ಥೋ ವಕ್ತವ್ಯಃ || " ಎಂದು ವಾದಿರಾಜರ ವ್ಯಾಖ್ಯಾನವಿದೆ. (ಅರ್ಥ :– ದೇವ ತೋಷಣವು ವ್ಯರ್ಥವಾಗುವುದಿಲ್ಲವೆಂದರೆ, ದೇವತೆಗಳ ತಾರತಮ್ಯವನ್ನು ತಿಳಿದು ಅವರವರ ಯೋಗ್ಯತಾನುಸಾರವಾಗಿ ಏನು ಸಂತೋಷ ಪಡಿಸೋಣವೋ ಅದೇ ದೇವತೆಗಳ ಸಂತೋಷ ಪಡಿಸುವಿಕೆ ಎನ್ನಿಸುತ್ತದೆ. ಏಕೆಂದರೆ ಹಿರಣ್ಯಕಶಿಪು ರಾವಣಾದಿಗಳ ಬ್ರಹ್ಮರುದ್ರಾದಿ ದೇವತಾ ತೋಷಣವು ವ್ಯರ್ಥವಾಗಿರುವುದೇ ಕಂಡಿದೆ.) ಆದ್ದರಿಂದ ಋಜುಗಳಾದ ವಾದಿರಾಜರನ್ನು ಸಾಮಾನ್ಯ ಜ್ಞಾನಿಗಳಂತೆ ತಿಳಿದು ಸೇವಿಸಿದರೆ ಸೇವೆಯು ಕೊನೆಗೆ ವ್ಯರ್ಥವಾಗುತ್ತದೆ. ಅಜ್ಞಾನಿ ಮಾಡಿದ ಸೇವೆಯು ಅತ್ಯಲ್ಪ ಫಲಕವೇ. ಪ್ರಮಾಣಗಳಿದ್ದಾಗಲೂ ನನಗೇನೂ ಗೊತ್ತಿಲ್ಲ, ನಾನು ವಿಚಾರ ಮಾಡುವುದಿಲ್ಲ ಎಂಬುದು ಬುದ್ಧಿ ಶಾಠ್ಯದ ಕೆಲಸ. ಶಕ್ತಿವಂಚನೆ ಮಾಡಬಾರದು. ನಿರವಕಾಶ ಸ್ವತಃ ಪ್ರಮಾಣ ಶಾಸ್ತ್ರದ ವಾಕ್ಯವು ಒಂದಾದರೂ ವಾದಿರಾಜರ ಋಜುತ್ವಕ್ಕೆ ವಿರೋಧಿಯಾಗಿ ಕಾಣಿಸಿಕೊಂಡಿಲ್ಲ. ಆದ್ದರಿಂದ ಸ್ವಾಪ್ನ ವೃಂದಾವನಾಖ್ಯಾನ ಗ್ರಂಥವು ಪ್ರಾಮಾಣಿಕವೇ ಸರಿ. ಅದನ್ನು ಸೇವಿಸಿ, ಸಂತೋಷ ಪಟ್ಟ ರಂಗಪ್ಪಾಚಾರ್ಯಾದಿಗಳನ್ನು ಮೀರಿಸಿದ ಪಂಡಿತರು ಯಾರು ಇಲ್ಲಿದ್ದಾರೆ ? ಆದ್ದರಿಂದ ವಾದಿರಾಜ ಗುರುವರ ಚರಿತಾಮೃತವನ್ನು ಅಭ್ಯಾಸಮಾಡಿ, ಗುರುರಾಜರ ಋಜುತ್ವವನ್ನು ಚೆನ್ನಾಗಿ ನಂಬಿ, ಸ್ವಾಪ್ನ ವೃಂದಾವನಾಖ್ಯಾನ ಪಾರಾಯಣ, ಏಕಾದಶ್ಯಾದಿ ನಿಯಮಗಳಿಂದ ವಾದಿರಾಜ ಗುರುಗಳ ತೋಷಣವನ್ನು ಸಂಪಾದಿಸಬೇಕು. [1] ಇದರ ಮೇಲೆ ವಾದಿರಾಜ ಋಜುತ್ವವನ್ನು ಬಚ್ಚಿಡಲು

---

1) ಈ ವಿವೇಕ್ಷೆಯಿಂದ " ವಾದಿರಾಜ ಸ್ತೋತ್ರ ಮಂಜರಿ " ರಚಿಸಿದ ನಿ. ಪ್ರಭಂಜನರು ತಪ್ಪು ಮಾಡಿದ್ದಾರೆ ಯಾವ ದೇವತೆಗೆ ಅಥವಾ ಗುರುವಿಗೆ ಯಾವ ಕಾಲದಲ್ಲಿ ಯಾವ ರೀತಿಯ ಸ್ತುತಿಯು ಇಷ್ಟವೋ ಅದನ್ನು ಮಾಡಿದರೆ ಅವರು ಒಲಿಯುತ್ತಾರೆ. ಅನ್ಯಥಾ ಆ ಸ್ತೋತ್ರ ನಿಷ್ಫಲವಾಗುತ್ತದ

ಸಾಧ್ಯವೂ ಅಲ್ಲ, 'ನಹಿ ಕಸ್ತೂರಿಕಾಮೋದಃ ಶಪಥೇನ ನಿವಾರ್ಯತೇ'; ವೇದ ವೇದ್ಯರು, ವೇದನಿಧಿಗಳು, ರಾಮಚಂದ್ರಾಚಾರ್ಯರು, ವೃಂದಾವನಾಚಾರ್ಯರು, ರಘುಪ್ರವೀರ ತೀರ್ಥರು, ಕೊಚ್ಚಿರಂಗಪ್ಪಾ-

---

ದುಪ್ಪಲ ಕೊಡುವುದೂ ಉಂಟೆಂದು ಪ್ರಮಾಣ ಕೊಟ್ಟಾಗಿದೆ. ಪ್ರಕೃತ ಮಧ್ವಾಚಾರ್ಯರು ಬಾಲ್ಯದಲ್ಲಿ ಸಾಮಾನ್ಯ ಸ್ತುತಿಗಳಿಗೆ ಒಲಿದು ಗುರು, ಮಿತ್ರಾದಿಗಳಿಗೆ ಅನುಗ್ರಹಿಸಿದರು. ಶ್ರೀಕೃಷ್ಣನು ಶ್ರೀದಾಮಾದಿ ಗೊಲ್ಲರ ಸಾಮಾನ್ಯ ಮಾತುಗಳಿಗೇ ಒಲಿದು ತಾಳವನವನ್ನು ಹೊಕ್ಕು ಅಸುರರನ್ನು ಕೊಂದು ಹಣ್ಣುಗಳನ್ನು ತಿನ್ನಲೂ ಒದಗಿಸಿದನು. ಆದರೆ ಮುಂದೆ ಮಧ್ವಾಚಾರ್ಯರು ವಾಯುಸ್ತುತಿಗೇ ವರಕೊಟ್ಟು ಅದರಿಂದ ಸ್ತುತಿಸಿದರೇನೇ ಚೆನ್ನಾಗಿ ಒಲಿಯುತ್ತಾರೆ ಎಂದು ತೋರಿಸಿದ್ದಾರೆ. ಶ್ರೀಕೃಷ್ಣನು ಈಗ ಗೀತಾದಿ ಸ್ತುತಿಗಳಿಂದಲೇ ಚೆನ್ನಾಗಿ ಒಲಿಯುತ್ತಾನೆ. ರಾಯರು ಅಪ್ಪಣ್ಣಾಚಾರ್ಯ ಕೃತ " ಶ್ರೀ ಪೂರ್ಣಬೋಧ " ಎಂದು ಆರಂಭಿಸುವ ಸ್ತುತಿಯಿಂದಲೇ ಚೆನ್ನಾಗಿ ಒಲಿಯುತ್ತಾರೆ. ಹಾಗೆಯೇ ಶ್ರೀ ವಾದಿರಾಜರು ಜೀವನ ಕಾಲದಲ್ಲಿ ಭೂ ಸಂಚಾರ ಮಾಡುತ್ತಿದ್ದಾಗ ಋಜುತ್ವಜ್ಞಾನ ಇಲ್ಲದವರಿಗೂ ಅಲ್ಪ ಸ್ತುತಿಯಿಂದಲೂ ತಮ್ಮ ಭಕ್ತರಿಗೆ ಅನುಗ್ರಹಿಸುತ್ತಿದ್ದರು. ವೃಂದಾವನಸ್ಥರಾಗಿ ವೇದವೇದ್ಯರಿಂದ ಅವರ ಸ್ವರೂಪವು ಪ್ರಚಾರ ಮಾಡಲ್ಪಟ್ಟ ಮೇಲೆ ಅವರ ಋಜುತ್ವ ಜ್ಞಾನ ಪೂರ್ವಕವಾದ ವೃಂದಾವನ ಸೇವೆಗೇ ಅವರು ಒಲಿದು ಅನುಗ್ರಹಿಸುತ್ತಾರೆ. ತತ್ರಾಪಿ 1642 ರಲ್ಲಿ ವೃಂದಾವನಾಖ್ಯಾನವು ಹೊರಬಿದ್ದ ಮೇಲೆ ಅವರ ಮಂತ್ರ ಮತ್ತು ಅದರ ಪಾರಾಯಣವೇ ಅವರಿಗೆ ಭೋಜನ ಸಂತೋಷ ಕೊಡುತ್ತದೆಂದು ಅವರೇ ಹೇಳಿದ್ದಾರೆ. ಅಥವಾ ಅಲ್ಲಿಯೇ ಹೇಳಿದಂತೆ ಅವರ ಋಜುತ್ವಜ್ಞಾನ ಪೂರ್ವಕವಾಗಿ ಮಾಡಿದ ಯುಕ್ತಿಮಲ್ಲಿಕಾ ಪಾರಾಯಣ, ಭಾರತ ಕೀರ್ತನ, ಸಚ್ಛಾಸ್ತ್ರ ಪಾರಾಯಣ, ಪ್ರವಚನ, ಇವುಗಳಿಂದ ಒಲಿಯುತ್ತಾರೆ. ಈಗ ಋಜುತ್ವ ಜ್ಞಾನವಿಲ್ಲದ ಸೇವೆ ಗುರುದ್ವೇಷವೆನ್ನಿಸುತ್ತದೆ, ಗುಣಾಲ್ಪತೆ ಮಾಡಿದ್ದರಿಂದ. ಆಖ್ಯಾನ ಪಾರಾಯಣಾದಿ ಭಿನ್ನ ಸೇವೆ ಅಲ್ಪಾಧಿಕಾರಿಕವಾಗಿ ಫಲನ್ಯೂನತಗೆ ಕಾರಣವಾಗುತ್ತದೆ, ಅವರಿಂದ ಉಕ್ತವಾದುದಕ್ಕೆ ಭಿನ್ನವಾದ್ದರಿಂದ. " ಯೋ ನ ವಕ್ತಿ ಚ ಮತ್ಸದ್ಯಂ ತದರ್ಥಂ ವಾ ಮದಾಶ್ರಯೀ । ತಸ್ಯಾಶುಭಂ ಭವತ್ಯೇವ ಪಶ್ಯನೋ ತಪಸಃ ಫಲಂ " ॥52॥ ಇಮಾಂ ಕೃತಿಂ ಮಮ ಸ್ವಾಪ್ನೀಂ ಆದರಾದ್ಯಸ್ತು ವಕ್ಷ್ಯತಿ । ತಸ್ಯ ಶ್ರೀಶಃ ಪ್ರಸನ್ನಃ ಸನ್ ಶುಭಂ ದಾಸ್ಯತ್ಯ ಸಂಶಯಃ ॥53॥ ಎಂದು ಅಧ್ಯಾಯ XI ರಲ್ಲಿ ಎಂದಿದ್ದಾರೆ. ಇನ್ನು ಅಧ್ಯಾಯ XIII ಶ್ಲೋಕ 58 – " ಇದಂ ವೃಂದಾವನಾಖ್ಯಾನಂ ಯೇ ನ ಶೃಣ್ವಂತಿ ಮಾನವಾಃ । ದಾನವಾನಾಂ ಗತಿಂ ಪ್ರಾಪ್ಯ ಶ್ವಾನಜನ್ಮಾನಿ ಯಾಂತು ತೇ " ಎಂದೂ ಇದೆ. (ಅರ್ಥ :– ಯಾವ ನನ್ನ ಆಶ್ರಿತನು ನನ್ನ ಆಖ್ಯಾನವನ್ನು ಹೇಳುವುದಿಲ್ಲವೋ, ನನ್ನಲ್ಲಿ ಭಕ್ತಿಯಿಂದ ಅರ್ಥವನ್ನು ಚಿಂತಿಸುವುದಿಲ್ಲವೋ ಅವನಿಗೆ ಅಶುಭವೇ ಆಗುತ್ತದೆ. '' ಈ ಸ್ವಾಪ್ನ ಗ್ರಂಥವನ್ನು ಶ್ರದ್ಧೆಯಿಂದ ಪಠಿಸುವವನಿಗೆ ಶ್ರೀಶನು ಪ್ರಸನ್ನನಾಗಿ ಶುಭದಾಯಕನಾಗುತ್ತಾನೆ. ಈ ಕೃತಿಯನ್ನು ತಿರಸ್ಕಾರ ಬುದ್ಧಿಯಿಂದ ಕೇಳದ ಮಾನವರು ದಾನವರಿಗಾಗುವ ಗತಿಯನ್ನು ಹೊಂದಿ ನಾಯಿಯಾಗಿ ಹುಟ್ಟಲಿ ") ಆದ್ದರಿಂದ ವಾದಿರಾಜರ ಋಜುತ್ವವನ್ನು ಆಚ್ಛಾದನೆ ಮಾಡಿ, ಆಖ್ಯಾನ ಭಿನ್ನ ಸ್ತುತಿಗಳಿಗೆ ಪ್ರಾಧಾನ್ಯ ಕೊಟ್ಟು, ಅಣುವೃಂದಾವನಾಖ್ಯಾನದಲ್ಲೂ ಋಜುತ್ವಬೋಧಕ ಅಧಿಕ ಫಲಪ್ರದ ಭಾಗವನ್ನು ಕತ್ತರಿಸಿ ಹಾಕಿ ಅಪ್ರಧಾನ ಭಾಗವನ್ನು ಪ್ರಚುರ ಮಾಡಿ, ಕವಚ ಮಂತ್ರದಲ್ಲೂ ಋಜುತ್ವ ಪ್ರಕಾಶಕ " ಗುರುಮಖಿಲ ಗುಣಜ್ಞಂ .... ನಿತ್ಯ

ಚಾರ್ಯರು, ಸೂರಿ ಸೇತುಮಾಧವಾಚಾರ್ಯರು, ಸತ್ಯಪರಾಕ್ರಮ ತೀರ್ಥರು ಮುಂತಾದ ಪ್ರಾಚೀನರೂ, ಈಗಿನ ಶ್ರೀಸುಜಯೀಂದ್ರ ತೀರ್ಥರು ಮುಂತಾದವರೂ ಸಹ ಅಭೇದ್ಯವಾದ ವಾದಿರಾಜ ಋಜುತ್ವ

ಸಿದ್ಧೂರ್ತ ಕಷ್ಟಂ " ಎಂಬ ಧ್ಯಾನಶ್ಲೋಕವನ್ನೂ ಬಿಟ್ಟು ಬಿಟ್ಟು, ವೇದವೇದ್ಯರು ಮಾಡದುದನ್ನು ಅವರೇ ಮಾಡಿದ್ದೆಂದು ಋಜುತ್ವಾಭಾವ ಸಂಪಾದನೆಗಾಗಿ ಕಲ್ಪನೆಮಾಡಿ, ದಾಸರ ಪದದಲ್ಲೂ " ಪೂತಾತ್ಮ ಜಗನ್ನಾಥ ವಿಠಲನ ಖ್ಯಾತಿಯ ಸ್ತುತಿಸುವ ಶ್ವಾಸನಿಯಾಮಕ " ಎಂಬಲ್ಲಿ ಶ್ವಾಸ ನಿಯಾಮಕ ಎಂಬ ವಿಶೇಷಣವನ್ನು ಬಿಟ್ಟು, " ಧಾತ್ರಿ ಪಾಲಕನ ಪುತ್ರಿಯು ಬರೆದಾ। ಪತ್ರ ಲಕುಮಿ ಕಳತ್ರನಿಗೆ ಇತ್ತ " ಎಂಬ ನುಡಿಯನ್ನೇ ತ್ಯಜಿಸಿ ತಯಾರು ಮಾಡಿರುವ ಈ ಸ್ತೋತ್ರ ಮಂಜರಿಯು " ದ್ವೇಷಮಂಜರಿ " ಯಾಗಿದೆ. ನಿರಪರಾಧಿ ಪಾಠಕರಿಗೆ ವಿಷ ಮಂಜರಿಯಂತೆ ದುಷ್ಟ ಫಲವನ್ನು ಉಂಟು ಮಾಡುತ್ತದೆಂದು ವ್ಯಸನದಿಂದ ಹೇಳಬೇಕಾಗಿದೆ. ನವ ದ್ವೇಷಗಳಲ್ಲಿ ಎಂಟನೆಯದಕ್ಕೆ ಕಾಲುಚಾಚಿ " ತತ್ಪ್ರಮಾಣಸ್ಯ ನಿಂದಾ " ಎಂಬ ಒಂಭತ್ತನೆಯದನ್ನು ಆಲಿಂಗಿಸಿಕೊಂಡಂತೆಯೇ ಆಗಿದೆ. ಅನುಕ್ತಿಯು ಏನನ್ನೂ ನಿರ್ಣಯವಾಗಿ ಸಾಧಿಸಲಾರದು.

1645 ರಲ್ಲಿ ವೇದನಿಧಿಗಳು ವೃಂದಾವನಸ್ಥರಾದ ಮೇಲೆ ಆಖ್ಯಾನ ಗ್ರಂಥವು ಅಷ್ಟಮಠಗಳ ಕೋಶಕ್ಕೆ ಸೇರಿದ್ದರೂ ಯಾರೂ ಅದನ್ನು ಅಭ್ಯಾಸಕ್ಕೆ ಇಟ್ಟುಕೊಂಡು ಸೇವಿಸುತ್ತಿರಲಿಲ್ಲ. ಯಾಕೆಂದರೆ ಅದರ ಪ್ರಕರಣ ಭೇದಾದಿಗಳು ದುರ್ಜ್ಞೇಯವಾಗಿ, ಅದು ಅರ್ಥವಾಗುತ್ತಿರಲಿಲ್ಲ. ವೃಂದಾವನಾಚಾರ್ಯರು 1794 ರಲ್ಲಿ ಅನುಗ್ರಹ ಹೊಂದಿ ಅದರ ವ್ಯಾಖ್ಯಾನ ಮಾಡಿಸಿ 1834 ರಲ್ಲಿ ಪ್ರಾಮಾಣ್ಯ ಬೋಧಿನೀ ಯನ್ನು ಪ್ರಕಾಶ ಮಾಡಿದ ಮೇಲೆ ಎಲ್ಲರಿಗೂ ವಾದಿರಾಜರ ಋಜುತ್ವವು ವಿದಿತವಾಯಿತು. ಆದ್ದರಿಂದ 1645 ರಿಂದ 18 4 ವರೆಗಿನ ಮಧ್ಯಕಾಲದ ಸ್ತುತಿ, ಸೇವೆ, ಪೂಜಾದಿಗಳಲ್ಲಿ ಜನರು, ಕೆಲವರೇ ಮಹೀಯರು ಋಜುತ್ವ ಜ್ಞಾನವುಳ್ಳವರಾದರು. ಹೆಚ್ಚು ವೈಷ್ಣವ ಜನರಿಗೆ ಅವರ ಋಜುತ್ವ ಮಹಿಮೆ ಗೊತ್ತಾಗಿರಲಿಲ್ಲ. ಪುಸ್ತಕ ಪ್ರಿಂಟಾದ 1925 ರಿಂದ ಈಚೆಗೆ ಯಾರೂ ವಾದಿರಾಜರನ್ನು ಋಜುತ್ವ ಜ್ಞಾನವಿಲ್ಲದೆ ಸೇವಿಸುವುದಿಲ್ಲ. ಎಂಥವನೂ ಅಣುವೃಂದಾವನಾಖ್ಯಾನ, ಕವಚಸ್ತುತಿ, ಪರಾಕುಗಳ ಪಾರಾಯಣಾದಿಗಳಿಲ್ಲದೆ ಅವರ ಸ್ತೋತ್ರದಲ್ಲಿ ಯತ್ನಿಸುವುದಿಲ್ಲ. ತಥಾ ಚ ಭಿನ್ನಕಾಲದ ಜನರ ಸ್ತುತಿ, ಭಿನ್ನಗ್ರಂಥಗಳ ಶ್ಲೋಕಾದಿಗಳು ಇವೆಲ್ಲವೂ ವಾದಿರಾಜರಿಗೆ ಈಗ ಅಪ್ರಿಯ ಪ್ರಾಯವೇ. ಕೆಟ್ಟ ಹಟದಿಂದ ಜನರು ಹಾಗೆ ಮಾಡಿದರೆ ಫಲವಾಗುವುದೇ ಇಲ್ಲ ಎಂದು ಅವರೇ ಆಖ್ಯಾನದಲ್ಲಿ ಗುರುಪ್ರಸಾದ, ಹರಿಪ್ರಸಾದವಿಲ್ಲದೆ ನನ್ನ ವೃಂದಾವನ ಸೇವೆ ಮಾಡಿದರೆ ಭಕ್ತ್ಯಾದಿಗಳು ಬರುವುದಿಲ್ಲವೆಂದು ಅಧ್ಯಾಯ XVI - 81 ರಲ್ಲಿ ಹೇಳುತ್ತಾ ನಿರೂಪಿಸಿದ್ದಾರೆ. ಅಧ್ಯಾಯ X ಶ್ಲೋಕ 73, 74, 75. " ಸ್ಥಾಪಯೇದತ್ರ ತಾಂ ದೃಷ್ಟ್ವಾ ಸಂತಃ ಸಂತೋಷಮಾಪ್ನುಯುಃ। ಇಮಾಂ ಕೃತಿಂ ಸರೋಯಸ್ತು ಸ್ವಾಪ್ನೀಂ ಮಂದಸ್ಯ ಬುದ್ಧಿದಾಂ ॥73॥ ಪಠಿತ್ವಾ ಸರ್ವಪಾಪೇಭ್ಯೋ ಮುಚ್ಯತೇ ನಾತ್ರಸಂಶಯಃ। ಅರ್ಥಂ ಬುಧ್ವಾ ಕೃತೇರಸ್ಯಾಃ ಸರ್ವೇಷ್ಟಂ ಲಭತೇ ನರಃ ॥74॥ ಯೋಽನು ಪಶ್ಚಾತ್ ಕೃತಿಮಿಮಾಂ ಮಮ ತೋಷಸ್ಯ ಭೂರಸೌ। ಖ್ಯಾತಿಂ ಕುರುಷ್ವಾಲ್ಪಮತೇ ಮಮ ಕೀರ್ತಿಂ ನರೇಷ್ವಪಿ ॥75॥ ಅಧ್ಯಾಯ XVI - 69. ಅಪ್ರಿಯಾ ಯೇಚ ಪಾಪಾಸ್ತೇ-

ಕೋಟೆಯನ್ನೇ ನಿರ್ಮಾಣ ಮಾಡಿದ್ದಾರೆ. ಅವರೆಲ್ಲರಿಗೂ ಅವಜ್ಞೆ ಮಾಡಿ ಬ್ರಾಹ್ಮಣ್ಯವನ್ನೂ ಉಳಿಸಿ ಕೊಳ್ಳುವ ಪಂಡಿತರು ಇಲ್ಲ. ಎಲ್ಲರಿಗೂ ತಿಳಿದ ವಿಷಯವನ್ನು ಮುಚ್ಚಿಡಲು ಯತ್ನಿಸುವವನು ದುರಾಗ್ರಹಿ

ಹ್ಯಪ್ರಿಯಾಃ ಸರ್ವಥಾ ಮಮ । ತಸ್ಮಾನ್ಮಮ ಪ್ರಿಯಾಯೇವೈ ಪ್ರೀತಿಂ ಕುರ್ವಂತು ಮತ್ಕೃತೌ ॥69॥ ಅಪ್ರಿಯಂ ನೈವ ಕುರ್ವಂತು ಮತ್ಪ್ರಿಯಾಸ್ತೇ ನ ಸಂಶಯಃ ॥70॥ (ಅರ್ಥ :– ಶಿಲಾದಲ್ಲಿ ಶ್ಲೋಕಗಳನ್ನು ಬರೆಯಿಸು. ಅದನ್ನು ಸಂತರು ನೋಡಿ ಸಂತೋಷ ಪಡುತ್ತಾರೆ. (ಪಾರಾಯಣಕ್ಕೆ ಅನುಕೂಲವಾಯಿತೆಂದು). ಮುಂದರಿಗೂ ಜ್ಞಾನಕೊಡುವ ಈ ಆಖ್ಯಾನವನ್ನು ಪಾರಾಯಣ ಮಾಡಿದರೆ ಸರ್ವಪಾಪಗಳಿಂದ ಬಿಡಲ್ಪಡುತ್ತಾನೆ. ಅರ್ಥ ತಿಳಿದು ಪಾರಾಯಣ ಮಾಡಿದರ ಎಲ್ಲಾ ಅಭೀಷ್ಟ ಪ್ರಾಪ್ತವಾಗುತ್ತದೆ. ಈ ಆಖ್ಯಾನ ಪ್ರವಚನ ಮಾಡುವವನು ನನ್ನ ಸಂತೋಷಕ್ಕೆ ಪಾತ್ರನಾಗುತ್ತಾನೆ. ಲಕ್ಷ್ಮೀಪತಿ, ನನ್ನ ಋಜುತ್ವ ಖ್ಯಾತಿಯನ್ನು ಮನುಷ್ಯ ಜೀವರಲ್ಲೂ ಹರಡು. ॥ ಅಧ್ಯಾಯ XVI – 69 - ಯಾರಿಗೆ ಈ ಆಖ್ಯಾನವು ಅಪ್ರಿಯವೋ ಆ ಪಾಪಿಗಳು ನನಗೂ ಸರ್ವಥಾ ಅಪ್ರಿಯರು. ಆದ್ದರಿಂದ ನನ್ನ ಭಕ್ತರು ಈ ಕೃತಿಯಲ್ಲಿ ಪ್ರೀತಿಮಾಡಲಿ. ಯಾರು ನನಗೆ ಈ ವಿಷಯದಲ್ಲಿ ಅಪ್ರಿಯವನ್ನು ಮಾಡುವುದಿಲ್ಲವೋ ಅವರು ನನಗೆ ಪ್ರಿಯರೇ, ಸಂಶಯವಿಲ್ಲ.) ಇದೂ ಅಲ್ಲದೆ ಸಾವಿರ ಮಡಿ ಫಲಕೊಡುವ ಮಂತ್ರಬಂಧ ಸ್ತುತಿಗಳನ್ನು ಬಿಟ್ಟು ಪಂಡಿತರು ಮಾಡಿದ ಸ್ತುತಿಯನ್ನು ಪಠಿಸುವುದು ಅಜ್ಞಾನದ ಪರಾಕಾಷ್ಠತೆಯಲ್ಲವೇ ? ಗಾಯತ್ರೀ ಜಪವನ್ನು ತ್ಯಜಿಸಿ '' ಸ್ವಾಮಿ ದೇವನೆ '' ಪದ್ಯವನ್ನು ಹೇಳಬೇಕೇ ? ಹರಿಗುರು ಸ್ತೋತ್ರ ಮಾಡುವವರು ಇನ್ನೂ ಒಂದು ವಿಷಯವನ್ನು ಮರೆಯಬಾರದು. ತಪಸ್ವಿಗಳ ಸ್ತುತಿಯೇ ಫಲಕಾರಿ. ಅದಕ್ಕೇ ವೇದವ್ಯಾಸರು, ಕೃಷ್ಣ ಮುಂತಾದವರು ರಚಿಸಿರುವ ಮಂತ್ರಗಳನ್ನು ಜನರು ಕಂಠಪಾಠ ಮಾಡಿ ಹೇಳುತ್ತಾರೆ. ಪಂಡಿತಾಚಾರ್ಯರು, ಅಪ್ಪಣ್ಣಾಚಾರ್ಯರು ಮುಂತಾದವರು ತಪಸ್ವಿಗಳು, ತಮ್ಮ ತಮ್ಮ ಗುರುಗಳಿಗೆ ಇಷ್ಟವಾದ ವಿಶೇಷಣಗಳನ್ನು ಸೇರಿಸಿ ಸ್ತುತಿಗಳನ್ನು ಮಾಡಿದ್ದಾರೆ. ಪ್ರಕೃತದಲ್ಲಿ ವೃಂದಾವನಾಖ್ಯಾನವು ಸ್ತುತ್ಯರಿಂದಲೇ ಮಾಡಲ್ಪಟ್ಟ ಸ್ತುತಿಯಾದ್ದರಿಂದ ವಾದಿರಾಜರ ಒಲುಮೆಗೆ ಅದಕ್ಕಿಂತ ಉತ್ತಮ ಸ್ತೋತ್ರವು ಎಲ್ಲಿದೆ ? ಅದಕ್ಕಿಂತ ಉತ್ತಮ ಸೇವೆಯನ್ನು (ಯುಕ್ತಿಮಲ್ಲಿಕಾ ಪಾರಾಯಣ, ಭಾರತ ಪಾರಾಯಣ, ಸಚ್ಛಾಸ್ತ್ರ ಪಾರಾಯಣಾದಿಗಳನ್ನು ಅವರ ಋಜುತ್ವ ಮಹಿಮಾ ಜ್ಞಾನಪೂರ್ವಕ ಅವರ ಸನ್ನಿಧಿಯಲ್ಲಿ ಮಾಡುವುದನ್ನು) ಅವರೇ ಸೂಚಿಸಿ ಬಿಟ್ಟಿದ್ದಾರಾದ್ದರಿಂದ ನಾವು ಸ್ವಲ್ಪ ಭಾಗ ವೃಂದಾವನಾಖ್ಯಾನ, ಅಣುವೃಂದಾವನಾಖ್ಯಾನ, ಅವರ ಮಂತ್ರ ಜಪ ಮುಂತಾದುವನ್ನು ಮಾಡಿ ಭಾರತಾದಿ ಪಾರಾಯಣಗಳನ್ನಾದರೂ ಮಾಡಬಹುದು. ಅವನ್ನು ಬಿಟ್ಟು ಗೊತ್ತಿಲ್ಲದ " ವಾಸುದೇವ ಕೃತಸ್ತುತಿ " ಮುಂತಾದುವನ್ನು ಉಪಯೋಗಿಸಿದರೆ ಫಲಕಮ್ಮಿಯಾಗುವುದಿಲ್ಲವೇ ? ಈ ವಿವಕ್ಷೆಯಿಂದಲೂ ಸ್ತೋತ್ರ ಮಂಜರಿಯು ಖಂಡ್ಯವೇ.

" ಗುರುಗುಣ ಸ್ತವ " ವನ್ನು ಹಾಡಿದಾಗ ರಾಯರ ವೃಂದಾವನವು ತಲೆ ಅಲ್ಲಾಡಿಸುವಂತೆ ಅಲುಗಾಡಿದಂತೆ. ವಾದಿವಂದ್ಯರ ಸ್ತುತಿಯು ಹಾಗೇನೂ ವಾದಿರಾಜರ ಮೆಚ್ಚಿಗೆಯನ್ನು ಪಡೆದಿಲ್ಲ. ಆದ್ದರಿಂದ ಅದನ್ನು ತುಂಬ ಪ್ರಿಯವಾದ ವಾದಿರಾಜ ಸ್ತೋತ್ರವೆಂದು ಗಣನೆ ಮಾಡಬೇಕಾಗಿಲ್ಲ. ಮರೀಯ ಸ್ವಾಮಿಗಳು ಮಾಡಿದ್ದಾರಾದ್ದರಿಂದ ವೇದನಿಧಿಗಳ ಅಣುವೃಂದಾವನಾಖ್ಯಾನದ ಜಪದ ಅನಂತರ ವೈಚಿತ್ರ್ಯಕ್ಕಾಗಿ ವಾದಿವಂದ್ಯರು ಮಾಡಿದ್ದನ್ನೂ ಋಜುತ್ವ ನಿಶ್ಚಯ ಸಹಿತವಾಗಿ ಹೇಳಬಹುದು. ಗುರುರಾಜರ

ಎಂದು ತಿರಸ್ಕರಿಸಲ್ಪಡುವನು,

ಒಲುಮೆಯ ಪಾರಾಯಣ ಎಂದರೆ ಸ್ವಾಪ್ನವೃಂದಾವನಾಖ್ಯಾನವೇ ಸರಿ. ರುದ್ರಾಂಶರೆಂದು ಖ್ಯಾತರಾದ ಸತ್ಯಧರ್ಮರು ಋಜುತ್ವ ಜ್ಞಾನಿಗಳು. ಪೂರ್ವಾಶ್ರಮದಲ್ಲಿ ವಾದಿರಾಜರನ್ನು ಸೇವಿಸಿ ಸಂಭಾವಿತವಾಗಿದ್ದ ಕಾರಾಗಾರವಾಸವನ್ನು ತಪ್ಪಿಸಿಕೊಂಡರು. ತಮ್ಮ ಮಠದಲ್ಲಿ ವೃಂದಾವನಾಚಾರ್ಯರನ್ನು ಸತ್ಕರಿಸಿ ಶ್ರೀ ವ್ಯಾಸ ಸಹಿತ ಸಂಸ್ಥಾನ ಪೂಜೆ ಮಾಡಿಸಿದರು. ಆ ಹಿನ್ನೆಲೆಯನ್ನು ಕೊಟ್ಟು ಅವರ ರಚಿಸಿರುವ ಸ್ತುತಿಯನ್ನು ಅಚ್ಚು ಮಾಡಿಸಬೇಕು. ಅರ್ಥ ಕೊಡಬೇಕು. ಹೇಗೆ ಮಾಡಿದರೂ ವಾದಿರಾಜರೇ ಒಪ್ಪಿ ಮಾಡಿಕೊಟ್ಟಿರುವ ಆಖ್ಯಾನವನ್ನು ಬಿಟ್ಟು ಯಾವ ಬುದ್ಧಿವಂತಿಕೆಯು ಹಾಡಾದರೂ ಆಖ್ಯಾನವಂತೆ ಗುರುರಾಜರನ್ನು ವಶಮಾಡಿಕೊಳ್ಳಲಾರದು.

ಕೊನೆಯ ವಿಷಯ ಏನೆಂದರೆ, ಯಾರ ಸ್ತುತಿಯಿಂದ ನಾವು ಗುರುರಾಜರನ್ನು ಸ್ತುತಿಸುತ್ತೇವೋ ಅವರು ಗುರುರಾಜರ ಋಜುತ್ವ ಭಕ್ತರು, ಅವರ ಅನುಗ್ರಹಕ್ಕೆ ಪಾತ್ರರು ಎಂಬ ಹಿನ್ನೆಲೆ ಜ್ಞಾನವನ್ನು ಹೊಂದಿರಬೇಕು. ಆ ಗುಣಗಳಿಲ್ಲದೇ ಇರುವವರು ಮಾಡಿದ ಸ್ತುತಿಯನ್ನು ಉಪಯೋಗಿಸಿದರೆ ದೇವತೋಷಣವು ಆಗುವುದು ಅಸಾಧ್ಯ. ಪುರುಷಾರ್ಥಾನುಪಯೋಗಿತ್ವ ಎಂಬ ದೋಷ ಅದರಲ್ಲಿದೆ. ಇದೆಲ್ಲಾ ವಿವಕ್ಷೆಗಳಿಂದಲೂ, ಧವಳ ಗಂಗೆಯಲ್ಲಿ ಸ್ನಾನಮಾಡಿ, ಗುರುಸನ್ನಿಧಿಯಲ್ಲಿ ಗುರುರಾಜರ ಋಜುತ್ವ ತಿಳಿದು ಸ್ವಾಪ್ನವೃಂದಾವನಾಖ್ಯಾನ ಪಾರಾಯಣ ಮಾಡಿದರೆ ಉತ್ತಮ ಫಲವು ಪ್ರಾಪ್ತವಾಗುತ್ತದೆ ಎಂದು ನಿಃಶಂಕವಾಗಿ ಹೇಳಬಹುದು. ಹದಿನೆಂಟನೆಯ ಅಧ್ಯಾಯ 79 ಶ್ಲೋಕದಲ್ಲಿ "ಸಖಾಸಾರ್ಥಂ" ಎಂದು ವಾಯುದೇವರ ನಿರ್ದೇಶವನ್ನು ವಾದಿರಾಜರೇ ಮಾಡಿದ್ದಾರೆ. 83ರಲ್ಲಿ "ನಿರ್ದೋಷವಿಪಾಕಂ" ಎಂದು ಹೇಳಿಕೊಂಡಿದ್ದಾರೆ. ಅಧ್ಯಾಯ XVII-42 ರಲ್ಲಿ "ಭಜಮಾಂ ಭುಜಗೇಶ್ವರಂ" ಎಂಬಲ್ಲಿ ಶೇಷನಿಗೂ ನಿಯಾಮಕರೆಂದಿದೆ. ಆಖ್ಯಾನವನ್ನಾದರೂ "ಸಚ್ಛಾಸ್ತ್ರ ವಕ್ತ್ರೇ ತವ ನ ಸಂಶಯಃ" (XV-20); "ಮುರಾರೇಃ ಪರಮಾರ್ಥಸಾರಂ" (XVIII-73) ಎಂದು ಸಚ್ಛಾಸ್ತ್ರ, ಬ್ರಹ್ಮವಿದ್ಯಾ ಸಂಕ್ಷೇಪ ಎಂದು ವರ್ಣಿಸಿದ್ದಾರೆ. ಅಧ್ಯಾಯ XVIII-72 ರಲ್ಲಿ ತಮ್ಮನ್ನು (ಕಮ್ಮಿ ತಿಳಿದು ಅವಮಾನ ಮಾಡಬಾರದೆಂದಿದ್ದಾರೆ. "ಸಂಶಯಂ ವದ ವಿದ್ವಂಸ್ತೇ ಮದವಜ್ಞಾನತೋ ಭವೇತ್ । ಸದವಜ್ಞಾ ಮಹತ್ಪಾಪಂ ತ್ರಿದಿವಾತ್ಪಾತಯತ್ಯಧಃ ॥" ಎಂದು ಮುದ್ಗಲ ನಾರಸಿಂಹ ಶ್ರೀ: ಸತ್ಯಧರ್ಮ) ರಿಗೆ ಹೇಳಿದ್ದಾರೆ. ಅಂಥವರ ಋಜುತ್ವ ಮಹಿಮೆಯ ಗಂಧವೇ ಇಲ್ಲದ ಸ್ತುತಿಮಾಡಿ ಅನ್ಯಜುತ್ವ ಪಕ್ಷಪಾತ ತೋರಿಸಿದರೆ ಉತ್ತಮಾವಜ್ಞೆಯಾಗುತ್ತದೆ. ಆ ಮಾರ್ಗ ಬೇಡ. "ತತ್ಪ್ರಮಾಣಸ್ಯ ನಿಂದಾಚ" ಎಂಬ ದೋಷ ದೂರವಿರಲಿ, (XVI – 68) "ತಸ್ಮಾನ್ಮದ್ವಚನೇ ಯೇ ಚ ಪ್ರಿಯವಂತಃ ಪ್ರಿಯಾ ಹಿ ಮೇ ॥" (ನನ್ನ ವೃಂದಾವನಾಖ್ಯಾನ ಮಾತಿನಲ್ಲಿ ಯಾರು ಪ್ರೀತಿಯುಳ್ಳವರೋ ಅವರೇ ನನಗೆ ಪ್ರಿಯರು.)

ಅಧ್ಯಾಯ ೨

ಪ್ರಮೇಯ ಶೋಧನೆ

1. ಶ್ರೀಮಧ್ವಾಚಾರ್ಯರು ಗ್ರಂಥ ಪ್ರಾಮಾಣ್ಯ ಪ್ರಾಶಸ್ತ್ಯಗಳನ್ನು ನಿರ್ಣಯಿಸುವುದಕ್ಕೆ ಇನ್ನೊಂದು ಪ್ರಕಾರವನ್ನು ಅನುವ್ಯಾಖ್ಯಾನ, ನಿರ್ಣಯಾದಿಗಳಲ್ಲಿ ತೋರಿಸಿದ್ದಾರೆ. **ಮಹಾಭಾರತ ತಾತ್ಪರ್ಯ ನಿರ್ಣಯ 1-33:- "ಏತೇಷು ವಿಷ್ಣೋರಾಧಿಕ್ಯಂ ಉಚ್ಯತೇ ನಾನ್ಯಸ್ಯ ಕಸ್ಯಚಿತ್ । ಅತಸ್ತದೇವ ಮಂತವ್ಯಂ ನಾನ್ಯಥಾತು ಕಥಂಚನ ॥33॥ ಮೋಹಾರ್ಥಾನ್ಯನ್ಯಶಾಸ್ತ್ರಾಣಿ............"** (ಭಾವಾರ್ಥ :- ಹಿಂದೆ ಹೇಳಿದ ಋಗಾದಿ ವೇದಗಳು, ಭಾರತ, ಪಂಚರಾತ್ರ, ಮೂಲರಾಮಾಯಣಗಳೂ, ಬ್ರಹ್ಮಸೂತ್ರವೂ ಅದಕ್ಕೆ ಅವಿರುದ್ಧವಾದ ಇತರ ಎಲ್ಲಾ ಗ್ರಂಥಗಳೂ ಪ್ರಮಾಣಗಳು. ವೈಷ್ಣವ ಪುರಾಣಗಳು ಪಂಚರಾತ್ರಾನುಕೂಲ್ಯ ನಿಮಿತ್ತದಿಂದ ಎಂದರೆ ವಿಷ್ಣು ಸರ್ವೋತ್ತಮತ್ವ ಪ್ರತಿಪಾದಕತ್ವ ನಿಮಿತ್ತದಿಂದ ಪ್ರಮಾಣಗಳು ಎಂದರೆ ಯಾವ ಪುರಾಣ ಸ್ಮೃತಿ ಭಾಗಗಳು ವಿಷ್ಣೂತ್ಕರ್ಷವನ್ನು ಪ್ರತಿಪಾದಿಸಿ, ಹಾಗೆ ಪ್ರತಿಪಾದಿಸುವ ಪಂಚರಾತ್ರಾಗಮಕ್ಕೆ ಅನುಕೂಲವಾಗಿ ಎಂದರೆ ಅನುಸಾರಿಯಾಗಿ ಅಥವಾ ಅವಿರುದ್ಧವಾಗಿವೆಯೋ ಆ ಪುರಾಣ ಸ್ಮೃತಿಗಳು ಪ್ರಮಾಣಗಳು. ಎಂದರೆ ಸಚ್ಛಾಸ್ತ್ರಕ್ಕೆ ಇದೇ ಲಕ್ಷಣ:-ವಿಷ್ಣು ಸರ್ವೋತ್ತಮತ್ವ ಪ್ರತಿಪಾದಕತ್ವ. ಶಾಸ್ತ್ರದಲ್ಲಿ ಸರ್ವತ್ರ ವಿಷ್ಣು ಸರ್ವೋತ್ತಮತ್ವವೇ ಹೇಳಲ್ಪಟ್ಟಿದೆ. ವಿಷ್ಣು ಭಿನ್ನರಿಗೆ ಉತ್ಕರ್ಷವು ಸ್ವಲ್ಪವೂ ಎಲ್ಲೂ ಹೇಳಲ್ಪಟ್ಟಿಲ್ಲ. ಆದ್ದರಿಂದ ಅದನ್ನು ಸಮಗ್ರ ಹೇಳುವುದೇ ಮುಖ್ಯ ಶಾಸ್ತ್ರ. ಆದ್ದರಿಂದ ಪುರಾಣ ಸ್ಮೃತಿಗಳಲ್ಲಿ ಯಾವ ಸಾತ್ವಿಕ ಭಾಗವು ಅದನ್ನು ಹೇಳುತ್ತದೆಯೋ ಅಷ್ಟು ಮಾತ್ರ ಶಾಸ್ತ್ರವೆನ್ನಿಸುತ್ತದೆ ಎಂದು ಭಾವ. ಹೀಗೆ ಒಂದು ಅಳತೆಯ ಕೋಲು (ಮಾನದಂಡ) ಸಿಕ್ಕಿದ್ದರಿಂದ ಅದೇ ತಿಳಿಯಲ್ಪಡಬೇಕು, ಎಂದರೆ ಯಾವ ಪ್ರಮೇಯವು ತನ್ನನ್ನು ಪ್ರತಿಪಾದನೆ ಮಾಡುವ ಗ್ರಂಥವನ್ನು ಶಾಸ್ತ್ರವನ್ನಾಗಿ ಮಾಡಿ ಬಿಡುತ್ತದೆಯೋ ಅಂಥ ಮುಖ್ಯ ಪ್ರಮೇಯವಾದ ವಿಷ್ಣು ಸರ್ವೋತ್ತಮತ್ವವೇ ತಿಳಿಯಲ್ಪಡಬೇಕು. ಅನ್ಯಥಾ ತಿಳಿಯಕೂಡದು. ಅನ್ಯಥಾ ತಿಳಿಸಿ ಕೊಡುವ ಗ್ರಂಥವು ಶಾಸ್ತ್ರವಲ್ಲ. ಹಾಗಿದ್ದರೆ ಪಾಶುಪತ, ನೈಯಾಯಿಕಾದಿ ಶಾಸ್ತ್ರಗಳನ್ನು ಹೇಗೆ ತಿಳಿಯಬೇಕೆಂದರೆ "ಮೋಹಾರ್ಥಾನಿ", ಆ ಅನ್ಯಗ್ರಂಥಗಳು ಕುಶಾಸ್ತ್ರಗಳು, ಅಸುರರಿಗೂ, ಅಪಕ್ವ ಸಾಧಕರಿಗೂ ವಿಪರೀತ ಜ್ಞಾನವನ್ನು ಹುಟ್ಟಿಸಲು ರಚಿತವಾದವುಗಳು; ಅವುಗಳನ್ನು ಸಾಧಕನು ತ್ಯಜಿಸಬೇಕೆಂದು ತಿಳಿಯಬೇಕು),

2. ಹೀಗೆ ಪ್ರಮೇಯ ಪ್ರಾಶಸ್ತ್ಯದಿಂದ ಗ್ರಂಥದ ಪ್ರಾಶಸ್ತ್ಯವನ್ನು ನಿರ್ಣಯಿಸುವುದು ಶಕ್ಯವೆಂದು ತೋರಿಸಿ ದೃಷ್ಟಾಂತವಾಗಿ ಆಚಾರ್ಯರು ಬ್ರಹ್ಮಸೂತ್ರವನ್ನೇ ಸ್ತುತಿಸಿದ್ದಾರೆ. **" ದೋಷಾ ವಿಷ್ಣೋರ್ನ ಹಿ ಕ್ವಚಿತ್ । ಅಜ್ಞತ್ವಂ ಪಾರತಂತ್ರ್ಯಂ ವಾ ಭೇದ ಭೇದಾದಿಕಂ ತಥಾ । ತಥಾ ಪ್ರಾಕೃತ ದೇಹತ್ವಂ ದೇಹತ್ಯಾಗಾದಿಕಂ ತಥಾ ॥38॥ ಅನೀಶತ್ವಂ ಚ ದುಃಖಿತ್ವಂ ಸಾಮ್ಯಮನ್ಯೈಶ್ಚ ಹೀನತಾಂ ।**

ಪ್ರವರ್ತಯತಿ ಮೋಹಾಯ ದೈತ್ಯಾದೀನಾಂ ಹರಿಃ ಸ್ವಯಂ ॥ ನ ತಸ್ಯ ಕಶ್ಚಿದ್ದೋಷೋಽಸ್ತಿ ಪೂರ್ಣಾಖಿಲ ಗುಣೋಹ್ಯಸೌ । ಸರ್ವ ದೇಹಸ್ಥ ರೂಪೇಷು ಪ್ರಾದುರ್ಭಾವೇಷು ಚೇಶ್ವರಃ ॥ ಬ್ರಹ್ಮಾದ್ಯಭೇದಃ ಸಾಮ್ಯಂ ವಾ ಕುತಸ್ತಸ್ಯ ಮಹಾತ್ಮನಃ । ಯದೇವಂ ವಾಚಕಂ ಶಾಸ್ತ್ರಂ ತದ್ಧಿ ಶಾಸ್ತ್ರಂ ಪರಂ ಮತಂ ॥ ನಿರ್ಣಯಾಯೈವ ಯತ್ಪ್ರೋಕ್ತಂ ಬ್ರಹ್ಮಸೂತ್ರಂತು ವಿಷ್ಣುನಾ । ವ್ಯಾಸ ರೂಪೇಣ ತದ್ಗ್ರಾಹ್ಯಂ ತತ್ಪ್ರೋಕ್ತಾಃ ಸರ್ವ ನಿರ್ಣಯಾಃ ॥ ಯಥಾರ್ಥ ವಚನಾನಾಂಚ ಮೋಹಾರ್ಥಾನಾಂ ಚ ಸಂಶಯಂ । ಅಪನೇತುಂ ಹಿ ಭಗವಾನ್ ಬ್ರಹ್ಮಸೂತ್ರಮಚೀಕ್ಲೃಪತ್ ॥ ತಸ್ಮಾತ್ ಸೂತ್ರಾರ್ಥಮಾಗೃಹ್ಯ ಕರ್ತವ್ಯಃ ಸರ್ವ ನಿರ್ಣಯಃ । ಸರ್ವ ದೋಷ ವಿಹೀನತ್ವಂ ಗುಣೈಃ ಸರ್ವೈರುದೀರ್ಣತಾ ॥ ಅಭೇದಃ ಸರ್ವ ರೂಪೇಷು ಜೀವಭೇದಃ ಸದೈವ ಹಿ । ವಿಷ್ಣೋರುಕ್ತಾನಿ ಸೂತ್ರೇಷು ಸರ್ವ ವೇದೇಷ್ವಥಾ ತಥಾ ॥ ತಾರತಮ್ಯಂ ಚ ಮುಕ್ತಾನಾಂ ವಿಮುಕ್ತಿಃ ವಿದ್ಯಯಾ ತಥಾ । ತಸ್ಮಾದೇತದ್ವಿರುದ್ಧಂ ಯನ್ಮೋಹಾರ್ಥಂ ತದುದಾಹೃತಂ ॥46॥ ”

(ಭಾವಾರ್ಥ :- ವಿಷ್ಣುವಿಗೆ ಎಲ್ಲೂ, ಯಾವ ರೂಪದಲ್ಲೂ ದೋಷವಿಲ್ಲ. ಅಜ್ಞಾನ, ಪಾರತಂತ್ರ್ಯ, ಭೇದ ಭೇದಾದಿಗಳು, ಪ್ರಾಕೃತ ದೇಹ ಸ್ವೀಕಾರ, ಆ ದೇಹ ತ್ಯಾಗವೆಂಬ ಮರಣ, ಅಸಾಮರ್ಥ್ಯ, ದುಃಖ ಪ್ರಾಪ್ತಿ, ಅನ್ಯರಿಂದ ಸಾಮ್ಯ, ಇನ್ನೊಬ್ಬರಿಂದ ನ್ಯೂನತೆ – ಇವ್ಯೊಂದೂ ಹರಿಗಿಲ್ಲ. ದೈತ್ಯ ಮೋಹನಕ್ಕಾಗಿ ತೋರಿಸುತ್ತಾನೆ. ಪ್ರತ್ಯೇಕ ಪರಿಪೂರ್ಣ ಅನಂತ ಗುಣವುಳ್ಳವನಾದ್ದರಿಂದ ಅವನಿಗೆ ಯಾವ ದೋಷವೂ ಇಲ್ಲ. ಸರ್ವ ದೇಹಗಳಲ್ಲಿರುವ ಅಂತರ್ಯಾಮಿ ರೂಪಗಳಲ್ಲೂ, ಮತ್ಸ್ಯಾದಿ ಪ್ರಾದುರ್ಭಾವ ರೂಪಗಳಲ್ಲೂ ಅವನು ಸರ್ವೇಶ್ವರನು. ಅಂಥವನಿಗೆ ಬ್ರಹ್ಮಾದ್ಯಭೇದವಾಗಲಿ, ಸಾಮ್ಯವಾಗಲಿ ಎಲ್ಲಿಂದ ಬರುತ್ತೆ ? ಹೀಗೆ ಬೋಧಿಸುವ ಗ್ರಂಥವು ಯಾವುದೋ ಅದೇ ನಿಜವಾದ ಉತ್ತಮ ಶಾಸ್ತ್ರವೆಂದು ಪ್ರಮಿತವಾಗಿದೆ. ಹೀಗೆ ಒಂದು ರೀತಿಯ ಸಿದ್ಧಾಂತ. ಹೀಗೆ ಮೇಲ್ಕಂಡ ಬ್ರಹ್ಮ ಸ್ವರೂಪ ನಿರ್ಣಯಕ್ಕಾಗಿಯೇ ಬ್ರಹ್ಮಸೂತ್ರವನ್ನು ವಿಷ್ಣುವು ವೇದವ್ಯಾಸ ರೂಪದಿಂದ ರಚಿಸಿದ್ದಾನೆಯಾದ್ದರಿಂದ ಅದು ಪರಶಾಸ್ತ್ರ. ಅಲ್ಲಿ ಹೇಳಲ್ಪಟ್ಟ ನಿರ್ಣಯಗಳೆಲ್ಲ ಗ್ರಾಹ್ಯ. ಶಾಸ್ತ್ರ ವಾಕ್ಯಗಳ ಆಪಾತಾರ್ಥ ವಿರೋಧ ಪರಿಹಾರಕ್ಕಾಗಿಯೇ ಭಗವಂತನು ಸೂತ್ರ ಶಾಸ್ತ್ರವನ್ನು ಮಾಡಿದ್ದಾನೆಯಾದ್ದರಿಂದ ಅದನ್ನು ನೋಡಿಕೊಂಡು ಇತರ ಶಾಸ್ತ್ರಗಳಲ್ಲಿ ಸರ್ವ ನಿರ್ಣಯಗಳನ್ನೂ ಮಾಡಬೇಕು. ಅಂಥ ಸೂತ್ರಗಳಲ್ಲಿರುವ ನಿರ್ಣೀತ ವಿಷಯಗಳೇನೆಂದರೆ ಶ್ರೀಹರಿಯ ಸರ್ವ ದೋಷ ವಿಹೀನತ್ವ, ಸರ್ವ ಶುಭಗುಣ ಪೂರ್ಣತ್ವ, ಅವನ ಸರ್ವ ರೂಪಗಳಲ್ಲಿ ಪರಸ್ಪರಾತ್ಯಂತ ಭೇದ, ಸರ್ವಕಾಲದಲ್ಲೂ ಜೀವಭೇದ ಮತ್ತು ಸರ್ವವೇದ ಪ್ರತಿಪಾದ್ಯತ್ವ. ಈ ಗುಣಗಳು ವಿಷ್ಣುವಿಗೆ ಹೇಳಲ್ಪಟ್ಟಿವೆ. ಆದ್ದರಿಂದ ಅದೇ ಮಹಾಶಾಸ್ತ್ರ. ಹಾಗೇ ಮುಕ್ತ ಜೀವರಲ್ಲೂ ತಾರತಮ್ಯ, ಬ್ರಹ್ಮ ಜ್ಞಾನದಿಂದಲೇ ಮುಕ್ತಿ ಎಂದೂ ನಿರ್ಣಯಿಸಲ್ಪಟ್ಟಿದೆ. ಆದ್ದರಿಂದ ಅಂಥ ನಿರ್ಣಾಯಕ ಶಾಸ್ತ್ರಾನುಸಾರಿಯಲ್ಲದ್ದು, ವಿರುದ್ಧವಾದುದು, ಅವೆಲ್ಲವೂ ವಿಪರೀತ ಜ್ಞಾನಜನಕ. ಅಂಥ ಮೋಹಕ ಗ್ರಂಥವು ಶಾಸ್ತ್ರವಲ್ಲ).

3. ಅನುವ್ಯಾಖ್ಯಾನದಲ್ಲೂ 3. 3. 1. ಸೂತ್ರಾರ್ಥ ಹೇಳುತ್ತಾ ಆಚಾರ್ಯರೇ ಹೀಗೆ ಕೆಲವು ನಿರ್ಣಯಗಳನ್ನು ಹೇಳಿ, ಆ ನಿರ್ಣಯಗಳು ಬ್ರಹ್ಮ ಸೂತ್ರಾದಿ ಶಾಸ್ತ್ರದಲ್ಲಿವೆಯಾದ್ದರಿಂದ ಅದೇ ಮುಖ್ಯ

ಸಾತ್ವಿಕ ಶಾಸ್ತ್ರವೆಂದು ತೋರಿಸಿದ್ದಾರೆ. " **ಅಶೇಷ ಗುಣ ಪೂರ್ಣತ್ವಂ ಸರ್ವದೋಷ ಸಮುಜ್ಝಿತಿಃ। ವಿಷ್ಣೋರನ್ಯಚ್ಚ ತತ್ತಂತ್ರಮಿತಿ ಸಮ್ಯಗ್ವಿನಿರ್ಣಯಃ ॥82॥ ಸ್ವತಂತ್ರತ್ವಂ ಸದಾ ತಸ್ಯ ಭೇದಶ್ಚ ಸರ್ವತಃ। ಅದೋಷತ್ವಸ್ಯ ಸಿದ್ಧ್ಯರ್ಥಂ ಯದಭೇದೇ ತದನ್ವಯಃ॥ ತತ್ತಂತ್ರತ್ವಂ ಚ ಮುಕ್ತಾನಾಮಪಿ ತದ್ಗುಣ ಪೂರ್ತಯೇ। ಮುಕ್ತಾನಾಮಪಿ ಭೇದಶ್ಚ ನ ಹಿ ಭಿನ್ನಮಭಿನ್ನತಾಂ॥ ಗಚ್ಛದ್ದೃಷ್ಟಂ ಕ್ವಚಿತ್ತಸ್ಯಾಪ್ಯಭಾವೋ ಅಸಂಭವೋಪಗಃ। ಪೂರ್ವಾಭೇದೇ ದೋಷವತ್ತ್ವಮೀಶಸ್ಯೇತ್ಯತಿ ಭಿನ್ನತಾ॥ ನಾರಾಯಣೇನ ಮುಕ್ತಾನಾಮಪಿ ಸಮ್ಯಗಿತಿಸ್ಥಿತಿಃ। ಭೇದಾಭೇದೇಪ್ಯಭೇದೇನ ದೋಷಾಣಾಮಪಿ ಸಂಭವಃ॥ ನಿರ್ದೋಷತ್ವಂ ರಮಾಯಾಶ್ಚ ತದನಂತರತಾ ತಥಾ॥ ಬ್ರಹ್ಮಾ ಸರಸ್ವತೀ ವೀಂದ್ರ ಶೇಷರುದ್ರಾಶ್ಚ ತತ್ಸ್ತ್ರಿಯಃ॥ ಶಕ್ರಕಾಮೌ ತದನ್ಯೇ ಚ ಕ್ರಮಾನ್ಮುಕ್ತಾವಪೀತಿ ಚ। ಸತ್ಸಿದ್ಧಾಂತ ಇತಿ ಜ್ಞೇಯೋ ನಿರ್ಣೀತೋ ಹರಿಣಾ ಸ್ವಯಂ॥ ಏತದ್ವಿರೋಧಿ ಯತ್ಸರ್ವಂ ತಮಸೇ ಅಂಧಾಯ ಕೇವಲಂ। ಅಂಧಂ ತಮೋ ವಿಶಂತೀತಿ ಪ್ರಾಹಶ್ರುತಿರತಿಸ್ಫುಟಂ॥ ಇತ್ಯೇವ ಶ್ರುತಯೋಽಶೇಷಾಃ ಪಂಚರಾತ್ರಮಥಾಖಿಲಂ। ಮೂಲ ರಾಮಾಯಣಂ ಚೈವ ಭಾರತಂ ಸ್ಮೃತಯೋಽಖಿಲಾಃ॥ ವೈಷ್ಣವಾನಿ ಪುರಾಣಾನಿ ಸಾಂಖ್ಯಯೋಗೌ ಪರಾವಪಿ। ಬ್ರಹ್ಮತರ್ಕಶ್ಚ ಮೀಮಾಂಸೇತ್ಯನಂತಃ ಶಬ್ದ ಸಾಗರಃ॥ ಅನಂತಾಯುಕ್ತಯಶ್ಚೈವ ಪ್ರತ್ಯಕ್ಷಾಗಮ ಮೂಲಕಾಃ। ಪ್ರತ್ಯಕ್ಷಮೈಶ್ವರಂ ಚೈವ ರಮಾದೀನಾಮಶೇಷತಃ॥ ಮುಕ್ತಾನಾಮಪ್ಯಮುಕ್ತಾನಾಮನೇತರ್ಮೇವಾರ್ಥಮುತ್ತಮಂ। ಅನ್ಯಾವಕಾಶರಹಿತಂ ಪ್ರಕಾಶಯತಿ ಸಾದರಂ॥ ಏತದೇವ ಚ ಸಚ್ಛಾಸ್ತ್ರಂ ದುಃಶಾಸ್ತ್ರಂತು ತತಃ ಪರಂ। ಸಚ್ಛಾಸ್ತ್ರಂ ಅಭ್ಯಸೇನ್ನಿತ್ಯಂ ದುಃಶಾಸ್ತ್ರಂತು ಪರಿತ್ಯಜೇತ್ ॥94॥** (ಅರ್ಥ :- ಅಶೇಷ ಗುಣಪೂರ್ಣತೆ, ಸರ್ವದೋಷ ರಾಹಿತ್ಯ, ವಿಷ್ಣು ಭಿನ್ನ ಪ್ರಪಂಚಕ್ಕೆ ವಿಷ್ಣ್ವಧೀನತೆ, ವಿಷ್ಣುವಿನ ಸ್ವಾತಂತ್ರ್ಯ, ಚೇತನಾಚೇತನ ಜಗದ್ಭಿನ್ನತ್ವ, ಅವನ ನಿರ್ದೋಷತ್ವ ಸಿದ್ಧಿಗಾಗಿ ಭೇದಾಭೇದ ನಿರಾಕರಣೆ, ಏತಕ್ಕೆಂದರೆ ಅಭೇದವಿದ್ದರೆ ದೋಷ ತಪ್ಪುವುದಿಲ್ಲ, ಹಾಗೇ ಅವನ ಗುಣಪೂರ್ಣತೆ ಸಿದ್ಧಿಗಾಗಿ ಮುಕ್ತನಾದರೂ ಅವನ ಅಧೀನರೆಂದು ಒಪ್ಪುವಿಕೆ, ಮುಕ್ತರೂ ಸಂಸಾರದಲ್ಲಿ ಹೇಗೆ ಭಿನ್ನರೋ, ಸಂಸಾರ ದಾಟಿದ ಮೇಲೂ, ಹಾಗೇ ಹರಿ ಭಿನ್ನರು, ಒಂದು ಸಂಸಾರ ಕಾಲದಲ್ಲಿ ಭಿನ್ನರೆಂದ ಮೇಲೆ ಮುಕ್ತಿಯಲ್ಲಿ ಅಭೇದವೆನ್ನ ಕೂಡದು. ಯಾವಾಗಲೂ ಅತ್ಯಂತ ಭಿನ್ನರೇ. ಹೀಗೆಯೇ ವಿಷ್ಣುವಿನ ಅನಂತರದಲ್ಲಿ ರಮಾದೇವಿಯು ನಿರ್ದೋಷಳು. ನಂತರ ಬ್ರಹ್ಮದೇವರು, ಸರಸ್ವತೀ, ಗರುಡ, ಶೇಷ, ರುದ್ರರು, ಅವರ ಸ್ತ್ರೀಯರು, ಶಕ್ರಕಾಮರು, ಇತರ ದೇವತೆಗಳು ಕ್ರಮವಾಗಿ ಮುಕ್ತಿಯಲ್ಲೂ ಸಂಸಾರದಲ್ಲಿ ಹೇಗೋ ಹಾಗೇ ತರತಮ ಭಾವದಿಂದ ಇರುತ್ತಾರೆಂದೇ ಸತ್ಸಿದ್ಧಾಂತ. ಇದಕ್ಕೆ ವಿರೋಧಿ ವಿಷಯ ಎಲ್ಲವೂ ನಂಬಿದವರಿಗೆ ಅಂಧಂತಮಸ್ಸನ್ನು ಕೊಡಿಸುತ್ತವೆ. " **ಅಂಧಂತಮಃ ಪ್ರವಿಶಂತಿ ಯೇ ಅವಿದ್ಯಾಮುಪಾಸತೇ** " ಎಂದು ಸ್ಪಷ್ಟ ಶ್ರುತಿಯೇ ಇದೆ. ಹೀಗೆ ಪೂರ್ವೋಕ್ತ ತತ್ವಗಳೆನ್ನೆಲ್ಲಾ ಅನಂತ ಶ್ರುತಿಗಳು, ಅಖಿಲ ಪಂಚರಾತ್ರಾಗಮ, ಮೂಲ ರಾಮಾಯಣ, ಭಾರತ, ಸ್ಮೃತಿಗಳು, ವಿಷ್ಣೂತ್ತಮತ್ವ ಬೋಧಕ ಪುರಾಣಗಳು, ಕಪಿಲ ದೇವರ ಸಾಂಖ್ಯ, ಬ್ರಹ್ಮತರ್ಕ, ಮೀಮಾಂಸಾ ಎಂಬ ಅನಂತ ಶಬ್ದರಾಶಿಗಳು ಪ್ರತಿಪಾದಿಸುತ್ತವೆ. ಮತ್ತು ಪ್ರತ್ಯಕ್ಷಾಗಮ ಮೂಲಕವಾದ ಅನಂತಯುಕ್ತಿಗಳು ಬೋಧಿಸುತ್ತವೆ. ಈಶ್ವರ ಪ್ರತ್ಯಕ್ಷ, ರಮಾದಿಗಳ ಪ್ರತ್ಯಕ್ಷ, ಸಕಲ ಮುಕ್ತಾಮುಕ್ತ

ಜ್ಞಾನಿಗಳ ಪ್ರತ್ಯಕ್ಷಗಳೂ ನಿರವಕಾಶವಾಗಿ ಸುದೃಢವಾಗಿ ಬೋಧಿಸುತ್ತವೆ. ಆದ್ದರಿಂದ ಇದೇ ವೇದಾದಿಗಳು ಶಾಸ್ತ್ರವೆನ್ನಿಸುತ್ತವೆ. ಈ ವೇದಾದಿ ಭಿನ್ನ ಪಾಶುಪತಾದಿಗಳು ವಿಷ್ಣ್ವುತ್ಕರ್ಷಾದಿ ವಿರೋಧಿ ಪ್ರತಿಪಾದಕವಾಗಿ ದುಃಶಾಸ್ತ್ರವೆನ್ನಿಸುತ್ತವೆ ಸಚ್ಛಾಸ್ತ್ರವನ್ನು ಅಭ್ಯಾಸ ಮಾಡಬೇಕು, ಎಂದರೆ ಪಾರಾಯಣ ಮಾಡಬೇಕು, ಶ್ರವಣ ಮಾಡಬೇಕು, ಬೋಧಿಸಬೇಕು, ಅದರಂತೆ ಅನುಷ್ಠಾನ ಮಾಡಬೇಕು ಎಂದರ್ಥ. ದುಃಶಾಸ್ತ್ರವನ್ನು ಪರಿತ್ಯಜಿಸಬೇಕು. ಓದಬೇಕಾದ್ದಿಲ್ಲ, ಶಕ್ತಿಯಿದ್ದರೆ ಓದಿ ಖಂಡಿಸಬೇಕು.)

4. ಹೀಗೆ ಅನೇಕ ಸ್ಥಳಗಳಲ್ಲೂ, ಪುರಾಣಗಳಲ್ಲೂ ಹೇಳಲ್ಪಟ್ಟಿದೆ.[1] ಇದರಿಂದ ಹನ್ನೊಂದನೆಯ ಶಾಸ್ತ್ರ ಸಂದರ್ಭವೂ ತುಂಬಾ ಇದೆ. ಆ ಅಧಿಕ ಸಮುದಾಯದಲ್ಲಿ ಸ್ವಾಪ್ನವೃಂದಾವನಾಖ್ಯಾನವೂ ಸಾತ್ವಿಕವಾಗಿ ಸೇರಿದೆ ಎಂದು ಸ್ಪಷ್ಟವಾಗುತ್ತದೆ. ಅದಕ್ಕೆ ಸಂತರೇ ಅಧಿಕಾರಿಗಳು, ಮುಕ್ತ್ಯಾದಿಗಳೇ ಫಲಗಳು, ವಿಷ್ಣ್ವುತ್ಕರ್ಷಾದಿಗಳೇ ವಿಷಯಗಳು ಎಂದು ಆಖ್ಯಾನದಲ್ಲೇ ಹೇಳಲ್ಪಟ್ಟಿದೆ. (ಅಧ್ಯಾಯ 3 ಶ್ಲೋಕ 49-53) ಗುರುರಾಜರೇ ಪ್ರತಿಜ್ಞೆ ಮಾಡಿದ್ದಾರೆ. ಅಧ್ಯಾಯ III-75. " ಕಾತ್ರ

---

1) ಭಾ. ತಾ. XI-3-27 " ಶ್ರದ್ಧಾಂ ಭಾಗವತೇ ಶಾಸ್ತ್ರೇ " ಎಂಬ ಭಾಗವತ ಶ್ಲೋಕದ ವ್ಯಾಖ್ಯಾನ ಮಾಡುತ್ತಾ ಶ್ರೀ ಆಚಾರ್ಯರು ಭಾಗವತ ಶಾಸ್ತ್ರವೆಂದರೆ— ವೇದಗಳು, ಭಾರತ, ಪಂಚರಾತ್ರ, ಮೂಲ ರಾಮಾಯಣ, ಭಾಗವತಾದಿ ಸಾತ್ವಿಕ ಪುರಾಣಗಳು ಮುಂತಾದುವನ್ನು ತೆಗೆದುಕೊಳ್ಳಬೇಕೆಂದು ಹೇಳಿ " ಸಂಗ್ರಾಹ್ಯತಾವಚ್ಛೇದಕ " ಧರ್ಮವನ್ನು ತಿಳಿಸಿದ್ದಾರೆ, "ಏತೇಷ್ವಪಿ ಯಥಾ ವಿಷ್ಣೋರಾಧಿಕ್ಯ ಪ್ರತಿಪಾದನಂ। ತದ್ಭಕ್ತಾನಾಂ ಚ ಕ್ರಮಶಃ ಸ ಏವಾರ್ಥೋ ನ ಚಾಪರಃ ॥ ಅನ್ಯಥಾ ದೃಶ್ಯಮಾನಂ ತು ಮೋಹಾಯೈವ ವಿನಿರ್ದಿಶೇತ್ । ತಸ್ಮಾತ್ಸರ್ವೇಷು ಶಾಸ್ತ್ರೇಷು ವಿಷ್ಣೋರಾಧಿಕ್ಯ ಮೇವತು। ಕ್ರಮೇಣ ಚ ತದೀಯಾನಾಂ ಪ್ರತಿಪಾದ್ಯಂ ನ ಚಾಪರಂ ॥ ಇತಿ ಬ್ರಹ್ಮಾಂಡೇ ಎಂದು ಹೇಳಿದ್ದಾರೆ. " ಪಂಚರಾತ್ರ ವಿರೋಧಿಷು (ಶಾಸ್ತ್ರೇಷು) । ಸದೈವ ನಿಂದಾ ಸರ್ವತ್ರ ಬ್ರಹ್ಮಾದಿ ಸ್ಥಾವರಾಂತಕೈಃ । ಸಮ್ಯಕ್ಕಾರ್ಯಾ ತದ್ವಿನಾಚ ತಮೋ ಯಾಂತಿ ವಿನಿಶ್ಚಯಾತ್ । ಕುರ್ವಂತ್ಯೇವ ಸುರಾಸ್ತತ್ರ ಇದನ್ಯೇಷಾಂ ತಮೋ ಭವೇತ್ ॥ " ಅಂಧಂ ತಮಃ ಪ್ರವಿಶಂತಿ ಯೇ ಅವಿದ್ಯಾಮುಪಾಸತೇ ತತೋ ಭೂಯ ಇವ ತಮೋ ಯ ಉ ವಿದ್ಯಾಯಾಂ ರತಾಃ॥ ಇತಿ ಚ । ಗೃಹಿಣೋ ಅಪ್ಯಲ್ಪ ಬೋಧಸ್ಯ ನ ಕಲಾಸು ಪ್ರಯೋಜನಂ। ಆವರ್ತಯೇದ್ವೇದತಂತ್ರಂ ಮುಹುರ್ಮುಹುರ್ಹರಿರತ್ರ ಹಿ ॥ ಇತಿ ಹರಿವಂಶೇಷು " (ಅರ್ಥ :– ಇವುಗಳಲ್ಲಿ ಹೇಗೆ ವಿಷ್ಣು ಸರ್ವೋತ್ತಮತ್ವ. ವಿಷ್ಣು ಭಕ್ತರ ತಾರತಮ್ಯಾದಿಗಳು ಅಬಾಧಿತವಾಗಿ ಹೇಳಲ್ಪಟ್ಟಿವೆಯೋ ಅವುಗಳೇ ತತ್ವಾರ್ಥ. ತತ್ವವಿರುದ್ಧವಾಗಿ ಪ್ರತೀತವಾದರೆ ಆ ಭಾಗ ದುರ್ಜನರಿಗೆ ಮೋಹಾರ್ಥವೇ ಎಂದು ನಿಶ್ಚಯಿಸಬೇಕು. ಆದ್ದರಿಂದ ಸಚ್ಛಾಸ್ತ್ರಗಳಿಗೆಲ್ಲಾ ವಿಷ್ಣುವಿನ ಆಧಿಕ್ಯ, ತದೀಯರ ತಾರತಮ್ಯಗಳೇ ಪ್ರತಿಪಾದ್ಯ, ತದ್ಭಿನ್ನವಲ್ಲ ಎಂದು ಬ್ರಹ್ಮಾಂಡದಲ್ಲಿದೆ. ಪಂಚರಾತ್ರ ವಿರೋಧಿ ಶಾಸ್ತ್ರಗಳನ್ನು ಬ್ರಹ್ಮಾದಿ ಸ್ಥಾವರಾಂತ ಸಕಲ ಸಾಧಕರೂ ನಿಂದಿಸಬೇಕು. ಹಾಗೆ ಮಾಡದೆ ಇದ್ದರೆ ತಮಸ್ಸಾಗುತ್ತೆ. ದೇವತೆಗಳೆಲ್ಲರೂ ಆ ದುಷ್ಟ ಶಾಸ್ತ್ರಗಳನ್ನು ಖಂಡಿಸಿಯೇ ಖಂಡಿಸುತ್ತಾರೆ. ಇತರರು ಹಾಗೆ ನಿಂದಿಸದೆ ತಮಸ್ಸನ್ನು ಹೊಂದುತ್ತಾರೆ. ವಿಪರೀತ ಜ್ಞಾನ ಜನಕ ಶಾಸ್ತ್ರಗಳನ್ನು ಉಪಾಸನೆ ಮಾಡುವವರು

ಕೀರ್ತಿರ್ಯತೀನಾಂ ತು ಶಾಸ್ತ್ರ ಸಿದ್ಧಂ ವಿಧಿಂ ವಿನಾ ॥ .... ವಿಪ್ರ ಪ್ರಾಣಾವಧಿರ್ಯಾವತ್ತತ್ಪ್ರಮಾಣಾವಿರೋಧತಃ ॥41॥ ತದ್ವ್ಯಾಖ್ಯಾಂ ಚ ಪ್ರವಕ್ಷ್ಯೇಹಂ ಮದ್ವ್ಯಾಖ್ಯಾವಿಷ್ಟಯೋನಯಾ ॥" (ಶಾಸ್ತ್ರ ತಾತ್ಪರ್ಯದಂತೆ ಅನುಷ್ಠಾನ ಮಾಡದಿದ್ದರೆ ಯತಿಗಳಿಗೆ ಯಾವ ಕೀರ್ತಿ ಇದೆ ? ...... ಈ ಗ್ರಂಥವನ್ನು ವಿಪ್ರನು ಸಾಯುವವರಿಗೂ ಸತ್ಪ್ರಮಾಣಗಳಿಗೆ ಅವಿರೋಧವಾಗಿ ಉಪದೇಶ ಮಾಡುತ್ತೇನೆ. ನನ್ನ ಬಾಯಿಯಿಂದ ಆವೇಶಯುಕ್ತವಾದ ಅವನ ಬಾಯಿಯಿಂದ ಲೋಕಕ್ಕೆ

ತಮಸ್ಸಿಗೆ ಹೋಗುತ್ತಾರೆ. ನಾವು ಯಥಾರ್ಥ ಜ್ಞಾನ ಹೊಂದಿದರೆ ಸಾಕು, ವಿಪರೀತ ಬೋಧಕ ಶಾಸ್ತ್ರಗಳನ್ನು ಏತಕ್ಕೆ ನಿಂದಿಸಬೇಕು ಎಂದು ಇರುವವರು ಇನ್ನೂ ಅಧಿಕ ತಮಸ್ಸನ್ನು ಹೊಂದುತ್ತಾರೆ ಎಂದು ಶ್ರುತಿ ಇದೆ. ಅಲ್ಪ ಜ್ಞಾನವುಳ್ಳ ಸಂಸಾರಿ ಸಾಧಕನಿಗೆ ಕಲಾವಿದ್ಯಾಗಳಿಂದ ಏನೂ ಪ್ರಯೋಜನ ವಿಲ್ಲ, ಆತನು ಗುರೂಕ್ತ ವೇದ ಶಾಸ್ತ್ರವನ್ನು ಅಲ್ಲಿರುವ ಸರ್ವೋತ್ತಮತ್ವವನ್ನು ತಿಳಿದು ಆವರ್ತ ಮಾಡುತ್ತಿದ್ದರೆ ಸಾಕು ಎಂದು ಹರಿವಂಶದಲ್ಲಿದೆ.) ಹರಿಸರ್ವೋತ್ತಮತ್ವಾದಿ ಮಹಾಪ್ರಮೇಯಗಳನ್ನು ಪ್ರತಿಪಾದನೆ ಮಾಡುವುದೇ ಸಾತ್ವಿಕ ಶಾಸ್ತ್ರ ಎಂದು ಸಾರಾಂಶ. ಪುಟ 1090 ಭಾಗವತ ತಾತ್ಪರ್ಯ ಕನ್ನಡ - ಮಧ್ವಮುನಿ ಸೇವಾ ಸಂಘ ಪ್ರಕಟನೆ - ಉಡುಪಿ.

"ಅದ್ವೈತ ಭ್ರಾಂತಿ ಪ್ರಕಾಶ" ಶ್ರೀ ಸತ್ಯಧ್ಯಾನತೀರ್ಥ ವಿರಚಿತ, ಪುಟ 60 ರಲ್ಲಿ ವಿಷ್ಣೂತ್ಕರ್ಷ ಬೋಧಕ ಪುರಾಣಗಳು ಸಾತ್ವಿಕ ಎಂದು ಹೇಳಿ ಪ್ರಮಾಣ ಉದಾಹರಿಸಿದ್ದಾರೆ. ಮತ್ಸ್ಯ ಪುರಾಣೇ 53 ಅಧ್ಯಾಯೇ "ಪುರಾಣಾನಾಂ ತ್ರೈವಿಧ್ಯಂ ತತ್ಪ್ರತಿಪಾದ್ಯ ದೇವತಾನಾಮಪಿ ತ್ರೈವಿಧ್ಯಂ । "ಸಾತ್ವಿಕೇಷು ಪುರಾಣೇಷು ಮಾಹಾತ್ಮ್ಯಮಧಿಕಂ ಹರೇಃ । ರಾಜಸೇಷು ಚ ಮಾಹಾತ್ಮ್ಯಮಧಿಕಂ ಬ್ರಹ್ಮಣೋ ವಿದುಃ ॥ ತದ್ವದಗ್ನೇಶ್ಚ ಮಾಹಾತ್ಮ್ಯಂ ತಾಮಸೇಷು ಶಿವಸ್ಯ ಚ ॥ ಸಂಕೀರ್ಣೇಷು ಸರಸ್ವತ್ಯಾಃ ಪಿತೄಣಾಂ ಚ ನಿಗದ್ಯತೇ ॥ ಸಂಕೀರ್ಣಾಸ್ತಾಮಸಾಶ್ಚೈವ ರಾಜಸಾ ಸಾತ್ವಿಕಾಸ್ತಥಾ । ರಜಸ್ತಮೋಮಯಾ ಸ್ತದ್ವತ್ ಏತೇ ತ್ರಿಂಶದುದಾಹೃತಾಃ ॥ ಸಂಕೀರ್ಣೇಷು ಸರಸ್ವತ್ಯಾಃ ಪಿತೄಣಾಂ ವೃಷ್ಟಿ ರುಚ್ಯತೇ । ಅಗ್ನೇಃ ಶಿವಸ್ಯ ಮಾಹಾತ್ಮ್ಯಂ ತಾಮಸೇಷು ಪ್ರಕೀರ್ತಿತಂ ॥ ರಾಜಸೇಷು ತು ಮಾಹಾತ್ಮ್ಯಮಧಿಕಂ ಬ್ರಹ್ಮಣಃ ಸ್ಮೃತಂ ॥ ಯಸ್ಮಿನ್ ಕಲ್ಪೇ ತು ಯತ್ಪ್ರೋಕ್ತಂ ಪುರಾಣಂ ಬ್ರಹ್ಮಣಾ ಪುರಾ । ತಸ್ಯ ತಸ್ಯ ತು ಮಾಹಾತ್ಮ್ಯಂ ತತ್ಸ್ವರೂಪೇಣ ವರ್ಣ್ಯತೇ ॥ ಸಾತ್ವಿಕೇಷ್ವಧಿಕಂ ತದ್ವತ್ ವಿಷ್ಣೋರ್ಮಾಹಾತ್ಮ್ಯ ಮುತ್ತಮಂ ॥ ದೇವಾನಾಂ ದೈವತಂ ವಿಷ್ಣುಃ ದಾನವಾನಾಂ ತ್ರಿಶೂಲಧೃಕ್ ॥

ii. ಕೂರ್ಮಪುರಾಣೇ :- ಉತ್ತರಾರ್ಧೇ 84 ಅಧ್ಯಾಯೇ :- ಅಸಂಖ್ಯಾತಾ ಸ್ತಥಾ ಕಲ್ಪಾಃ ಬ್ರಹ್ಮ ವಿಷ್ಣು ಶಿವಾತ್ಮಕಾಃ । ಕಥಿತಾ ಹಿ ಪುರಾಣೇಷು ಮುನಿಭಿಃ ಕಾಲ ಚಿಂತಕೈಃ ॥ ಸಾತ್ವಿಕೇಷ್ವಥ ಕಲ್ಪೇಷು ಮಾಹಾತ್ಮ್ಯಮಧಿಕಂ ಹರೇಃ । ತಾಮಸೇಷು ಹರಸ್ಯೋಕ್ತಂ ರಾಜಸೇಷು ಪ್ರಜಾಪತೇಃ । ಯೋಽಯಂ ಪ್ರವರ್ತತೇ ಕಲ್ಪಃ ವಾರಾಹಃ ಸಾತ್ವಿಕೋಮತಃ ॥ (ಅರ್ಥ: - ಮತ್ಸ್ಯಪುರಾಣ 53 ನೇ ಅಧ್ಯಾಯದಲ್ಲಿ ಪುರಾಣಗಳು ತ್ರಿವಿಧ. ಅವುಗಳಲ್ಲಿ ಪ್ರತಿಪಾದಿತವಾದ ದೇವತೆಗಳೂ ತ್ರಿವಿಧ, ಹೇಗೆಂದರೆ, ಸಾತ್ವಿಕ ಪುರಾಣಗಳಲ್ಲಿ ಶ್ರೀಹರಿಯ ಮಹಿಮೆಯು ಅಧಿಕವಾಗಿ ಎಂದರೆ ಅವನೇ ಶ್ರೇಷ್ಠನೆಂದು ಹೇಳಲ್ಪಟ್ಟಿದೆ. ರಾಜಸ ಪುರಾಣಗಳಲ್ಲಿ ಬ್ರಹ್ಮ ದೇವರು

ಹೇಳುತ್ತೇನೆ) ಹೀಗೆ ಅನುಬಂಧ ಚತುಷ್ಟಯವೂ ಇದೆ ಎಂದು ಹೇಳಿದ್ದಾರೆ. ಅಧ್ಯಾಯ III ಶ್ಲೋಕ 49 – " ಏತದ್ರಹಸ್ಯಂ ಮಮ ಪುತ್ರ ಶಿಷ್ಯನ್ ತ್ವಂ ಸುಪ್ರಸಿದ್ಧಂ ಕುರು ಸತ್ಸು ನಿತ್ಯಂ | ಶೃಣ್ವಂತು ಸರ್ವೇ ಸುಜನಾಶ್ಚ ಮತ್ಕೃತಿಂ ಸರ್ವೇಷ್ಟದಾತ್ರೀಂ ಶರಣಾಗತಾನಾಂ || ಇದಮದ್ಭುತಮಾಖ್ಯಾನಂ ಮಮ ವೃಂದಾವನಸ್ಯ ಚ | ಶೃಣ್ವತಾಂ ಪಠತಾಂ ವಾಪಿ ಸರ್ವಾಭೀಷ್ಟಪ್ರದಂ ಸತಾಂ || ಇದಂ ತು ಸಂಶಯವತಾಂ ನ ತು ಶಂಸ ಕದಾಚನ | ವಿಶ್ವಾಸಿನಾಂತು ಶಂಸ ತ್ವಂ ಶೇಷಶಾಯಿ ಸದಾತ್ಮನಾಂ || ಇದಂ ಸಮಾಪ್ತಂ ಮಮ ಶೋಭನಂ ಮದ್ವೃಂದಾವನಾಖ್ಯಾನ-ಮನುತ್ತಮಂ ನೃಣಾಂ | ಯಚ್ಛೃಣ್ವತಾಂ ಭಕ್ತಿರುದಾರ ಸದ್ಗುಣೇ ಹರೌ ಪರೇಲೋಕಗತೇ ತಥಾ ಮಯಿ || ಭವತ್ಯಹೋ ಸರ್ವ ಶುಭಾಪ್ತಿ ಸನ್ಮತಿಂ ದದಾತ್ಯಜಸ್ರಂ ಸುತ ಸತ್ಯ ಮೇವ ತತ್ || ಅತಃ ಸತಾಂ ತ್ವಂ ವದ ಮತ್ಕೃತಿಂ ಸದಾ ಶುಭಾಪ್ತಯೇ ತೇ ಚ ಮಮಾತ್ರ ಕೀರ್ತಯೇ ||53|| (ಅರ್ಥ :- ಎಲೈ ಶಿಷ್ಯನೇ ! ಮಹಾ ಮಹಿಮೆಯುಳ್ಳ ಈ ರಹಸ್ಯವನ್ನು ನೀನು ತಿಳಿದುಕೊಂಡು ಸಜ್ಜನರಲ್ಲಿ ನಿತ್ಯವೂ ಉಪದೇಶಿಸು. ಎಲ್ಲಾ ಸಜ್ಜನರೂ, ಶರಣಾಗತರಾದ ಭಕ್ತರಿಗೆ ಸರ್ವೇಷ್ಟದಾಯಕವಾದ, ಈ ನನ್ನ ಕೃತಿಯನ್ನು ಶ್ರವಣ ಮಾಡಲಿ, ನನ್ನ ವೃಂದಾವನದ ಮಹಿಮೆಯನ್ನು ತಿಳಿಸುವ ಈ ಆಖ್ಯಾನವು ಅತ್ಯದ್ಭುತವಾದುದು. ಶ್ರವಣ ಮಾಡುವ ಅಥವಾ ಪಠಿಸುವ ಸಜ್ಜನರಿಗೆ ಸರ್ವಾಭೀಷ್ಟಪ್ರದವು. ಸಂಶಯವುಳ್ಳವರಿಗೆ (ಪೂರ್ವಗ್ರಹ ದೂಷಿತರಿಗೆ) ಇದನ್ನು ಯಾವಾಗಲೂ

ಅಧಿಕನೆಂದು ಪ್ರತಿಪಾದಿಸಲ್ಪಟ್ಟಿದೆ. ತಾಮಸಗಳಲ್ಲಿ ಅಗ್ನಿಯ ಮಹಾತ್ಮ್ಯವು ಅಥವಾ ಶಿವನ ಆಧಿಕ್ಯವು ಹೇಳಲ್ಪಟ್ಟಿದೆ. ಸಂಕೀರ್ಣಗಳಲ್ಲಿ ಎಂದರೆ ರಾಜಸ ತಾಮಸ ಮಿಶ್ರ ಪುರಾಣಗಳಲ್ಲಿ ಸರಸ್ವತಿಯ ಅಥವಾ ಪಿತೃಗಳ ಅಧಿಕ್ಯವು ಹೇಳಲ್ಪಟ್ಟಿದೆ. ಸಂಕೀರ್ಣಗಳು, ತಾಮಸಗಳು, ರಾಜಸಗಳು ಮತ್ತು ಸಾತ್ವಿಕಗಳು, ಮತ್ತು ರಜಸ್ತಮೋಮಯವಾದುವು ಹೀಗೆ ಇವೆಲ್ಲವೂ ಮೂವತ್ತು ಉದಾಹರಿಸಲ್ಪಟ್ಟಿವೆ. ಸಂಕೀರ್ಣಗಳಲ್ಲಿ ಸರಸ್ವತೀ, ಪಿತೃ ದೇವತೆಗಳ ಆಧಿಕ್ಯವೂ, ತಾಮಸಗಳಲ್ಲಿ ಶಿವನ ಸರ್ವೋತ್ತಮತ್ವವೂ, ರಾಜಸಗಳಲ್ಲಿ ಬ್ರಹ್ಮರಾಯನ ಆಧಿಕ್ಯವೂ ಹೇಳಲ್ಪಟ್ಟಿವೆ. ಬ್ರಹ್ಮನಿಂದ ಪೂರ್ವದಲ್ಲಿ ಪುರಾಣವು ರಚಿಸಲ್ಪಡುವಾಗ ಯಾವ ವಿಧದ ಗ್ರಂಥದಲ್ಲಿ ಯಾರ ಮಹಿಮೆ ಹೇಳಲ್ಪಡುತ್ತೆಯೋ ಆ ಮಹಿಮೆಯು ಅವನಿಗೇ ತಾತ್ವಿಕವೆಂದೂ, ಎಂದರೆ ಆ ದೇವತೆಯೇ ಸರ್ವೋತ್ತಮನೆಂದು ಹೇಳಲ್ಪಟ್ಟಿದೆ. ಹಾಗೆಯೇ ಸಾತ್ವಿಕ ಗ್ರಂಥಗಳಲ್ಲಿ ವಿಷ್ಣುವಿನ ಉತ್ತಮತ್ವವೇ ನಿರೂಪಿತವಾಗಿದೆ. ದೇವತೆಗಳ ದೇವರೆಂದರೆ ವಿಷ್ಣು, ದಾನವರ ದೇವರೆಂದರೆ ಶೂಲಪಾಣಿ ಶಿವನೇ.

ಕೂರ್ಮಪುರಾಣ ಉತ್ತರಾರ್ಧ 84 ನೇ ಅಧ್ಯಾಯದಲ್ಲಿ ಹೀಗಿದೆ :- ಬ್ರಹ್ಮ ವಿಷ್ಣು ಶಿವರುಗಳನ್ನು ಪ್ರತಿಪಾದಿಸುವ ಗ್ರಂಥಗಳು ಅಸಂಖ್ಯಾತವಾಗಿವೆ ಎಂದು ಕಾಲಚಿಂತಕ ಮುನಿಗಳಿಂದಲೇ ಪುರಾಣಗಳಲ್ಲಿ ಹೇಳಲ್ಪಟ್ಟಿದೆ. ಸಾತ್ವಿಕ ಗ್ರಂಥ ಭಾಗಗಳಲ್ಲಿ ಹರಿಯ ಮಹಿಮೆಯೇ ಹೆಚ್ಚಾಗಿ ಹೇಳಲ್ಪಟ್ಟು ಅವನೇ ಸರ್ವಾಧಿಕನೆಂದಿದೆ. ತಾಮಸ ಗ್ರಂಥ ಭಾಗಗಳಲ್ಲಿ ಶಿವ ಸರ್ವೋತ್ತಮತ್ವವೇ ಹೇಳಲ್ಪಟ್ಟಿದೆ, ರಾಜಸಗಳಲ್ಲಿ ಪ್ರಜಾಪತಿ ನಾಮಕ ಚತುರ್ಮುಖನ ಸರ್ವಾಧಿಕ್ಯವು ಪ್ರತಿಪಾದಿತವಾಗಿದೆ. ಈಗ ಪ್ರಖ್ಯಾತವಾಗಿರುವ ವಾರಾಹ ಪುರಾಣ ಭಾಗವು ಸಾತ್ವಿಕವು ಅದರಲ್ಲಿ ವಿಷ್ಣೂತ್ಕರ್ಷವೇ ಹೇಳಲ್ಪಟ್ಟಿದೆ.) ಅಂಥ ವಿಷ್ಣೂತ್ಕರ್ಷವೇ ಆಖ್ಯಾನದಲ್ಲೂ ಹೇಳಲ್ಪಟ್ಟಿದೆ.

ಹೇಳಬೇಡ. ವಿಶ್ವಾಸಿಗಳಾದ ಹರಿಭಕ್ತರಿಗೆ ನಿತ್ಯವೂ ಹೇಳು. ಈ ಉತ್ತಮ ವೃಂದಾವನಾಖ್ಯಾನವು ಜನರಿಗೆ ಸರ್ವೋತ್ತಮ ಉಪಕಾರವಾಗಲೆಂದು ಹಯಗ್ರೀವ ಸ್ವಾಮಿಯ ಕೃಪೆಯಿಂದ ನನ್ನಿಂದ ಸಂಪಾದಿಸಲ್ಪಟ್ಟಿದೆ. ಇವರ ಶ್ರವಣದಿಂದ ಮುಮುಕ್ಷುಗಳಿಗೆ ಉದಾರ ಸದ್ಗುಣ ಪೂರ್ಣ ಹರಿಯಲ್ಲಿ ಭಕ್ತಿಯೂ, ಅವನೊಂದಿಗೆ ಹರಿಲೋಕಗಳಲ್ಲಿ ವಾಸ ಮಾಡುವ ಗುರುವಾದ ನನ್ನಲ್ಲಿ ಭಕ್ತಿಯೂ ಉಂಟಾಗುತ್ತದೆ. ಇನ್ನೂ ಸರ್ವ ಸಾಧನೋಪಯೋಗಿ ಮಂಗಳ ಬುದ್ಧಿಯನ್ನು ಇದು ಸರ್ವದಾ ಕೊಡುತ್ತಿರುತ್ತದೆ. ಇದು ಸತ್ಯ. ಆದ್ದರಿಂದ ಹೇ ಲಕ್ಷ್ಮೀಪತಿ ! ಸಜ್ಜನರಿಗೆ ಇದನ್ನು ಶುಭಪ್ರಾಪ್ತಿಗಾಗಿ ಉಪದೇಶಿಸು. ನನ್ನ ಕೀರ್ತಿಯನ್ನು ಕೇಳಲಿ.)

5. ಸಮಗ್ರ ಪುಸ್ತಕಕ್ಕೆ ಶ್ರೀ ವಾದಿರಾಜರ ಮಹಿಮೆ ಮುಂತಾದುವು ಅಲ್ಲದೆ ಹರಿಮಹಿಮೆಯೂ ವಿಷಯ ಎಂದಿದೆ. ಅಧ್ಯಾಯ XI ಶ್ಲೋಕ - 4 " ದ್ವಿಜೇತಿ ಗರುಡಸ್ಯಾಪಿ ಸಮ್ಯಕ್ಸಂಬೋಧನಾದಿನಾ ಕೃತಾ । ಪುತ್ರೇತಿ ನರಕೋತ್ತಾರಂ ಹರಿಂ ಪ್ರತ್ಯುಕ್ತವಾನಹಂ ॥64॥ ಶೇಷೇತಿ ಭೂಧರಂ ಶೇಷಂ ವ್ಯಾಸೇತಿ ವ್ಯಾಸಮೇವ ಚ । ಸೀತಾಪತೇತಿ ರಾಮಂ ಚ ಭೂಪೇತಿ ಭೂಮಪಾಲಕಂ ॥65॥ ಭೂಪೇತಿ ಭೂಮೇರುದ್ಧಾರಂ ವರಾಹಂ ಚೋಕ್ತವಾನಹಂ । ತಸ್ಮಾದ್ಗ್ರಾಹ್ಯೋಭಯಾರ್ಥಶ್ಚ ಮತ್ಕೃತೇರರ್ಥ ಬುದ್ಧಿಭಿಃ ॥66॥ (ಅರ್ಥ :– ಈ ಆಖ್ಯಾನ ಗ್ರಂಥದ " ದ್ವಿಜ " ಪದದಿಂದ ಗರುಡನನ್ನು ಕರೆಯಲಾಗುತ್ತದೆ. " ಪುತ್ರ " ಎಂದರೆ ನರಕವಾಗದಂತೆ ಉದ್ಧರಿಸುವವನು (ಹರಿ) ಎಂದೂ ಅರ್ಥವಿಟ್ಟು ಉಪಯೋಗಿಸಿರುತ್ತೇನೆ. '' ಶೇಷ '' ಎಂದರೆ ನಾಗರಾಜ ಎಂದೂ, " ವ್ಯಾಸ " ಎಂದರೆ ಕೃಷ್ಣದ್ವೈಪಾಯನರೇ ಎಂದೂ, '' ಸೀತಾಪತಿ '' ಎಂದರೆ ರಾಮದೇವರೆಂದೂ, '' ಭೂಪ '' ಎಂದರೆ ಭೂದೇವಿ ಪಾಲಕ ವರಾಹ ದೇವರೆಂದೂ, ವಿವಕ್ಷೆಯಿಂದ ಹೇಳಿದ್ದೇನೆ. ಆದ್ದರಿಂದ ನನ್ನ ಗ್ರಂಥದ ಅರ್ಥ ಮಾಡುವವರಿಂದ ವಾದಿರಾಜರ ಪರವಾದ ಅರ್ಥ, ಅಂತರ್ಯಾಮಿಪರ ಅರ್ಥ ಎಂಬ ಉಭಯಾರ್ಥಗಳೂ ಗ್ರಾಹ್ಯ.) ದೇವಲೋಕದ ಇಂದ್ರಾದಿ ದೇವತೆಗಳೂ, ಭೂಲೋಕದ ಉತ್ತಮ ವೈಷ್ಣವರೂ, ಸಂಶಯಾದಿ ರಹಿತರೂ, ಹರಿಗುರು ಭಕ್ತರೂ ಅಧಿಕಾರಿಗಳು, ಹರಿಭಕ್ತಿ, ಗುರುಭಕ್ತಿ, ಸರ್ವ ಸಂಪತ್ಪ್ರಾಪ್ತಿ, ಅಭೀಷ್ಟ ಪ್ರಾಪ್ತಿ, ಪಾಪಾದಿನಾಶ, ವಿಘ್ನ ಪರಿಹಾರ ಮುಂತಾದ ಪ್ರಯೋಜನಗಳಿವೆ.

ಸರ್ವೋತ್ತಮನೆಂದು ವಿಷ್ಣು ಮಹಿಮೆ, ಹಯಗ್ರೀವಾದಿ ರೂಪಗಳ ಚರಿತ್ರೆ, ಅದಕ್ಕೆ ಅಂಗವಾಗಿ ವಾದಿರಾಜರ ಅನೇಕ ಮಹಿಮೆ, ವೇದನಿಧಿಗಳ ಮಹಿಮೆ, ಇಂದ್ರ ಪದವೀ ಯೋಗ್ಯ ದ್ವಿಜನ ಮಹಿಮೆ, ಹಯಗ್ರೀವಮುನಿ, ಶೇಷ, ಸೀತಾಪತಿ, ಲಕ್ಷ್ಮೀಪತಿ ಮುಂತಾದ ದೇವತ್ವಯೋಗ್ಯ ಶಿಷ್ಯರ ಮಹಿಮೆ ವಾದಿರಾಜ ಭಟ್ಟ, ವಿಠಲ, ಉಪೇಂದ್ರ ಭಟ್ಟ, ಸೂರಣ, ಶೇಷಾದ್ರಿ ಮುಂತಾದ ಬ್ರಹ್ಮಲೋಕ ಯೋಗ್ಯ ವೃಂದಾವನಾಖ್ಯಾನ ಸೇವಕರ ಮಹಿಮೆ, ಕ್ಷೇತ್ರ ಮಹಿಮೆ ಇವೆಲ್ಲಾ ವಿಷಯ.

ಮಂತ್ರವೀರ್ಯದ ಗ್ರಂಥವೆಂದರೆ ಮಂತ್ರದಂತೆ ಫಲವಾಗಲೆಂದು ಋಜು ಯೋಗಿಗಳು ಬಂಧ ಮರ್ಯಾದೆಯಿಂದ ರಚಿಸಿದ ಗ್ರಂಥ. ಪುರುಷಸೂಕ್ತ ಪಾರಾಯಣದಂತೆ ಫಲ ಬರುತ್ತದೆ. ಅಲ್ಲಿ ಹೇಳಿದ ಭವಿಷ್ಯಗಳು ಅನೇಕ ನಡೆದಿವೆ. ಸಮಗ್ರ ಗ್ರಂಥವು ಸಚ್ಛಾಸ್ತ್ರಾವಿರೋಧಿ; ಮಾಧ್ವ ಶಾಸ್ತ್ರವನ್ನು ಕೊಂಡಾಡತಕ್ಕದ್ದಾಗಿದೆ. ಮಧ್ವಮತ ಪ್ರಮೇಯಗಳಾದ ವಿಷ್ಣೂತ್ತಮತ್ವ, ತಾರತಮ್ಯ, ಜೀವ ತ್ರೈವಿಧ್ಯ, ಗುರ್ವಾವಶ್ಯಕತೆ, ಸ್ವೋತ್ತಮ ಸೇವೆಯ ಮಹತ್ವ ಮುಂತಾದುವುಗಳೇ ಗ್ರಂಥದಲ್ಲಿ ತುಂಬಿವೆ.

ಗ್ರಂಥ ಪಾರಾಯಣ ಮಾಡುವವರಿಗೆ ಪುನಃ ಪುನಃ ಗೀತೆಯು ಸ್ಮರಣೆಗೆ ಬರುವುದು. ಇಂದ್ರಾವತಾರಿ ಅರ್ಜುನನು ಕರ್ಮ ನಿಮಿತ್ತದಿಂದ ಸ್ವಧರ್ಮ ವಿಷಯದಲ್ಲಿ ಸಂದೇಹ ಹೊಂದಿ ಶ್ರೀಕೃಷ್ಣನಲ್ಲಿ ಶಿಷ್ಯ ಭಾವದಿಂದ ಶರಣಾಗತನಾಗಿ " ಶಿಷ್ಯಸ್ತೇಹಂ ಶಾಧಿ ಮಾಂ ತ್ವಾಂ ಪ್ರಪನ್ನಂ " ಎಂದು ಬೇಡಿದನು. ಶ್ರೀಕೃಷ್ಣನು ಪ್ರಸನ್ನನಾಗಿ ಸ್ವಧರ್ಮದಿಂದ ವಿಷ್ಣು ಪೂಜೆ ಮಾಡುವುದೇ ಕರ್ಮಯೋಗ. ಜ್ಞಾನಾನಂದಮಯನಾದ ವಿಷ್ಣು ಒಬ್ಬನೇ ಸ್ವತಂತ್ರನು, ಪೂರ್ಣನು, ಸರ್ವಾಂತರ್ಯಾಮಿಯು, ಸ್ವಭಕ್ತರಿಗೆ ಮೋಕ್ಷಪ್ರದನು ಇತ್ಯಾದಿ ಅವನ ವಿಭೂತಿ ಮಹಿಮೆ ತಿಳಿಯುವುದೇ ಜ್ಞಾನಯೋಗ. ಅವನಲ್ಲಿ ಭಕ್ತಿಮಾಡಿ ದರ್ಶನ ಹೊಂದಬೇಕು. ರಾಜಸ, ತಾಮಸ ಗುಣಗಳನ್ನು ತ್ಯಜಿಸಿ, ಸಾತ್ವಿಕ ವೃತ್ತಿಯಿಂದ ಇರುವವನೇ ಮುಕ್ತನಾಗುತ್ತಾನೆ. ಇತರರು ಜೀವಾಭೇದಾದಿ ದ್ವೇಷ ಮಾಡಿ ತಮಸ್ಸಿಗೆ ಹೋಗುತ್ತಾರೆಂದು ಬೋಧಿಸಿದನು. " ಹತಪ್ರಾಯರಾದ ನಿನ್ನ ಶತ್ರುಗಳನ್ನು ನನ್ನ ಅನುಗ್ರಹದಿಂದ ಕೊಲ್ಲು. . " ಭುಂಕ್ಷ್ವ ರಾಜ್ಯಂ ಸಮೃದ್ಧಂ " ಎಂದು ಪ್ರೇರಿಸಿದನು. ಅರ್ಜುನನು ಹಾಗೇ ಮಾಡಿ ಸುಖಿಯಾದನು. ಇಲ್ಲೂ ಇಂದ್ರ ಪದವಿ ಯೋಗ್ಯ ಜೀವನು ಗುರುರಾಜರಲ್ಲಿ ಶರಣಾಗತನಾಗಿ ಸಂಸಾರ ತಾಪವನ್ನು ತಪ್ಪಿಸಬೇಕೆಂದು ಬೇಡಿದನು. ಗುರುರಾಜರು ಉಪದೇಶದಿಂದಲೇ ಅವನ ಪ್ರಾರಬ್ಧವನ್ನು ಉಪಮರ್ದನ ಮಾಡಿ ಅವನ ಸ್ವರೂಪ ತಿಳಿಸಿ, ಅವನ ಸಾಧನೆಗಾಗಿ ತಮ್ಮ ಮಹಾತ್ಮ್ಯ ತೋರಿಸಿ, ಮುಂದೆ ಬಂದ ಅವನ ಸನ್ಯಾಸ ಜನ್ಮದಲ್ಲಿ ಅವನಲ್ಲಿ ಆವಿಷ್ಟರಾಗಿದ್ದು, ಮಧ್ಯವಾಟದ ವ್ಯಾಸದೇವರನ್ನು ತಂದು ಶ್ರೀಕೃಷ್ಣನ ಜೊತೆಯಲ್ಲಿ ಪೂಜಿಸಿ, ಅನಂತಾನಂತ ಅನಿತರ ಸಾಧಾರಣ ಉಪಾಸನೆಗಳನ್ನೂ ಅವರಿಂದ ಮಾಡಿಸಿ, ಅವರ ಶಿಷ್ಯರೂ, ಪ್ರಶಿಷ್ಯರೂ ಉದ್ಧೃತವಾಗುವಂತೆ ಶಕ್ತಿಯನ್ನು ತುಂಬಿ ಗ್ರಂಥವನ್ನು (ಗೀತೆಯನ್ನು ಶ್ರೀಕೃಷ್ಣನು ಪ್ರಚಾರ ಮಾಡಿದಂತೆ) ಅವನು ಮತ್ತು ಅವನ ಅನುಯಾಯಿಗಳಿಗಾಗಿ ಪ್ರಚಾರ ಮಾಡಿದ್ದಾರೆ. ಆ ಗ್ರಂಥದ ಸೇವೆಯಿಂದ ಗೀತೆಯಿಂದ ಹೇಗೋ ಹಾಗೇ, ಕೃಷ್ಣಾದಿ ಅಷ್ಟದಿಕ್ಪಾಲಾಂತ ಸರ್ವ ದೇವತಾ ಸಂತುಷ್ಟಿಯೂ ಆಗುತ್ತದೆ. ಗ್ರಂಥದ ಉಪೇಕ್ಷೆ ಮಾಡುವವರಿಗೆ ಯಮದೇವರು ನರಕಕ್ಕೆ ಹಾಕುತ್ತಾರೆ ಎಂದಿದೆ. ವಿಷಯಗಳೆಲ್ಲವೂ ಕೇವಲ ಪರಮ ಸಾತ್ವಿಕವೆಂಬುದು 22 ಅಧ್ಯಾಯಗಳ ಪರಾಮರ್ಶೆಯಿಂದ ವ್ಯಕ್ತವಾಗುತ್ತದೆ ಆ ಕಾರ್ಯ ಸ್ವಲ್ಪ ಮಾಡಲ್ಪಟ್ಟಿದೆ. ವಾಚಕರು ಎರಡನೆ ಭಾಗದಲ್ಲಿ ಕನ್ನಡ ಸಾರಾಂಶ ಓದಿ ಸ್ವಲ್ಪ ಆನಂದವನ್ನು ಹೊಂದಬಹುದು. ಹೀಗೆ ಪ್ರಮೇಯ ಪರೀಕ್ಷೆಯಿಂದಲೂ ಸ್ವಾಪ್ನ ವೃಂದಾವನಾಖ್ಯಾನವು ಸ್ವತಃ ಪ್ರಮಾಣ ಶಾಸ್ತ್ರಾನುಸಾರಿ ಉತ್ತಮ ಸಾತ್ವಿಕ ಶಾಸ್ತ್ರ ಗ್ರಂಥವೆಂದು ಸಿದ್ಧವಾಗುತ್ತದೆ. ಅಂಥ ಸ್ವತಃ ಪ್ರಮಾಣ ಶಾಸ್ತ್ರ ಗ್ರಂಥ ವಿಷಯದಲ್ಲಿ ಬಾಧಕ ಕಾಣದೆ, ವಿರೋಧಿ ಆಗಮ ಕಾಣದೆ, ನಿರ್ಮೂಲ ಶಂಕೆ ಮಾಡಿ ಪಾಪ ಸಂಪಾದಿಸಬಾರದು. ವಾದಿರಾಜರೇ ಸಜ್ಜನರು ನಿರ್ಮೂಲ ಶಂಕೆಗೆ ಉದ್ಯೋಗ ಮಾಡದೆ, ಸಾತ್ವಿಕ ವಿಚಾರ ಮಾಡಲೆಂದೇ ತಮ್ಮ ದ್ವಾತ್ರಿಂಶಲ್ಲಕ್ಷಣೋಪೇತ ಸುಂದರ ದೇಹದ ಪ್ರತಿಮೆಯನ್ನು ತಾವೇ ಪ್ರತಿಮಾ ಲಕ್ಷಣಗಳಿಂದ ಸಹಿತವಾಗುವಂತೆ ಮಾಡಿಸಿ, ಜನರು ಸಂಶಯಗಳನ್ನು ಅದರ ದರ್ಶನದಿಂದ ನೀಗಿ ಶ್ರದ್ಧಾಳುಗಳಾಗಲೆಂದು ಬಿಟ್ಟು ಹೋಗಿದ್ದಾರೆ. ತಥಾ ಚ ಪೂರ್ವೋಕ್ತ ಭಕ್ತಿಯಿಂದ ಧವಳ ಗಂಗೆಯ ಸ್ನಾನ, ವಾದಿರಾಜರ ವೃಂದಾವನ, ಪ್ರತಿಮಾ, ಪಾದುಕೆಗಳ ದರ್ಶನ, ಸ್ವಾಪ್ನ ವೃಂದಾವನಾಖ್ಯಾನದ ಪಾರಾಯಣ, ಇವುಗಳು ಪೂರ್ವೋಕ್ತ ರಂಗಪ್ಪಾಚಾರ್ಯಾದಿಗಳಿಗಿಂತ ಉತ್ತಮರಾದ ಪಂಡಿತ ಮಾಧ್ವರಿಂದಲೂ ಕರ್ತವ್ಯವೇ ಸರಿ.

ಅಧ್ಯಾಯ ೮

ಸೇವಿಸುವ ಪಂಡಿತರೇ ಮುಂತಾದವರಿಗಾಗುವ ಫಲ.

1. ಇದೂ ಅಲ್ಲದೆ " ಹೇ ಪಂಡಿತರೇ ! ಹೇಸಂತರೇ ! ಆಖ್ಯಾನವನ್ನು ಪಠನ ಮಾಡಿ, ಸರ್ವಾಭೀಷ್ಟಗಳನ್ನು ಹೊಂದಿ " ಎಂಬ ಘೋಷಣೆಗಳೂ ಗ್ರಂಥದಲ್ಲೇ ಇವೆ. ಮಂತ್ರ ಬಂಧದಿಂದ ಯೋಗೀಶ್ವರ ಮುಜಂಗಳಿಂದ ವೈಷ್ಣವ ಭಕ್ತರ ಉದ್ದೇಶ್ಯವಾಗಿಯೇ ರಚಿತವಾದ್ದರಿಂದ, " ಸಂತ " ರೆಲ್ಲರೂ ಶಿಲಾಸ್ಥ ಕೃತಿಯನ್ನು ನೋಡಿ ಶುಭಗತಿಯನ್ನು ಹೊಂದುತ್ತಾರೆಂದು 3-13 ರಲ್ಲಿದೆ. " ಏತತ್ಸರ್ವಂ.......... ಗರ್ವಂ ಹಿತ್ವಾ ಸರ್ವೇ ವಿಪ್ರವರ್ಯಾಸ್ಸ್ಯಜೇನ । ಶ್ರುತ್ವಾ ಚೋರ್ವಾಶ್ಯಂ ಶರ್ವ ಗುರ್ವಾದಿ ದೇವಾನ್ ದೃಷ್ಟ್ವಾ ಚೋರ್ವಶೀಂ ಯಾಂತು ಮಾಂ ಮಾನವೇಂದ್ರಾಃ (1-10 " ಎಂಬಲ್ಲಿ '' ಮಾನವೇಂದ್ರರು ಶ್ರವಣಮಾಡಿ ನನ್ನನ್ನು ಹೊಂದಲಿ '' ಎಂದು ಹೇಳಿದ್ದಾರೆ. ಅಧ್ಯಾಯ II 61 ರಲ್ಲಿ " ತಸ್ಮಾದ್ಯತಿಕುಲೈಃ ಸೇವ್ಯಂ ಮತಂ ಲೈಂಗಿಕ ಮಾರ್ಗಿಭಿಃ " ಎಂಬಲ್ಲಿ ಯುಕ್ತಿ ಶಾಸ್ತ್ರವಾದ ವೇದಾಂತ ಬಲ್ಲ ಯತಿಗಳೂ ಪಾರಾಯಣ ಮಾಡಬೇಕೆಂದು ನಿರೂಪಿಸಿದ್ದಾರೆ. ಅಧ್ಯಾಯ IV 46 ರಲ್ಲಿ '' ಶ್ರದ್ಧಾ ಯುಕ್ತೋ ಬುಧಾಗ್ರತಃ '' ಎಂದು ಪಂಡಿತರ ಎದುರಿಗೆ ಕುಳಿತು ಅವರಿಂದ ಶ್ರವಣ ಮಾಡಬೇಕೆಂದಿದೆ. ಅಧ್ಯಾಯ V - 11 ರಲ್ಲಿ " ಉಕ್ತಾನಿ ಸರ್ವ ಕರ್ಮಾಣಿ ಮಮ ವೈಭವ ಪರ್ವಣಿ । ಸರ್ವೇ ವದಂತು ಭದ್ರಾಣಿ ಸದಾ ಪರ್ವಣಿ ಪರ್ವಣಿ " ಎಂಬಲ್ಲಿ '' ಸರ್ವರೂ ಪರ್ವಕಾಲಗಳಲ್ಲಿ ಪಠಿಸಲಿ " ಎಂದಿದ್ದಾರೆ. ಅಧ್ಯಾಯ V 26 ರಲ್ಲಿ " ಏವಂ ನಿಶಮ್ಯ............ ಸುಜನಾಶ್ಚ ಸರ್ವೇ .... ಭಜಂತು " ಎಂದು ಸರ್ವ ಸಜ್ಜನರಿಗೂ ಪಾರಾಯಣ ಮಾಡಬೇಕೆಂದು ಬೋಧಿಸಿದ್ದಾರೆ. ಅಧಾಯ VI - 54 ರಲ್ಲಿ ಪಂಡಿತರಾದ ಸೀತಾಪತಿ, ಶೇಷ, ವ್ಯಾಸಭಕ್ತ, (ಲಕ್ಷ್ಮೀಪತಿ) ಗಳೆಂಬ ವಿಪ್ರನ ಮಿತ್ರರು ಶ್ರವಣ ಮಾಡಿ ಬಹು ಫಲ ಹೊಂದುತ್ತಾರೆಂದಿದೆ. ಅಧ್ಯಾಯ VI - 74 ರಲ್ಲಿ ಪಂಡಿತೋತ್ತಮರಾದ ವೇದನಿಧಿಗಳಿಗೇ "ವಿಶ್ವಾಸಂ ಕುರು ಮತ್ಕೃತೌ" ಎಂದು ಉಪದೇಶಿಸಿದ್ದಾರೆ. ಇತರ ಪಂಡಿತರು ವಿಶ್ವಾಸದಿಂದ ಪಾರಾಯಣ ಮಾಡಬೇಕೆಂದು ಕೈಮುತ್ಯ ನ್ಯಾಯ ಸಿದ್ಧವಾಯಿತು. ಅಧ್ಯಾಯ VII ಶ್ಲೋಕ 9 - 10 ರಲ್ಲಿ ಈ ಗ್ರಂಥ ವೇದಾರ್ಥದ ಸಾರವೆಂದು ಆಖ್ಯಾಯಿಕೆಯಿಂದ ತೋರಿಸಿ " ವಿಪ್ರಾಸ್ಯ ಸರಸೋದ್ಭೂತಂ ತರಸಾ ಸರ್ವ ಭೂಸುರಾಃ । ಶಿರಸಾ ಸ್ವರಸೋಪೇತಾಃ ಶ್ರಿಯೈ ತಾಮರಸಂ ಪರಂ ॥9॥ ಧಾರಯಂತು ಬುಧಾಗಾರೇ ಧಾರಯಂತು ಸದಾರಕಾಃ । ಆದರೈಃ ಪಾದರಜಸಾ ಧೂತಪಾಪಾಶ್ಚ ಯೇಽನರಾಃ ॥10॥ " ಎಂದಿದ್ದಾರೆ. (ಅರ್ಥ :- ವೇದಾರ್ಥವು ಬ್ರಾಹ್ಮಣನ ಮುಖದಿಂದ ಬರುವುದರಿಂದ ಎಲ್ಲಾ ಬ್ರಾಹ್ಮಣರೂ ಶಿರಸಾ ಈ ಗ್ರಂಥವನ್ನು ಧರಿಸಿ ಮಾನಮಾಡಲಿ. ಲಕ್ಷ್ಮೀದೇವಿಗೆ ಕಮಲ ಪ್ರಿಯವಾದಂತೆ

ದೇವರಿಗೆ ಪ್ರಿಯವೆಂದು ತಿಳಿದು, ದೇವತ್ವಯೋಗ್ಯ ಮನುಷ್ಯರೂ, ಇತರ ಮನುಷ್ಯರೂ ಪಂಡಿತರ ಮನೆಗಳಲ್ಲಿ ಕುಳಿತು ಶ್ರವಣ ಮಾಡಿ ಪಾಪನಿರ್ಮುಕ್ತವಾಗಿ ಮೆರೆಯಲಿ). ಆದ್ದರಿಂದ ಪಂಡಿತ ಮಾನ್ಯವೆಂದು ಹೇಳಿದಂತಾಯಿತು. ಉತ್ತಮಾಧಿಕಾರಕವೆಂದೂ ಸೂಚಿತವಾಗಿದೆ. ಅಧ್ಯಾಯ VII - 95 ರ " ಚತುರ್ವೇದೋದಿತಾರ್ಥೈಶ್ಚ ಚತುರಾಶ್ರಮ ವರ್ತಿಭಿ: " ಎಂಬ ವಾಕ್ಯದಿಂದಲೂ, ನಾಲ್ಕು ವೇದಗಳ ಪರಮ ತಾತ್ಪರ್ಯವು ಈ ಗ್ರಂಥದಲ್ಲಿದೆ; ನಾಲ್ಕು ವಿಧವಾಗಿ ಗುರು ದ್ವಾರಾ ನಾಲ್ಕು ಆಶ್ರಮದವರಿಗೂ ಜ್ಞಾನದಾಯಕವಾಗುತ್ತದೆ ಎಂದು ನಿರೂಪಿಸಿರುವುದರಿಂದ ಈ ಗ್ರಂಥಕ್ಕೆ ಮುಖ್ಯ ಅಧಿಕಾರಿಗಳು ಪಂಡಿತರೇ ಎಂದಾಗುತ್ತದೆ. ಅಧ್ಯಾಯ VIII - 39 ರಲ್ಲಿ " ಇತಿ ಚ ದ್ವಾದಶಾ-ಧ್ಯಾಯಾನ್ ಕುರು ಶೀಘ್ರಂ ಬುಧಾಗ್ರತ: " (ಕೊನೆಯ ಹನ್ನೊಂದು ಅಧ್ಯಾಯಗಳು; ನಾಂದೀ ಅಧ್ಯಾಯವಾದ ಪ್ರಥಮಾಧ್ಯಾಯ ಹೀಗೆ 12 ಅಧ್ಯಾಯ ಪ್ರಧಾನವಾಗಿ ಪಾರಾಯಣ ಮಾಡುವಂತೆ ಪಂಡಿತರಿಗೆ ಕಲಿಸು) ಎಂಬಲ್ಲಿ ಪಂಡಿತರೇ ಕೊನೆಯ ಭಾಗಕ್ಕೆ ಪ್ರಧಾನ ಅಧಿಕಾರಿಗಳೆಂದು ಸೂಚಿತವಾಗಿದೆ. ಮೊದಲು ನಾಲ್ಕು ಅಧ್ಯಾಯ ಗಂಗಾಸ್ನಾನ ಫಲ, ಪ್ರಥಮಾಧ್ಯಾಯ ಮತ್ತು 5 ರಿಂದ 11 ರ ಪೂರ್ತಿಯಾಗಿ ಏಳು ಅಧ್ಯಾಯ ಸೇರಿ ಅಷ್ಟಾಧ್ಯಾಯ ಪಾರಾಯಣ ಮಾಡಿಸು. " ಶಿಷ್ಟಾನಾಂ ತುಷ್ಟಿಂ ಕುರು ಯಥೇಷ್ಟತಃ " (ಎಂದರೆ ವಿಶೇಷತಃ ಮಡಿಯಿಂದ ಪಾರಾಯಣ ಮಾಡುವವರ ಅಭೀಷ್ಟ ಪ್ರಾಪ್ತಿಯಾಗುತ್ತದೆ ಎಂದು ತಿಳಿಸು) ಎಂದಿದೆ. ಕೊನೆಯ ಭಾಗವು ವಿಶೇಷತಃ ವಿದ್ವಜ್ಜನರಿಗೆ ಜ್ಞಾನ ಪ್ರದವಾದದ್ದು ಎಂದು ಗೊತ್ತಾಗುತ್ತದೆ.

ಅಧ್ಯಾಯ IX - 27 - 29 ಇಂದ್ರಾಣೀ ಮುಂತಾದ ದೇವಸ್ತ್ರೀಯರು ಲಕ್ಷ್ಮೀ ರೂಪಳಾದ ಭದ್ರಾ ದೇವಿಯೂ ಎದುರಿಗೆ ವೃಂದಾವನ ಕೃತಿಯನ್ನು ಭದ್ರಾಸನದ ಮೇಲಿಟ್ಟು ಆರತಿಮಾಡಿ, ಪತಿಗಳಿಂದ ಕೂಡಿಕೊಂಡು ಅರ್ಚಿಸಿ ಬಹುಮಾನ ಮಾಡಿದರೆಂದಿದೆ. ಆದ್ದರಿಂದ ಮನುಷ್ಯ ಪಂಡಿತರು ಪಾರಾಯಣ ಮಾಡಿ ಪೂಜಿಸಬಹುದೆಂದು ಸಿದ್ಧಿಸುತ್ತದೆ. 51 ನೆಯ ಶ್ಲೋಕದಲ್ಲಿ ಸಜ್ಜನರಿಗೆ ಸಂಸಾರತಾರಕವಾದ ಈ ಆಖ್ಯಾನವನ್ನು ಉಪದೇಶಿಸಬೇಕೆಂದು ಲಕ್ಷ್ಮೀಪತಿಗೆ ಆಜ್ಞಾಪಿಸಿದ್ದಾರೆ.

10 ನೇ ಅಧ್ಯಾಯದ 72 - 76 ಶ್ಲೋಕಗಳನ್ನು ನೋಡಿದರೆ ಎಂಥಾ ಪಂಡಿತರಿಗೂ ಈ ಗ್ರಂಥವನ್ನು ಅಭ್ಯಾಸ ಮಾಡಬೇಕೆನ್ನಿಸುತ್ತದೆ. " ಇಮಾಂ ಕೃತಿಂ ಶಿಲಾಯಾಂ ತು ಲೇಖಯಿತ್ವಾ ಮಮಾಗ್ರತ: । ಸ್ಥಾಪಯೇದತ್ರ ತಾಂ ದೃಷ್ಟ್ವಾ ಸಂತಃ ಸಂತೋಷಮಾಪ್ನುಯು: । ಇಮಾಂ ಕೃತಿಂ ನರೋ ಯಸ್ತು ಸ್ವಾಪ್ನೀಂ ಮಂದಸ್ಯ ಬುದ್ಧಿದಾಂ ॥73॥ ಪಠಿತ್ವಾ ಸರ್ವಪಾಪೇಭ್ಯೋ ಮುಚ್ಯತೇ ನಾತ್ರ ಸಂಶಯ: । ಅರ್ಥಂ ಬುಧ್ವಾ ಕೃತೇರಸ್ಯಾ: ಸರ್ವೇಷ್ಟಂ ಲಭತೇ ನರ: ॥ ಯೋನು ವಕ್ತಾ ಕೃತಿಮಿಮಾಂ ಮಮ ತೋಷಸ್ಯ ಭೂರಸೌ । ಖ್ಯಾತಿಂ ಕುರುಷ್ವಾಲ್ಪಮತೇ ಮಮ ಕೀರ್ತಿಂ ನರೇಷ್ವಪಿ । ಮಾಚ್ಯಾದಯ ಶುಭಾಂ ಶಕ್ತಿಂ ಮಮ ಖ್ಯಾತಿಂ ಶುಭೇಷ್ವಪಿ । ತ್ವಾಂ ಭಕ್ತ ಮಂತಂ ವಿಪ್ರೇಂದ್ರ ನ ಮುಂಚಾಮಿ ಕದಾಚನ ॥ " ಯದ್ವಕ್ತಿ ಬ್ರಾಹ್ಮಣಃ ಶ್ಲೋಕೈ: ತತ್ಸರ್ವಂ ಸತ್ಯಮೇವ ಚ । ತತ್ಕೃತವ್ಯ ಮವಶ್ಯಂತು ಮಮ ಶಾಸನ ಮೇವ ಚ । ಮಮ ರೋಷಾತ್ಸರ್ವ ಪುಣ್ಯೈಶ್ಚ ಮುಚ್ಯತೇ ನಾತ್ರ ಸಂಶಯ ॥29॥ " (ಅರ್ಥ :- ಹೇ ವಿಪ್ರ !

ಈ ಕೃತಿಯನ್ನು ಶಿಲಾದಲ್ಲಿ ಕೆತ್ತಿಸಿ ನನ್ನ ಮುಂದೆ ಇಟ್ಟಿದ್ದರೆ ಸಂತರು ಅದನ್ನು ನೋಡಿ ಸಾತ್ವಿಕ ಪುಣ್ಯ ಜನಕ ಸಂತೋಷವನ್ನು ಹೊಂದುತ್ತಾರೆ, ಸತ್ಯನಾರಾಯಣನ ಪ್ರಸಾದ ಭಕ್ಷಿಸಿದಂತೆ). ಯಾವನು ಶ್ರದ್ಧೆಯಿಂದ ಪಠಿಸುತ್ತಾನೆಯೋ ಅವನು ಸರ್ವ ಪಾಪಗಳಿಂದ ಬಿಡಲ್ಪಡುತ್ತಾನೆ. ಸಂಶಯವಿಲ್ಲ. ಅರ್ಥವನ್ನು ತಿಳಿದು ಈ ಕೃತಿಯನ್ನು ಪಠಿಸಿದರೆ ಸರ್ವಾಭೀಷ್ಟವು ಸಿದ್ಧಿಸುವುದು. ವೈಷ್ಣವರ ಸಭೆಯಲ್ಲಿ ಕೃತಿಯನ್ನು ಅನುವಾದ ಮಾಡುವವನು ನನ್ನ ಸಂತೋಷಕ್ಕೆ ವಿಷಯನಾಗುವನು. ಆದ್ದರಿಂದ ಸ್ವಲ್ಪ ಬುದ್ಧಿಯುಳ್ಳ ಎಲೈ ಪಂಡಿತನೇ ! ಸಜ್ಜನರ ಮಧ್ಯದಲ್ಲಿ ನನ್ನ ಕೀರ್ತಿಯನ್ನು ಮುಚ್ಚಬೇಡ. ನನ್ನಲ್ಲಿ ಭಕ್ತಿಯುಳ್ಳ ನಿನ್ನನ್ನು ಯಾವಾಗಲೂ ಬಿಡುವುದಿಲ್ಲ ॥76॥ ಎಲೈ ದೂಷಕ ಪುರುಷರೇ, ಬ್ರಾಹ್ಮಣನು ಬೆಳಿಗ್ಗೆ ಎದ್ದು ಶ್ಲೋಕಗಳನ್ನೇನು ಹೇಳುತ್ತಾನೋ ಅದೆಲ್ಲವೂ ಸತ್ಯವೇ. ಅದರಲ್ಲಿ ಹೇಳಿದ್ದನ್ನು ನನ್ನ ಶಾಸನವೆಂದು ತಿಳಿದು ಸರ್ವರೂ ಅನುಷ್ಠಾನ ಮಾಡಬೇಕು. ನನ್ನ ಕೋಪಕ್ಕೆ ವಿಷಯರಾದರೆ ಸಾಧಕರು ಸರ್ವ ಪುಣ್ಯಗಳಿಂದ ಹೀನರಾಗುತ್ತಾರೆ. ಈ ವಿಷಯದಲ್ಲಿ ಸಂಶಯವಿಲ್ಲ). ಪಂಡಿತರಿಗೇ ಈ ಶಾಸನ ಗೊತ್ತಾಗುತ್ತೆ.

ಮೇಲ್ಕಂಡ ಫಲಗಳೂ, ಪ್ರತ್ಯವಾಯದ ತಪ್ಪುವಿಕೆಯೂ ಯಾವ ಪಂಡಿತರಿಗೆ ಬೇಡ ? ಆ ದೃಷ್ಟಿಯಿಂದಲೂ ಪಠ್ಯವೆಂದು ಹೇಳಿಯಾಗಿದೆ. ಅಧ್ಯಾಯ X ಶ್ಲೋಕ 145 – 146 ಗಳಲ್ಲಿ ಶೇಷನಿಗೆ ತಪ್ಪದೆ ಕೃತಿಯನ್ನು ಬೋಧಿಸಬೇಕೆಂದು ವಿಪ್ರನನ್ನೇ ಪ್ರೇರಿಸಿದ್ದಾರೆ. ಅಂಥ ಉತ್ತಮಾಧಿಕಾರಿಗೆ ಕೃತಿಯು ಲಾಭದಾಯಕವಾದರೆ ಪಂಡಿತ ಸಾಮಾನ್ಯರಿಗೆ ಅಖ್ಯಾನ ಪಾರಾಯಣ ವಿಮರ್ಶೆಗಳು ಸಫಲ ವಾಗುವುದಿಲ್ಲವೇ ?

2. ಅಧ್ಯಾಯ XI ಶ್ಲೋಕ 23 ರಲ್ಲಿ '' ಪಂಡಿತನಾದ ಶೇಷನೇ ! '' **ಯತಸ್ತ್ವಂ ಪಂಡಿತಃ ಶೌಂಡಃ ತನ್ಮಂಡನ ಪರೋ ಭವ** '' ಎಂದು ಆಜ್ಞೆ ಮಾಡಿದ್ದಾರೆ. ಅರಸನಿಗೆ ಬೋಧಿಸ ಬೇಕಾದ ಈ ಕೃತಿಯ ಕೆಲವು ವಾಕ್ಯಗಳನ್ನು ಸರಿಯಾಗಿ ವ್ಯಾಖ್ಯಾನ ಮಾಡಿ ಅರಸನಿಗೆ ಬೋಧಿಸಿ ಅವನನ್ನು ವಾದಿರಾಜ ಭಕ್ತನನ್ನಾಗಿ ಮಾಡು ಎಂದರ್ಥ. ಇತರ ಪಂಡಿತರೂ ಪಾರಾಯಣ ಮಾಡುತ್ತಿದ್ದರೆ ಶ್ರೋತೃಗಳ ಅದೃಷ್ಟ ವಿಶೇಷವನ್ನು ತಿಳಿದು ಬೋಧಿಸಿ ಅವರನ್ನು ವಾದಿರಾಜ ಭಕ್ತರನ್ನಾಗಿ ಮಾಡ ಬಹುದು. ಭಾವಿ ಬ್ರಹ್ಮ ದೇವರಿಗೆ ಅಂಥ ಸಂತೋಷವುಂಟು ಮಾಡಿದರೆ ಜ್ಞಾನಾದಿ ವೃದ್ಧಿ ಆ ಪಂಡಿತರಿಗಾಗುವುದಿಲ್ಲವೇ ? ವಾದಿರಾಜರಂಥವರು ನಮ್ಮ ಪ್ರಯಾಣಕ್ಕೆ ಸಹಾಯಕರಾದರೆ ನಮ್ಮ ಸಂಸಾರ ಮಾರ್ಗ ಸುಗಮವಾಗಿ ಮುಕ್ತಿ ಸಮೀಪಿಸುವುದಿಲ್ಲವೇ ? ದೃಷ್ಟಾಂತ ಬೇಕೇದರೆ ಶೇಷಾದ್ರಿ ಪಂಡಿತನ ಕಥೆ. ಅಧ್ಯಾಯ XI. XIV ರ (ಶ್ಲೋಕ 93 – 96) ಮುಂತಾದ ಸ್ಥಳಗಳಲ್ಲಿದೆ. ಆ ಪಂಡಿತರು ಸೋದೆ ಮಠಕ್ಕೆ ಸೇರಿದ ಒಂದು ನೃಸಿಂಹ ಗುಡಿ ಅಧಿಕಾರಿ. ವ್ಯಾಕರಣ ತರ್ಕಾದಿಗಳಲ್ಲಿ ಪಾರಂಗತನಾದ ಸ್ಮಾರ್ತ ಅದ್ವೈತಿ ಪಂಡಿತ. ಅಸಾಧ್ಯ ಅಹಂಕಾರಿಯಾದರೂ ತತ್ವ ಜಿಜ್ಞಾಸು. ತನ್ನ ಕಾಲದ ಶ್ರೀಸತ್ಯಧರ್ಮರ ಶಿಷ್ಯರ ಸಂಗಡ ಚರ್ಚೆಮಾಡಿ ಕೈ ತೋರಿಸಿದ. [1] ಅವರುಗಳು

1) ಕೈ ತೋರಿಸಿದ - ತನ್ನ ವಿದ್ಯೆಯನ್ನು ಮೆರೆಯಿಸಿ ಅಹಂಕಾರ ಮಾಡಿದನು ಎಂದು ಅರ್ಥ.

ಇವನ ಗರ್ವ ಮುರಿದರು. ಆ ಸಂಬಂಧದಲ್ಲಿ ಸತ್ಯಧರ್ಮರಿಂದಲೇ ಶಾಪ ಪ್ರಸಕ್ತವಾಯಿತು. ಶೇಷಾದ್ರಿಯ ಪುಕ್ಕ ತರಿಯಿತು.[1] ಇವನ ದೇಹ ಕೆಟ್ಟಿತು. ಮನಸ್ಸು ಜಜ್ಜಿಹೋಯಿತು. ತನ್ನ ಮಠದ ಸಂಬಂಧಿ ವಾದಿರಾಜ ಗುರುಗಳಿಗೆ ಶರಣು ಹೊಂದಿದನು. ಅವರಲ್ಲಿ ಮಹತ್ವ ಬುದ್ಧಿ ಮೊದಲಿಂದಲೂ ಇತ್ತು, ಈಗ ಮಾನಭಂಗದಿಂದ ಹೆಚ್ಚಿತು. ಗುರುಗಳು ಕೈ ಹಿಡಿದರು. ಅವನ ಸ್ತೋತ್ರವು ದ್ರೋಹವನ್ನು ಸತ್ಯಧರ್ಮರಿಗೇ ಶಿಫಾರಸು ಮಾಡಿ ಕ್ಷಮಿಸುವಂತೆ ಹೇಳಿ **"ಅನಾಥಂ ತಂ ಸಮುದ್ಧರ"** ಎಂದು ಪ್ರೇರಿಸಿ ಬಿಡಿಸಿದರು. ಅವನ ಸಾಂಸಾರಿಕ ರೋಗಕ್ಕೂ ಪ್ರಬಲ ಔಷಧಿ ಮಾಡಿದರು. ಇದೇ ಔಷಧಿ – "ವೃಂದಾವನದ ಹಿಂದಿನ ಧವಳ ಗಂಗೆ ಸ್ನಾನಮಾಡಿ ಉಷಃಕಾಲದಲ್ಲಿ ವೃಂದಾವನದ ಮುಂದೆ ಆಖ್ಯಾನವನ್ನು ಪಾರಾಯಣ ಮಾಡು. ಏಕಾದಶೀ ವ್ರತಮಾಡು. ವಿಪ್ರನನ್ನು ಕಂಡು ಹಿಡಿದು ಸೇವಿಸು." ಹೀಗೆ ಅಜ್ಞಾಪಿಸಿ ತಮ್ಮ ಋಜುತ್ವ ನಿಶ್ಚಯವನ್ನು ಅವನಲ್ಲಿ ಹುಟ್ಟಿಸಿದರು. "ಜಗತ್ತಿನ ಅದ್ವೈತಿ ಪಂಡಿತರಲ್ಲಿ ನೀನು ಶೇಷ್ಠ; ಸರ್ವ ಪಂಡಿತರಲ್ಲಿ ನನ್ನ ಶ್ರೇಷ್ಠತೆ ತಿಳಿ" ಎಂದು ಅವನ ಬುದ್ಧಿಯನ್ನು ತಿದ್ದಿದರು. ಅವನು ವೈಷ್ಣವನಾಗಿ ಬದುಕಿ ಹೋದನೆಂದು ಹೇಳಲ್ಪಟ್ಟಿದೆ.

3. ಅಪ್ಪಣ್ಣ ಕೃಷ್ಣ ಭಟ್ಟನೂ ಇನ್ನೊಂದು ವಿಧದ ಧೂರ್ತ ಪಂಡಿತನು. ಮೊದಲು ಆಖ್ಯಾನ ದ್ವೇಷಿಯಾಗಿದ್ದ. ಅವನು ಗುರುರಾಜರ ಸ್ಮರಣಾದಿ ಪ್ರಭಾವದಿಂದ ಕ್ರಮವಾಗಿ ಭಕ್ತನೇ ಆಗಿ ಹೋದನು. ಇನ್ನು ಶೇಷ, ಸೀತಾಪತಿ, ಲಕ್ಷ್ಮೀಪತಿ ಮುಂತಾದ ಪಂಡಿತರು, ವಿಠಲ, ವಾದಿರಾಜ ಭಟ್ಟರಂಥ ಪಂಡಿತರೂ ವಾದಿರಾಜರ ಕೃಪೆಯಿಂದ ಸಾಂಸಾರಿಕ ದೌರ್ಭಾಗ್ಯವನ್ನು ನೀಗಿ ಬ್ರಹ್ಮಲೋಕಾರ್ಹರಾದ ಮಾನ್ಯ ವಿದ್ವಾಂಸರಾದರೆಂದು ಹೇಳಿರುವುದನ್ನು ಉತ್ಪ್ರೇಕ್ಷೆ ಇಲ್ಲವೆಂದು ನಂಬುವುದಕ್ಕೆ ಏನೂ ಅಡ್ಡಿ ಇಲ್ಲ. ಅಧ್ಯಾಯ I ಶ್ಲೋಕ 111 ರಲ್ಲಿ ಸ್ಪಷ್ಟವಾತೇ ಇದೆ. **"ಇದಂ ವೃಂದಾವನಾಖ್ಯಾನಂ ಯೇ ಪಠಂತಿ ಮನೀಷಿಣಃ । ಮುಕುಂದಾವನಮೇವಾಸ್ತು ತೇಷಾಂ ಕಂದಾಶನಾಜ್ಞಯಾ"** ॥ (ಯಾವ ಪಂಡಿತರು ಈ ವೃಂದಾವನಾಖ್ಯಾನವನ್ನು ಅಪ್ರಾಮಾಣ್ಯ ಶಂಕೆಯಿಲ್ಲದೆ ಪಾರಾಯಣ ಮಾಡುತ್ತಾರೋ ಅವರ ಯೋಗ–ಕ್ಷೇಮಗಳನ್ನು ಮುಕುಂದನಾದ ಹಯಗ್ರೀವ ಸ್ವಾಮಿಯೇ ನೋಡಿಕೊಳ್ಳುತ್ತಾನೆಂದು ವರಾಹ ದೇವರ ಅಜ್ಞೆ ಇದೆ ಎಂದು ಅರ್ಥ). ಜಿಜ್ಞಾಸುಗಳಾದ ಪಂಡಿತರಿಗೆ ಇದು ದಿವ್ಯ ಸಂಪತ್ತಲ್ಲವೆ? **ನಾಲ್ಕನೇ ಅಧ್ಯಾಯದ** 25 ರಿಂದ 29 **ಶ್ಲೋಕಗಳಲ್ಲಿ** ವಾದಿರಾಜರು ದೇವರಿಂದಲೂ, ದೇವತೆಗಳಿಂದಲೂ, ಕೊಡಲ್ಪಟ್ಟ ಆಭರಣಗಳಿಂದ ಅಲಂಕೃತರೆಂದು ಧ್ಯಾನ ಮಾಡಿದರೆ ಸುಖಪ್ರಾಪ್ತಿ ಮತ್ತು ಪುಣ್ಯಪ್ರಾಪ್ತಿ ಎಂಬ ಫಲ ಪಂಡಿತರಿಗೆ ಬರುತ್ತದೆಂದು ಹೇಳಿದ್ದಾರೆ. **"ಏವಮಾಭರಣಾನ್ಯಾಶಾಃ ಕಿರಣಾದ್ರಂಜನಾನಿಮೇ ॥28॥ ಶ್ರವಣಾತ್ಸರ್ವ ಪುಣ್ಯಾನಿ ಪ್ರಾಪಯಂತಿ ಮನೀಷಿಣಾಂ ॥28॥** "ನನ್ನ ಆಭರಣಗಳು ಕಿರಣಗಳಿಂದ ದಿಕ್ಕುಗಳನ್ನು ಬೆಳಗುತ್ತವೆ. ಅವುಗಳ ಶ್ರವಣ ಮಾತ್ರದಿಂದ ಪಂಡಿತರಿಗೆ ಸರ್ವ ಪುಣ್ಯಗಳನ್ನೂ ಒದಗಿಸಿ ಕೊಡುತ್ತವೆ.) **ಏಳನೇ ಅಧ್ಯಾಯದ** 21 ನೇ ಶ್ಲೋಕವು ಪಂಡಿತರ ಮೇಲೆ ಗುರುರಾಜರ ಅನುಗ್ರಹವು ಅಧಿಕವೆಂದು

1) ಪುಕ್ಕ ತರಿಯಿತು – ರೆಕ್ಕೆ ಕಿತ್ತ ಪಕ್ಷಿಯಂತೆ ಸೋತುಬಿದ್ದನು ಎಂದು ಅರ್ಥ.

ನಿರೂಪಿಸುತ್ತದೆ. "ಶೋಷಯೇ ಸ್ಮೃತಿ ಮಾತ್ರೇಣ ದೋಷಂ ಸರ್ವ ವಿಪಶ್ಚಿತಾಂ। ಹಯಾಸ್ಯ ಕೃಪಯಾ ನಿತ್ಯಂ ಮಯಾಸ್ಯ ಚರಣಾರ್ಚನಾತ್ ॥21॥" (ಎಲ್ಲಾ ಪಂಡಿತರ ದೋಷಗಳನ್ನೂ ಸ್ಮೃತಿ ಮಾತ್ರದಿಂದ ಎಂದರೆ ಕಾಯಕ ಸೇವೆ ಇಲ್ಲದಿದ್ದರೂ ತೃಪ್ತನಾಗಿ ಶೋಷಣ ಮಾಡಿಬಿಡುತ್ತೇನೆ. ನಾನು ಹಯಗ್ರೀವ ಸ್ವಾಮಿಯ ಪಾದಾರ್ಚನೆಯಿಂದ ಅವನ ಕೃಪೆಯನ್ನು ಗಳಿಸಿದ್ದೇನೆ. ಆ ಪ್ರಭಾವದಿಂದ ಸ್ಮರಿಸುವ ಭಕ್ತ ಪಂಡಿತರನ್ನು ಉದ್ಧರಿಸುತ್ತೇನೆ.) ಸೇವೆ ಮಾಡಿದರೆ ಅವರ ಪಾಪವನ್ನು ಸುಟ್ಟೇ ಬಿಡುತ್ತೇನೆಂದು ಭಾವ.

4. ಇದಲ್ಲದೆ ಆಖ್ಯಾನ ಪಠಿಸುವ ಅನಪರೋಕ್ಷಿ ಪಂಡಿತರಿಗೆ "ಮನೋ ವಿಶುದ್ಧ್ಯೈ ಚರಿತಾನುವಾದಃ," "ಚರಿತಂ ವಿಷ್ಣು ಭಕ್ತಾನಾಂ ವಿಷ್ಣೂದ್ರೇಕಾಯ ಕಥ್ಯತೇ" ಇತ್ಯಾದಿ ಪ್ರಮಾಣ ಸಿದ್ಧ ಅಂತಃಕರಣ ಶುದ್ಧಿಯಾಗುವುದಲ್ಲದೆ ಮಹಜ್ಜನ ಸಹವಾಸವೆಂಬ ಅಧಿಕ ಲಾಭವೂ ಇದೆ. ವಾದಿರಾಜರು ಸ್ನಾನಮಾಡುವ ತೀರ್ಥ, ಜಪಿಸುವ ಮಂತ್ರ, ಮಾಡುವ ಆಚರಣೆ, ತಿಳಿದಿರುವ ತತ್ವ, ಉಪಾಸನೆ ಮಾಡುವ ಹಯಗ್ರೀವ, ಹಂಸ, ಧನ್ವಂತರಿ, ಉಪೇಂದ್ರ, ದಶಾವತಾರ ರೂಪಗಳೆ ಮುಂತಾದ ಭಗವದ್ರೂಪಗಳು, ಅವರು ಬೋಧಿಸುವ ದ್ವೈತ ತತ್ವದ ಸೂಕ್ಷ್ಮಗಳು, ಅವರ ಹದಿನಾಲ್ಕು ಲೋಕದ ಶಿಷ್ಯರುಗಳು, ಪೂಜಕರು, ಸ್ತೋತ್ರ ಮಾಡುವವರು, ಭಾವೀ ಅವತಾರದ ಪತ್ನಿ ಮುಂತಾದ ಅನೇಕ ವೈಭವ ಜ್ಞಾನವಾಗಿ ಮನಸ್ಸು ಪರಮಾತ್ಮನನ್ನು ನೋಡುವುದಕ್ಕೆ ಹಾತೊರೆಯುವಂತೆ ಆಗುತ್ತದೆ. ಕೃಷ್ಣ ಕ್ಷೇತ್ರದ ಮಹಿಮೆ, ಕ್ಷಮಾಗುಣದ ಮಹಿಮೆ, ಅಭೇದ ಜ್ಞಾನದ ನಿಂದೆಯ ಫಲ, ವೈಷ್ಣವ ಬ್ರಾಹ್ಮಣರಿಗೆ ಕಠೋರ ಮಾತಾಡಿ ಮರ್ಮತಾಡನೆಯ ಫಲ, ಸ್ವಾಪ್ನ ಪದಾರ್ಥಗಳ ದರ್ಶನಕ್ಕೆ ಅರ್ಥ ಹೇಳುವ ರೀತಿ, ದೇವತೆಗಳ ಸಂಚಾರ, ಸನ್ನಿಧಾನಾದಿ ಪ್ರಕಾರ, ಸ್ವೋತ್ತಮರ ವರ, ಶಾಪ ಇವುಗಳ ಪ್ರಭಾವ, ಪೈಲಾದಿ ಮುನಿಗಳ ಪ್ರಾರಬ್ಧೋಪಮರ್ದನ ರೀತಿ, ದತ್ತಾಪಹಾರದ ಫಲ ಮುಂತಾದ ಅನೇಕ ವಿಷಯಗಳಲ್ಲಿ ವಿಜ್ಞಾನ ಉಂಟಾಗಿ ಮಧ್ವಮತದಲ್ಲಿ ಅಪಾರ ದಾರ್ಢ್ಯ ವೃದ್ಧಿಯಾಗುತ್ತದೆ. ದೊಡ್ಡವರುಗಳ ಅಂದರೆ ದೇವರು, ವಾದಿರಾಜರು, ವೇದವೇದ್ಯರು, ದೇವತೆಗಳು, ಋಷಿಗಳು, ಯೋಗೀಶ್ವರರು, ದೇವತ್ವಯೋಗ್ಯ ಭಕ್ತರುಗಳೊಂದಿಗೆ ಕಾಲಕ್ಷೇಪವಾಗಿ ಪಂಡಿತರ ಮನೋಮಟ್ಟವು ಉನ್ನತಿಯನ್ನು ಹೊಂದಿ ವೈರಾಗ್ಯವೃದ್ಧಿಯೂ, ತದನುಗುಣವಾಗಿ ಜ್ಞಾನ ಭಕ್ತಿಗಳ ವೃದ್ಧಿಯೂ ಆಗುತ್ತದೆ. ಕಪಟಿಗಳನ್ನೂ, ಲಂಚ್ಚಾ ಜನರನ್ನೂ ಹೇಗೆ ದೂರಮಾಡಬೇಕು, ಗುರುಸೇವೆ ಹೇಗೆ ಸಂತತ ಮಾಡಬೇಕು ಎಂಬುದೂ ತಿಳಿಯುತ್ತದೆ. ಈ ದೃಷ್ಟಿಯಿಂದಲೂ ಆಖ್ಯಾನ ಗ್ರಂಥವು ವಿದ್ವಜ್ಜನರಿಂದ ಪಠನೀಯವು. ಗ್ರಂಥವೇ ಮಂತ್ರರೂಪವಾದ್ದರಿಂದ ಪಂಡಿತರೇ ಮಂತ್ರಕ್ಕೆ ಮುಖ್ಯ ಅಧಿಕಾರಿಗಳಾದ್ದರಿಂದ, ಪಠನದಿಂದ ವಿಶೇಷ ಫಲವೂ ಅವರ್ಜನೀಯ. ಮಧ್ವಮತದ ಸಾಧಕರಿಗೆ ಆವಶ್ಯಕ ಸಹಕಾರಿಯಾಗಿ ದೇವತೆಗಳಿಂದ ಕ್ಲೃಪ್ತವಾಗಿದೆ ಎಂದು ತಿಳಿದರೆ ಈ ಆಖ್ಯಾನ ಕೃತಿಯಲ್ಲಿ ದ್ವೇಷವೇತಕ್ಕೆ ? ಆಧ್ಯಾತ್ಮಿಕ ವಿಘ್ನ, ಆದಿಭೌತಿಕ, ವಿಘ್ನ, ಆದಿದೈವಿಕ ವಿಘ್ನ ಎಂದು ತ್ರಿವಿಧ ವಿಘ್ನಗಳೂ, ಅಸುರ ಸಂಗಗಳೂ ತೊಲಗ ಬೇಕಾದರೆ, ವಿಘ್ನಗಳ ದೆಸೆಯಿಂದ ಬಲಾಧಿಕ ಬಹು ಮಂಗಳಗಳೂ ಆವಶ್ಯಕವೆಂದು ಪಂಡಿತರಿಗೆ ತಿಳಿದೇ ಇದೆ. ಆಖ್ಯಾನವೇ ಹೇಳುತ್ತದೆ. ಅಧ್ಯಾಯ XII ಶ್ಲೋಕ "ಲಕ್ಷ್ಮೀಪತಿಃ ಸೂಕ್ಷ್ಮಮತಿಃ ಶ್ಲಕ್ಷ್ಣವಾಕ್ ಮತ್ಕಟಾಕ್ಷತಃ।

ಭೋಕ್ಷ್ಯತೀ ಕ್ಷಾಫಲಂ ಸೂಕ್ಷ್ಮಂ ಮತ್ಕೃತಿಂ ವಕ್ಷ್ಯತುತ್ತ್ವಿನಾಂ ||5|| ಲಕ್ಷ್ಮೀಪತೇ ಸೂಕ್ಷ್ಮಮತೇ ಮತ್ಕಥಾಮೃತ ವಾರಿಣಾ | ಸತಾಮಾಧ್ಯಾತ್ಮಿಕಾದ್ಯಗ್ನಿಂ ಶಮಯಿತ್ವಾ ಸುಖೀಭವ ||6|| (ಪಂಡಿತ ಲಕ್ಷ್ಮೀಪತಿಯು ನನ್ನ ಅನುಗ್ರಹದಿಂದ ಸೂಕ್ಷ್ಮಜ್ಞನು, ಮಧುರ ವಾಗ್ಮಿಯು. ಆ ಸೂಕ್ಷ್ಮ ಬುದ್ಧಿಯ ಫಲವಾದ ಪ್ರತ್ಯಕ್ಷ ಫಲವನ್ನು ಅವನು ಸ್ವಲ್ಪದರಲ್ಲಿ ಹೊಂದುವನು. ಅವನು ಆಖ್ಯಾನವನ್ನು ನಂಬಿದ ಜನತೆಗೆ ಹೇಳಲಿ, ಹೇ ಲಕ್ಷ್ಮೀಪತೇ! ನನ್ನ ಆಖ್ಯಾನ ಕಥೆಯೆಂಬ ಈ ಅಮೃತೋದಕದಿಂದ ನನ್ನ ಭಕ್ತರ ಆಧ್ಯಾತ್ಮಿಕಾದಿ ಅಗ್ನಿಯನ್ನು ಶಮನವಮಾಡಿ ಬಿಡು. ನೀನು ಸುಖಿಯಾಗು)

5. ಗ್ರಂಥದಲ್ಲಿ ಮಧ್ಯೇ ಮಧ್ಯೇ ಬರುವ ಉಪದೇಶಗಳೂ ಪಂಡಿತರಿಗೆ ಹಿತಕರವೇ. " **ನಿತ್ಯಂ ಕೀರ್ತಯ ಭಾರತಂ, ತಸ್ಮಾನ್ನಿಃ ಸಂಗತಾ ವಾಪ್ತ್ರೌ ತತ್ಸಂಗಾಚ್ಛ್ರುಣುಯಾದಿಮಾಂ (ಯುಕ್ತಿ ಮಲ್ಲಿಕಾಂ), ಶ್ರೀಮನ್ಮಧ್ವಮತಂ ದಿವ್ಯಂ** " ಮುಂತಾದ ಹಿತೋಪದೇಶಗಳು ಸಾತ್ವಿಕ ಸಮುದಾಯವುಗಳು. " ಆಖ್ಯಾನ ಗ್ರಂಥ ಮಾತ್ರವನ್ನು ಪಠಿಸು, ವೇದವೇದಾಂತಗಳ ಅವಶ್ಯಕತೆ ಸಾಧನೆಗೆ ಇಲ್ಲ " ಎಂಬ ತಾಮಸ ಉಪದೇಶ ಇದರಲ್ಲಿಲ್ಲ. ಅಧ್ಯಾಯ XII – 30 " **ಸ್ವಪ್ನ ಸತ್ಯತ್ವ ವಾದೇನ ಜೇತುಮಿಚ್ಛಂತಿ ವಾದಿನಂ | ಯೇ ತತ್ತ್ವವಾದಿನಃ ಸರ್ವೇ ತ್ವಂಗೀ ಕುರ್ವಂತು ಮತ್ಕೃತಿಂ ||** (ಸ್ವಪ್ನ ಸತ್ಯತ್ವ ಸಾಧನೆಗೆ ಸಭಾದಲ್ಲಿ ಯತ್ನಿಸುವ ಪಂಡಿತನು ಈ ನನ್ನ ಆಖ್ಯಾನವನ್ನು ಪ್ರಮಾಣವನ್ನಾಗಿ ಒಪ್ಪಲಿ. ಅವನು ಗೆಲ್ಲುತ್ತಾನೆ ಎಂದು ಅರ್ಥ). ಸ್ವಪ್ನ ಸತ್ಯತ್ವವನ್ನು ಸಾಧಿಸಲು ಈ ಗ್ರಂಥವೇ ಸಾಕ್ಷಿ ಎಂದರ್ಥ.

6. ಹದಿಮೂರನೆಯ ಅಧ್ಯಾಯದಲ್ಲಿ ವಾದಿರಾಜ ಭಟ್ಟರೆಂಬ ಪಂಡಿತರಿಗೆ ಹಿತೋಪದೇಶ ಹೇಳಿ ಸಾಧನೆಯ ಮಾರ್ಗಕ್ಕೆ ತಂದಿದ್ದಾರೆ. ಇತರ ಪಾಠಕ ಪಂಡಿತರನ್ನೂ ಈ ಗ್ರಂಥವು ತರಬೇತಿ ಕೊಟ್ಟು ಉತ್ತಮ ದರ್ಜೆಯ ಭಕ್ತರನ್ನಾಗಿ ಮಾಡಬಹುದು ಎಂದು ಗೊತ್ತಾಗುತ್ತದೆ.

7. ಹದಿನಾರನೆಯ ಅಧ್ಯಾಯದಲ್ಲಿ (101 - 104) ಸ್ಥೂಲ ಪಂಡಿತನೊಬ್ಬನ ಕಥೆ ಇದೆ. ಆತನು ಯಾರ ಜೊತೆಯಲ್ಲಿಯೋ ಸೋದೆಗೆ ಬಂದಿಳಿದನು. ಇನ್ನು ವೃಂದಾವನದ ಕಡೆ ಹೊರಡಬೇಕೆಂದು ಹೆಜ್ಜೆ ಹಾಕಲು ಎದುರಿಗೆ ವಿಧವೆ ಬಂದಳು. ಕೂಡಲೇ ಪ್ರಯಾಣ ನಿಲ್ಲಿಸಿ ಕುಳಿತಿದ್ದು ಸ್ವಲ್ಪ ಕಾಲದ ಮೇಲೆ ವೃಂದಾವನದ ಕಡೆಗೆ ನಡೆದನು. ಆಗಲೂ ಒಂಟಿ ಬ್ರಾಹ್ಮಣನು ಎದುರಾದನು. ಅಪಶಕುನದಿಂದ ಭೀತನಾಗಿ ಆತನು ಹಾಗೆಯೇ ಊರ ಕಡೆಗೆ ಹಿಂತಿರುಗಿ ದಾರಿಯಲ್ಲಿ ಒಂದು ಮರದ ಕೆಳಗೆ ಕುಳಿತು ಅಲ್ಲಿದ್ದ ಇತರ ಜನರೊಂದಿಗೆ ತನ್ನ ವಾಗ್ವಿಲಾಸವನ್ನು ಬೀರಿದನು. ಅವರುಗಳು ಸ್ವಲ್ಪ ದಕ್ಷಿಣೆ ದಾನಮಾಡಿ ಈತನನ್ನು ನಮಸ್ಕರಿಸಿದರು. ನಂತರವೂ ಈ ಸ್ಥೂಲ ಪಂಡಿತನು ಊರಿನ ಮಾರ್ಗವನ್ನೇ ಹಿಡಿದು ವೃಂದಾವನವನ್ನು ನೋಡದೇನೇ ತನ್ನ ಮನೆಗೆ ಹೋದನು. ಜನರೆಲ್ಲರೂ ನಕ್ಕರು. ಆಗ ಸ್ವಲ್ಪ ಮನಸ್ಸು ಕೊರೆಯಿತು. ದಿನೇ ದಿನೇ ಇವನ ಪಶ್ಚಾತ್ತಾಪ ಹೆಚ್ಚಿತು. ಆ ಕ್ಷೇತ್ರಕ್ಕೆ ಹೋಗಿ ಆ ಪುಣ್ಯ ಪುರುಷರನ್ನು ನೋಡದೆ ಬಂದು ಬಿಟ್ಟೆನಲ್ಲಾ, ಆ ಪುಣ್ಯತೀರ್ಥವಾದ ಧವಳ ಗಂಗೆಯಲ್ಲಿ ಸ್ನಾನ ಮಾಡಲಿಲ್ಲವಲ್ಲಾ ಎಂದು ಪರಿತಪಿಸಿದನು. ಒಂದು ದಿನ ರಾತ್ರಿ ಹೀಗೆ ಚಿಂತಿಸುತ್ತಾ

ಬೆಳಗಿನ ಝಾವದಲ್ಲಿ ಹಾಸಿಗೆಯಿಂದ ಎದ್ದು ಸ್ನಾನವನ್ನು ಮಾಡದೇನೇ ದಡದಡನೇ ಸ್ವಾದಿ ಕ್ಷೇತ್ರದ ಕಡೆಗೇ ನಡೆದು ಬಿಟ್ಟನು. ಹೇಗೋ ಪಾದಚಾರಿಯಾಗಿ ಸೋದೆಯನ್ನು ತಲಪಿ ಅಲ್ಲಿ ಸಂಕಲ್ಪ ಪೂರ್ವಕವಾಗಿ ಸ್ನಾನಮಾಡಿ ವಿಧ್ಯುಕ್ತ ರೀತಿಯಲ್ಲಿ ವೃಂದಾವನದ ಪ್ರದಕ್ಷಿಣ ನಮಸ್ಕಾರವನ್ನು ಮಾಡಿದನು. ದಿನ ದಿನಕ್ಕೆ ಅವನ ಭಕ್ತಿ ವೃದ್ಧಿಯಾಯಿತು. ಒಂದೊಂದು ಪ್ರದಕ್ಷಿಣೆಯೂ ಲಕ್ಷ ನಮಸ್ಕಾರ ಫಲಪ್ರದವಾಗುವಂತೆ ದೃಢ ಭಕ್ತಿಯಿಂದ ಸೇವಿಸಿದನು. ಗುರುರಾಜರ ಪ್ರಸಾದದಿಂದ ಆ ಜನ್ಮದಲ್ಲೇ '' ವಿಪ್ರನ ಮನೆಯಿಂದ ಸ್ವಲ್ಪ ಕಮ್ಮಿಯಾದ '' ದೊಡ್ಡ ದಿಗ್ಗಜ ಪಂಡಿತನಾಗಿ ಮೆರೆದನು. ಅವನಿಗೆ ಮುಂದಿನ ಜನ್ಮದಲ್ಲಿ ಇನ್ನೂ ಅಧಿಕ ಪ್ರಜ್ಞೆ ಬರುತ್ತದೆ ಎಂದು ಸ್ವಾಪ್ನ ವೃಂದಾವನಾಖ್ಯಾನದಲ್ಲೇ ಹೇಳಿದೆ. ಹೀಗೆ ಈ ಗ್ರಂಥ ಪಾರಾಯಣವು ವಿದ್ವಾಂಸರಿಗೊಂದು ಟ್ರೈನಿಂಗ್ ಕಾಲೇಜಿನಂತೆ ಪ್ರಗತಿಪರವಾದ ಅಭ್ಯಾಸವೆಂದು ಹೇಳಬಹುದು.

8. ಸಂಗೀತದ ದಾಸರಿಗೂ ಹೀಗೆ ಅನುಗ್ರಹ ಮಾಡಿದ್ದಾರೆಂದು ಹದಿಮೂರನೇ ಅಧ್ಯಾಯದ 60 ರಿಂದ 65 ಶ್ಲೋಕಗಳಲ್ಲಿದೆ. '' ಹೇ ದಾಸಶ್ರೇಷ್ಠರೇ ! ನೀವು ವೃಂದಾವನಾಖ್ಯಾನದ ನನ್ನ ಮಹಿಮಾ ಬೋಧಕ ಶ್ಲೋಕಗಳನ್ನು ಸಂಗೀತಯುಕ್ತವಾಗಿ ಮಾಡಿ ನನ್ನಲ್ಲಿ ಭಕ್ತಿ ಮಾಡಿದ್ದರಿಂದ ನೀವು ಸುನಿರ್ಮಲರಾಗಿದ್ದೀರಿ. ನಿಮ್ಮ ಮನೆಗಳಲ್ಲಿ ಕಮಲಾದೇವಿ ತಾಂಡವ ಮಾಡಲಿ. ನಿಮ್ಮ ಕಾರ್ಯದಿಂದ ನನಗೆ ಮಹತ್ಪೂಜೆಯಾಗಿದೆ. ಇದರಿಂದ ನಿಮಗೆ ವೈರಾಗ್ಯಾದಿಗಳ ಪ್ರಾಪ್ತಿಯಾಗಿ ಸದ್ಗತಿಯಾಗುತ್ತದೆ " ಎಂದಿದ್ದಾರೆ. ಆರನೇ ಅಧ್ಯಾಯದ ಒಂಭತ್ತನೇ ಶ್ಲೋಕದಲ್ಲಿ ಪಂಡಿತೋತ್ತಮನಾದ ಶೇಷನಿಗೂ ಈ ಆಖ್ಯಾನವನ್ನು ಸಂಗೀತ ಶಾಸ್ತ್ರಕ್ಕೆ ಅನುಗುಣವಾಗಿ ಅಕ್ಷರ ಸೇರಿಸಿಕೊಂಡು ಹಾಡಬೇಕೆಂದು ಅಪ್ಪಣೆ ಮಾಡಿದ್ದಾರೆ. " **ಮದ್ದಾಸ ಸಂಗೀತ ಸಂಸ್ಥ ಸತ್ಪದ್ಯಾನಿ ಸದಾ ಶೃಣು || ಸಂಗೀತಸ್ಯಾನು-ಕೂಲ್ಯೇನ ತ್ವಂಗೀಕುರು ಪದಾಂತರಂ | ಪ್ರಸಂಗೀಕುರು ತಸ್ಯಾರ್ಥಂ ಸಾಂಗೀ ಕುರು ಚ ಮತ್ಕೃತಿಂ ||9||** (ಅರ್ಥ:- ನಿನಗೆ ದಾಸರ ಪದ ಹಾಡುವ ಜನರ ಸಂಗ ಒದಗುತ್ತದೆ. ಹೇ ಶೇಷ; ನೀನು ಅವರಿಂದ ನನ್ನ ಆಖ್ಯಾನವನ್ನು ನಿತ್ಯ ಶ್ರವಣಮಾಡು. ನೀನೂ ಹಾಡು. ಅರ್ಥಕ್ಕೆ ಬೇಕಾಗುವ ಪದಾಂತರವನ್ನು ಅಧ್ಯಾಹಾರ ಮಾಡಿಕೊಂಡು ಅರ್ಥ ಮಾಡಿಕೋ. ಆ ಅರ್ಥವನ್ನು ನಿನ್ನ ಜೀವನಕ್ಕೆ ಅನ್ವಯಿಸಿಕೋ. ಹೀಗೆ ನನ್ನ ಕೃತಿಯನ್ನು ಉಪಯೋಗಿಸಿಕೊಂಡು ಜನ್ಮ ಸಾರ್ಥಕ ಮಾಡಿಕೋ). ದಾಸ ಸಾಹಿತ್ಯದ ಪಾಂಡಿತ್ಯಕ್ಕೆ ಆಖ್ಯಾನವೂ ಒಂದು ಸಾಧನ ಗ್ರಂಥ. ಪಂಡಿತರ ಪ್ರಯೋಗ ಶಾಲೆಯಲ್ಲಿ ಆಖ್ಯಾನವೂ ಒಂದು ಮಾನ್ಯ ಸ್ಥಾನವನ್ನು ಹೊಂದಿದೆ. ಆದ್ದರಿಂದ ಇದನ್ನು ನಿತ್ಯವೂ ಪಾರಾಯಣ ಮಾಡುವ ಪಂಡಿತರಿಗೆ ವಾದಿರಾಜ ಸ್ವಾಮಿಗಳ ಉತ್ತಮಾನುಗ್ರಹವಾಗುವುದರಲ್ಲಿ ಸಂದೇಹವಿಲ್ಲ.

ಕಿಂಚ ಆಪತ್ಕಾಲದಲ್ಲಿ, ಗಾಯನಕ್ಕೆ ಯೋಗ್ಯವಾದ ಶ್ಲೋಕಗಳನ್ನು ಈ ಆಖ್ಯಾನದಿಂದ ಆರಿಸಿಕೊಂಡು ವೃಂದಾವನದ ಸುತ್ತಲೂ ನರ್ತಿಸಿದರೆ, ಅನ್ನ ಮಂತ್ರದಂತೆ ಇದು ಕ್ಷಿಪ್ರ ಭೋಜನ ಸೌಕರ್ಯವನ್ನು ಒದಗಿಸುತ್ತದೆ. ಸುಖಕರವಾದ ವೃತ್ತಿ ದೊರಕುತ್ತದೆ. ಜೀವನಾರ್ಥಿಗಳಾದ ದಾಸ ಪಂಡಿತರಿಗೆ ಇದು ಸುಲಭೋಪಾಯ. XVIII - 38 " **ಹೇ ವಿಪ್ರ ಕವಿವೃತ್ತೇನ ಶ್ಲೋಕೇನತು**

ಮುಮಾಗ್ರತಃ । ನೃತ್ತಂ ಕುರು ಸುವೃತ್ತೇನ ವಿತ್ತಂ ತವ ಭವಿಷ್ಯತಿ ॥ (ಅರ್ಥ:- ಬಡವನಾದ ವಿಪ್ರನೆ ! ದಿವ್ಯ ಕವಿ ರಚಿತ ಈ ಶ್ಲೋಕಗಳಿಂದ ನನ್ನ ಮುಂದೆ ಹಾಡುತ್ತಾ ವೃಂದಾವನದ ಸಂತ್ರಲೂ ನರ್ತಿಸು. ನಿನಗೆ ಧನವು ದೊರೆಯುತ್ತದೆ.)

ಅಷ್ಟೇ ಅಲ್ಲ, ಎಲ್ಲಾ ಅಧ್ಯಾಯಗಳನ್ನೂ ಹಾಡಿಕೊಂಡು ನರ್ತನ ಸೇವೆ ಸಲ್ಲಿಸಿ ರಾಜಸೂಯಾದಿ ಯಾಗಗಳ ಫಲ ಹೊಂದುವುದು ಇನ್ನೂ ಹೆಚ್ಚಿನ ಪಂಡಿತರ ಸಾಧನೆ. XVIII 40 ರಿಂದ 43 ಪೂರ್ತಿ. (ಅರ್ಥ:- ಹೀಗೆ ಕ್ರಮೇಣ ಹದಿನೈದು ಅಧ್ಯಾಯಗಳನ್ನು ಹೇಳಿಕೊಂಡು ಕುಣಿಯಬೇಕು. ಪೂರ್ವ ದಿಗ್ವಿಜಯವನ್ನು ಮಾಡಿಕೊಂಡು ಬಂದು ಭೀಮಸೇನನು ರಾಜಸೂಯಯಾಗವನ್ನು ಮಾಡಿ ಮುಗಿಸಿ ಏನು ಮಹಾಫಲವನ್ನು ಹೊಂದಿದನೋ ಅಂಥ ಮಹಾಫಲವು ನರ್ತನ ಮಾಡುವ ಪಂಡಿತರಿಗೆ ಆಗುವುದು). ಪಂಡಿತರಲ್ಲದೇ ಇರುವವರು ಈ ಕಾರ್ಯವನ್ನು ಮಾಡುವುದು ದುಃಶಕ. ಆದ್ದರಿಂದ ವಿಪ್ರನಿಗೆ ಈ ಸಲಹೆ ಮಾಡಿದ್ದಾರೆ. ಆತನು ಅಸದೃಶ ಪಂಡಿತನು.

9. ಹದಿನಾರನೆಯ ಅಧ್ಯಾಯದಲ್ಲಿ 30-37 ಪಂಡಿತಾಭಾಸರಾದ ಕಮಲನಾಭ, ತಮ್ಮಣ, ಶ್ರೀನಿವಾಸ ಎಂಬುವರು ಕೃತಿಯಲ್ಲಿ ಅಪ್ರಾಮಾಣ್ಯ ಶಂಕಾ ಮಾಡುತ್ತಾರೆ, ಭಕ್ತಿಯಿಂದ ಕೃತಿ ಪಾರಾಯಣ ಮಾಡುವುದಿಲ್ಲ ನನ್ನನ್ನು ಅನೇಕ ರೂಪನೆಂದು ತಿಳಿಯದೆ ಏಕರೂಪನೆಂದು ತಿಳಿಯುತ್ತಾರೆ, (ಋಜು ಯೋಗಿ ಎಂದು ತಿಳಿಯದೆ ಸಾಮಾನ್ಯ ಅಪರೋಕ್ಷ ಜ್ಞಾನಿ ಎನ್ನುತ್ತಾರೆ), ಇದರಿಂದ ದುಃಖಪಟ್ಟು ಕೆಟ್ಟ ಜನ್ಮ ಹೊಂದುತ್ತಾರೆ ಎಂದಿದೆ. ಹದಿನೇಳನೇ ಅಧ್ಯಾಯ ಶ್ಲೋಕ 65 - 67 ರಲ್ಲಿ ದಾಂಬಳಸ್ಥ ಹರಿನಾರಾಯಣರೂ ಅಂಥ ದುರುಳ ಪಂಡಿತರೇ ಎಂದಿದೆ. ಪೂರ್ವಗ್ರಹ, ದುಃಸಂಗಾದಿಗಳಿಗೆ ವಶರಾದ ವರನ್ನು ಇತರ ಪಂಡಿತರು ಅನುಸರಿಸಬೇಕಾದ್ದಿಲ್ಲ, ವಾಸುದೇವ ಕರ್ಮಂದಿಯಂತೆ (ಕರ್ಮಂದಿ ಎಂದರೆ ಸಂನ್ಯಾಸಿ 16 - 86) ಪಾರಾಯಣದಿಂದ ಭಕ್ತಿ ವೃದ್ಧಿ ಪಡೆದು ಹರಿದರ್ಶನ ಹೊಂದುತ್ತಾನೆಂದು ನಂಬುವುದು ಒಳ್ಳೆಯದು. ಕೃಷ್ಣ ಎಂಬ ಪಂಡಿತನು ಒಳ್ಳೆಯವನು. ಅಧ್ಯಾಯ XVII - 96 " ಹೇ ಕೃಷ್ಣ ಕಾಶ ಪುಷ್ಣಾಮಿ ಭಕ್ತೋ ವಿಷ್ಣೋರ್ಮನು ಪ್ರಿಯಃ । ನಿಷ್ಣಾತಾಯುಸ್ಯ ತೃಷ್ಣಾಪಿ ಸಂಸೃತೇರ್ನಾಸ್ತಿ ಚೋಷ್ಣತಾ ॥ " ಎಂದು ವಾದಿರಾಜರು ಹೊಗಳಿದ್ದಾರೆ. (ಅರ್ಥ:- ಹೇ ಕೃಷ್ಣಭಟ್ಟ ! ನಿನ್ನನ್ನು ಪೋಷಿಸುತ್ತೇನೆ. ವಿಷ್ಣು ಭಕ್ತನಾಗಿದ್ದಿ. ನನಗೂ ಪ್ರಿಯನಾಗಿದ್ದಿ. ನಿನ್ನ ಸಾಂಸಾರಿಕ ಕಾಮಗಳೂ ಕೂಡ ನಿನಗೆ ನರಕಾದಿ ಭಯಗಳನ್ನು ಉಂಟುಮಾಡುವುದಿಲ್ಲ.)

10. ಹದಿನೆಂಟನೆಯ ಅಧ್ಯಾಯದಲ್ಲಿ ಚಾತುರ್ಯವುಳ್ಳ ವಿದ್ವಾಂಸರಿಗೆ ತಮ್ಮ ಈ ಗ್ರಂಥದ ವ್ಯಾಖ್ಯಾನ ಮಾಡಿ ಪುಣ್ಯಗಳಿಸಲೆಂದು ಬೋಧಿಸಿದ್ದಾರೆ. ಗ್ರಂಥವು ಮುಂದೆ ನಾನಾ ಪ್ರಕಾರ ವ್ಯಾಖ್ಯಾನ-ವಾಗುತ್ತೆಂದೂ ಭವಿಷ್ಯ ಹೇಳಿದ್ದಾರೆ. ಅಧ್ಯಾಯ XVIII - 12 " ನಾನಾ ದೇಶಜನೈರೇನಂ ನಾನಾ ವಿದ್ಯಾ ವಿಶಾರದೈಃ । ನಾನಾ ವಿಧತಯಾ ವ್ಯಾಖ್ಯಾ ನಾನಾ ಶಿಷ್ಯೇಷ್ವಧಿಷ್ಠಿತಾ ॥ ಭವಿಷ್ಯತಿ ಸುಷೇಣಾಗ್ರ್ಯ ವ್ಯಾಖ್ಯಾನಹಿ ಕುರುಷ್ವತತ್ ॥ " (ನಾನಾ ದೇಶದ ನಾನಾ ವಿದ್ಯಾವಿಶಾರದರು ನಾನಾ ವಿಧವಾಗಿ ಆಖ್ಯಾನವನ್ನು ವಾಖ್ಯಾನ ಮಾಡಿ ತಮ್ಮ ತಮ್ಮ ಶಿಷ್ಯರಿಗೆ ಬೋಧಿಸುತ್ತಾರೆ.)

(ಮುಂದೆ ಹಾಗಾಗುತ್ತದೆ. ಹೇ ಹಯಗ್ರೀವ ಮುನಿ ! ನೀನೂ ಹಾಗೇ ಮಾಡು.) '' ವ್ಯಾಖ್ಯಾನ ನೈಪುಣ್ಯರಹಿತರಾದ ಪಂಡಿತರು ಪಾರಾಯಣ ಮಾಡಲಿ '' ಎಂದಿದ್ದಾರೆ. ಅಧ್ಯಾಯ XVIII - 15 '' **ಷೋಡಶಾಧ್ಯಾಯ ಪಾಠಂತು ಯಃ ಕರೋತಿ ಸ ತುಷ್ಟಿಭಾಕ್ । ಶಿಷ್ಟಃ ಸತು ಮಮೇಷ್ಟಶ್ಚ ವ್ಯುಷ್ಟಾನ್ನಂ ಲಭತೇನರಃ ॥15॥ ದ್ವಾದಶಾಧ್ಯಾಯ ಪಾಠಂ ಯ: ಕರೋತಿ ದ್ವಿಜೋತ್ತಮಃ । ಸೋಪ್ಯವಿದ್ವಾನಪಿ ಸ್ವರ್ಗೇ ತ್ರಿದಶೈ: ಪೂಜ್ಯತೇ ಸದಾ ॥16॥ ಅಷ್ಟಧ್ಯಾಯಸ್ಯ ಪಾಠಂ ತು ಯಃ ಕರೋತಿ ಮಮೇಷ್ಟ ಕೃತ್ । ಸ ವಿಠ್ಠಲ ಪ್ರಿಯೈಃಸರ್ವೈ ರಭಿಷ್ಟೈಃ ಪುಷ್ಟಿಮಾನ್ ಸದಾ ॥17॥** (ಅರ್ಥ:- ಷೋಡಶಾಧ್ಯಾಯ ಪಾರಾಯಣ ಮಾಡುವ ಪಂಡಿತನು ಅವನು ತನಗೆ ತೃಪ್ತಿಯಾಗುವಷ್ಟು ಸಂಪತ್ತನ್ನು ಹೊಂದಿ, ಶಿಷ್ಟನಾಗಿ, ನನಗೆ ಪ್ರಿಯನಾಗಿ, ಉತ್ತಮಾನ್ನ ಪಾತ್ರನಾದ ವೈದಿಕನಾಗುತ್ತಾನೆ. ಹನ್ನೆರಡು ಅಧ್ಯಾಯ ಪಾರಾಯಣ ಶೀಲ ದ್ವಿಜೋತ್ತಮನು ಅವಿದ್ವಾಂಸನಾದರೂ ಸ್ವರ್ಗದಲ್ಲಿ ದೇವತೆಗಳಿಂದ ಸತ್ಕೃತನಾಗುತ್ತಾನೆ. ಅಷ್ಟಾಧ್ಯಾಯ ಪಾಠಶೀಲನು ನನಗೆ ಸಂತೋಷವುಂಟು ಮಾಡಿದವನಾಗಿ ಉತ್ತಮ ವೈಷ್ಣವ ಭಕ್ತರಿಂದ ಬೇಕಾದ್ದನ್ನು ಪಡೆಯುವ ಕೀರ್ತಿವಂತನಾಗುತ್ತಾನೆ.) ಯಜ್ಞ ಮಾಡುವ ಪಂಡಿತರೂ ಪಾರಾಯಣ ಮಾಡಿ ಈ ಶ್ಲೋಕಗಳಿಂದ ಹೋಮ ಮಾಡಬಹುದು. **ಅಧ್ಯಾಯ XVIII - 14. " ಅಷಾಢಮಾಸ ಪರ್ಯಂತಂ ಷೋಡಶಾಧ್ಯಾಯ ಮಾಲಿಕಾ । ಅಸ್ತು ಶ್ರೌಷಡಿತಿ ಪ್ರೋಕ್ತಾ ಕ್ರತು ಕೋಟಿ ಫಲಪ್ರದಾ ॥14॥** (ಆಷಾಢ ಮಾಸದ ವರೆಗೆ 16 ಅಧ್ಯಾಯಗಳಿಂದ ಹೋಮ ಮಾಡಿದರೆ ಕೋಟಿಯಾಗದ ಫಲ ಬರುತ್ತದೆ.) ಮುಖ್ಯ ಶ್ರೋತಾ ವಿದ್ವದ್ರತ್ನನಾದ ವಿಪ್ರನು. ಇತರ ಶ್ರೋತೃಗಳಾದ ಶೇಷಾದಿಗಳೂ ಮಹಾಪಂಡಿತರೇ. ಆದ್ದರಿಂದ ಈ ಗ್ರಂಥಕ್ಕೆ ಪಂಡಿತರೇ ಮುಖ್ಯ ಅಧಿಕಾರಿಗಳು. '' ಪುರುಷೋತ್ತಮ '' ಎಂದು ಕರೆಯಲ್ಪಟ್ಟ, ನರಸಿಂಹ ಕುಲದೇವತಾರಾಧಕರಾದ ಸತ್ಯ ಧರ್ಮರು, ಹಯಗ್ರೀವ ಮುನಿಗಳೂ, ಅವರ ವಿದ್ಯಾವಂತ ಶಿಷ್ಯರು ಮುಂತಾದವರನ್ನೆಲ್ಲಾ '' ಪಾರಾಯಣ ಮಾಡಿ ಮಹಾಫಲವನ್ನು ಪಡೆಯಿರಿ '' ಎಂದು XVIII, XIX ನೇ ಅಧ್ಯಾಯಗಳಲ್ಲಿ ಮಂಜುಳರೀತಿಯಲ್ಲಿ ಹೇಳಿರುವುದರಿಂದ ಪಂಡಿತರಿಗೆ ಇದು ಚೆನ್ನಾಗಿ ಗೊತ್ತಾಗಿ ಸುಖಪ್ರದವಾಗುವ ಬ್ರಹ್ಮವಿದ್ಯೆ.

11. ಒಟ್ಟಿನಲ್ಲಿ ಪಂಡಿತರು ಒಂದು ಗ್ರಂಥವನ್ನು ಮೆಚ್ಚಿ ಪಾರಾಯಣಕ್ಕೆ ಇಟ್ಟುಕೊಳ್ಳಬೇಕಾದರೆ ಅದು ಮೊದಲು ಪ್ರಮಾಣವೆಂದು ನಿಶ್ಚಿತವಾಗಿ ತಿಳಿಯಬೇಕು. ನಿಜ. ಈ ಆಖ್ಯಾನವು **"ಪ್ರಾಮಾಣ್ಯಂ ಸ್ವತಃ"** ಎಂಬ ನ್ಯಾಯದಿಂದಲೂ, ನಿರವಕಾಶ ಬಾಧಕವು ಎಷ್ಟು ಹುಡುಕಿದರೂ ಇಲ್ಲದುದರಿಂದಲೂ ಪ್ರಮಾಣವೇ. **" ಸತ್ಪ್ರಮಾಣಾವಿರೋಧತ: ", " ಸಚ್ಛಾಸ್ತ್ರಮೇವ ವಕ್ಷ್ಯೇ "** ಎಂದೂ ಇರುವುದರಿಂದ ವೇದಾದಿ ಸಚ್ಛಾಸ್ತ್ರಗಳಿಗೂ ಮಧ್ವಶಾಸ್ತ್ರಕ್ಕೂ ಅವಿರುದ್ಧವೂ, ಅನುಸಾರಿಯೂ ಆದ ಗ್ರಂಥವಾದ್ದರಿಂದ, ಒಂದಾದರೂ ಪ್ರಮಾಣ ವಿರೋಧ ಇದರಲ್ಲಿಲ್ಲ. ಶಂಕಾ ಬಂದರೆ, ಖುಜು ಪ್ರೋಕ್ತವೆಂಬ ವಕ್ತ್ರಾನುಕೂಲ್ಯವಿದೆ. ಇಂದ್ರ ಪದವೀ ಯೋಗ್ಯ ಸ್ವಾಶ್ರಿತ ಬ್ರಾಹ್ಮಣನೆಂಬ ಶ್ರೋತ್ರಾನುಕೂಲ್ಯ ಇದೆ. ಶರಣಾಗತ ರಕ್ಷಣೆಗಾಗಿ ಏಕಾಂತ ಸಮಯದಲ್ಲಿ ದೇವಕಾರ್ಯ ನಿರ್ವಾಹಕತನದಿಂದ [1] ಹೇಳಿದ್ದೆಂಬ ಪ್ರಸಂಗಾನುಕೂಲ್ಯವಿದೆ. ಸಮಗ್ರ ಆಪ್ತಿಯುಕ್ತ ಮೂಲಗ್ರಂಥದಲ್ಲಿ ಸಂಶಯ ಕೂಡದು.

---

1) ನಿರ್ವಾಹಕತನದಿಂದ = ಮಾಡುವುದಕೋಸ್ಕರ

12. "ದೊಡ್ಡ ವಿದ್ವಾಂಸನು" "ಕುಂಬಾರನ ಗಡಿಗೆ" ಎಂದು ಪ್ರಾಮಾಣಿಕತ್ವ ಪೂರ್ಣ ಕಾವ್ಯ ಬರೆದಿದ್ದಾನೆ. ಮುಮುಕ್ಷುಗಳಿಗೆ ಅದನ್ನು ಕಟ್ಟಿಕೊಂಡೇನು ? ವಿಶಿಷ್ಟರಿಂದ ಉಪಾದೇಯತ್ವವಿಲ್ಲ" ಎಂದು ಹೇಳುವಂತಿಲ್ಲ. ಗರುಡ, ಇಂದ್ರಾದಿ ಪದವೀ ಯೋಗ್ಯ ಬ್ರಾಹ್ಮಣರು ಋಜುಗಣಸ್ಥ ವಾದಿರಾಜ ಗುರುಗಳನ್ನು ಸೇವಿಸಿ ಹೇಗೆ ಬ್ರಹ್ಮ ಸಾಕ್ಷಾತ್ಕಾರ ಸಾಧಿಸಿದರು; ಅವರು ಮಿಂದ ತೀರ್ಥ, ಪ್ರದಕ್ಷಿಣೆ ಮಾಡಿದ ವೃಂದಾವನ, ಪೂಜಿಸಿದ ಭಗವದ್ರೂಪಗಳು ಇವುಗಳ ಅಧಿಷ್ಠಾನ, ಸನ್ನಿಧಾನ, ಲೋಕಾನುಗ್ರಹ ಕಾತರತೆ; ಹಯಗ್ರೀವ, ವೇದವ್ಯಾಸ, ತ್ರಿವಿಕ್ರಮ, ಗೋಪಾಲಕೃಷ್ಣರ ಸಂಗಮ, ದೇವತಾ ತಾರತಮ್ಯ, ಜೀವ ತ್ರೈವಿಧ್ಯ, ಧರ್ಮ ಸ್ವರೂಪ, ಗುರುಪ್ರಸಾದದ ಮಹಿಮೆ, ಮುಂತಾದ ಅಪೂರ್ವ ಬಹು ಪ್ರಧಾನ ವಿಷಯಗಳು ಕುಬೇರನ ಭಂಡಾರದಲ್ಲಿ ವಜ್ರ, ಮುತ್ತು, ಅಪರಂಜಿ ಚಿನ್ನ ತುಂಬಿರುವಂತೆ ಇಲ್ಲಿ ತುಂಬಿವೆ. ವಿಷಯದಂತೆ ಪ್ರಯೋಜನಗಳೂ ಅತಿ ಮಹತ್ವೋಪೇತವಾದುವು. ಪ್ರಥಮಾಧ್ಯಾಯದ ಕೊನೆಯಲ್ಲಿ ಹೇಳಿದಂತೆ ಉದಾರ ಸದ್ಗುಣನಾದ ಹರಿಯಲ್ಲಿ ಭಕ್ತಿ, ವಾದಿರಾಜರ ಋಜುತ್ವ ವಿಜ್ಞಾನ, ಆಖ್ಯಾನಕ್ಕೆ ಎರಡು ಅರ್ಥವಿರುವುದರಿಂದ ಅನಂತ ಹರಿಗುಣ ಬೋಧ, ಮಧ್ವಾಚಾರ್ಯರ ಜಗದ್ಗುರುತ್ವ ನಿಶ್ಚಯ, ಅಭೀಷ್ಟ ಪ್ರಾಪ್ತಿಗಳು, ಶಾಸ್ತ್ರ ಪಾಂಡಿತ್ಯ, ತಪೋವೃದ್ಧಿ ಎಲ್ಲಾ ವಿಧವಾದ ಧರ್ಮಾರ್ಥಗಳೂ, ಕೊನೆಗೆ ಅಪರೋಕ್ಷ ಜ್ಞಾನವೂ ಕೂಡಾ ಇತರ ಸಹಕಾರಿಗಳನ್ನು ಒದಗಿಸಿ ಈ ಆಖ್ಯಾನದ ಅಭ್ಯಾಸದಿಂದ ಆಗುತ್ತದೆ. ಪ್ರಾರಬ್ಧೋಪಮರ್ದನ, ಸಂಚಿತ ಪಾಪ ಪರಿಹಾರ, ವಿಘ್ನ ನಿವೃತ್ತಿಗಳೂ ಫಲವೆಂದು ಅನೇಕ ಸಲ ಬಂದಿರುತ್ತದೆ. ಗ್ರಂಥಕ್ಕೆ ಅಧಿಕಾರಿಗಳೂ ತುಚ್ಛರಲ್ಲ. ದೇವತ್ವ ಯೋಗ್ಯ ಮನುಷ್ಯರೇ ಮುಖ್ಯ ಅಧಿಕಾರಿಗಳು. ಪದವೀಸ್ಥ ದೇವತೆಗಳೂ ವಾದಿರಾಜರ ವೃಂದಾವನವನ್ನೂ, ಧವಳ ಗಂಗೆಯನ್ನೂ ಸೇವಿಸಿ, ಪಾರಬ್ಧವನ್ನು ಮರ್ದನ ಮಾಡಿಕೊಂಡು ಸುಖಿಯಾದರೆಂದಿರುವುದರಿಂದ ಅವರೂ ಅಧಿಕಾರಿಗಳೇ. ಇತರ ವಿಷ್ಣು ಭಕ್ತರೂ, ಮುಮುಕ್ಷುಗಳೂ, ಯೋಗ್ಯ ಸೇವಕರು. ಆಖ್ಯಾನದಲ್ಲಿ ಮತ್ತು ವಾದಿರಾಜರ ಋಜುತ್ವದಲ್ಲಿ ಸಂಶಯವುಳ್ಳವರು ಅಧಿಕಾರಿಗಳಲ್ಲ. ನಿರ್ಮೂಲ ಶಂಕೆ ಎಬ್ಬಿಸುವವರು, ಪ್ರಾಮಾಣ್ಯ ಪರತಸ್ತ್ವ ಮರ್ಯಾದೆಯಿಂದ ಬೌದ್ಧರಂತೆ ಯುಕ್ತಿ ವಿತಾನ ದೀಕ್ಷಿತರು; ಅಭೇದಾದಿ ದುರ್ಮತ ಶ್ರದ್ಧೆಯುಳ್ಳವರು, ವೇದನಿಂದಕ ಪಾಷಂಡಾದಿಗಳು ಮತ್ತು ನಾನಾವಿಧ ಗುರುರಾಜ ದ್ರೋಹಿಗಳು ಈ ಗ್ರಂಥದ ಅಭ್ಯಾಸಕ್ಕೆ ಅನರ್ಹರು. ಅವರಿಗೆ ಹೇಳಬಾರದು ಎಂದು ಲಕ್ಷ್ಮೀಪತಿಗೆ ಕಡ್ಡಾಯದ ಆಜ್ಞೆ ಇದೆ. ವಿಷಯ, ಪ್ರಯೋಜನ, ಅಧಿಕಾರಿಗಳಿಗಿರುವ ಪರಸ್ಪರ ಸಂಬಂಧವು ಪಂಡಿತರಿಗೆ ಸುಲಭವಾಗಿ ತಿಳಿಯುತ್ತದೆ. ಇಂಥ ಅನುಬಂಧ ಚತುಷ್ಟಯವು ಯಾವ ಗ್ರಂಥಕ್ಕೆ ಇರುವುದೋ ಅಂಥ ಗ್ರಂಥವು ಪರಮೋಪಾದೇಯವು, ಪಂಡಿತರಿಂದ ಬೇಗ ಆದರಣೀಯವು. "ದುರ್ಜ್ಞೇಯ, ಕಠಿಣ, ಸಾಮಾನ್ಯರಿಗೆ ಬಹು ಪ್ರಯಾಸ ಲಭ್ಯ, ಹಿಮವತ್ಪರ್ವತದ ಮೇಲಿನ ಗಂಗೆಯಂತೆ" ಎನ್ನುವ ಹಾಗಿಲ್ಲ. ಪರ್ವತಾಗ್ರದ ಗಂಗಾ ತೀರ್ಥಗಳು ಜನಸಾಮಾನ್ಯಕ್ಕೆ ದುರ್ಘಟವಾದರೂ ಪ್ರಯಾಗ, ಗಯಾ, ಕಾಶೀ ಮುಂತಾದ ಕ್ಷೇತ್ರ ಭಾಗದಲ್ಲಿ ಪಾವಟಿಗೆ ಸ್ಥಳಗಳಲ್ಲಿ ಎಲ್ಲರೂ ಮಿಂದು ಪಾವನರಾಗಬಹುದು. ಆಖ್ಯಾನ ಗ್ರಂಥದಲ್ಲೂ ಕೆಲವು ಪ್ರಕರಣಗಳು ಗುರ್ವನುಗ್ರಹ ವಿಶೇಷಗಳಿಂದ ತಿಳಿಯಲ್ಪಡಬೇಕಾದರೂ, ಸರ್ವ ಅಧ್ಯಾಯಗಳ ಕಥಾ ಪ್ರವಾಹವು ಶ್ರೀಮುಷ್ಣಾಚಾರ್ಯಾದಿಗಳ ವ್ಯಾಖ್ಯಾನದಿಂದ ಸುಜ್ಞೇಯವಾಗಿರುವುದರಿಂದ ಪಂಡಿತರೂ ಪಾಮರರೂ ಸಹ ಪಾರಾಯಣ ಮಾಡಿ ಪರಮ ಪಾವನರಾಗಬಹುದು. ಪಂಡಿತರ

ಉತ್ಸಾಹ ಪ್ರವೃತ್ತಿಗೆ ಇಷ್ಟೇ ಸಾಕು, ಆದರೆ ಭೋಜನದ ಪ್ರಾಶಸ್ತ್ಯವು ದಕ್ಷಿಣೆಯ ಆಧಿಕ್ಯದಿಂದ ಅತಿಶಯವಾಗುವಂತೆ ಮಂತ್ರ ಬಂಧದ ರಚನೆಯಿಂದ ಈ ಆಖ್ಯಾನ ಗ್ರಂಥವು ಪಾಠಕ ಪಂಡಿತರಿಗೆ ಫಲಾನಂತ್ಯಕ್ಕೆ ಕಾರಣವಾಗಿದೆ. ಅನಪರೋಕ್ಷಿಗಳು ಮಂತ್ರಬಂಧದಲ್ಲಿ ಗ್ರಂಥ ಬರೆಯಲಾರರು. ಅಂಥವರ ವಾಕ ಪ್ರಬಂಧವನ್ನು ನೂರಾವರ್ತಿ ಓದುವುದೂ ಒಂದೇ; ಮಂತ್ರ ಬಂಧದ ಒಂದು ಶ್ಲೋಕವನ್ನು ಮಡಿಯಲ್ಲಿ ಓದುವುದೂ ಒಂದೇ. " ಹರಿದ್ರೋಹ, ಗುರುದ್ರೋಹ, ಸುರದ್ರೋಹ ಹರೇ ಷರೇ " ಎಂದು ಹೇಳಿದಂತೆ ಪಾರಾಯಣ ಮಾಡುವ ಭಕ್ತರ ಸರ್ವ ಪ್ರಾಚೀನ ದ್ರೋಹಗಳನ್ನೂ ತಮ್ಮ ಕೃಪಾಕಟಾಕ್ಷದಿಂದ ನೀಗಿಸಿ ಹೃದಿಸ್ಥ ಶೇಷಶಾಯಿಯ ಸಾಕ್ಷಾತ್ ದರ್ಶನಕ್ಕೆ ಸಹಾಯ ಮಾಡುವ, ವಾದಿರಾಜರನ್ನೇ ನಾಯಕರನ್ನಾಗಿವುಳ್ಳ ವೃಂದಾವನಾಖ್ಯಾನದ ಪಾರಾಯಣವನ್ನು ವಿವೇಕಿ ವೈಷ್ಣವ ಪಂಡಿತರು ಯಾತಕ್ಕೆ ಬಿಟ್ಟಾರು ?

ಅಧ್ಯಾಯ ೯

ಮಹಾತ್ಮರ ಮಹತ್ವವನ್ನು ಎಷ್ಟು ಕೊಂಡಾಡಿದರೂ ಸಾಲದು.

ಮುಖ್ಯ ವಕ್ತವ್ಯ ವಿಷಯ ಹೇಳಿದ್ದಾಯಿತು. ನೆನಪಿಗೆ ಬಂತೆಂದು ಎರಡು ಮಾತನ್ನು ಹೇಳ ಬೇಕಾಗಿದೆ. "ವಾದಿರಾಜ ಗುರು ಸಾರ್ವಭೌಮರು" ಎಂಬ ಗ್ರಂಥದಲ್ಲಿ ಜಿ. ಜಿ. ಪುರಾಣಿಕರು ಪ್ರಕರಣ 14 ರಲ್ಲಿ ಒಂದು ಅಪೂರ್ವ ವಿಷಯವನ್ನು ಸೂಚಿಸಿದ್ದಾರೆ. ಅದನ್ನು ಎಲ್ಲರೂ ತಿಳಿಯ ಬೇಕಾದ್ದೇ. ಅನುವ್ಯಾಖ್ಯಾನ ಮೂರನೇ ಅಧ್ಯಾಯ ಉಪಾಸನಾ ಪಾದದ ಪ್ರಥಮಾಧಿಕಕರಣ ಉಪೋದ್ಘಾತ ಶ್ಲೋಕಗಳಲ್ಲಿ ಶ್ರೀಮಧ್ವಾಚಾರ್ಯರು "ಯತೋ ಮೋಕ್ಷಾದಿ ದಾತಾಸಾವತೋ ಜಿಜ್ಞಾಸ್ಯ ಏವ ಸಃ। ಇತ್ಯಾಹ ತತ್ಪರಂ ಬ್ರಹ್ಮ ವ್ಯಾಸಾಖ್ಯಂ ಜ್ಞಾನರಶ್ಮಿಮತ್"। ಎಂದು ಬರೆದಿದ್ದಾರೆ. (ಅರ್ಥ:- ಮೋಕ್ಷಾದಿ ಪುರುಷಾರ್ಥದಾಯಕನಾದ್ದರಿಂದ ವಿಷ್ಣುವು ಅಧಿಕಾರಿಗಳಿಂದ ಜಿಜ್ಞಾಸಾರ್ಹನೇ ಆಗಿದ್ದಾನೆಂದು ಜ್ಞಾನಾಖ್ಯ ರಶ್ಮಿಗಳುಳ್ಳ ವ್ಯಾಸರೆಂಬ ಹೆಸರುಳ್ಳ ಆ ಪರಬ್ರಹ್ಮನು ಹೇಳಿರುತ್ತಾನೆ.) ಇಲ್ಲಿ ಒಂದು ಸ್ವಾರಸ್ಯ ಸಂಗತಿ ಇದೆ. ವಿಷ್ಣುವೇ ಜಿಜ್ಞಾಸ್ಯನೆಂದು ವ್ಯಾಸರು ನಿರ್ಣಯಿಸಿದರು ಎಂದು ಮಾತ್ರ ಹೇಳದೆ "ಜ್ಞಾನ ರಶ್ಮಿಯುಕ್ತ ಸೂರ್ಯನಂತಿರುವ ಪರಬ್ರಹ್ಮನಾದ ವ್ಯಾಸರು" ಎಂದು ಹೇಳಿ ಮಧ್ವಾಚಾರ್ಯರು ವ್ಯಾಸನಾಮಕ್ಕೆ ಎರಡು ವಿಶೇಷಣಗಳನ್ನು ಕೊಟ್ಟಿದ್ದಾರೆ. ಹೀಗೆ ಎರಡು ವಿಶೇಷಣಗಳನ್ನು ಕೊಡಲು ಕಾರಣವನ್ನು ಟೀಕಾಚಾರ್ಯರು ನ್ಯಾಯ ಸುಧಾ ಪುಟ 527 ರಲ್ಲಿ ನಿರೂಪಿಸಿದ್ದಾರೆ. ಅಪಾಂತರತಮೋ ನಾಮ ಕಶ್ಚನ ಮುನಿರ್ವ್ಯಾಸೋ ಬಭೂವೇತಿ ಪ್ರವಾದ ದರ್ಶನಾತ್ ಶಿಷ್ಯಾಣಾಂ ಸೂತ್ರಕಾರೇ ಭಕ್ತಿ ಮಾಂದ್ಯಂ ಮಾಭೂದಿತ್ಯತೋ ವಿಶೇಷ- ಣೋಪಾದಾನಂ ॥ ಎಂದು ಬರೆದಿದ್ದಾರೆ. (ಅರ್ಥ:- ಅಪಾಂತರತಮ ಎಂಬ ಯಾವನೋ ಮುನಿಯು ವ್ಯಾಸರಾಗಿ ಹುಟ್ಟಿದವರೆಂದು ಪ್ರವಾದವಿರುವುದರಿಂದ ಶಿಷ್ಯರಿಗೆ ಸೂತ್ರಕಾರರಲ್ಲಿ ಭಕ್ತಿಮಾಂದ್ಯವು ಉಂಟಾಗಬಾರದೆಂದು ವಿಶೇಷಣೋಪಾದಾನವು). ಶಂಕರಾಚಾರ್ಯರೇ ಅವರ ಬ್ರಹ್ಮ ಸೂತ್ರ ಭಾಷ್ಯದ ಮೂರನೇ ಅಧ್ಯಾಯದಲ್ಲಿ ಅಪಾಂತರ ಋಷಿಯೇ ವ್ಯಾಸರೆಂದು ಬರೆದಿದ್ದಾರೆ. ರಾಮಾನುಜ ಮತದಲ್ಲೂ ಒಂದು ಪಕ್ಷದವರು "ವ್ಯಾಸರು ಒಬ್ಬಾನೊಬ್ಬ ಋಷಿ" ಎಂದು ಹೇಳಿ, ತಮ್ಮ ಗ್ರಂಥಗಳಲ್ಲಿ ಮೊದಲು ರಾಮಾನುಜರಿಗೆ ನಮಸ್ಕಾರ ಮಾಡುವ ಪದ್ಧತಿಯನ್ನು ಇಟ್ಟು ಕೊಂಡಿದ್ದಾರೆ. ಹೀಗೆಯೇ ವಾದಿರಾಜರು ಸಾಮಾನ್ಯ ದೇವತೆಯ ಅವತಾರ, ರಾಘವೇಂದ್ರ ಸ್ವಾಮಿಗಳ ದೆಸೆಯಿಂದ ಕಮ್ಮಿ ಎಂದು ಮುಂತಾದ ಮಿಥ್ಯಾ ಜ್ಞಾನ ಬಂದು ಭಕ್ತಿ ಮಾಂದ್ಯಕ್ಕೆ ಕಾರಣವಾಗಬಹುದೆಂದೂ, ಗುರು ದ್ರೋಹವೂ ಬರಬಾರದೆಂದೂ ಈ ಲೇಖದಲ್ಲೂ ಇಷ್ಟು ಉಪಪಾದನೆ ಮಾಡಲಾಗಿದೆ. ಗುರುದ್ರೋಹವು ಹೇಗೆ ಬರುತ್ತದೆ ಎಂದರೆ ಬೃಹದ್ಭಾಷ್ಯದ ಪ್ರಮಾಣವೇ ಇದೆ. "ಗುಣಾನಾಂ ಅಲ್ಪಕಾ ಜ್ಞಾನಂ ತತ್ಸ್ವೇರಾಗ ಸ್ತಥೈವ ಚ। ತತ್ಪ್ರತೀಪೇಚಯಾ ಬುದ್ಧಿ ಸ್ತ್ರಿವಿಧೋ ದ್ವೇಷ ಉಚ್ಯತೇ"॥ (ಅರ್ಥವು 27 ನೆಯ

ಪುಟದಲ್ಲಿದೆ.) ಆದ್ದರಿಂದ ವೃಂದಾವನಾಖ್ಯಾನಾದಿ ಪ್ರಮಾಣಗಳಿಂದ ವಾದಿರಾಜರ ಸ್ವರೂಪ, ಅವತಾರ ಪ್ರಯೋಜನಾದಿ ಮಹಿಮೆಗಳನ್ನು ತಿಳಿದು '' ಲಾತವ್ಯಾಖ್ಯ ಋಜುಗಣ ಯೋಗಿಗಳಾದ, 1 ಭಾವಿ ಸಮೀರ ಪದವೀ ಯೋಗ್ಯರಾದ, ಗರುಡ, ಶೇಷಾದಿ ದೇವತೆಗಳಿಂದ ಸೇವಿತರಾದ, ಸರ್ವದೇವ ಮಾನವ ಗುರುಗಳಾಗಿ ಲೋಕೋದ್ಧಾರ ಮಾಡಿರುವ, ಬ್ರಹ್ಮ ವಾಯ್ವಾವಿಷ್ಟರಾದ, ವಿಶೇಷ ದೇವಕಾರ್ಯ ಸಾಧನೆಗಾಗಿ ಅವತರಿಸಿ ಅದನ್ನು ಪೂರ್ತಿಮಾಡಿ, ಸಜ್ಜನರನ್ನು ಉದ್ಧರಿಸುತ್ತಿರುವ ವಾದಿರಾಜರನ್ನು ಸೇವಿಸುತ್ತೇನೆ. " ಎಂದು ತಿಳಿದು ಸೇವೆ ಮಾಡಿದರೆ ಸರ್ವ ಶುಭ ಫಲವೂ ಬರುತ್ತದೆ. ಅನ್ಯಥಾ ಅವಜ್ಞೆಯಿಂದ ಅನರ್ಥವಾಗುತ್ತದೆ. **ಆಲೋಚನಯಾ ಸರ್ವವಿಷಯಕಂ ಜ್ಞಾನಂ ಋಜುಯೋಗಿ ಜ್ಞಾನಂ** ಎಂದು ಅವರ ಜ್ಞಾನದ ಲಕ್ಷಣವನ್ನು ಪ್ರಮಾಣ ಪದ್ಧತಿಯಲ್ಲಿ ಟೀಕಾಚಾರ್ಯರೇ ಹೇಳಿದ್ದಾರೆ. ಗುರುರಾಜರ ಅಂಥ ಋಜುತ್ವ ಮಹಿಮೆಯನ್ನು ತಿಳಿಯದೆ ಏನು ಸೇವೆ ಮಾಡಿದರೂ ಇತರ ಭಾಷ್ಯಕಾರರು ವೇದವ್ಯಾಸರಿಗೆ ಮಾಡಿದ ಅಲ್ಪತಾಗಣನೆಗೆ ಸದೃಶವಾಗುತ್ತೆ.

---

1) ವಾದಿರಾಜರು ಋಜುಗಳೆಂಬಲ್ಲಿ ಸ್ಪಷ್ಟ ವೃಂದಾವನಾಖ್ಯಾನದಲ್ಲಿ ಅಧ್ಯಾಯ III ಶ್ಲೋಕ 7; ಅಧ್ಯಾಯ VIII ಶ್ಲೋಕ 52 ಮತ್ತು 97 ಇವು ಮೂರು ಸ್ಪಷ್ಟ ಪ್ರಮಾಣಗಳು.

ಅಧ್ಯಾಯ ೧೦

ವಿಭ್ರಮವಂತರಿಗೆ ವಿಪರೀತ ಫಲವನ್ನೇ ದೇವರು, ದೇವತೆಗಳು ಮತ್ತು ವೃಂದಾವನಸ್ಥ ಗುರುಗಳೂ ಕೊಡುತ್ತಾರೆ.

1. ಋಜ್ವಾದಿ ದೇವತೆಗಳ ವಿಷಯದಲ್ಲಿ ಮಿಥ್ಯಾ ಜ್ಞಾನವು ಸಾಧಕನಿಗೆ ಸರ್ವ ಮಂಗಳನಾಶಕವೆಂಬಲ್ಲಿ ಭಾಗವತ ಹತ್ತನೇ ಸ್ಕಂಧದ 72 ನೇ ಅಧ್ಯಾಯದ ಹನ್ನೊಂದು ಮತ್ತು ಹನ್ನೆರಡನೇ ಶ್ಲೋಕಗಳು ಪ್ರಮಾಣವಾಗಿ ಶ್ರೀಮದಾಚಾರ್ಯರ ವ್ಯಾಖ್ಯಾನದಿಂದಲೇ ಅಲಂಕೃತವಾಗಿವೆ. ಕುರುಕ್ಷೇತ್ರಕ್ಕೆ ಸೂರ್ಯಗ್ರಹಣ ಕಾಲದಲ್ಲಿ ಶ್ರೀಕೃಷ್ಣನು ಸಪರಿವಾರ ಬಂದಿದ್ದನು. ಅನೇಕ ಶಿಷ್ಟ ಬ್ರಾಹ್ಮಣರೂ ಬಂದಿದ್ದರು. ಆ ಬ್ರಾಹ್ಮಣರು ತಮ್ಮ ಅನುಷ್ಠಾನವನ್ನು ಸ್ಯಮಂತ ಪಂಚಕದಲ್ಲಿ ಮುಗಿಸಿಕೊಂಡು ಪ್ರಯಾಣಕೆ ಮುಂಚೆ ಶ್ರೀಕೃಷ್ಣ ದರ್ಶನದಿಂದ ಕೃತಾರ್ಥರಾಗಿ ಹೋಗಬೇಕೆಂದು ಶ್ರೀಕೃಷ್ಣನ ಬಿಡಾರಕ್ಕೆ ಬಂದರು. ಶ್ರೀಕೃಷ್ಣನು ತನ್ನ ಜೊತೆಯಲ್ಲಿದ್ದ ಪಾಂಡವಾದಿಗಳೊಡನೆ ಎದ್ದು ಬಂದು ಸತ್ಕರಿಸಿ ತಾನೇ ಅವರನ್ನು ಸ್ತುತಿಸಿದನು. **"ನಹ್ಯಮ್ಮಯಾನಿ ತೀರ್ಥಾನಿ ನ ದೇವಾ ಮೃಚ್ಛಿಲಾಮಯಾಃ । ತೇ ಪುನಂತ್ಯುರುಕಾಲೇನ ದರ್ಶನಾದೇವ ಸಾಧವಃ"** ॥11॥ (ಅರ್ಥ:-ಕೇವಲ ಜಡನೀರು ತೀರ್ಥವಲ್ಲ. ಮಣ್ಣು ಕಲ್ಲು ಲೋಹಗಳ ಪ್ರತಿಮೆಗಳೇ ದೇವರುಗಳಲ್ಲ. ಆ ಜಲ ಮತ್ತು ಪ್ರತಿಮೆಗಳಲ್ಲಿ ಅಂತರ್ಗತ ದೇವತಾ ಚೇತನರೇ ತೀರ್ಥರು ಮತ್ತು ದೇವರುಗಳು. ಅವರುಗಳು ಸೇವೆ ಮಾಡಿದವರಿಗೆ ನಿಧಾನವಾಗಿ, ಆ ಸೇವಕರು ಎಷ್ಟು ವಿಧಿಪೂರ್ವಕವಾಗಿ ಸೇವಿಸಿದ್ದಾರೆಂಬುದನ್ನು ನೋಡಿಕೊಂಡು, ಸೇವಕನಲ್ಲಿ ಮಾಡಿದ ಸೇವೆಯನ್ನೆಲ್ಲಾ ನಾಶಪಡಿಸುವಂಥ ದೋಷಾದಿಗಳಿಲ್ಲವೆಂದು ನಿಶ್ಚಯಿಸಿಕೊಂಡು, ಫಲಕೊಡುತ್ತಾರೆ, ಎಂದರೆ ಅಂಥ ದೋಷರಹಿತ ಸೇವಕನಿಗೆ ಒಬ್ಬ ಗುರುವನ್ನು ಯೋಜನೆ ಮಾಡಿ ಬಿಡುತ್ತಾರೆ. ನೀವೇ (ಬ್ರಾಹ್ಮಣರೇ) ಅಂಥ ಗುರುಗಳು. ನೀವು ನಿಮ್ಮ ಸೇವಕನನ್ನು ಸ್ವಲ್ಪ ಕಾಲದಲ್ಲೇ ಶುದ್ಧಮಾಡಿ ಅವನ ಮನೋ ದೋಷವನ್ನು ಪರಿಹರಿಸಿ ಅವನಿಗೆ ನಿರ್ಮಲ ಜ್ಞಾನವನ್ನು ಕೊಟ್ಟು ಅವನನ್ನು ಉದ್ಧರಿಸಿ ಬಿಡುತ್ತೀರಿ, ಆದ್ದರಿಂದ ನಿಮ್ಮನ್ನು ಸ್ತುತಿಸಿದ್ದೇನೆ ಎಂದನು) [1]

2. ಆ ಬ್ರಾಹ್ಮಣರು ನಾಚಿಕೆಯಿಂದ ಆ ಹರಿಯು ಮಾಡಿದ ಮುಖ ಸ್ತುತಿಯನ್ನು (ದೇವತೆಗಳ ದೆಸೆಯಿಂದ ತಾವು ಹೆಚ್ಚೆಂಬುದನ್ನು) ಅಂಗೀಕರಿಸಲಾರದೆ ಕಳವಳದಿಂದ ನಿಂತಿರಲು, ಶ್ರೀ ಹರಿಯು

---

1) ಗಂಗಾದಿ ತೀರ್ಥವನ್ನು ಸೇವಿಸಿ, ಕಾಶೀ ಶ್ರೀರಂಗಾದಿ ಕ್ಷೇತ್ರಗಳಲ್ಲಿ ಪ್ರತಿಮಾದರ್ಶನಾದಿ ಸೇವೆ ಮಾಡಿದರೂ ಆಗದ ಪ್ರಯೋಜನವು ಒಬ್ಬ ವೈಷ್ಣವ ಯತಿಗಳ ಅಥವಾ ವಿಷ್ಣು ಭಕ್ತ ಗೃಹಸ್ಥನ ಸೇವೆಯಿಂದ ಆಗುತ್ತದೆ; ಆ ಪ್ರಯೋಜನ ಸ್ವಲ್ಪ ಕಾಲದಲ್ಲೇ ಆಗುತ್ತದೆ ಎಂದು ಶ್ರೀಕೃಷ್ಣನು ಹೇಳಿದಂತಾಯಿತು.

ಅವರನ್ನು ಸಮಾಧಾನ ಪಡಿಸುತ್ತಾ ಮಂತ್ರೋ ಹೇಳಿದನೇನೆಂದರೆ - "ನಾಗ್ನಿರ್ನಸೂರ್ಯೋ ನ ಚ ಚಂದ್ರ ತಾರಕಂ ನ ಭೂರ್ಜಲಂ ಖಂ ಶ್ವಸನೋಽಥ ವಾಙ್ಮನಃ । ಉಪಾಸಿತಾ ಭೇದಕೃತೋ ಹರಂತ್ಯಘಂ ವಿಪಶ್ಚಿತೋ ಘ್ನಂತಿ ಮುಹೂರ್ತ ಸೇವಯಾ" ॥ (ಅರ್ಥ:- ಬ್ರಾಹ್ಮಣರೇ ! ನಾನು ಉಪಚಾರದ ಮಾತನ್ನು ಹೇಳಿಲ್ಲ. ನಿಮ್ಮ ನಿಜವಾದ ಮಹಿಮೆಯನ್ನೇ ವರ್ಣಿಸಿದ್ದೇನೆ. ನೋಡಿರಿ - ಅಗ್ನಿ, ಸೂರ್ಯ, ಚಂದ್ರ, ನಕ್ಷತ್ರ, ಭೂ, ಜಲ, ಆಕಾಶ, ವಾಯು ಮತ್ತು ವಾಗ್ದೇವತಾಗಳಾಗಲೀ, ಮನೋ ದೇವತೆಗಳಾದ ಗರುಡಾದಿಗಳಾಗಲೀ, ಕೊನೆಗೆ ಸರ್ವನಿಯಾಮಕ ಹರಿಯೋ ಆಗಲಿ, ಉಪಾಸಕನು " ಭೇದಕೃತ್ " ಯಥಾರ್ಥ ವಿರುದ್ಧ ಮಿಥ್ಯಾ ಜ್ಞಾನವುಳ್ಳವನಾಗಿದ್ದರೆ ಪೂರ್ವೋಕ್ತ ದೇವರು ದೇವತೆಗಳೂ ಸೇವೆ ಮಾಡುವವನ ಪಾಪವನ್ನು ಪರಿಹರಿಸುವುದಿಲ್ಲ. (ಪ್ರತ್ಯುತ ಶಾಪವನ್ನೂ ಕೊಟ್ಟು ಬಿಡುತ್ತಾರೆ ಎಂದು ಆಚಾರ್ಯರು ಪ್ರಮಾಣ ಕೊಟ್ಟಿದ್ದಾರೆ). ಹಾಗಿರುವುದರಿಂದ ಎಲ್ಲಾ ತೀರ್ಥ ಮತ್ತು ಕ್ಷೇತ್ರ ದೇವತೆಗಳಿಗಿಂತ ನೀವೇ ಹೆಚ್ಚು ಉಪಕಾರಿಗಳೆಂದು ನಾನು ಹೇಳಿದೆನು. ನೀವು ಲಜ್ಜೆ ಹೊಂದಲು ಕಾರಣವಿಲ್ಲ. ಆ ಮಿಥ್ಯಾಜ್ಞಾನಯುಕ್ತ ಸೇವಕನು ಸ್ವಲ್ಪ ಸೇವೆಯಿಂದ ನಿಮ್ಮನ್ನು ಶರಣು ಹೊಂದಿದರೂ, ನೀವು ಅವನ ದುಷ್ಟಜ್ಞಾನಗಳನ್ನೇ ಶಾಸ್ತ್ರೋಪದೇಶದಿಂದ ಪರಿಹರಿಸಿ. ಅವನ ಸೇವೆಗೆ ಫಲವನ್ನೂ ಕೊಟ್ಟು ಅವನನ್ನು ಉದ್ಧರಿಸಿ ಬಿಡುತ್ತೀರಿ ಆದ್ದರಿಂದ ನಿಮ್ಮನ್ನು ಕೊಂಡಾಡಿದ್ದು ತಪ್ಪಲ್ಲ). ಹೀಗೆ ಹೇಳಿ ಸಂತೈಸಿದನು.

3. ದೇವ ದೇವತೆಗಳ ಸೇವೆಯನ್ನು ಬಹುಕಾಲ ಮಾಡಿದರೂ ಆ ಸೇವೆಗಳೆಲ್ಲವನ್ನೂ ಹಾಳು ಮಾಡುವ ಭೇದ ಎಂಬ ಮಿಥ್ಯಾಜ್ಞಾನಗಳು ಯಾವುವು ಎಂದರೆ, ಆಚಾರ್ಯರು ಒಂದು ಪಟ್ಟಿಯನ್ನು ಕೊಟ್ಟಿದ್ದಾರೆ. " ಪ್ರಾಕೃತೈಃ ದೃಶ್ಯಮಾನಂ ತು ನ ದ್ರವಂ ತೀರ್ಥಮುಚ್ಯತೇ । ದೇವಾಶ್ಚ ನ ಶಿಲಾಮಾತ್ರಾಃ ಕಿಂತು ತತ್ತ್ವಾಂತರಸ್ಥಿತಾಃ । ಗುರೂಪದೇಶಂತು ವಿನಾ ನ ತೇ ದೃಶ್ಯಾಃ ಕಥಂಚನ । ನ ಜ್ಞಾಯತೇ ಚ ತದ್ರೂಪಂ ಅನ್ಯಥಾ ಜ್ಞಾನಿನಾಂ ಚ ತೇ । ಕಿಂ ಶಾಪಂ ಪ್ರಯಚ್ಛಂತಿ ತಸ್ಮಾದ್ಗುರುಮುಪಾವ್ರಜೇತ್ । ತಸ್ಮಾತ್ತೀರ್ಥಾನಿ ದೇವಾಶ್ಚ ನಿತ್ಯಂ ವಿದ್ವತ್ಸು ಸಂಸ್ಥಿತಾಃ ॥ ಇತಿ ಗಾರುಡೇ ॥........ ಅನ್ಯಥಾ ಜ್ಞಾನಮೇವಾತೋ ಭೇದಜ್ಞಾನಂ ವಿನಿಂದಿತಂ । ಶಿಲಾದೇವ ಇತಿ ಜ್ಞಾನಂ ದೇವೋಽಸ್ಮೀತಿ ತು ಯಾದೃಶಿ: । ಅಸಮಸ್ಯ ಸಮತ್ವೇನ ಸಮಸಾಮ್ಯಸಮದರ್ಶನಂ । ದ್ರವಂ ತೀರ್ಥಮಿತಿ ಜ್ಞಾನಂ ದೇಹೋಽಹಮಿತಿ ಯಾ ಮತಿ: । ಅಸದ್ಭಾರ್ಯಾದಿಷು ಸ್ವೀಯ ದರ್ಶನಂ ಚೈವಮಾದಿಕಂ ಭೇದಜ್ಞಾನಮಿತಿಪ್ರೋಕ್ತಂ ಯಾಚಾನ್ಯಾಪ್ಯನ್ಯಥಾಮತಿಃ । ತಸ್ಮಾತ್ತದಪಹಾನಾಯ ಸಂಸೇವ್ಯಾ ಗುರವೋ ವರಾಃ ॥ " (ಅರ್ಥ:- ಪ್ರಾಕೃತರಿಗೆ ಕಾಣುವ ದ್ರವವೇ ತೀರ್ಥವಲ್ಲ, ಶಿಲಾದಿ ಪ್ರತಿಮೆಗಳೇ ವರಪ್ರದ ದೇವರಲ್ಲ. ಕಿಂತು ಜಲಾಂತರ್ಗತರಾಗಿಯೂ, ಪ್ರತಿಮಾಂತರ್ಗತರಾಗಿಯೂ ಇರುವ ಚೇತನರೇ ತೀರ್ಥ, ದೇವತೆ ಎಂದೆನಿಸುತ್ತಾರೆ. ಗುರೂಪದೇಶವಿಲ್ಲದೆ ಆ ದೇವರ ಅಥವಾ ದೇವತೆಗಳ ಪ್ರತ್ಯಕ್ಷವಾಗುವುದಿಲ್ಲ. ಅನ್ಯಥಾ ಜ್ಞಾನಿಗಳಿಗೆ ಅವರ ರೂಪವು ಸ್ವಲ್ಪವೂ ತಿಳಿಯುವುದಿಲ್ಲ. ಅಷ್ಟೇ ಅಲ್ಲ. ಅನ್ಯಥಾ ಜ್ಞಾನದಿಂದ ಸಹಿತರಾಗಿ ಸೇವೆ ಮಾಡುವವನಿಗೆ ಅವರು ಶಾಪವನ್ನೇ ಕೊಟ್ಟು ಬಿಡುತ್ತಾರೆ. ಆದ್ದರಿಂದ ತೀರ್ಥ ದೇವತೆಗಳೂ, ಪ್ರತಿಮಾಸ್ಥ ದೇವತೆಗಳೂ ವಿದ್ವಜ್ಜನರಲ್ಲಿ ಸನ್ನಿಹಿತರಾಗಿರುತ್ತಾರೆ. ಆದ್ದರಿಂದ ಆ ವಿದ್ವಜ್ಜನರ

ಉಪದೇಶದಿಂದ ಅನ್ಯಥಾ ಜ್ಞಾನವನ್ನು ತ್ಯಜಿಸಿ ಗುರೂಪದೇಶಾನುಸಾರ ತೀರ್ಥ, ವೃಂದಾವನ, ಪ್ರತಿಮಾಗಳನ್ನೂ ಸೇವಿಸಿದರೆ ಫಲವಾಗುತ್ತದೆ. – ಗಾರುಡೇ......, ಅನ್ಯಥಾ ಜ್ಞಾನವೇ '' ಭೇದಕೃತ್ '' ಎಂಬಲ್ಲಿನ ಭೇದ ಜ್ಞಾನ, ಅದು ವಿನಿಂದಿತ. ಅದನ್ನುಳ್ಳವನ ಸೇವೆಯೇ ಹಾಳಾಗುತ್ತದೆ. ಶಿಲೆಯೇ ದೇವರೆಂಬ ಜ್ಞಾನ, ಆ ಯೋಗ್ಯತೆ ಇಲ್ಲದೆ ನಾನು ಇಂದ್ರಾಂಶ, ಪ್ರಹ್ಲಾದಾಂಶ ಇತ್ಯಾದಿ ದೇವತ್ವ ಜ್ಞಾನ, ಉತ್ತಮರನ್ನು ಅಧಮರೆಂದು ತಿಳಿಯುವ ಜ್ಞಾನ, (ಋಜು ಯೋಗಿಗಳನ್ನು ಒಬ್ಬ ಭೃತ್ಯನೆಂದು ತಿಳಿಯುವುದು). ನೀಚರನ್ನು ಉತ್ತಮರನ್ನಾಗಿ ತಿಳಿಯುವುದು. (ಪ್ರಹ್ಲಾದನನ್ನು ಬ್ರಹ್ಮದೇವರಿಗಿಂತ ವಾದಿರಾಜರಿಗಿಂತ ಹೆಚ್ಚು ಎಂದು ತಿಳಿಯುವುದು) ಅಸಮರನ್ನು ಸಮರೆಂದು ತಿಳಿಯುವುದು, ಸಮರನ್ನು ಅಸಮರೆಂದು ತಿಳಿಯುವುದು, ಕೇವಲ ದ್ರವವನ್ನು ತೀರ್ಥವೆಂದು ತಿಳಿಯುವುದು, ನಾನೇ ದೇಹವೆಂಬಂತೆ ಅತ್ಯಾಸಕ್ತಿ ಮಾಡುವುದು, ದುಷ್ಟ ಅಥವಾ ವ್ಯಭಿಚಾರಿ ಪತ್ನಿಯಲ್ಲೂ ಸ್ವೀಯತ್ವ ಬುದ್ಧಿ ಮಾಡುವುದು, ಮತ್ತು ಜೀವಾಭೇದ, ನಿರ್ಗುಣತ್ವ ಜ್ಞಾನ, ಪ್ರಮಾಣ ಗ್ರಂಥವಾದ ಆಖ್ಯಾನಾದಿಗಳನ್ನು ಅಪ್ರಮಾಣವೆಂದು ತಿಳಿಯುವುದು. ಇವೇ ಮುಂತಾದುವು ಅನ್ಯಥಾಜ್ಞಾನವೆಂದೆನಿಸುತ್ತವೆ. ಅವುಗಳ ನಾಶಕ್ಕಾಗಿ ಜ್ಞಾನಿ ಗುರುಗಳನ್ನು ಸೇವಿಸಬೇಕು.'') ವರಾಃ " ಎಂದರೆ ಆ ಕಾಲದಲ್ಲಿ ತಮೋಗುಣ, ರಜೋಗುಣ, ಕಾರ್ಯ ಹೀನರಾದ, ಸ್ವೋತ್ತಮ ಸಾತ್ವಿಕ ಜ್ಞಾನಗುಣ ಪೂರ್ಣರನ್ನು ಸೇವಿಸಬೇಕು. ಅಪರೋಕ್ಷ ಜ್ಞಾನಿಗಳನ್ನು ಅಥವಾ ನಿರ್ಣಯಜ್ಞರನ್ನು ಸೇವಿಸಬೇಕು ಎಂದರ್ಥ.

4. ದೇವರ ಸೇವೆ, ವೃಂದಾವನ ಸೇವೆ ಗಂಗಾದಿ ತೀರ್ಥ ಸೇವೆಯನ್ನು ಬಿಟ್ಟು ಒಬ್ಬ ಅಲ್ಪ ಜ್ಞಾನಿ ಬ್ರಾಹ್ಮಣನ ಸೇವೆಯೇ ಅಧಿಕವೆಂದು ಪ್ರಾಪ್ತವಾಯಿತಲ್ಲಾ ? ಎಂದು ಶಂಕಿಸಿದರೆ ಆಚಾರ್ಯರು ಪ್ರಾಮಾಣಿಕ ಸಮಾಧಾನ ತೋರಿಸಿದ್ದಾರೆ. " ತತ್ರಸ್ಥಾ: ದೇವತಾಃ ಸರ್ವಾಃ ಪ್ರೀಯಂತೇ ಗುರು ಪೂಜಯಾ । ನೈವಾನ್ಯಥೈಂಷಾ ಪ್ರೀತಿಃ ಸ್ಯಾದ್ಗುರೂಕ್ತಿಮುಪಹಾಯತು ॥ ತಸ್ಮಾತ್ಪೂಜಾ ವಿಶೇಷೇಣ ಸತಾಂ ಕಾರ್ಯಾ ನೃಣಾಂ ಸದಾ । ಭಕ್ತಿಸ್ತು ತಾರತಮ್ಯೇನ ವಿಶಿಷ್ಟೇತ್ವಧಿಕಾ ಭವೇತ್ ॥ ಇತಿ ಸ್ಕಾಂದೇ ॥ "

" ಉತ್ತಮಾ ಅಪಿ ದೇವೇಶಾಃ ಅವರಾನ್ ವಿದುಷೋ ನೃಣಾಂ । ಪೂಜಾಯೈ ಸಂಪ್ರ-ಯಚ್ಛಂತಿ ಪರೋಕ್ಷತ್ವ ಪ್ರಿಯಾ ಯತಃ । ತೇಷು ಸ್ಥಿತ್ವಾ ಸ್ವಯಂ ಪೂಜಾಂ ಗೃಹ್ಣಂತ್ಯ-ನುಪಮಾಂ ಸದಾ । ಪೂಜಿತಾಃ ಸ್ಯುಃ ಸುರವರಾ: ಸಬ್ರಹ್ಮಾಣಃ ಸಕೇಶವಾಃ ॥ ಇತಿ ವಾಮನೇ........ (ಅರ್ಥ:- ಆ ಅಲ್ಪನಾದರೂ ಶಿಷ್ಟ ಬ್ರಾಹ್ಮಣನಲ್ಲೇ ಸರ್ವ ದೇವತೆಗಳೂ, ದೇವರೂ ವಾಸ ಮಾಡಿರುತ್ತಾರೆ. ಅವನಲ್ಲಿ ಅಂತರ್ಯಾಮಿಯಾಗಿದ್ದು ನಿಯಾಮಕರಾಗಿರುವ ದೇವತೆಗಳೆಲ್ಲರೂ ಆ ಅಲ್ಪ ಗುರುವಿನ ಪೂಜೆಯಿಂದಲೇ ಸಂತೋಷ ಪಡುತ್ತಾರೆ. ಆ ಗುರುಪೂಜೆ ಮಾಡದೆ " ನಾನು ನೇರವಾಗಿ ಫಲಾದಿಗಳಿಂದ ದೇವರನ್ನೇ ಪೂಜಿಸುತ್ತೇನೆ. ವಾದಿರಾಜರ ವೃಂದಾವನ ಸೇವಿಸುತ್ತೇನೆ, ತೀರ್ಥವನ್ನೇ ಸ್ನಾನಾದಿಗಳಿಂದ ಸೇವಿಸುತ್ತೇನೆ " ಎಂದು ಪ್ರತಿಷ್ಠೆ ಮಾಡಿಕೊಂಡು ಗುರು ಪೂಜೆಯನ್ನು ಬಿಟ್ಟು ತೀರ್ಥ, ವೃಂದಾವನ, ಕ್ಷೇತ್ರದ ವಿಷ್ಣು ಪ್ರತಿಮಾದಿಗಳನ್ನು ಸೇವಿಸಿದರೆ ಆ ದೇವತೆಗಳು ಸಂತೋಷ ಹೊಂದುವುದಿಲ್ಲ. ಆದ್ದರಿಂದ ಎಲ್ಲಾ ವಿಧವಾದ ಮಿಥ್ಯಾ ಜ್ಞಾನಗಳು ಹೋಗಿ ದೇವ ದರ್ಶನ

ಪ್ರಯೋಜಕ ಉಪದೇಶವನ್ನು ಹೊಂದುವುದಕ್ಕಾಗಿ ಯಥಾರ್ಥ ಜ್ಞಾನಿಯಾದ ಗುರುವನ್ನೇ ಸೇವಿಸಬೇಕು. ಗುರುವು ಅಲ್ಪನಾಗಿದ್ದರೆ ಅವನನ್ನು ಗೋಪಾಲಕೃಷ್ಣ, ಹನುಮಂತ, ರುದ್ರ, ಗಂಗಾ, ಗೋದಾವರೀ ಅಭೇದ ತಿಳಿಯಬೇಕಾದ್ದಿಲ್ಲ. ದೊಡ್ಡ ದೇವತೆಗಳು ಈ ನನ್ನ ಗುರುವಿನಲ್ಲಿದ್ದಾರೆಂದು ತಿಳಿದು ತಾರತಮ್ಯಾನುಸಾರವೇ ಭಕ್ತಿಮಾಡಬೇಕು. ಎಂದು ಸ್ಕಾಂದದಲ್ಲಿದೆ. ದೋಷ ಪರಿಹಾರಕ್ಕಾಗಿ ಮತ್ತು ಮಂಗಳಾಧಿಕ್ಯಕ್ಕಾಗಿ ಗುರುಪೂಜೆಯನ್ನು ದೇವತೆಗಳೇ ಮತ್ತು ದೇವರೇ ಸಾಧಕವನ್ನಾಗಿ ಮಾಡಿರುತ್ತಾರೆ. ಪೂಜ್ಯರಾದ ಗುರುಗಳಿಂದ ಉತ್ತಮರಾದಾಗ್ಯೂ ಆ ದೊಡ್ಡ ದೇವತೆಗಳು ತಮಗಿಂತ ಅಧಮ ಗುರುವನ್ನು ತಮ್ಮ ಪೂಜೆಗಾಗಿ ಕೊಡುತ್ತಾರೆ. ಅವನ ಪೂಜೆಯನ್ನು ತಾವು ಅಲ್ಲಿದ್ದು ಸ್ವೀಕರಿಸಿ ಸೇವೆ ಮಾಡಿದವನ ಮಿಥ್ಯಾ ಜ್ಞಾನವನ್ನು ತೊಲಗಿಸಿ ಯಥಾರ್ಥ ಜ್ಞಾನಗಳನ್ನು ಕೊಡುತ್ತಾರೆ. ದೇವತೆಗಳು ಪರೋಕ್ಷತ್ವದಲ್ಲಿಯೇ ಪ್ರೀತಿಯುಳ್ಳವರು. ಆದ್ದರಿಂದ ಇದನ್ನು ತಿಳಿದು ಮೊದಲು ಗುರು ಸೇವೆಯಿಂದ ಮಿಥ್ಯಾ ಜ್ಞಾನಗಳನ್ನು ಕಳೆದುಕೊಂಡು ಸೇವೆ ಮಾಡುವವನಿಗೆ ದೇವರು, ವೃಂದಾವನ, ಪ್ರಾಣದೇವರೂ ಮುಂತಾದ ಎಲ್ಲಾ ದೇವತೆಗಳೂ ಒಲಿಯುತ್ತಾರೆ. ಅನ್ಯಥಾ ಇಲ್ಲ ಎಂದು ವಾಮನ ಪುರಾಣದಲ್ಲಿದೆ.)

5. ಹೀಗೆ ವಾದಿರಾಜರು ಒಬ್ಬ ಅಗ್ನಿ ಪುತ್ರನ ಅವತಾರ. ಜಯತೀರ್ಥ, ರಾಘವೇಂದ್ರ ಸ್ವಾಮಿಗಳಿಗಿಂತ ಕಮ್ಮಿ ಎಂದು ಮುಂತಾಗಿ ಕಲ್ಪಿಸಿಕೊಂಡು, ಅವರ ವಿಷಯದಲ್ಲಿ ಯಥಾರ್ಥ ಸ್ವರೂಪ ಜ್ಞಾನವನ್ನೇ ಪಡೆಯದೆ, ಊಹೆಗಳಿಂದ ಗ್ರಂಥ ಬರೆಯುವ ಪಾಪಾತ್ಮನೂ, ಅದರ ಸ್ವರೂಪ ಜ್ಞಾನವಿಲ್ಲದೆ[1] ವೃಂದಾವನ ಸೇವೆ ಮಾಡುವುದಕ್ಕೆ ಆಸಕ್ತನಾಗುವ ದುರ್ಭಗನೂ, ಅಧಿಕಾರಿಗೆ ಪ್ರಾಪ್ತವಾಗುವ '' ಸರ್ವಾಭೀಷ್ಟ ಪ್ರಾಪ್ತಿ '' ಎಂಬ ಫಲವನ್ನು ಹೊಂದುವುದಿಲ್ಲ. ಅಂಥವನು ಮಹಾಪಾಪ ಕವಚಧಾರಿ ಎನ್ನಿಸಲ್ಪಟ್ಟು ವೃಂದಾನನಾದಿಗಳ ಸಾಕ್ಷಾತ್ ಸೇವೆಗೆ ಅಧಿಕಾರಿಯೇ ಅಲ್ಲ. ವಿರುದ್ಧ ರೀತಿಯ ಸೇವೆಯಿಂದ ಅವನು ಶಾಪವನ್ನು ಹೊಂದಬಹುದು. ಆದ್ದರಿಂದ ಸಾತ್ವಿಕ ಗುರುವಿನ ಸೇವೆಯೇ ಅವನಿಗೆ ಶುಭದಾಯಕ ಔಷಧಿ.

ಶ್ರೀಕೃಷ್ಣನ ವಚನಗಳಿಂದ ಈ ಮರ್ಮಗಳೆಲ್ಲವೂ ಪ್ರಕಾಶಿತವಾಗಿವೆ. ಶ್ರೀ ವಾದಿರಾಜ ಗುರುವರೆದ ಶ್ರೀ ವೇದವ್ಯಾಸದೇವರ ಕೃಪೆಯಿಂದ ಈ ವಿಮರ್ಶೆಯ ಮಾಲೆಯು ರಚಿತವಾಗಿ ಅವರ ಕೊರಳಿಗೇ ಅರ್ಪಿತವಾಗಿದೆ. ವಾಚಕ ಸಂತರೆಲ್ಲರೂ ಸಹ ಅನುಗ್ರಹಿಸಲಿ. ಶ್ರೀಕೃಷ್ಣಾರ್ಪಣಮಸ್ತು.

---

1) ನಾನಿರ್ಧಾರಿತ ಸ್ವರೂಪಸ್ಯ ಪ್ರಣಾಮೋಯುಕ್ತ: (ನಮ್ಯರ ಸ್ವರೂಪ ತಿಳಿಯದಿದ್ದರೆ ಅವರ ಭಕ್ತಿಪೂರ್ವಕ ಸೇವೆಯು ಶಕ್ಯವಲ್ಲ) ಎಂದು ಸುಧಾವಚನವಿದೆ.

ಶ್ರೀವಾದಿರಾಜ ಗುರ್ವಂತರ್ಗತ ಶ್ರೀ ಲಕ್ಷ್ಮೀಹಯಗ್ರೀವಾಯ ನಮಃ ॥

ಎರಡನೆಯ ಭಾಗ

ಪ್ರಮೇಯ ಶೋಧನೆಗೆ ಅಂಗವಾದ ವಿವರಣ ಸಮುಚ್ಚಯ

ಸ್ವಾಪ್ನ ವೃಂದಾವನಾಖ್ಯಾನದ ಸಾರಾಂಶ.

ಪ್ರಥಮ ಅಧ್ಯಾಯ : 113 ಶ್ಲೋಕಗಳ ಈ ಅಧ್ಯಾಯದಲ್ಲಿ ತನ್ನ ಶರಣಾಗತ ಭಕ್ತ ಏಡಮೂಕ ವಿಪ್ರನಿಗೆ ಶ್ರೀವಾದಿರಾಜರು ಸ್ವಪ್ನದಲ್ಲಿ ದರ್ಶನಕೊಟ್ಟು ಹೇಳಿದ ವೃತ್ತಾಂತ ಆರಂಭವಾಗುತ್ತದೆ. ಮೊದಲು ಹತ್ತು ಶ್ಲೋಕಗಳಿಂದ ಶ್ರೀಹರಿಸ್ತುತಿ, ರಾಮ, ಕೃಷ್ಣ ವೇದವ್ಯಾಸ, ಹಯಗ್ರೀವ, ತ್ರಿವಿಕ್ರಮ, ವಾಮನ, ಗಜೇಂದ್ರ ವರದ ರೂಪಗಳಿಗೆ ಸ್ತೋತ್ರ ರೂಪ ಮಂಗಳ ಮಾಡಿ; **" ಇಂದ್ರೋ ರುದ್ರಃ ಕುಬೇರಶ್ಚ "** ಇತ್ಯಾದಿ ನಾಲ್ಕು ಶ್ಲೋಕಗಳಿಂದ ಇಂದ್ರ ರುದ್ರಾದಿ ದಿಕ್ಪಾಲಕರೂ, ಚಂದ್ರಸೂರ್ಯಾದಿ ದೇವತೆಗಳೂ ವೃಂದಾವನಸ್ಥ ಹಯಗ್ರೀವನನ್ನು ನೈವೇದ್ಯ ಕಾಣಿಕೆಗಳನ್ನಿಟ್ಟು ಉಪಾಸನೆ ಮಾಡುತ್ತಾರೆ ಎಂದು ಹೇಳಿದ್ದಾರೆ. ಶ್ರೀಹರಿಯ ಉಪಾಸನೆಗೆ " ವಿಶಿಷ್ಟ ಪ್ರತಿಮಾ ವಾಯುರೇವ " ಎಂದು ಛಾಂದೋಗ್ಯ ಭಾಷ್ಯದಲ್ಲಿ ನಿರ್ಣಯ ಇದೆ. ಇಲ್ಲಿ ರುದ್ರಾದಿಕರ್ತೃಕ ಹಯಗ್ರೀವ ಉಪಾಸನೆಗೆ " ವೃಂದಾವನಸ್ಥ ಗುರುರಾಜರು ಪ್ರತಿಮಾ " ಎಂದಾಯಿತು. ಅದು ವಾದಿರಾಜ ಗುರುಗಳ ಋಜುತ್ವ ನಿರ್ಣಾಯಕ ಲಿಂಗ. ಉಪಕ್ರಮದಲ್ಲೇ ಹೀಗೆ ಇದೆ. ಅನಂತರ ಅವರೇ ವೃಂದಾವನ ಮಹಿಮೆ ಹೇಳಿದ್ದಾರೆ. " ನನ್ನನ್ನು ಸೇವಿಸುತ್ತಾ ಮೂವತ್ತಮೂರು ಕೋಟಿ ದೇವತೆಗಳು ವೃಂದಾವನದಲ್ಲಿದ್ದಾರೆ. ಹಯಗ್ರೀವ ದೇವರ ಆಜ್ಞೆಯಿಂದ ವೃಂದಾವನದಲ್ಲಿ ಸರ್ವ ತೀರ್ಥಮಾನಿಗಳು, ಕ್ಷೇತ್ರಮಾನಿಗಳು, ವನಮಾನಿಗಳು, ಪರ್ವತಾಭಿಮಾನಿಗಳು, ಗಂಗಾದಿನದ್ಯಭಿಮಾನಿಗಳು, " ಮಮ ವೃಂದಾವನೇ ಪುಣ್ಯೇ ತತ್ಪಶ್ಚಾತ್ತು ಸರೋವರೇ " ಶ್ಲೋಕ 3. (ಅರ್ಥ :– ನನ್ನ ವೃಂದಾವನದಲ್ಲಿ ಒಂದು ರೂಪ ; ಧವಳ ಸರೋವರದಲ್ಲಿ ಒಂದು ರೂಪ,) ಹೀಗೆ ದ್ವಿರೂಪದಿಂದ ಸನ್ನಿಹಿತರಾಗಿದ್ದಾರೆ. ಆದ್ದರಿಂದ ಧವಳಗಂಗಾ ಅತಿಪವಿತ್ರ.) ಇದನ್ನು ಬ್ರಾಹ್ಮಣನಿಂದ ಕೇಳಿ ಭಜಿಸಬೇಕು ಎಂದಿದ್ದಾರೆ. ಶ್ಲೋಕ 34ರಲ್ಲಿ ಈ ಆಖ್ಯಾನ ಪಾರಾಯಣ ಫಲವಿದೆ. (ಅರ್ಥ :– ಮಡಿಯಿಂದ ಮೂರು ಸಂಧ್ಯಾಕಾಲದಲ್ಲಿ ವೃಂದಾವನ ಸ್ತೋತ್ರ ಮಾಡಿದರೆ ಅವನಿಗೆ ಅಕಾಲ ಮೃತ್ಯು ನನ್ನ ಅನುಗ್ರಹದಿಂದ ಆಗುವುದಿಲ್ಲ.)

ಧವಳ ಗಂಗಾ, ಗಂಗಾಧರ, ಹನುಮಂತ, ತ್ರಿವಿಕ್ರಮಸ್ವಾಮಿ ಇವರ ಸನ್ನಿಧಾನ ಹೇಳಿದೆ. ಅಶ್ವತ್ಥ ಸ್ತುತಿ, ಹಯಗ್ರೀವ ಸ್ತುತಿ, ಹನುಮತ್ ಸ್ತುತಿ, ರಾಮ ಸ್ತುತಿ, ನರಸಿಂಹ ಸ್ತುತಿ ಇವೆಲ್ಲಾ

ಇದೆ. ಈ ಗ್ರಂಥ ವಾದಿರಾಜರೇ ಮಾಡಿದ್ದು ಎಂದಿದೆ. ಶ್ಲೋಕ 58 : (ಅರ್ಥ :– ವಾಗೀಶತೀರ್ಥ ಕರಕಮಲ ಸಂಜಾತರಾದ ವೃಂದಾವನಸ್ಥರಾದ ವಾದಿರಾಜ ಮುನಿಗಳಿಂದ ಬ್ರಾಹ್ಮಣನಿಗೆ ಸ್ವಪ್ನದಲ್ಲಿ ಕಾಣಿಸಿಕೊಂಡ ರೂಪದಿಂದ ಈ ಪುಣ್ಯಕರವಾದ ವೃಂದಾವನ ಸ್ತೋತ್ರವು ರಚಿತವಾಗಿದೆ. ಇದ ಪಾರಾಯಣ ಮಾಡುವವರಿಗೆ ಸಂಪತ್ಪ್ರದವಾದದ್ದು). ಆದ್ದರಿಂದ ಈ ಕೃತಿಗೆ ಋಜು ಪ್ರೋಕ್ತತ್ವ ರೂಪ ಆಪ್ತಿ ಮೂಲತ್ವ ಬಂತು. ನರನಾರಾಯಣ ಸ್ತುತಿ ಇದೆ. ಉಡುಪಿ ಕ್ಷೇತ್ರ ಸರ್ವೋತ್ಕೃಷ್ಟ ಎಂದು ಸ್ತುತಿ ಇದೆ. ವೇದವ್ಯಾಸರ ವಚನವು ಉಡುಪಿ ಉತ್ಕರ್ಷ ಸಿದ್ಧಿಗಾಗಿ ಹೇಳಲ್ಪಟ್ಟಿದೆ. " ಆ ಬದರೀ ನಾರಾಯಣ ಮತ್ತು ಈ ಉಡುಪಿ ಕೃಷ್ಣ ಇವರಿಬ್ಬರ ಪೂಜೆ ಮಾಡಿ ನೀನು ಸಿದ್ಧನಾಗಿದ್ದೀ; ನಿನ್ನ ಮಹಿಮೆ ಕೇಳಿದವನಿಗೆ ವೈರಾಗ್ಯ ಭಕ್ತಿ ಬರುತ್ತವೆ " ಎಂದು ವ್ಯಾಸರು ವಾದಿರಾಜರಿಗೆ ಹೇಳಿದ್ದಾರೆ.

ನಂತರ ಶ್ರೀಹಯಗ್ರೀವ ದೇವರು ಮಧುಕೈಟಭರನ್ನು ಕೊಂದ ಕಥೆ ಹೇಳಿ ಅದರ ಶ್ರವಣದಿಂದ ಲಕ್ಷ್ಮೀಪ್ರಾಪ್ತಿ ಫಲವೆಂದು ವಿಪ್ರನಿಗೆ ಹೇಳಿ, ತಮಗೂ ಅದರ ಪ್ರಭಾವದಿಂದ ಲಕ್ಷ್ಮೀರೂಪಗಳ ದರ್ಶನ ವಿಶೇಷವಾಯಿತು ಎಂದಿದ್ದಾರೆ. ಇಂಥ ಕಥೆ ಹೇಳುವಾಗ ತಾರತಮ್ಯ ಮೀರಿ ನಡೆಯಬಾರದು ಎಂದು ತೋರಿಸಲು ಭೂದೇವತೆ ಲಕ್ಷ್ಮೀದೇವಿಯರ ದೆಸೆಯಿಂದ ತುಂಬಾ ಕಮ್ಮಿ ಎಂದು ನಿರ್ಣಯವನ್ನು ಸಯುಕ್ತಿಕವಾಗಿ ತಿಳಿಸಿದ್ದಾರೆ. ಹಿರಣ್ಯಾಕ್ಷನನ್ನು ಕೊಂದು ವರಾಹದೇವರು ಭೂಮಿಯನ್ನು ತೊಡೆಯ ಮೇಲೇರಿಸಿಕೊಂಡು ಬಂದು ಪುನಃ ಪುನಃ ಸಂತೈಸಿದರು. ಆಕೆಗೆ ತಾನು ಲಕ್ಷ್ಮೀದೇವಿಯನ್ನು ಮೀರಿದವಳೆಂದು ಗರ್ವ ಬಂತು. ಆ ಪಾಪದಿಂದ ಅವಳಿಗೆ ಕೆಟ್ಟಮಗ '' ನರಕಾಸುರ '' ಹುಟ್ಟಿದ. ದೇವತೆಗಳನ್ನೇ ಆ ಪಾಪಿ ಹಿಂಸೆ ಮಾಡಿದ. ವರಾಹ ಸ್ವಾಮಿ ಅವನ ಪಾಪ ವೃದ್ಧಿಗಾಗಿಯೇ ತನ್ನ ಕೋರೆದಾಡೆಯನ್ನು ಕಿತ್ತು ಕೊಟ್ಟನು. ಆ ವೈಷ್ಣವಾಸ್ತ್ರದಿಂದ ನರಕಾಸುರನು ದೇವಕಂಟಕನಾಗಿ ಬ್ರಹ್ಮ ಪದವಿಗಾಗಿ ಅಪೇಕ್ಷೆ ಮಾಡಿದನು. ಕೃಷ್ಣಾವತಾರ ಮಾಡಿದಾಗ ದೇವರು ನರಕನನ್ನು ಕೊಂದನು. ಲಕ್ಷ್ಮೀದೇವಿಯರ ಪುತ್ರ ಬ್ರಹ್ಮರಾಯ ಜಗದ್ಗುರು. ಪರಮ ವಿಷ್ಣು ಭಕ್ತ. ಪುತ್ರರ ವ್ಯತ್ಯಾಸದಿಂದ ತಾಯಿಯರುಗಳ ತಾರತಮ್ಯ ಗೊತ್ತಾಗುತ್ತದೆ. ಅದಕ್ಕೇ ಗರ್ವರಹಿತ ಭಕ್ತಿಯಿಂದ ದೇವರನ್ನು ಮೆಚ್ಚಿಸಬೇಕು. ಈ ಲಕ್ಷ್ಮೀದೇವಿ ಮಹಿಮೆ ತಿಳಿದು ಭೂಮ್ಯುದ್ಧಾರ ಕಥೆ ಕೇಳಿ ಭಕ್ತಿ ಮಾಡಿದರೆ ಅಧಿಕಾರಿ ಭೂಪತಿ ಆಗುವನು. ಸಾಮಾನ್ಯರಿಗೆ ಜಮೀನು, ಮನೆ ಆಗುತ್ತದೆ. ನಿಮಗೇನು ಬಂತು ಎಂದರೆ ವಾದಿರಾಜರು ಹೇಳುತ್ತಾರೆ: '' ಸರ್ವತ್ರ ತಾಂ ಶ್ರಿಯಂ ದೃಷ್ಟ್ವಾ (109) '' ಅನೇಕ ರೂಪಗಳಿಂದ ದೇವರನ್ನು ಸೇವಿಸುತ್ತಿರುವ ಲಕ್ಷ್ಮೀದೇವಿಯನ್ನೇ ಹರಿಯ ವಕ್ಷಃ ಸ್ಥಳದಲ್ಲೂ, ಎಲ್ಲಾ ದಿಕ್ಕುಗಳಲ್ಲೂ ಕಂಡು ನಾನು " ಪರಮಾನಂದ ನಿರ್ಭರನಾದೆ " ಎಂದಿದ್ದಾರೆ. ಹೀಗೆ ಕಥೆ ಹೇಳಿ ನಾಲ್ಕು ಶ್ಲೋಕಗಳಿಂದ ಫಲಸ್ತುತಿ ಹೇಳಿದ್ದಾರೆ. ದೇವತಾ ದರ್ಶನ ಪಾಠಕರಿಗೆ ಆಗುತ್ತದೆ ಎಂದಿದ್ದಾರೆ. ಈ ಆಖ್ಯಾನ ಪಾರಾಯಣದಿಂದ ಪುರುಷ ಸೂಕ್ತ ಅಧ್ಯಯನದ ಪುಣ್ಯ ಬರುತ್ತದೆ. ಹಯಗ್ರೀವ ಸ್ವಾಮಿ ಭಕ್ತರ ರಕ್ಷಣೆ ಮಾಡುತ್ತಾನೆ. ಹರಿ ಗುರು ಭಕ್ತ್ಯಾದಿ ಸಿದ್ಧಿಯೇ ಮುಂತಾದ ಸಾಧನ ಪೂರ್ತಿ ಆಗುತ್ತದೆ. ಹೀಗೆ ಎಲ್ಲಾ ಅಧ್ಯಾಯದ ಕೊನೆಯಲ್ಲೂ ಫಲಶ್ರುತಿ ತಿಳಿಯಬೇಕು. ಫಲಕೊಡುವ ಸಾಮರ್ಥ್ಯ ಅವರಿಗೆ ಇದೆ. " ವಾಯುಶ್ಚ ತದನುಜ್ಞಯಾ "

ಎಂದು ಪ್ರಮಾಣವಿದೆ. ಅವರು ವಾಯು ಸದೃಶರು ಎಂದು ಗೊತ್ತಾಗುತ್ತೆ. ಫಲ ತಪ್ಪುವುದಿಲ್ಲ. ಪ್ರಥಮಾಧ್ಯಾಯ ಮುಗಿದಿದೆ. ಶ್ರೀಕೃಷ್ಣಾರ್ಪಣಮಸ್ತು.

ದ್ವಿತೀಯ ಅಧ್ಯಾಯ : 63 ಶ್ಲೋಕ. " ಕೇಳು ವಿಪ್ರನೇ ! ರುದ್ರಾದಿ ದೇವತೆಗಳೆಲ್ಲರ ಬಿಂಬಗಳೂ ನನ್ನ ವೃಂದಾವನದಲ್ಲಿವೆ. ಆದ್ದರಿಂದ ಅವರು ಇಲ್ಲಿಗೆ ಬಂದು ನನ್ನ ವೃಂದಾವನವನ್ನೇ ವಿಶಿಷ್ಟ ಪ್ರತಿಮ ಮಾಡಿಕೊಂಡು ಭಗವದುಪಾಸನೆ ಮಾಡುತ್ತಾರೆ " ಎಂದು '' ಇಂದ್ರೋಪಿ ಸಾಂದ್ರ ಸಂತೋಷಾತ್ '' ಮುಂತಾದ 18 ಶ್ಲೋಕಗಳನ್ನು ಹೇಳುತ್ತಾರೆ. ಪೂರ್ವಾಧ್ಯಾಯದಲ್ಲಿ ಋಜು ವಾದ್ದರಿಂದ ತಾವು " ವಿಶಿಷ್ಟ ಪ್ರತಿಮಾ " ಎಂದು ಹೇಳಿ, ಈ ಅಧ್ಯಾಯದಲ್ಲಿ ಸೇವಕರು '' ಸ್ವಸ್ವಬಿಂಬ ದರ್ಶನ '' ಮಾಡುತ್ತಾರೆಂದೂ ಇನ್ನೊಂದು ಕಾರಣ ಕೊಟ್ಟಿದ್ದಾರೆ.

ಅನಂತರ ತಮ್ಮ ದಿವ್ಯ ದೃಷ್ಟಿಯಿಂದ ಮುಂದಿನ ಕಾಲ ನೋಡುತ್ತಾ, ಈ ವಿಡಮೂಕನು ವೃಂದಾವನಾಚಾರ್ಯರಾಗಿ ಹುಟ್ಟಿ 1804 ರ ಮೇಲೆ ಶ್ರೀಕೃಷ್ಣೋತ್ಸವ ಮಾಡಿಕೊಂಡು ಬಂದು ಮಾಡಿಸುವ ತ್ರಿವಿಕ್ರಮ ರಥೋತ್ಸವ, ವಾದಿರಾಜರ ಪುಣ್ಯದಿನೋತ್ಸವ ಇವುಗಳ ವೈಭವವನ್ನು ವರ್ಣಿಸುತ್ತಾರೆ. ತಾವು ಬ್ರಹ್ಮಾದಿಗಳಂದ ಸಹಿತವಾಗಿ ಬಂದು ಆಶೀರ್ವದಿಸುವುದಾಗಿಯೂ, ರೂಪಾಂತರದಿಂದ ವಿಪ್ರನಲ್ಲಿದ್ದು ಆವೇಶತನದಿಂದ ಎಲ್ಲಾ ದೇವರ ಕಾರ್ಯಗಳನ್ನೂ ಮಾಡಿಸಿ ಇವನಿಗೆ ಇಂದ್ರ ಪದವೀ ಕೊಡಿಸುವುದಾಗಿಯೂ ಸೂಚಿಸಿದ್ದಾರೆ. " ಪಶ್ಯಾಮಿ ಚಾಕಾಶವಿಮಾನಕೋಶೇ ನಾಕೇಶ ಮಿತ್ಥಂ ಕುರು ಸತ್ಯಮೇವ " (ಭವಿಷ್ಯವೆಂಬ ವಿಮಾನ ಮಧ್ಯದಲ್ಲಿ ನೀನು ಇಂದ್ರನಾಗುವುದು ನನಗೆ ಕಾಣುತ್ತೆ). ನೀನು ನಾನು ಹೇಳಿದ್ದನ್ನೆಲ್ಲಾ ಮಾಡು. '' ತೋಕಸ್ಯ ಸೇವಾಂ ಕುರುಸರ್ವದೈವ ". ವೇದವೇದ್ಯರ ಸೇವೆಯನ್ನೂ ಸರ್ವದಾ ಮಾಡುತ್ತಿರು ಎಂದಿದ್ದಾರೆ. ವೇದವೇದ್ಯರು ಭಾವಿ ಲಾತವ್ಯರು ಎಂದು ಸೂಚಿಸಿದ್ದಾರೆ. ಅನಂತರದಲ್ಲಿ ವೃಂದಾವನ ಸೇವೆಯು ಯತಿಗಳಿಗೂ ಮನೋನಿಗ್ರಹಾದಿಗಳನ್ನು ಕೊಟ್ಟು ಕಾಪಾಡುತ್ತದೆ. ಮೀಮಾಂಸಾ ಶಾಸ್ತ್ರದ ಯುಕ್ತಿಜ್ಞ ಪಂಡಿತರನ್ನೂ ಉದ್ಧರಿಸುತ್ತೆ. ಅಂಥ ವೃಂದಾವನ ಸೇವೆಗೆ ಅವಕಾಶವಾದಾಗ ಅದನ್ನು ತ್ಯಜಿಸಿದವನಿಗೆ ಅವನು ಮಾಡಿದ ಪುಣ್ಯ ಹಾಳು. ಎಂದು 61, 62 ಶ್ಲೋಕ ಹೇಳುತ್ತಾರೆ. (ಅರ್ಥ:-ಯಾವಾತನು ವೃಂದಾವನಸ್ಥ ಕೃಷ್ಣನನ್ನು ಸೇವಿಸುವುದಿಲ್ಲವೋ ಅವನ ಸತ್ಯ, ಅವನ ಜಪ, ಅವನ ದಾನ, ಅವನ ಮನನ, ಅವನ ಸದಾಚಾರ ಕಾರ್ಯಗಳೆಲ್ಲಾ ವ್ಯರ್ಥ. ಆದ್ದರಿಂದ ವೃಂದಾವನಸ್ಥ ಗೋಪಾಲ ಕೃಷ್ಣನ ಪಾದಕ್ಕೆ ಓಡಿ ಬಂದು ಬೀಳಬೇಕು.) ಉತ್ತಮರ ಅವಜ್ಞೆ ಆಗಿ ಹೋಗುತ್ತೆ ಎಂದು ಭಾವ. ಮುಮುಕ್ಷುಗಳು ಪಂಚ ವೃಂದಾವನ ಸೇವೆ ಮಾಡಿಯೇ ತೀರಬೇಕು. ಗುರುರಾಜರ ಅನುಗ್ರಹ ಸಂಪಾದಿಸಿ ಬೇರೆ ಸಾಧನೆ ಸಿದ್ಧಿಗಳನ್ನು ಚಿಂತಿಸಬೇಕು ಎಂದು ಬೋಧಿಸಿ ಕಾರುಣ್ಯ ವ್ಯಕ್ತಿ ಮಾಡಿದ್ದಾರೆ. ಇದೆಲ್ಲಾ ಸರ್ವ ಪ್ರಮಾಣಾವಿರುದ್ಧ ಸಾತ್ವಿಕ ಪ್ರಮೇಯ. ಶ್ರೀಕೃಷ್ಣಾರ್ಪಣಮಸ್ತು.

ತೃತೀಯ ಅಧ್ಯಾಯ : 108 ಶ್ಲೋಕ ಮತ್ತು 5 ಪ್ರಕರಣ ಹೊಂದಿದ್ದು. ಮೊದಲನೇ ವಿಪ್ರ ಪ್ರಕರಣದಲ್ಲಿ ವಾದಿರಾಜರು ದ್ವಿಜನಿಗೆ ವಾದಿರಾಜ ಮಂತ್ರವನ್ನು ಉಪದೇಶ ಮಾಡಿದ್ದಾರೆ.

ಸ್ವಪ್ನದಲ್ಲಿ ಉಪದಿಷ್ಟನಾದವರಿಗೆ ಮಾತ್ರ ಸಿದ್ಧಿಸುತ್ತೆ. ಅಂಥ ದಿವ್ಯ ಮಂತ್ರಕ್ಕೆ ತಾವೇ ದೇವತೆಯಾದ್ದರಿಂದ 7 ನೇ ಶ್ಲೋಕದಲ್ಲಿ ತಮ್ಮ ಸ್ವರೂಪ ತಿಳಿಸಿದ್ದಾರೆ. (ಅರ್ಥ:- ಯಾರು ನನ್ನನ್ನು ಋಜು ಗಣದವನೆಂದು ತಿಳಿದು ಸೇವಿಸುತ್ತಾನೋ ಆ ಪುಣ್ಯ ಕರ್ಮಿಯು ಪುನರಾವರ್ತಿ ರಹಿತವಾದ ಮೋಕ್ಷವನ್ನು ಕ್ರಮವಾಗಿ ಹೊಂದುತ್ತಾನೆ.) ಇದು ದುಷ್ಟ ಆತ್ಮಸ್ತುತಿಯಲ್ಲ, ಅಹಂಕಾರದಿಂದ ಆತ್ಮಸ್ತುತಿ ಮಾಡಿಕೊಳ್ಳಬಾರದು, ಯೋಗ್ಯ ಅಜ್ಞರಿಗೆ ಉಪದೇಶ ಮಾಡಲು ಆತ್ಮ ಮಹಿಮೆ ಹೇಳುವುದು ಕರ್ತವ್ಯ ಎಂದಿದ್ದಾರೆ. ಅಧಿಕಾರಿಗಳಾಗಿ ಮಂತ್ರ ಜಪಿಸುವ ಶರಣಾಗತರ ಪರವಾಗಿ ತಾವು ತಪಸ್ಸು ಮಾಡುತ್ತಾರೆ. ಆ ತಮ್ಮ ತಪಸ್ಸಿನಿಂದ ಶಿಷ್ಯರ ಹರಿದ್ರೋಹ, ಗುರುದ್ರೋಹ ಸಂರದ್ರೋಹಗಳೆಲ್ಲಾ ಹೋಗುತ್ತವೆ. ತಮ್ಮ ಸ್ವರೂಪ ಮಹತ್ವ ತಿಳಿದವರಿಗೇ ಜ್ಞಾನ ವೃದ್ಧಿ ಆಗುತ್ತೆ, ಎಂದು ತಿಳಿಸಿ ತಮ್ಮ ವಿಮಾನ ವರ್ಣನೆ ಮಾಡಿದ್ದಾರೆ. ಹಂಸವಾಹನ ಯುಕ್ತವಾದ ಆ ವಿಮಾನ ಧ್ಯಾನದಿಂದ ಪಾಪ ಹೋಗುತ್ತೆ. ಅಂಥ ಅಧಿಕಾರಿಗಳಿಗೆ 20, 21, 22, ಧ್ಯಾನ ಶ್ಲೋಕ ಹೇಳಿದ್ದಾರೆ. ನಂತರ ಇದೇನು ಗ್ರಂಥ ಎಂದು ಉಪೇಕ್ಷೆ ಮಾಡಿದ ಶೇಷನೆಂಬ ಶಿಷ್ಯನು ಪಾಪದಿಂದ ಪತನ ಹೊಂದುತ್ತಾನೆಂದು ಹೇಳಿ, ಆದರೂ ಕ್ರಮವಾಗಿ ಶುದ್ಧಿಮಾಡಿ ಉದ್ಧರಿಸುತ್ತೇನೆ ಎಂದಿದ್ದಾರೆ (26). ಪಂಚ ವೃಂದಾವನದಲ್ಲಿ ಲಕ್ಷ್ಮೀ ಹಯಗ್ರೀವ ದೇವರ ಸನ್ನಿಧಾನದಲ್ಲಿ ತಾವು ಸುಖೀ, ದೇವರೂ, ರಮಾದೇವಿಯರೂ ಅವರನ್ನು ಕೈಯಿಂದ ಮುಟ್ಟಿ ಆಶೀರ್ವದಿಸಿದ್ದಾರೆ. ಅವರು ಕಾಮ ಹೀನರು. ಕೈಲಾಸದಲ್ಲಿ ನರ್ತನ ನೋಡಿದಾಗಲೂ ನಿರ್ವಿಕಾರರು, ತಮಗೆ ಬ್ರಹ್ಮಲೋಕದಲ್ಲಿ ವಾಸ. ಅಲ್ಲಿ ಹಯಗ್ರೀವ ದೇವರ ಸಂತತ ದರ್ಶನ, ಸ್ವರ್ಗಕ್ಕೆ ಬಂದರೆ ಇಂದ್ರಾದಿಗಳಿಂದ ಪೂಜೆ, ಬೇಕಾದಾಗ ಶ್ವೇತದ್ವೀಪಾದಿಸರ್ವ ಲೋಕಗಳಿಗೂ ಹೋಗುತ್ತಾರೆ. ಹೀಗೆ ವಿಪ್ರನಿಗೆ ಹೇಳುವಾಗ ವಿಪ್ರನ ಜನ್ಮಾಂತರ ಸಂಬಂಧಿ ಲಕ್ಷ್ಮೀಪತಿ ಕಾಣಿಸಿಕೊಂಡ. ಅವನಿಗೂ ಸಹ ಉಪದೇಶ ಮಾಡಲು ಅದು ಲಕ್ಷ್ಮೀಪತಿ ಶ್ರೋತ್ರಿಕ ಪ್ರಕರಣ ಎನ್ನಿಸಿತು. ಅವನಿಗೆ ಯೋಗ್ಯ ಉಪದೇಶ ಮಾಡುತ್ತಾರೆ. " ಹೇ ಲಕ್ಷ್ಮೀಪತಿ, ! ನನ್ನ ವೃಂದಾವನದಲ್ಲಿ ಸರ್ವ ದೇವತೆಗಳೂ ಇರುತ್ತಾರೆ ಪಂಚ ಪರ್ವ ದಿನಗಳಲ್ಲಿ ಸೇವೆ ಸರ್ವಪಾಪನಾಶಕ. ಈ ರಹಸ್ಯ ನೀನು ತಿಳಿದು ಪುರಾಣ ಹೇಳು. ನನ್ನ ಈ ಆಖ್ಯಾನ ಸರ್ವೇಷ್ಟದಾತ್ರೀ ಎಂದು ತಿಳಿಸು. ಈ ಅದ್ಭುತ ಆಖ್ಯಾನವು ವಿಶ್ವಾಸ ಉಳ್ಳವರಿಗೇ ಫಲಪ್ರದ, ವಿಶ್ವಾಸ ಹೀನರಿಗೆ ಹೇಳಬೇಡ. ತಪಸ್ಸು ಮಾಡಿ ಈ ಆಖ್ಯಾನವನ್ನು ರಚಿಸಿರುತ್ತೇನೆ (50), ಹರಿಭಕ್ತಿ ಕೊಡುತ್ತೆ, ಗುರುಭಕ್ತಿ ಕೊಡುತ್ತೆ, ನನ್ನ ಮಹಿಮೆ ತಿಳಿಸಿ ಸರ್ವ ಸಾತ್ವಿಕ ಸುಖ ಕೊಡುತ್ತೆ. ಆದ್ದರಿಂದ ಸುದೃಢ ವಿಶ್ವಾಸ ಕೃತಿಯಲ್ಲಿ ಮಾಡಬೇಕು (60). " ಅನಂತರ ವಿಪ್ರ ಪ್ರಕರಣ. ಲಕ್ಷ್ಮೀಪತಿ ಕಾಣದವನಾದ. ವಿಪ್ರ ಒಬ್ಬನೇ ಉಳಿದ. ಗುರುರಾಜರು ಹೇಳುತ್ತಾರೆ. " ದೇವರಾಜನಾದ ನನ್ನ ಪ್ರಸಾದದಿಂದ ಅಮರರಾಜನಾಗು. ನನ್ನ ಮಹಿಮೆಯ ಧ್ಯಾನ ಮಾಡು, ನಾನು ಅಣಿಮಾದಿ ಅಷ್ಟ ಸಿದ್ಧಿಯುಳ್ಳವನು. ಕರ್ತುಂ, ಅಕರ್ತುಂ, ಅನ್ಯಥಾ ಕರ್ತುಂ ಸಮರ್ಥನಾದ ಅಚಿಂತ್ಯ ಶಕ್ತಿಯುಳ್ಳವನು. ಬೇಕಾದ ಸಂಪತ್ತನ್ನು ಕೊಡಬಲ್ಲೆ, ಕಲಿಯುಗ, ದುಡ್ಡು ಕೊಟ್ಟರೆ ಕೆಟ್ಟು ಹೋಗುತ್ತಿ ಎಂದು ಲೌಕಿಕ ಸಂಪತ್ತನ್ನು ನಿನಗೆ ಕೊಡುವುದಿಲ್ಲ, ನಾನು ವೈರಾಗ್ಯ ಪೂರ್ಣ. ನೀನೂ ವಿರಕ್ತನಾಗು, ನನ್ನ ದಂಡ ಬ್ರಹ್ಮಾಂಡ ಸೃಷ್ಟಿಮಾಡಬಲ್ಲದು. ನನ್ನ ಕೌಪೀನ, ಸೂತ್ರ, ಕಮಂಡಲು, ಕಂಬಳಿ ಮುಂತಾದ ವಸ್ತ್ರಾ-ಭರಣಗಳೂ ದಿವ್ಯ, ದೇವರು ಅಥವಾ ದೇವತೆಗಳು ಕೊಟ್ಟಂಥವು. ಅದ್ಭುತ ಶಕ್ತಿ ಉಳ್ಳವು. ಕೌಪೀನ

ನಾರದರಿಗೂ ಕೊಡದೆ ನನಗೆ ಶ್ರೀಕೃಷ್ಣ ಕೊಟ್ಟ, ಕಂಬಳಿ ಶಂಭು ಕೊಟ್ಟದ್ದು. ಕುಂಭಾಸುರನು ಅವನನ್ನು ಆಕಾಶಕ್ಕೆ ಎತ್ತಿ ಬಿಸಾಡಿದಾಗ ಬೀಳುತ್ತಿದ್ದ ಶಿವನನ್ನು ಹಿಡಿದುಕೊಂಡೆ. ಆ ಸಂತೋಷದಿಂದ ಅವನು ನನ್ನನ್ನು ಪೂಜಿಸಿದನು. ಪಾದಪೀಠ ವಿಶ್ವಕರ್ಮನು ದೇವರ ಆಜ್ಞಾ ಪ್ರಕಾರ ತಯಾರು ಮಾಡಿದ್ದು.

ನಾಲ್ಕನೆ ಕಟ್ಟಿ ದ್ವಿಪ್ರೇಶ ಪ್ರಕರಣದ 79 ನೇ ಶ್ಲೋಕದಲ್ಲಿ ಆಖ್ಯಾನದಲ್ಲಿ ವಿಶ್ವಾಸಹೀನರಿಗೆ ತೂತಿನ ಗಡಿಗೆಯಲ್ಲಿ ನೀರು ಹರಿದು ಹೋಗುವಂತೆ ಆಯುಸ್ಸೇ ನಷ್ಟವಾಗುತ್ತೆ ಎಂದಿದ್ದಾರೆ. '' ನೀನು ಎಲ್ಲರಿಗೂ ಹೇಳು. ನಂಬಿದವರು ಸಾಧುಗಳು. ನನ್ನ ದಯಾ ಪಾತ್ರರು. ಈ ಆಖ್ಯಾನ (81) ವಿಪ್ರನ ಪ್ರಾಣವಿರುವವರಿಗೂ ಸತ್ಪ್ರಮಾಣಗಳಿಗೆ ಅವಿರುದ್ಧವಾಗಿ ಹೇಳುತ್ತೇನೆ. ನಂಬದಿದ್ದರೆ ನನಗೇನೂ ಕ್ರೋಧವಿಲ್ಲ. ನಾನು ಋಜು '' ಎಂದಿದ್ದಾರೆ. ಆಖ್ಯಾನದ ಅವಿಶ್ವಾಸದಿಂದಲೇ ನಷ್ಟರಾಗುತ್ತಾರೆಂದು ಭಾವ.

ಕೊನೆ ಪ್ರಕರಣ ವ್ಯಾಸ ಭಕ್ತನಾಮಕ ಲಕ್ಷ್ಮೀಪತಿ ಪ್ರಕರಣ, ಆತ ವ್ಯಾಸೋಪಾಸಕ. ವಾದಿರಾಜರು ಬಹು ಪ್ರಮೇಯ ಅವನಿಗೆ ಹೇಳಿ ವಿಪ್ರನ ಅನುಯಾಯಿಯನ್ನಾಗಿ ಮಾಡಿದ್ದಾರೆ. " ಲಕ್ಷ್ಮೀಪತಿ ! ಈ ಬ್ರಾಹ್ಮಣನ ಮೂಲಕ ಸಚ್ಛಾಸ್ತ್ರವನ್ನೇ ಜಗತ್ತಿಗೆ ಹೇಳುತ್ತೇನೆ. ಹೊಟ್ಟೆಕಿಚ್ಚು ಮಾಡಬೇಡಿ. ಅವನು ಸೇವೆ ಮಾಡಿದ್ದಾನೆ, ಶರಣಾಗತ. ಅವನಿಗೇ ನಾನು ಒಲಿದಿರುವುದು. ಅವನಲ್ಲೇ ಆವಿಷ್ಟನಾಗಿ ಅವನಿಗೆ ಕಷ್ಟವೇ ಇಲ್ಲದಂತೆ ರಕ್ಷಿಸುತ್ತೇನೆ ಅವನಿಗೇ ಸ್ವಪ್ನದರ್ಶನ ", ಹೀಗೆ ಹೇಳಿ; ತಮಗೆ ಕುಂಡಲ, ಚಾಮರ, ಕೊಡುವ ಮಣಿ ಇವೆಲ್ಲಾ ಬಂದುದ್ದನ್ನು ಹೇಳಿ, ಪುನಃ ಆಖ್ಯಾನ ಗ್ರಂಥ (98) ಶತಾನಂದ ಮುಕುಂದಾವಸಿತಂ ಚವರ್ದ " ಎಂದಿದ್ದಾರೆ. ಎಂದರೆ ಈ ಕೃತಿ ಹರಿ ಮತ್ತು ಬ್ರಹ್ಮ ದೇವರು ಹೇಳಿದಂತೆ ನಾನು ತಯಾರು ಮಾಡಿ ಪ್ರಚಾರ ಮಾಡಿದ್ದೇನೆ ಎಂದಿದ್ದಾರೆ. '' ದೇವರೇ ವಿಪ್ರನನ್ನು ರಕ್ಷಿಸು. ಅವನಿಂದ ಪ್ರಚಾರ '' ಎಂದಿದ್ದಾರೆ. ನಂತರ ಮುಕುಟ ಪ್ರಾಪ್ತಿ ಹೇಳಿದ್ದಾರೆ. ಆ ಆಭರಣಗಳೊಂದಿಗೆ ವಿಶಿಷ್ಟಾಧಿಕಾರಿಗಳು ತಮ್ಮ ಋಜುತ್ವವನ್ನೂ ನಂಬಿ ಧ್ಯಾನ ಮಾಡಿದರೆ ಯೋಗ್ಯ ಪದವೀ ಬರುತ್ತೇ ಎಂದರ್ಥ. ಹೀಗೆ ಈ ಅಧ್ಯಾಯದಲ್ಲಿ ವಿಪ್ರನನ್ನೂ, ಅವನ ಸ್ನೇಹಿತರು, ಭಕ್ತರೂ ಆದ ಅಧಿಕಾರಿ ದೇವತೆಗಳನ್ನೂ ಐಕಮತ್ಯ ಬರುವಂತೆ ಬೋಧಿಸಿದ್ದಾರೆ. ಮತ್ತು ತಮ್ಮ ಅಲಂಕಾರಯುಕ್ತ ಧ್ಯಾನವನ್ನೂ ಉಪದೇಶಿಸಿದ್ದಾರೆ. ವಿಪ್ರನ ಸ್ವರೂಪ, ತಮ್ಮ ಸ್ವರೂಪ ಸಹ ತಿಳಿಸಿದ್ದಾರೆ. ಶ್ರೀಕೃಷ್ಣಾರ್ಪಣಮಸ್ತು.

ನಾಲ್ಕನೆಯ ಅಧ್ಯಾಯ : ಆಖ್ಯಾನದ ಮೊದಲಿನ ನಾಲ್ಕು ಅಧ್ಯಾಯಗಳು ಭಜನಪರ್ವ. ಇಲ್ಲಿ ದೇವರು, ವಾದಿರಾಜರು, ಪಂಚ ವೃಂದಾವನಾದಿ ದೊಡ್ಡ ದೈವಿಕ ವಸ್ತುಗಳ ಸ್ವರೂಪ ಪ್ರಕಟನೆ ಆಗಿದೆ. ಅದಕ್ಕೇ ಭಜನೆ, ಇದು ಭಜನ ಪರ್ವದ ಕೊನೆಯ ಅಧ್ಯಾಯ 96 ಶ್ಲೋಕ. 4 ಪ್ರಕರಣ. ಮೊದಲು ವಾದಿರಾಜ ಭಟ್ಟ ಪ್ರಕರಣ. ಈ ಬ್ರಾಹ್ಮಣರು ಒಬ್ಬ ಭಾವಿ ದಿಕ್ಪಾಲನೋ, ಗ್ರಹವೋ, ಋಷಿಯೋ ಅಂತೂ ಭಾವಿ ಇಂದ್ರ ಸಂಬಂಧಿ. ಅವರ ತಾಯಿ ವಾದಿರಾಜ ವೃಂದಾವನ ಸೇವೆ ಮಾಡಿದ

ಮೇಲೆ ಅವರು ಹುಟ್ಟಿರಬಹುದು. ಈಗ ಅವರು ಭೂಮಿಯಲ್ಲಿ ಹುಟ್ಟಿಯೇ ಇಲ್ಲ. ಅವರು ವೃಂದಾವನಾಚಾರ್ಯರ ಕಾಲದ ಒಬ್ಬರು ಮಠಾಧಿಪತಿಗಳು. ಈಗ ಸ್ವಪ್ನದಲ್ಲಿ ಕಾಣಿಸಿಕೊಳ್ಳುತ್ತಾರೆ. ವಾದಿರಾಜರು "ದಾಸ್ಯಭಾವದಿಂದ ನನ್ನನ್ನು ಭಜಿಸು. ನನ್ನ ಮಂತ್ರ ಜಪಿಸು. ಬೇರೆ ಪರೀಕ್ಷೆ ಮಾಡಬೇಡ. ನನ್ನ ಆಭರಣ ಧ್ಯಾನ ಮಾಡು: ನೂಪುರ, ಅಂಗದ, ಕೇಯೂರ, ಕಟಕ, ಹಾರಾವಳಿ ಇವನ್ನೆಲ್ಲಾ "ದೇವವರೋಮಯಿ ಪ್ರಭುಃ" ನನ್ನ ಹೃದಯದ ರಾಜ ದೇವರು ಧರಿಸುತ್ತಾನೆ. ನನ್ನ ಮಹಿಮೆ ತಿಳಿ, ಗ್ರಂಥ ಪ್ರಕಾಶಕ ದ್ವಿಜನನ್ನು ಸೇವಿಸು. ನನ್ನ ಅನುಗ್ರಹದಿಂದ ಚಿನ್ನದ ಸಂಪುಟದ ದೇವರನ್ನೂ ಪೂಜಿಸಿಯೇ ವಿಪ್ರ ಸ್ವರ್ಗದ ರಾಜನಾಗುತ್ತಾನೆ. ರಮಾನಾರಾಯಣರು ನನಗೆ ಅನುಗ್ರಹಿಸಿದ್ದಾರೆ. ನಾನು ಸತ್ಯಲೋಕಕ್ಕೆ ಹೋಗುತ್ತಿದ್ದಾಗ ಒಬ್ಬ ದೈತ್ಯನನ್ನು ಕೊಂದೆ. ಎಲ್ಲ ದೇವತೆಗಳು ನನ್ನ ಜೊತೆಯಲ್ಲಿ ಬ್ರಹ್ಮದೇವರ ಬಳಿಗೆ ಬಂದು ಅವರ ಉಪದೇಶ ಕೇಳಿ ಸಂತುಷ್ಟಿ ಹೊಂದಿದರು. ನೀನೂ ನನ್ನ ಮಹತ್ವ ತಿಳಿದು ಆಜ್ಞೆಯಂತೆ ವಿಪ್ರನನ್ನು ಸಂಭಾವನೆ ಮಾಡಿ ಇತರರೂ ಪೂಜಿಸುವಂತೆ ನೋಡಿಕೊ. ವಿಪ್ರನನ್ನು ವೃಂದಾವನಾಚಾರ್ಯನೆಂದೇ ಕರೆಯಬೇಕು. ಅವನೇ ವೃಂದಾವನದ ಮಹಿಮೆಯಿಂದ ಜ್ಞಾನಿಯಾದವನು. ವೃಂದಾವನದ ಮಹಿಮೆ ಹೇಳುವ ಆಚಾರ್ಯರು."

ಹೀಗೆ 1820 ರ ಮೇಲೆ ನಡೆಯುವ ಭವಿಷ್ಯಗಳನ್ನೂ ನಿರೂಪಿಸಿ ವಿಪ್ರನಿಗೆ ಧೈರ್ಯ ತುಂಬುತ್ತಾರೆ. ನಿನ್ನನ್ನೂ ಮುಂದೆ ಪ್ರವಚನಾಚಾರ್ಯನನ್ನಾಗಿ ಮಾಡುತ್ತೇನೆ. ಆಯುಸ್ಸು ಕೊಟ್ಟು ದಿವ್ಯ ಸಾಧನೆ ನಿನ್ನಲ್ಲಿದ್ದು ಮಾಡಿಸುತ್ತೇನೆ ಎಂದಿದ್ದಾರೆ. ಮತ್ತೆ ಹಯಗ್ರೀವ ದೇವರು ಕಂಠಾಭರಣ ಕೊಟ್ಟ ವಿವರ. ಪಾದಾಂಗುಲೀಯ ಅನುಗ್ರಹಿಸಿದ್ದು ಇದೆಲ್ಲಾ ಹೇಳಿ "ಆಭರಣ ವಿಷಯ ಶ್ರವಣ ಮಾಡಿದರೆ ಶ್ರೋತೃಗಳಿಗೆ ಸುಖಪ್ರಾಪ್ತಿ ಆಗುತ್ತೆ. ಸರ್ವ ಪುಣ್ಯಗಳನ್ನೂ ಪಂಡಿತರಿಗೆ ಒದಗಿಸುತ್ತೆ" (29) ಎಂದು ನಿರೂಪಿಸಿದ್ದಾರೆ. ಇಂದ್ರ ಎರಡು ಆನೆ ಕೊಟ್ಟಿದ್ದಾನೆ, ಕುದುರೆ ಕೊಟ್ಟಿದ್ದಾನೆ. ವಿಮಾನ ಮೊದಲೇ ಬಂದಿದೆ. ನಾನಾ ವಾಹನ, ನಾನಾ ಪೂಜೆಗಳೂ ಆಗಿವೆ. ಎಷ್ಟು ಹೇಳುವುದು. "ಮದ್ವೈಭವ ಸಮೋ ನಹಿ" (44) ನನ್ನ ವೈಭವಕ್ಕೆ ಸಾಮ್ಯವೇ ಇಲ್ಲ. ಎಲ್ಲಾ ಹರಿಭಕ್ತಿ ಪ್ರಭಾವ. ವೈಭವ ಶ್ರವಣದಿಂದ (47) 'ಮದ್ಧಾಮ ಪದ್ಧತಿಂಯಾತಿ' ಅಧಿಕಾರಿ ನನ್ನ ಲೋಕಕ್ಕೆ ಬಂದು ಸೇರುತ್ತಾನೆ. ನಾನು ಬ್ರಹ್ಮ ವಾಯುಗಳ ಸಂಗಡ ಮಾತು ಕಥೆ ನಡೆಯಿಸುತ್ತೇನೆ. ರಮಾಪತಿ ಶ್ವೇತ ದ್ವೀಪದಲ್ಲಿ ಸಮುದ್ರದ ತೀರದಲ್ಲಿ ತನ್ನ ಕೈಯನ್ನೂ ನನ್ನ ತಲೆ ಮೇಲೆ ಇಟ್ಟಿದ್ದಾನೆ. ಆದ್ದರಿಂದ ಅನಂತ ವೈಭವದ್ದು ನನ್ನ ವೃಂದಾವನ, ವೈಷ್ಣವ ವೃಂದವನ್ನೂ ರಕ್ಷಿಸುತ್ತೆ ಎಂದಿದ್ದಾರೆ. ಅನಂತರ ಬೇರೆ ಪ್ರಕರಣ. ಹೇ ಲಕ್ಷ್ಮೀಪತಿ ! ನನ್ನ ಆಖ್ಯಾನಕ್ಕೆ 2 ಅರ್ಥವಿದೆ. ನೀನು ಅರ್ಥ ಹೇಳಿ ಬ್ರಾಹ್ಮಣರನ್ನು ಸಂತೋಷಪಡಿಸು. ನಾನು ಬದರಿಗೆ ಹೋಗಿ ವೇದವ್ಯಾಸರನ್ನೂ ನೋಡಿದ ಸಮಾಚಾರ ಹೇಳುತ್ತೇನೆ ಅಲ್ಲಿ ವೇದವ್ಯಾಸರು ನನ್ನನ್ನು ಪ್ರಶಂಸಿಸಿ ಆನಂದ ಪಡಿಸಿದರು. ಹಸಿವೆನೀರಡಿಕೆ ತಪ್ಪಿಸುವ ಪುಷ್ಪಮಾಲಿಕೆ ಕೊಟ್ಟರು. ಕೈಯಿಂದ ಮುಟ್ಟಿದರು. ರಾಮಾಯಣ ಹೇಳಿದರು. ಪೂರ್ಣಪ್ರಜ್ಞರೂ ಸಂತೋಷ ಪಟ್ಟರು. ಇದನ್ನೆಲ್ಲಾ ಪ್ರಚಾರ ಮಾಡುವ ರಾಜಭೃತ್ಯ ಸದೃಶ ವಿಪ್ರ ಮುಮುಕ್ಷುಗಳಿಂದ ಮಾನ್ಯ, ಅವನ ದ್ರೋಹಿಗಳು ಪಿಶಾಚರಾಗುತ್ತಾರೆ. ಆದ್ದರಿಂದ ಜನರು ವಿಪ್ರನಿಗೆ ಸನ್ಮಾನ ಮಾಡಲಿ.

(87) ಎಂದಿದ್ದಾರೆ. ಅಷ್ಟೇ ಅಲ್ಲ ವೇದವ್ಯಾಸರೇ " ವಿಪ್ರಪೋಷ್ಯ, ಹೇ ವಾದಿರಾಜ, ಪಲ್ಲಕ್ಕಿಯಲ್ಲಿ ಉತ್ಸವ ಮಾಡಿಸಿ ನಿನ್ನ ಶುಭ ವಾರ್ತೆಯನ್ನು ಲೋಕಕ್ಕೆ ಹೇಳುವ ವಿಪ್ರನನ್ನು ರಕ್ಷಿಸು. ಅಭಯ ನೀಡಿ ಆತನ ದುಃಖ ಪರಿಹರಿಸು " 90 ಎಂದು ಆಜ್ಞೆ ಮಾಡಿದ್ದಾರೆ. ಇದರಿಂದ ವಾದಿರಾಜರ ವೈಭವ ವಿಖ್ಯಾತಿ ಈ ದ್ವಿಜನಿಂದಲೇ ಎಂದರೆ ವೃಂದಾವನಾಚಾರ್ಯರಿಂದಲೇ ಆಗಬೇಕೆಂದು ಹರೀಚ್ಛೆ ಎಂದು ಗೊತ್ತಾಗುತ್ತೆ. ನಂತರ ಫಲಶ್ರುತಿ. ಅಧ್ಯಾಯ ಸಮಾಪ್ತಿ. ಶ್ರೀಕೃಷ್ಣಾರ್ಪಣಮಸ್ತು.

ಪಂಚಮಾಧ್ಯಾಯ : 94 ಶ್ಲೋಕ 10 ಪ್ರಕರಣ. ಬೇರೆ ಬೇರೆಯವರಿಗೆ ಭಿನ್ನ ಭಿನ್ನ ವಿಷಯ ಪ್ರಕರಣದಲ್ಲಿ ಹೇಳಿರುವುದರಿಂದ ಸಂಗತಿ ಇಲ್ಲ. ಪುನರುಕ್ತಿ ಇದೆ; ಹೀಗೆ ಅರ್ಥ ಗೊತ್ತಾಗುತ್ತಿರಲಿಲ್ಲ. ವೃಂದಾವನಾಚಾರ್ಯರು (1794) ರಲ್ಲಿ ಸೇವೆ ಮಾಡಿ ಸರ್ವಜ್ಞತೆ ಹೊಂದಿ ಹಿಂದಿನ ಜನ್ಮದ ಅನುಭವ ಸ್ಮರಿಸಿ ಅರ್ಥ ಹೇಳಿ ಕೊಟ್ಟ ಮೇಲೆ ಗೊತ್ತಾಯಿತು. ಆದ್ದರಿಂದ ಈ ವೃಂದಾವನ ಸೇವೆ ಸರ್ವಜ್ಞತೆ ಕೊಡಿಸಬಲ್ಲದು ಎಂದೂ, ಆಖ್ಯಾನ, ಅದ್ಭುತ ಪ್ರಮಾಣ ಗ್ರಂಥ ಎಂದೂ ವ್ಯಕ್ತವಾಗಿದೆ. ಮೊದಲು ಈ ಆಖ್ಯಾನ ಅವಿಶ್ವಾಸ ಮಾಡುವವರಿಗೆ ಬ್ರಾಹ್ಮಣ್ಯ ಹಾಳಾಗುತ್ತೆ, ಗುರೂಪದೇಶಾನರ್ಹತ್ವ ಬರುತ್ತೆ ಹೀಗೆ ವೇದವ್ಯಾಸರು ಆಜ್ಞೆ ಮಾಡಿದ್ದಾರೆಂದು ವಾದಿರಾಜರು ಹೇಳಿ ವೇದವ್ಯಾಸ ಸ್ವಾಮಿಯನ್ನು ಸ್ತುತಿಸಿದ್ದಾರೆ. ಆ ಸ್ವಾಮಿ ಕೃಪೆಯಿಂದ ಬದರೀ ಪ್ರಾಂತದ ಮುನಿಗಳೆಲ್ಲಾ ಗುಹ್ಯೇಂದ್ರಿಯ ನಿಗ್ರಹ ಮನಃಶುದ್ಧಿಗಳನ್ನು ವ್ಯಾಸಾಶ್ರಮದ ಸಾಮರ್ಥ್ಯದಿಂದ ಪಡೆದು ಶಾಂತರಾಗಿದ್ದಾರೆ. ಅಂಥ ದೇವೋತ್ತಮ ವ್ಯಾಸರಿಗೆ ನಮಸ್ಕಾರ ಎಂದಿದ್ದಾರೆ. ಈ ರೀತಿ ಸ್ತುತಿಯಿಂದ, ಎದುರಿಗೆ ವ್ಯಾಸ ಸನ್ನಿಧಿ ಹೊಂದಿದ ಪಂಚಾವೃಂದನವೂ ವ್ಯಾಸಾಶ್ರಮವೇ, ಸಕಲಸಿದ್ಧಿದಾಯಕವೆಂದು ಸೂಚಿಸಿ ವೈಭವ ಪರ್ವ ಆರಂಭಿಸಿದ್ದಾರೆ. 5 ರಿಂದ 11 ನೇ ಅಧ್ಯಾಯ ಪೂರ್ತಿ ವೈಭವ ಪರ್ವ. ಪ್ರಥಮಾಧ್ಯಾಯ ಮಂಗಳಕ್ಕೆ ಸೇರಿಸಿ 8 ಅಧ್ಯಾಯ ಆಗುತ್ತೆ. ನಂತರ ಲಕ್ಷ್ಮೀಪತಿಗೆ ಹೇಳುತ್ತಾರೆ : " ನೀನು ಕೃತಿ ಪ್ರಚಾರ ಮಾಡು. ತ್ರಿವಿಧ ತಾಪನಾಶಕ ನನ್ನ ಮಹಿಮೆಯನ್ನು ಇತರರು ಹೇಳಲಾರರು. ಆ ಕಾರಣದಿಂದಲೂ ಕೃತಿ ನಾನೇ ಹೇಳಿದ್ದೇನೆಂದು ತಿಳಿ. ನಾನು ನಾನಾ ಶರೀರ ಮಾಡಿಕೊಂಡು ಬಹು ರೂಪದಿಂದ ಇದ್ದು ವಿರಿಂಚಿತ್ವವೆಂಬ ಸಹಭೋಗ, (ಸತ್ಯಲೋಕಾಧಿಪತ್ಯ) ವನ್ನೂ ಹೊಂದಿ, ನಂತರ ಮುಕ್ತನಾಗುತ್ತೇನೆ. ಈ ನನ್ನ ಮಹಿಮೆ ಪ್ರಚಾರಕನಿಗೂ ನನ್ನ ಲೋಕದ ಗತಿಯಾಗುತ್ತೆ. ಈ ವೈಭವ ಪರ್ವೋಕ್ತ ಮಹಿಮೆ ಪರ್ವ ದಿನಗಳಲ್ಲಿ ಪಾರಾಯಣ ಮಾಡಿದರೆ ಇಷ್ಟಪ್ರಾಪ್ತಿ, ಕಷ್ಟಪರಿಹಾರ ಆಗುತ್ತದೆ. ನಾನು ಅಂಥ ಹಯಗ್ರೀವ ಭಕ್ತ ಎಂದು ತಿಳಿ " ಎಂದಿದ್ದಾರೆ. ಇದು ಸ್ಪಷ್ಟ ಋಜು ಲಕ್ಷಣ.

ನಂತರ ವಿಪ್ರನಿಗೆ " ನನ್ನ ಮನ ಆದಿ ಇಂದ್ರಿಯಂಗಳು ನಿನ್ನ ಇಂದ್ರಿಯಂಗಳಲ್ಲಿದ್ದೂ ಕೆಲಸ ಮಾಡುತ್ತವ. ಹೀಗೆ ದಿನ ದಿನವೂ ಪ್ರೇರಣೆ ಭಕ್ತವಾತ್ಸಲ್ಯದಿಂದ " ಎಂದಿದ್ದಾರೆ. ಇವು ಮುಂದಿನ ಜನ್ಮದಲ್ಲಿ ನಡೆದಿವೆ. ಇಂಥ ಪ್ರೇರಣೆ ಭಕ್ತರಿಗಾಗುತ್ತೆ ಎಂದು ಸೂಚಿಸಿ " ಆದ್ದರಿಂದಲೇ ಈ ಆಖ್ಯಾನವು ಮುಕುಂದಾನಂದ ಕಾರಣ, ಮಂದರಿಗೆ ಜ್ಞಾನಪ್ರದ. ವಿಪ್ರನಿಂದ ತಿಳಿದು ಶ್ರದ್ಧೆಯಿಂದ ಸ್ತುತಿಸಿದರೆ ಸರ್ವೇಷ್ಟ ಸಿದ್ಧಿ, ಅಣಿಮಾದಿ ಪ್ರಾಪ್ತಿಯೇ ಆಗುತ್ತೆ " ಎಂದೂ ಹೇಳಿದ್ದಾರೆ.

ಈ ಆಖ್ಯಾನವನ್ನು ಶಿಲೆಯಲ್ಲಿ ಕೆತ್ತಿಸಿ. ಇಲ್ಲದಿದ್ದರೆ ಹಾರಿ ದೇವಲೋಕಕ್ಕೆ ಹೋಗುತ್ತೆ. ದೇವತೆಗಳು ಆನಂದೋದ್ರೇಕ ಸಾಧನೆಗೆ ಉಪಯೋಗಿಸಿಕೊಳ್ಳುತ್ತಾರೆ. ಮನುಷ್ಯರು ಸಾರ್ಥಕಮಾಡಿ ಕೊಳ್ಳದೆ ಉಪೇಕ್ಷಿಸಬಹುದೇ ? ನನ್ನ ಚರಮಾಜ್ಞಾ (Will) ಎಂದು ತಿಳಿದು ಪಠಿಸಿ, ನಾಸಂದಶಾವತಾರ ರೂಪಿಶ್ರೀ ಹಯನ್ನು ಒಲಿಸಿಕೊಂಡಿದ್ದೇನೆ. ಕರ್ಣಾಭರಣ ವ್ಯತ್ಯಾಸ ಮಾಡಿ ಉಪದೇಶ ಬಲಗಿವಿಯಲ್ಲಿ ಮಾಡಿದ್ದೇನೆ. ಯಾವ ಲೋಕಕ್ಕಾದರೂ ಕ್ಷಣದಲ್ಲಿ ಹೋಗುತ್ತೇನೆ. ಕರ್ತುಂ, ಅಕರ್ತುಂ, ಅನ್ಯಥಾ ಕರ್ತುಂ ಸಾಮರ್ಥ್ಯ ತುಂಬಿದೆ. ಸೂರ್ಯನ ರಥ ಏರಿ, ಅರುಣನಿಂದ ಪೂಜಿತನಾಗಿ ಮತ್ತು ರಥದ ಮುಂದೆ ಹೋಗುತ್ತಾ ದೇವರಿಂದ ವ್ಯಾಕರಣ ಕಲಿತಿದ್ದೇನೆ. ಅಣುವಿಗೆ ಅಣು, ಮಹತ್ತಿಗೆ ಮಹಾ ಆಗಿದ್ದೇನೆ. ಶಿಂಶುಮಾರ ಸ್ವಾಮಿಯ ವರವನ್ನೂ ಸಂಪಾದಿಸಿ ಜ್ಯೋತಿರ್ಮಂಡಲದಲ್ಲಿ ಎಲ್ಲಾ ದೇವತೆಗಳಿಗೂ ಬೋಧಿಸಿದ್ದೇನೆ. ನನ್ನ ತೇಜಸ್ಸು ದೇವತೆಗಳ ಕಣ್ಣನ್ನೂ ಮುಚ್ಚಿಸಿ ಬಿಟ್ಟಿತು; 54 ಸೂರ್ಯನ ರಥದ ಮುಂದೆ ಕುಣಿದು ಆ ಮಂಡಲವರ್ತಿ ನಾರಾಯಣನಿಂದ ಭಕ್ತರಿಗಾಗಿ ವರ ಪಡೆದಿದ್ದೇನೆ. ದೇವರು ನನ್ನನ್ನು ಮುಟ್ಟಿ ಅನುಗ್ರಹ ಮಾಡಿದ, '' ಹೇ ಶೇಷ, ನೀನೂ ಹಾಗೇ ದೇವರ ಅನುಗ್ರಹ ಪಡಿ. ಆ ಸ್ವಾಮಿ ಪ್ರಸಾದ ಸಂಪಾದಿಸದೆ ಬದುಕಿದ್ದಕ್ಕೇನು ಪ್ರಯೋಜನ ? ಗುರುವಾದ ನನ್ನನ್ನೂ ಅವಮಾನ ಮಾಡಬೇಡ. ಮಹತ್ವದ ಕೃತಿಯನ್ನು ಪ್ರಕಟಿಸುವ ವಿಪ್ರನಿಗೂ ಒಂದು ತುತ್ತು ಅನ್ನಕೊಡು. ಅನ್ನ ದಾನದ ಮಹಿಮೆ ತಿಳಿದಿದ್ದಿ, ಅವನಿಗೆ ಭೋಜನ ಮಾಡಿಸಿದರೆ ನನಗೆ ಅನ್ನ ಹಾಕಿದಂತಾಗುತ್ತೆಂದೂ ತಿಳಿ. ಆಖ್ಯಾನದಲ್ಲಿ ಸಂಶಯ ಬೇಡ. ಸಂಶಯಕ್ಕೆ ಕಷ್ಟ ಕಾದಿದೆ. ಕೊನೆಗೂ ವಿಪ್ರನೇ ಗತಿ '' ಎಂದಿದ್ದಾರೆ. ಇದರಲ್ಲಿ ಗುರುರಾಜರ ಭಕ್ತರ ಸೇವೆಯಿಂದ ಅವರು ಸಂತುಷ್ಟರಾಗುವರೆಂದು ಸೂಚಿತವಾಗುತ್ತೆ. ಮತ್ತೂ ಸನ್ನಿಧಾನದ ವಿಷಯವನ್ನೇ ಹೇಳುತ್ತಾರೆ. " ನಾನು ಅನೇಕ ಮೂರ್ತಿ ಸಂಯುಕ್ತನಾಗಿ ಹಯಗ್ರೀವ ಸೇವೆ ಮಾಡುತ್ತಾ ಒಂದು ರೂಪದಿಂದ ವಿಪ್ರನಲ್ಲಿ ಪ್ರವಿಷ್ಟನಾಗಿ ಗ್ರಂಥ ಪ್ರಚಾರಕ್ಕೆ ಕಾರಣವಾಗಿದ್ದೇನೆ. ಇನ್ನೊಂದು ರೂಪದಿಂದ ಸ್ವ ಮಠದ ಸ್ವಾಮಿಗಳಲ್ಲಿ ಸನ್ನಿಹಿತನಾಗಿದ್ದೇನೆ. ಮತ್ತೊಂದು ವಿಶಿಷ್ಟ ರೂಪದಿಂದ ದೇವರ ವೃಂದಯುಕ್ತನಾಗಿ ನನ್ನ ವೃಂದಾವನದಲ್ಲಿ ಸನ್ನಿಹಿತನಾಗಿ ಸಾಧುಜನರಿಗೆ ಸರ್ವದಾ ಅಭೀಷ್ಟಗಳನ್ನು ಕೊಡುತ್ತಲೇ ಇರುತ್ತೇನೆ.'' ಐದನೆಯ ಅಧ್ಯಾಯ ಮುಗಿದಿದೆ-ಶ್ರೀಕೃಷ್ಣಾರ್ಪಣಮಸ್ತು.

ಷಷ್ಠ ಅಧ್ಯಾಯ : 101 ಶ್ಲೋಕ. 5 ಪ್ರಕರಣದ್ದು. ಈ ಅಧ್ಯಾಯದಲ್ಲಿ ಷಟ್ಪಶ್ಲೋಪ ನಿಷತ್ತಿನಲ್ಲಿ ಹೇಳಿರುವ ಪ್ರಾಣದೇವರ ಮಹಿಮೆಯನ್ನು ವಾದಿರಾಜರು ತಮ್ಮಲ್ಲಿ ಹೇಳಿಕೊಂಡಿದ್ದಾರೆ. '' ಹೇ ಶೇಷ ! ಇಂದ್ರಲೋಕಕ್ಕೆ ಹೋಗಿದ್ದೆ, ಅಲ್ಲಿ ಇಂದ್ರ ದಂಪತಿಗಳು ಭಕ್ತಿಯಿಂದ ಪೂಜಿಸಿದರು. ಇನ್ನೊಂದು ರೂಪದಿಂದ ಮೇರುವಿನಲ್ಲಿ ಕಾಮ ರಹಿತನಾಗಿ ನಾರಾಯಣರ್ಚಕ, ಮತ್ತೊಂದು ರೂಪದಿಂದ ಕೈಲಾಸದ ವನದಲ್ಲಿ ತಪೋನಿರತನಾಗಿ ಹರನಿಂದ ಪಾಲಿತನಾದೆ. ಶೇಷನೇ ! ಈ ಆಖ್ಯಾನವನ್ನೂ ಸಂಗೀತಕ್ಕಿಟ್ಟುಕೋ, ಇದರ ಮಹಿಮೆ ತಿಳಿ. ವಿಪ್ರನಲ್ಲಿ ನನ್ನ ಅನುಗ್ರಹ ಎಷ್ಟೆಂದು ಊಹಿಸು. **ಕೃಚ್ಛಾ ಆತ್ ಮನ್ಯೈವನಾಸ್ತಿ** 14. " ಆ ವ್ಯಾಸಸ್ವಾಮಿಯ ಕೃಪೆಯಿಂದ ನನಗೆ ಕ್ಲೇಶವೇ ಇಲ್ಲ " ಎಂದಿದ್ದಾರೆ. ಅನಂತರ ಗರ್ಗಾದಿ 8 ಗುಂಪಿಗೆ ದೀರ್ಘಜ್ಞಾನವನ್ನೂ ಅನುಗ್ರಹಿಸಿದೆ ಎನ್ನುತ್ತಾರೆ. ಯಮ, ಪ್ರಚೇತಾ, ಕೇಲವು ಸ್ತ್ರೀಯರು, ಅತ್ರೇಯಾದಿಗಳು, ರತಿ, ಗುರು, ಊರ್ವಶ್ಯಾದಿ ಸ್ತ್ರೀಯರು, ವಾಸಿಷ್ಠ ಋಷಿಜನರು.

ಅವರಲ್ಲಿ ಯಮಲೋಕಕ್ಕೆ ಹೋಗಿದ್ದಾಗ ರಾಮದರ್ಶನದಿಂದ ಆನಂದ ಪಟ್ಟಿದ್ದಾರೆ. ಇವರ ಸೌಂದರ್ಯ ನೋಡಿ ಯಮ ಆಶ್ಚರ್ಯ ಹೊಂದಿದ್ದಾನೆ. ಆಗ ನರಕದ ಕಡೆಗೆ ಹೋಗಿ ತನ್ನ ಲಕ್ಷಣ ಯುಕ್ತ ದೇಹ ದರ್ಶನದಿಂದ ಕೆಲವು ಸಜ್ಜನ ಪಾಪಿಗಳನ್ನು ಆಕರ್ಷಿಸಿ, ಅವರಲ್ಲಿ ಪಶ್ಚಾತ್ತಾಪ ಹುಟ್ಟಿಸಿ, ಯಾತನೆ ತಪ್ಪಿಸಿ ಸ್ವರ್ಗಕ್ಕೆ ಕಳಿಸಿದ್ದಾರೆ. ಈ ನರಕೋತ್ತಾರ ಮಹಿಮೆ ಶ್ರವಣ ಮಾಡಿ ಭಕ್ತಿ ಮಾಡಿದರೆ ಕಾಮಾದಿಗಳಿಗೆ ಆಕರವಾದ ಸಂಸಾರ ಹೋಗಿ ಮುಕ್ತಿಯೇ ಆಗುಂತ್ತೆ. ಶ್ರವಣ ಎಂದರೆ ಈ ಆಖ್ಯಾನ ತಿಳಿಯೋಣ; ಎಂದಮೇಲೆ ಅದನ್ನು ನಂಬಬೇಕು. "ಶೇಷ! ನನಗೂ ಸ್ವಪ್ನವಾದರೆ ನಂಬುತ್ತೇನೆ. ಎನ್ನಬೇಡ. ನಿಮಗೆಲ್ಲಾ ಆಗೋದಿಲ್ಲ. ವಿಪ್ರ ಸೇವೆ ಮಾಡಿದ್ದಾನೆ, ವರಹೊಂದಿದ್ದಾನೆ, ಅವನಿಗೇ ಸ್ವಪ್ನ ಆಗೋದು, ಕುಬುದ್ಧಿಯಿಂದ ಶಂಕೆ ಮಾಡಿದರೆ ಶಾಪ ಹೊಂದುತ್ತಾರೆ. ಮನುಷ್ಯನು ಹೆಂಡತಿ, ಮಗ, ಮಿತ್ರರ ಮಾತನ್ನು ನಂಬುತ್ತಾನೆ. ಸರ್ವಜ್ಞ ಗುರು ಮಾತಿನಲ್ಲಿ ಅವಿಶ್ವಾಸ ಮಾಡೋದೇ? ನನ್ನ ಶ್ಲೋಕಗಳೆಲ್ಲಾ ಅವನ್ನು ಹಾಡಂತ್ತಾ ಪಠಿಸುತ್ತಾ ಇರುವವನಿಗೆ "ಶೋಕ ಮೂಲಸ್ಯ ನಾಶಕಾಃ" ದುಃಖ ಕಾರಣವಾದ ಪಾಪವನ್ನೇ ಸುಟ್ಟು ಮನಸ್ಸಿನಲ್ಲಿ ಉತ್ಸಾಹ ಹುಟ್ಟಿಸಿ ದೇವರಲ್ಲಿ ಭಕ್ತಿ ಕೊಡುತ್ತವೆ. ಆದ್ದರಿಂದ ವಿಪ್ರನಂತೆ ನಿರ್ಮಲಾಂತಃ ಕರಣದಿಂದ ನಂಬಿ ಪಠಿಸು. ಶಂಕೆ ಮಾಡಬೇಡ." "ವಿಪ್ರನೇ! ನೀನು ಜನರು ಶಂಕಿಸುತ್ತಾರೆಂದು ಗಾಬರಿ ಪಡಬೇಡ. ನಿನ್ನ ಗುರುವನ್ನು ನಂಬು. ಹಾಗೆ ಸೀತಾಪತಿ, ಲಕ್ಷ್ಮೀಪತಿ, ಶೇಷರಿಗೆ ತಿಳಿಸು. ನಿನ್ನನ್ನು ನಾಲ್ಕು ಜನ ನಂಬಿದರೆ ಸಾಕು. ಅದೇ ಸ್ವರ್ಣಲಾಭ" ಎನ್ನುತ್ತಾರೆ.

ಇನ್ನು ವೇದ ನಿಧಿಗಳಿಗೆ ಹೇಳುತ್ತಾರೆ. "ನೀನಾದರೂ ಅವಿಶ್ವಾಸ ಮಾಡದೆ ಕೃತಿಯನ್ನು ನಂಬು. ನಾನೂ ವಾಯು ದೇವರಂತೆ ವಿಪ್ರನಿಗೆ ಆಯುಃ ಪ್ರೇರಕ, ನನ್ನ ಭಕ್ತರು ಸೌಭಾಗ್ಯವಂತರಾಗಲಿ. ಕೃತಿಯಲ್ಲಿ ಸಂದೇಹ ಪಟ್ಟರೆ ಹುಲಿ ಕಂಡ ಗೋವಿನಂತೆ ಓಡಿ ಹೋಗುತ್ತೇನೆ, ಆದರೆ ಯಮಲೋಕದಲ್ಲಿದ್ದು ಆ ಸಂದೇಹ ಹುಟ್ಟಿಸಿದವರನ್ನು ಎಳೆದು ತರಿಸಿ ನರಕಕ್ಕೆ ಹಾಕಿಸುತ್ತೇನೆ. ಎಷ್ಟೋ ಜನ ದುಷ್ಟ ಶಂಕೆ ಮಾಡಿ ನರಕಕ್ಕೆ ಹೋಗಲಿಕ್ಕೇ ಹುಟ್ಟಿದ್ದಾರೆ. ಅಂಥವರು ನಕ್ಕರೆ ನಗಲಿ. ನೀನು ಹೆದರಬೇಡ. ಈ ವಿಪ್ರನಿಗೂ ನಿನಗೂ ಶುಭವಾಗುತ್ತೆ." ಎಂದಿದ್ದಾರೆ. ನಂತರ ಯೋಗ್ಯರಿಗೆ ಉಪದೇಶ ಮಾಡದೇ ಇರಬೇಡ ಎಂದು ವಿಪ್ರನಿಗೆ ಹೇಳಿ, ವೇದನಿಧಿಗಳಿಗೆ ತಮ್ಮ ವಾಯುತ್ವ ಸಾಮ್ಯವನ್ನೂ ವಿವರಿಸಿದ್ದಾರೆ. "ಹೇ ನಂದನಶ್ರೇಷ್ಠ! ನಾನು ವೃಂದಾವನದಲ್ಲಿ ಸ್ಥಿತನಾದರೆ ದೇವತೆಗಳೆಲ್ಲರ ಜೊತೆಯಲ್ಲಿ ಶ್ರೀದೇವರೂ ಸ್ಥಿತನಾಗುತ್ತಾನೆ. ನಾನು ಅಲ್ಲಿಂದ ಹೊರಗೆ ಬಂದುಬಿಟ್ಟರೆ ದೇವ ಮುನಿಗಳೊಂದಿಗೆ ದೇವರು ತನ್ನ ಎಲ್ಲಾ ರೂಪಗಳೊಂದಿಗೆ ವೃಂದಾವನ ತ್ಯಾಗ ಮಾಡಿ ಬಿಡುತ್ತಾನೆ. ಈ ಅನ್ವಯವ್ಯತಿರೇಕ ಯಾರಿಗೆ ಇದೆ? ನೋಡು. ನಿನ್ನ ವಿಶ್ವಾಸ ನೋಡಿಕೊಂಡು ಸನ್ನಿಧಾನ ಇಟ್ಟಿದ್ದೇನೆ. ನೀನೂ ಅವಿಶ್ವಾಸ ಮಾಡಿದರೆ ಬಿಡಲೇ ಬೇಕಾಗುತ್ತೆ. ನಾನು ನಿನಗೂ ಶ್ವಾಸಪ್ರೇರಕನಾಗುವವನು. ಆದ್ದರಿಂದ ಶಂಕಾ ರಹಿತ ಶುದ್ಧ ವಿಶ್ವಾಸದಿಂದ ನನ್ನನ್ನು [1] ಭಜಿಸಿ ಆಯುರ್ವೃದ್ಧಿ ಹೊಂದು, ಸಹೋದರನ ದೆಸೆಯಿಂದ ಅಧಿಕ ಪ್ರೀತಿ ನಿನ್ನಲ್ಲಿಟ್ಟು ಜ್ಞಾನದಾತಾ ಆಗಿದ್ದೇನೆ. ಆಖ್ಯಾನ ಪ್ರತಿದಿನವೂ ಬರೆಯಿಸುತ್ತಾ ಭಕ್ತಿ

1) ಮುಜತ್ವವನ್ನು ಆಚ್ಛಾದಿಸಿ ಭಕ್ತಿಮಾಡಿದರೆ ಅಶುದ್ಧ ಭಕ್ತಿ ಆಗುತ್ತೆ. ಅದು ಪಾಪ ಬೀಜ. ಸನ್ನಿಧಾನ ನಾಶಕ ಎಂದು ಭಾವ.

ಹೆಚ್ಚಿಸಿಕೋ. ನಿನ್ನ ಆರಾಧನೆ ನನಗೆ ಪ್ರಿಯ, ಎಲ್ಲೂ ಹೋಗದೆ ಇಲ್ಲೇ ಇರುತ್ತೇನೆ '' ಎಂದಿದ್ದಾರೆ. ಮತ್ತೆ ಹಾಡುತ್ತಾ '' ಕಾಕೋದರ (ಸರ್ಪ) ಸ್ವಾರ್ಥ ಪ್ರಾಣಿ. ಕಪ್ಪೆ ನುಂಗಿ ಬಿಲದಲ್ಲಿ ಮರೆಯುತ್ತೆ. ಯಾರಾದರೂ ತಿವಿದು ಕೊಲ್ಲುತ್ತಾರೆ, ಅಂಥ ಸ್ವಾರ್ಥಿ ದುಷ್ಟರು ತಾವೂ ಕೆಟ್ಟು ನನ್ನ ಭಕ್ತರನ್ನೂ ದುಷ್ಟ ಶಂಕಾ ಉಳ್ಳವರನ್ನಾಗಿ ಮಾಡುತ್ತಾರೆ. ನನ್ನ ಸನ್ನಿಧಾನ ಸ್ಥಳಗಳು ಮುಖ್ಯವಾಗಿ ಮೂರು. ಈ ವಿಪ್ರ, ವೇದನಿಧಿಯಾದ ನೀನು, ವೃಂದಾವನ. ಇವು ಒಂದಕ್ಕಿಂತ ಒಂದು ಹೆಚ್ಚು. ವಿಪ್ರನಿಗಿಂತ ವೇದನಿಧಿಯಲ್ಲಿ ಅಧಿಕ ಸನ್ನಿಧಾನ. ವೇದನಿಧಿಯಿಂದ ಅಪಾರ ಸನ್ನಿಧಾನ ವೃಂದಾವನದಲ್ಲಿ, ನೀನು ಶಂಕಾ ಮಾಡದೆ ವೃಂದಾವನ ಪೂಜೆಮಾಡು. ಕುಬೇರ ನನ್ನನ್ನು ಪೂಜಿಸಿ " ನೀವೂ ಭಾರತೀ ಪತಿಯಂತೆ ಸಮರ್ಥರೆಂದು " ಸ್ತುತಿಸಿದ್ದಾನೆ. ನಂತರ ವರುಣ, ನಿರ್ಋತಿ ಸಹ ಪೂಜೆ ಮಾಡಿದ್ದಾರೆ, ಅವರೆಲ್ಲಾ ನನ್ನ ಸ್ವರೂಪ ತಿಳಿದಿದ್ದಾರೆ " ಎಂದಿದ್ದಾರೆ. ನಂತರ ಮಂಗಳ, ಹೀಗೆ ಋಜುತ್ವ ಲಿಂಗಗಳು ಈ ಅಧ್ಯಾಯದಲ್ಲಿ ಸ್ಪಷ್ಟವಾಗಿವೆ. ಶ್ರೀಕೃಷ್ಣಾರ್ಪಣಮಸ್ತು.

ಏಳನೆಯ ಅಧ್ಯಾಯ ದಲ್ಲಿ 132 ಶ್ಲೋಕ, ಏಳು ಪ್ರಕರಣಗಳಿವೆ. ಮೊದಲು ವೇದನಿಧಿಗಳಿಗೆ ಹೇಳುತ್ತಾರೆ. " ಸತ್ಯಲೋಕಕ್ಕೆ ಹೋಗಿದ್ದ, ಅಲ್ಲಿ ಹಯಗ್ರೀವ ದೇವರ ಸೇವೆಗೆ ಹೋಗಿದ್ದಾಗ ಸ್ವಾಮಿಯು '' ಕೇಳು '' ಎಂದು ಹೇಳಿ ಉತ್ಸಾಹದಿಂದ ಎಲ್ಲ ವೇದಾರ್ಥವನ್ನೂ ಉಪದೇಶಿಸಿದನು. ನಾನು ಭಕ್ತಿಯಿಂದ 1000 ಶ್ಲೋಗಳಲ್ಲಿ ದೇವರು ಹೇಳಿದ್ದನ್ನು ಅನುವಾದ ಮಾಡಿವೆ. '' ಇದೊಂದು ಪದ್ಮ, ಚೆನ್ನಾಗಿದೆ, ಪ್ರಚಾರಮಾಡು '' ಎಂದು ದೇವರು ಹೇಳಿದರು, ಅದನ್ನು ವಿಪ್ರನ ಸ್ವಪ್ನದಲ್ಲಿ ಹೇಳಿ, ತುಂಬ ಗೋಪ್ಯ ವಿಷಯವನ್ನು ಹಾರಿಸಿ, ಸಾಮಾನ್ಯ ವಿಷಯವನ್ನು ಬೆಳಗ್ಗೆ ಅವನಿಂದ ಹೇಳಿಸಿ ಬರೆಯಿಸಿದೆ ''. ಎಂದು ಹೇಳಿದ್ದಾರೆ. ಆದ್ದರಿಂದ ಆಖ್ಯಾನ ಹಯಗ್ರೀವ ಬ್ರಹ್ಮವಿದ್ಯಾ, ಕೃತ್ರಿಮ ಶ್ಲೋಕಕ್ಕೆ ಹೋಲಿಸಬಾರದು, '' ಪ್ರತಿ ದಿನವೂ ಸ್ವಪ್ನದಲ್ಲಿ ಮನುಷ್ಯ ದರ್ಶನ ದೇವತೆಗಳಿಗೆ ನಿಷಿದ್ಧ; ನನ್ನ ನಿಃಸಂಗತೆಯಿಂದ ನನಗೆ ಬಂಧವಿಲ್ಲ. ಆದರೂ ಲೋಕ ಸಂಗ್ರಹಕ್ಕಾಗಿ ಧವಳಗಂಗೆ ಸ್ನಾನ ಮಾಡುತ್ತೇನೆ. ಶಿಶ್ನೋದರ ಪರಾಯಣರ ಮಾತನ್ನು ಲಾಲಿಸಿ ನೀನು ಸಂಶಯ ಪಡಬೇಡ. ನನ್ನ ತಲೆ ಮೇಲೆ ಇಂದ್ರನೇ ಛತ್ರಿ ಹಿಡಿದಿದ್ದಾನೆ. ಧನ್ವಂತರೀ ಉಪಾಸನೆ ಮಾಡುತ್ತಾ ಚಂದ್ರ ಮಂಡಲಕ್ಕೆ ಹೋಗಿದ್ದೆ. ಧನ್ವಂತರಿ ದೇವನು ನನಗೆ ಅಮೃತ ಕುಡಿಸಿ ದಿವ್ಯ ವಿಜ್ಞಾನ ಕೊಟ್ಟನು. (25-30) ಆ ಉಪದೇಶ ಮಧ್ವ ಮತದ ಸಾರ '' ಹರಿಸರ್ವೋತ್ತಮ ಜಗತ್ತು ಸತ್ಯ, ಹರಿಕೃತ. ದೈತ್ಯರು ಅದು ಮಿಥ್ಯಾ ಎಂದೂ, ವಿಷ್ಣು ಮಾಯಾಯುಕ್ತ ದೋಷಿ ಎಂದೂ ಹೇಳಿ ದ್ರೋಹಿಗಳಾಗುತ್ತಾರೆ '' ಎಂದು ಹೇಳಿದನು. ನಾನು '' ಹೇ ಅನಂತ, ಪ್ರಭೋ, '' ಎಂದು ಸ್ತುತಿಸಿದೆ. ಆ ಧನ್ವಂತರಿ ನನ್ನ ಹಿಂದಿನ ಜನ್ಮದಲ್ಲಿ ಶಿಶುಪಾಲ ನನಗೆ ಶಾಪ ಕೊಟ್ಟಿದ್ದರೂ ಅದರ ಪ್ರಸಕ್ತಿ ತಪ್ಪಿಸಿ, ಜನ್ಮಾಂತರಕ್ಕೆ ತಳ್ಳಿ ಕೃಷ್ಣ ಪ್ರಸಾದ ನನಗಾಗುವಂತೆ ಹರಸಿದನು. ಸಂಸಾರದ ಮೃತಿ ಭಯ ನನಗಿಲ್ಲ. ವೇದನಿಧಿ ! ನನ್ನನ್ನು ಶರಣುಹೊಂದು, ಬದರಿಗೆ ಹೋಗಿದ್ದೆ. ಅಲ್ಲಿ ವೇದವ್ಯಾಸರಿಂದಲೂ ತತ್ವ " ಸ್ಮಾರಿತವಾಯಿತು " ಎಂದಿದ್ದಾರೆ. ಅದು ಋಜು ಲಿಂಗ, " ಶ್ರೋತವ್ಯಂ ಧರ್ಮ ಸಾಧನಂ " ಎಂದಿದೆ.

ನಂತರ ವಿಪ್ರನಿಗೆ ಹೇಳುತ್ತಾರೆ : ನಾನು ಹೇಳೋದನ್ನೂ ವ್ಯತ್ಯಾಸವಾಗಿ ಬರೆಯಿಸಿದರೆ ಪಾಪ. ಆ ಪಾಪ ನಾಶಕ್ಕೆ ಒಂದು ಸ್ವಂತ ಕಥೆ ಹೇಳುತ್ತೇನೆ, ಕೇಳು. ನಾಳೆ ಏನು ಮಾಡುವುದು ಎಂಬ ಚಿಂತೆಯಿಂದ ನೀನು ತಪ್ಪು ಬರೆಸುತ್ತಿ. ಆಲೋಚನೆ ಬಿಡು, ದೇವರು ಸ್ವಾಮಿ. ಅವನು ಮಾಡಿದ ಹಾಗೆ ಆಗುತ್ತೆ ! ನಾವು ಅಸ್ವತಂತ್ರರು. ದೇವರ ಆಜ್ಞೆಯಂತೆ ಬ್ರಹ್ಮದೇವರು ಸೃಷ್ಟಿ ಮಾಡುತ್ತಾರೆ. ರುದ್ರದೇವರು ಸಂಹಾರ ಮಾಡುತ್ತಾರೆ. ಸಾಕ್ಷಾತ್ ದೇವರೇ ಪಾಲನೆ ಮಾಡುತ್ತಾನೆ. ಅವನು ಸ್ವಾಮಿ ಎಂದು ಸದಾ ಮನಸ್ಸಿನಲ್ಲಿಡು, ಇನ್ನು ಕಥೆ ಕೇಳು. ದೇವತೆಗಳು ಒಮ್ಮೆ ಹರಿಯನ್ನು ಸಮೀಪಿಸಿ ಏನಾದರೂ ಹರಿ ಮಹಿಮೆ ಕೇಳಬೇಕೆಂದರು. ದೇವರು ಸಂಜ್ಞೆ ಮಾಡಿ ದೂರದಲ್ಲಿ ಕೂತಿದ್ದ ನನ್ನನ್ನು ತೋರಿಸಿದರು. ಗಂಧರ್ವರು '' ಇವರು ಹೇಳಬಲ್ಲರೇ ? '' ಎಂದು ಸಂಶಯ ಪಟ್ಟರು. ಅಷ್ಟಕ್ಕೆ ಪತಿತರಾಗಿ ಪಾಪಿಗಳಾದರು, ಭೂಮಿಯಲ್ಲಿ ಹುಟ್ಟ ಬೇಕಾಯಿತು, " ಅಯ್ಯೋ ಅನ್ಯಾಯ ಮಾಡಿದೆವು " ಎಂದು ಗಂಧರ್ವರು ಪಶ್ಚಾತ್ತಪ್ತರಾದರು, ಆಗ ದೇವತೆಗಳ ಸಂಗಡ ಗಂಧರ್ವರು ಬಂದು ನನ್ನನ್ನು ಶರಣು ಹೊಂದಿದರು. ಆಗ ನಾನು ಅನುಗ್ರಹ ಮಾಡಿದೆ. " ಗಂಧರ್ವರಿಗೆ ಭೂಮಿಯಲ್ಲಿ ಹುಟ್ಟಿದಾಗ ರಾಜ್ಯ ಚ್ಯುತಿ ಪ್ರಸಕ್ತವಾಗುತ್ತೆ, ಆಗ ದೇವರಿಗೆ ಹೇಳಿ ಗಂಧರ್ವನಿಗೇ ರಾಜ್ಯ ಪ್ರಾಪ್ತಿಯಾಗುವಂತೆ ಮಾಡುತ್ತೇನೆ. ನೀವುಗಳು ಭೂಮಿಯಲ್ಲಿ ಅಹಂಕಾರ ಬಿಟ್ಟು ಆಖ್ಯಾನ ಶ್ರವಣ ಮಾಡಿ ವೃಂದಾವನ ಸೇವಿಸಿ, ವೃಂದಾವನಸ್ಥ ರಾಮನ ದಯೆಯಿಂದ ಶುಭವಾಗುತ್ತೆ " ಎಂದೆ. ಗುರೂಕ್ತಿಯಲ್ಲಿ ಸಂಶಯಕೂಡದು, ಶೇಷನಿಗೆ ಸ್ವಲ್ಪ ಸಂಶಯ, ಲಕ್ಷ್ಮೀಪತಿ, ಸೀತಾಪತಿಯರಿಗೆ ಸಂಶಯವಿಲ್ಲ. ಗುರುಪ್ರಸಾದಾನುಸಾರ ಶಿಷ್ಯರಿಗೆ ಸಿದ್ಧಿ ಉಂಟಾಗುತ್ತೆ. ನಾನೇ ಗುರು. ನನ್ನ ಪ್ರಸಾದದಿಂದಲೇ ಸಾಧನೆ. (ವಾದಿರಾಜರನ್ನೂ ಏಕೆ ಶರಣು ಹೋದಬೇಕು, ಮಧ್ವಾಚಾರ್ಯರೇ ಸಾಕು . ಮಧ್ಯೇ ಇವರದ್ದೇನು " ಎಂದು ಪ್ರತಿಷ್ಠೆ ಮಾಡಿದರೆ ವೇದ ಗುಹ್ಯ ತಿಳಿಯದ ಮೂಢ ಎನ್ನಿಸುತ್ತಾನೆ). ಆದ್ದರಿಂದ ನನ್ನ ಪ್ರಸಾದ ಸಂಪಾದಿಸಿ ವಿಬುಧೇಶ್ವರ ಮಧ್ವಾಂತರ್ಯಾಮೀ ಹರಿಯನ್ನು ಉಪಾಸನೆ ಮಾಡುವವರಿಗೇ ನಿರ್ವಿಘ್ನ ಸಾಧನ ಎಂದು ಭಾವ. ಹಾಗೆ ಶ್ರೀಹಯಗ್ರೀವ ನನಗೆ ಒಲಿದಿದ್ದಾನೆ. ನಾನು ಅನಂತಾಸನಕ್ಕೂ ಬೇಕಾದಾಗ ಹೋಗುತ್ತೇನೆ, ಎಂದಿದ್ದಾರೆ. ಕೊನೆಯಲ್ಲಿ ಮತ್ತೆ ವೇದನಿಧಿಗಳಿಗೆ ಹೇಳುತ್ತಾ " ಹೇ ಪ್ರಿಯ ನನ್ನ ಮೂರು ಮಾತನ್ನು ನಡೆಯಿಸಿಕೊಡು, ಗುರು ಪದ್ಯಗಳನ್ನು ಅಧ್ಯಾಯಗಳನ್ನಾಗಿ ಮಾಡು; ವೃದ್ಧನನ್ನು ಅಂಗೀಕರಿಸು, ಆಖ್ಯಾನವನ್ನು ಶಿಲಾಸ್ಥವನ್ನಾಗಿ ಮಾಡು. ನಿನಗೆ ಕೃಷ್ಣ ಅನೇಕ ಜನ್ಮಗಳಲ್ಲಿ ಪಾಲಕನಾಗಿರುತ್ತಾನೆ " ಎಂದಿದ್ದಾರೆ. (87) ಬ್ರಹ್ಮಾಂಡದ ಸರ್ವ ಅಧಿಕಾರಿಗಳಿಗೂ ಮಾಂಡವ್ಯ ವಿರಚಿತ ಅನ್ನ ಈ ಆಖ್ಯಾನ. ಶಾಂಡಿಲ್ಯನ ಕಾರ್ಯದಂತೆ ವ್ಯಾಖ್ಯಾನ ಯುಕ್ತವಾಗುತ್ತೆ. ಅನ್ನವನ್ನು ಚಿತ್ರಾನ್ನ ಮಾಡಿ ಬಡಿಸಿದಂತೆ ಕೌಂಡಿನ್ಯನ ವ್ಯಾಪಾರ ಸೇರಿ ಉಪದಿಷ್ಟವಾಗುತ್ತೆ ಈ ಆಖ್ಯಾನ. ನಂತರ ಕೃಷ್ಣಾರ್ಪಿತ ಹೋಮದಂತೆ ಸ್ವರಾಪೋದ್ಧಾರಕ ಗುರು ಅನುಗ್ರಹದಿಂದ ಅವರವರ ಉಪಾಸ್ಯ ಮೂರ್ತಿ ಪಾರಾಯಣ ಶ್ಲೋಕ ತಿಳಿದು ಉಪಾಸನೆ ಮಾಡಲು ಅಧಿಕಾರಿ ಜ್ಞಾನಿಯಾಗಿ ಮುಕ್ತನಾಗುತ್ತಾನೆ. ಆಗ ನನಗೆ ಊಟ ಮಾಡಿದಂತೆ ಸಂತೋಷ. " ಮಮ ಭೋಜನ ಸಂತೋಷಂ " 96 ಶ್ಲೋಕ ಸಂಖ್ಯೆ. ಇದರ ಪಾರಾಯಣ, ಆಖ್ಯಾನದ ಪಠನದಿಂದ ಅಧಿಕಾರಿಗೆ ಅನ್ನ ಪ್ರಾಪ್ತಿ. ನನಗೆ ದೇವರ ಆಜ್ಞಾಪಾಲನದ ಸಂತೋಷ. ವೇದನಿಧಿ ! ಮೂರು ಕಾರ್ಯ ಆದರೆ ನನ್ನ ಸಂಕಲ್ಪ ನೆರವೇರುತ್ತೆ. ಮಾಡುತ್ತೇನೆ ಎಂದು

ಪ್ರತಿಜ್ಞೆ ಮಾಡು, ನೀನು ಪುತ್ರ ಎಂದು ಎನ್ನಿಸುತ್ತಿ. ಸೀತಾಪತಿ! ನೀನು ಜ್ಞಾಪಿಸಿ ಅವನಿಂದ ಕಾರ್ಯಕ್ರಮ ಮಾಡಿಸು, ಅಂತೂ ಈ ಆಖ್ಯಾನ ವಾಕ್ಯ '' ಅಗ್ನಿಸಂನಿಭಂ '' ಸಂಸಾರ ಪಾಪ ಹತ್ತಿಗೆ ಅಗ್ನಿ ಎಂದಿದ್ದಾರೆ. " ಇನ್ನು ನೈಮಿಷಾರಣ್ಯಕ್ಕೆ ಹೋಗುತ್ತೇನೆ. ಈ ಕಾರ್ಯತ್ರಯಂ ಬೇಗ ಆಗಲಿ " ಎಂದು ಪುನಃ ಹೇಳಿದ್ದಾರೆ. ನಂತರ ಮಂಗಳ ಶ್ಲೋಕಗಳು. ಹೀಗೆ ಈ ಅಧ್ಯಾಯದಲ್ಲಿ ಗುರುರಾಜರು ಸರ್ವ ಅಧಿಕಾರಿಗಳಿಗೂ ಸಾಧನೆ ಮಾಡಿಸತಕ್ಕವರೆಂದೂ, ಆ ಕಾರ್ಯಕ್ಕೆ ಅಂಗವಾಗಿ ಆಖ್ಯಾನ ರಚಿಸಿದ್ದಾರೆಂದೂ ಸೂಚಿತವಾಗುತ್ತೆ. ಶ್ರೀಕೃಷ್ಣಾರ್ಪಣಮಸ್ತು.

ಅಷ್ಟಮೋಧ್ಯಾಯದಲ್ಲಿ 106 ಶ್ಲೋಕ. ಮೂರೇ ಪ್ರಕರಣಗಳಿವೆ. " ತುಂಗಭದ್ರಾ ನದೀ ತೀರ. " ನಾರಸಿಂಹ " ನ ಉದ್ಧಾರಕೋಸ್ಕರ ತಪಸ್ಸು ಮಾಡಿದೆ, ಎರಡು ಭೂದಾನ ಬಂದಿದೆ " ಎಂದು ಹೇಳಿದರು. ಮರುದಿನ ವಿಪ್ರ ಆ ದಾನ ಶ್ಲೋಕ ಬರೆಸಲಿಲ್ಲ. ದತ್ತಾಪಹಾರದೋಷ ಪ್ರಸಕ್ತವಾಯಿತು. ಗುರುರಾಜರು ಆ ದೋಷವನ್ನು ತಮ್ಮ ಯೋಗದಿಂದ ಪರಿಹರಿಸಿದ್ದಾರೆ. ಹಾಗೆಯೇ ' ಜುಹ್ವ ' ಎಂದು ಹೇಳಿದ್ದನ್ನು ಬರೆಯಿಸಿದೆ ' ದಹ ' ಎಂದು ಬರೆಯಿಸಿದ್ದು ದೋಷ. ಅದನ್ನು ಪರಿಹರಿಸಿದ್ದಾರೆ. ' ದಹ ' ಎಂದರೆ ಸುಡುವುದು ಎಂದರ್ಥ. '' ಮಂತ್ರಜ್ಞ ಅಶ್ಲೀಲ ಮಾತಾಡಬಾರದು, ಮಠದಲ್ಲೇ ಇರು, ಹೀಗೆ ದೋಷ ಬರುವುದಿಲ್ಲ '' ಎನ್ನುತ್ತಾರೆ.

ಇನ್ನು ವೈಭವ ಹೇಳುತ್ತಾರೆ. " ಹಿಮದತ್ಪರ್ವತಕ್ಕೆ ಹೋಗಿದ್ದೆ, ಹಿಮವದ್ರಾಜ ಅವನ ಪತ್ನಿ ಮೇನಾದೇವಿ ಸಹ ರತ್ನಕೋಟಿ ಅರಿಸಿ ಅಭಿಷೇಕ ಮಾಡಿದ್ದಾರೆ. ಆಗ ಸೂರ್ಯ ಮೇಷದಲ್ಲಿದ್ದ, ಅಳಿಯ ರುದ್ರ ರತ್ನ ಆರಿಸಿ ಅಭಿಷೇಕಕ್ಕೆ ಕೊಟ್ಟು ಸಹಕರಿಸಿದನು. " ಇದರಿಂದ ರುದ್ರ ಪೂಜ್ಯತ್ವ ಸಿದ್ಧವಾಗುತ್ತೆ. ಅಲ್ಲಿಂದ ಸ್ವರ್ಗ, ಅಲ್ಲಿಂದ ವೈಕುಂಠ, ವೈಕುಂಠದಿಂದ ಮಂದರಕ್ಕೆ ಬಂದು ಅಷ್ಟಬಾಹು ನಾರಾಯಣನನ್ನು ಕಂಡರು. ಅಲ್ಲಿ ಒಂದು ಸ್ತ್ರೀ ವ್ಯಕ್ತಿ ಇವರನ್ನು ಕಾಮಿಸಿ ದೇವರಿಂದ ವರ ಪಡೆದರೂ, ಜನ್ಮಾಂತರದಲ್ಲಿ ಅವಳ ಪ್ರಾಪ್ತಿ ಎಂದು ಶ್ರೀಹರಿಯೇ ವ್ಯವಸ್ಥೆ ಮಾಡಿದ್ದಾನೆ. ಇವರ ಮನಸ್ಸು ಅಷ್ಟು ನಿಶ್ಚಲವಾಗಿತ್ತು. ದೇವರು ವಾದಿರಾಜರನ್ನು ಆಲಿಂಗಿಸಿಕೊಂಡು ಬಿಟ್ಟರು. ಆ ಸುಂದರಿಯೂ ವಾದಿರಾಜರ ನಿರ್ವಿಕಾರತ್ವ ವ್ಯಕ್ತ ಮಾಡಿ ತಪಸ್ಸಿಗೆ ತೆರಳಿದಳು. ಇಷ್ಟು ಕಥೆ ಪಾರಾಯಣದಿಂದ ಯೌವನಸ್ಥರು ತರುಣಾದಿಗಳಿಗೆ ಕಾಮ ವಿಕಾರ ತಪ್ಪಿ ಶಾಂತಿ ಬರುತ್ತೆ. " ಹೇ ಲಕ್ಷ್ಮೀಪತಿ! " ಈ ಮಹಿಮ ಪ್ರಚಾರ ಮಾಡು " ಎನುತ್ತಾರೆ. ನಾಲ್ಕು ಅಧ್ಯಾಯ ಪಾರಾಯಣ ಗಂಗಾಸ್ನಾನಫಲ, ಎಂಟು ಅಧ್ಯಾಯದಿಂದ ಇಷ್ಟಪ್ರಾಪ್ತಿ, ದ್ವಾದಶಾಧ್ಯಾಯ ಪಂಡಿತರಿಗೆ ಧ್ಯಾನಪ್ರಾಪ್ತಿ ಹೀಗೆ ಫಲ ಹೇಳು. ನಾನು ವಿಮಾನದಿಂದ ಇಂದ್ರಲೋಕಕ್ಕೂ, ಹಾಗೇ ಸೂರ್ಯಮಂಡಲಕ್ಕೂ ಹೋಗಿದ್ದೇನೆ. ಸರ್ವದಾ ಹರಿ ಸ್ಮೃತಿ ಮಾಡುತ್ತೇನೆ. ಸತ್ಯಲೋಕಕ್ಕೆ ಹೋಗುತ್ತಿರುವಾಗ ಹಿಂದೆ ಹೇಳಿದಂತೆ ದೈತ್ಯನನ್ನು ಕೊಂದು ಶ್ರುತಿಗೆ ಅಪಾರ್ಥ ಮಾಡುತ್ತಿದ್ದನ್ನು ತಪ್ಪಿಸಿದೆ. ಆಗ ಎಲ್ಲರಿಗೂ ' ಹರಿಸರ್ವೋತ್ತಮತ್ವವೇ ತತ್ವ, ಅದೇ ಶ್ರುತ್ಯರ್ಥ ' ಎಂದು ಹೇಳಿದೆ. ನಾನು ಹೇಳಿದ್ದನ್ನು ನಂಬದೆ ಅಸುರರು ಕೃಷ್ಣನನ್ನು ಮಾನವನೆಂದು ತಿಳಿದರು. ದೇವತೆಗಳು ನನ್ನನ್ನು ನಂಬಿ ಸುಖಿಗಳಾದರು. " ಮಮಾಪಿ ಜೀವೋತ್ತಮತ್ವಂ "

ನನ್ನ ಜೀವೋತ್ತಮತ್ವವನ್ನು ದೇವತೆಗಳು ನಂಬಿದರು. ಯೋಗ್ಯತಾ ಪ್ರಭಾವದಿಂದ ಅಸುರರು ನಂಬಲಿಲ್ಲ. ನನ್ನ ಭಕ್ತರು ಸುಖಿಗಳಾಗಲಿ " ಎಂದು ಹರಸಿದ್ದಾರೆ 55.

'' ಅನಂತರ ನಕ್ಷತ್ರ ಲೋಕಕ್ಕೆ ಹೋಗಿದ್ದೆ. ಅಲ್ಲಿನವರ ಕಣ್ಣು ನನ್ನ ಕಾಂತಿಯಿಂದ ಕೋರೈಸಿ ಹೋಯಿತು, ಎಲ್ಲರೂ ಭಿಕ್ಷೆ ಕೊಟ್ಟು ಪೂಜಿಸಿದರು. ನನ್ನ ವಾಕ್ಕಿಗೆ ಲಕ್ಷ್ಮೀದೇವಿಯೇ ಸಾಕ್ಷಾದ ಭಿಮಾನಿ '' ಎನ್ನುತ್ತಾರೆ. ಹೀಗೆ ಋಜು ಲಕ್ಷಣ ಹೇಳಿ ಸಂಚಾರ ವರ್ಣಿಸುತ್ತಾರೆ. " ಸೂರ್ಯನ ರಥಕ್ಕೆ ಹೋದೆ. ಅರುಣ ' ಇಲ್ಲೇ ಇರಿ ' ಎಂದು ಬೇಡಿದ. ಹಾಗೆ ವರುಣ ಮುಂತಾದ ದಿಕ್ಪಾಲರೂ ಆಗಲೇ ಕರೆದರು. **" ಕಾಂತರೂಪಾಂತರೇಣ "** ಆಯಾಯ ದಿಕ್ಪಾಲರಿಗೆ ಅನುಗುಣವಾದ 8 ರೂಪ ಗಳನ್ನು ಮಾಡಿಕೊಂಡು ಎಲ್ಲರ ಮನೆಗೂ ಹೋಗಿ ಅನುಗ್ರಹಿಸಿದೆ. ತ್ರಿಶೂಲಿ ರುದ್ರನೂ ಭಕ್ತಿಯಿಂದ ಆತಿಥ್ಯ ಮಾಡಿ ಅನುಗ್ರಹೀತನಾಗಿದ್ದಾನೆ " ಎಂದಿದ್ದಾರೆ.

ಪುನಃ ವಿಪ್ರನನ್ನು ಕುರಿತು " ವ್ಯತ್ಯಾಸ ಮಾಡಬೇಡ. ಮಂತ್ರರೂಪ ಗ್ರಂಥ " ಎಂದು ಎಚ್ಚರಿ ಸಿದ್ದಾರೆ. " ದಾಮೋದರ ಸ್ಮರಣೆ ಮಾಡಿದರೆ ಪ್ರಮಾದ ಹೋಗುತ್ತೆ ಅವನೂ ನನ್ನ ವೃಂದಾವನದಲ್ಲಿದ್ದಾನೆ. ದೇವತೆಗಳನ್ನೂ ಅನುಗ್ರಹಿಸಿ ಮೂಲ ರೂಪದಿಂದ ಶ್ರೀದೇವರನ್ನು ಕಾಲು ಕಟ್ಟಿಕೊಂಡು ಭಜಿಸುತ್ತೇನೆ. ವಾಮನಸ್ವಾಮಿ, ಉಪೇಂದ್ರ ನನ್ನನ್ನು ಅನುಗ್ರಹಿಸಿ ಅಶಂಕೆ ಮಾಡುವ ಕುಜನರನ್ನು ಸಂಹರಿಸುತ್ತಾನೆ " ಎಂದು ಹೇಳಿದ್ದಾರೆ (95).

''ಎಷ್ಟು ಹೇಳಬೇಕು ?'' ಬ್ರಹ್ಮವಾಯುಗಳ ನಿತ್ಯ ಆವೇಶವು ನನ್ನಲ್ಲಿದೆ. ನಾನೂ ಸಾಮಾನ್ಯನಲ್ಲ. **" ಅಧಿಕಾರಿಷು ಸರ್ವೇಷು ಜೀವೋತ್ತಮೋಹಂ ನ ಸಂಶಯಃ "** (ಸರ್ವ ಅಧಿಕಾರಿಗಳಲ್ಲಿ ನಾನು ಉತ್ತಮನು ಸಂಶಯವಿಲ್ಲ) '' ಈ ವಿಷಯ ತತ್ವ ದೇವತೆಗಳಿಗೆ, ಋಷಿಗಳಿಗೆ ಸಹ ತಿಳಿಯುತ್ತೆ. **'' ದಾನವಾ ಮಾನವಾಶ್ಚ ನ ''** (ದಾನವರೂ ಮಾನವರೂ ನನ್ನ ಋಜುಸ್ಥತ್ವವನ್ನು ನಂಬುವುದಿಲ್ಲ) ಎಂದು ಅವರೇ ಹೇಳಿದ್ದಾರೆ. ಪುನಃ ದ್ವಿಜನಿಗೆ '' ಹೇಳದೆ ಇದ್ದುದನ್ನು ಬರೆಯಿಸಬೇಡ '' ಎಂದಿದ್ದಾರೆ. ಮಂತ್ರತ್ವ ಹೋಗುತ್ತದೆ ಎಂದು ಭಾವ. ಹೀಗೆ ಈ ಅಧ್ಯಾಯದಲ್ಲಿ ಹರಿಸರ್ವೋತ್ತಮತ್ವ ಸ್ಪಷ್ಟವಾಗಿದೆ. ವಾದಿರಾಜರ ಜೀವೋತ್ತಮತ್ವ ಮೂರು ನಾಲ್ಕು ರೀತಿಯಿಂದ ಹೇಳಲ್ಪಟ್ಟಿದೆ. ಶ್ರೀಕೃಷ್ಣಾರ್ಪಣಮಸ್ತು.

ನವಮಾಧ್ಯಾಯ ದಲ್ಲಿ **105** ಶ್ಲೋಕ. ಮೂರೇ ಪ್ರಕರಣ. ರಾಮಾಯಣದಲ್ಲಿ ಸುಂದರ ಕಾಂಡದಂತೆ ಆಖ್ಯಾನದಲ್ಲಿ ಈ ಅಧ್ಯಾಯ ಮನೋಹರ. ಹನುಮ, ಭೀಮ, ಮಧ್ವಸಾದೃಶ್ಯವನ್ನೂ ವಾದಿರಾಜರು ತೋರಿಸಿಕೊಂಡಿದ್ದಾರೆ. '' ಹನುಮಂತನು ' ಇದೊಂದು ಯಜ್ಞ ' ಎಂದು ತಿಳಿದು ಅಕ್ಷಕುಮಾರಾದಿ ರಾಕ್ಷಸರನ್ನು ಕೊಂದನು. ನಿಷ್ಕಾಮ ಸೇವೆ ರಾಮನಿಗೆ ಮಾಡಿದನು, ಆ ರಾಮ ಅವನನ್ನು ಪ್ರೀತಿಯಿಂದ ಆಲಿಂಗಿಸಿಕೊಂಡ, ಹಾಗೆಯೇ ನನ್ನನ್ನು ಅಷ್ಟ ಬಾಹು ನಾರಾಯಣ ಮಂದರ ಪರ್ವತದಲ್ಲಿ ತಬ್ಬಿಕೊಂಡಿದ್ದಾನೆ. ಮುಂದಿನ ಜನ್ಮದಲ್ಲಿ ಆತನು ಭಕ್ತದಾರಳನ್ನು ನನ್ನಿಂದ ಯೋಗ

ಮಾಡಿ ಸುಖಪಡಿಸುತ್ತಾನೆ. ಈಗ ನನ್ನ ನಿಷ್ಕಾಮತೆಯಿಂದ ಸಂತೋಷ ಪಟ್ಟ ಸ್ವಾಮಿ ನನ್ನನ್ನು ತನ್ನ ಜೊತೆಯಲ್ಲಿ ಗರುಡನ ಮೇಲೆ ಕೂರಿಸಿಕೊಂಡು ನಿಮಿಷ ಮಾತ್ರದಲ್ಲಿ ಮೇರು ಪರ್ವತದ ಶಿಖರಕ್ಕೆ ಬಂದ. ಅಲ್ಲಿಂದ ಮಂದರಕ್ಕೆ ಬಂದ, ಅಲ್ಲಿಂದ ಶ್ವೇತ ದೀಪಕ್ಕೆ, ಅಲ್ಲಿಂದ ಪ್ಲಕ್ಷ ದ್ವೀಪಕ್ಕೆ ಬಂದ, ಅಲ್ಲಿ ನನ್ನನ್ನು ಇಳಿಸಿ ಗರುಡನನ್ನು ಸ್ವರ್ಗಕ್ಕೆ ಕಳುಹಿಸಿ ಅಮೃತ ತರಿಸಿ ನನಗೆ ಕುಡಿಸಿದನು. ಕುಡಿಸಿ ಉಳಿದಿದ್ದನ್ನು ಗರುಡ ದೇವರ ಸಮೀಪದಲ್ಲಿಟ್ಟ. ಆ ದೇವರು ಅದನ್ನೂ ನನಗೇ " ಗೋಸವೇ ಗೋಸವೇ " ಭಿಕ್ಷಾ ಕಾಲಗಳಲ್ಲಿ ತಾನೇ ಕುಡಿಸಿ ಬಿಟ್ಟನು. ಈ ಮಹಿಮೆ ಜ್ಞಾನ ಮುಕ್ತಿಗೆ ಸೋಪಾನ.

ಅನಂತರ ದೇವರು ಅಲ್ಲಿಂದ ಉಪಪ್ಲಾವ್ಯಕ್ಕೆ ಬಂದು, ಅಲ್ಲಿಂದ ಅನಂತಾಸನಕ್ಕೆ ಬಂದನು; ಅಲ್ಲಿ ತನ್ನ ರೂಪದಿಂದ ಏಕೀ ಭಾವವನ್ನು ಹೊಂದಿ ನನಗೆ ಸಂತೋಷ ಪಡಿಸಿ ಕಳುಹಿಸಿದನು. ಇಂದ್ರ ದಂಪತಿಗಳು ನನ್ನನ್ನು ಕರೆದು ಉಪೇಂದ್ರ ದಂಪತಿಗಳ ಸಮಕ್ಷಮದಲ್ಲಿ ಆರತಿ ಮಾಡಿ, ಆಖ್ಯಾನವನ್ನು ಭದ್ರಾಸನದಲ್ಲಿಟ್ಟು ಅರುಂಧತ್ಯಾದಿ ಸ್ತ್ರೀಯರೊಂದಿಗೆ ಆರತಿ ಮಾಡಿದರು. ಎಲ್ಲಾ ದೇವ ಸ್ತ್ರೀಯರೂ ಹಾಗೇ ಮಾಡಿದ್ದಾರೆ. ಮನುಷ್ಯರೂ ಹಾಗೆಯೇ ಮಾಡಲಿ, ಆಖ್ಯಾನ ಪ್ರಚಾರಕ ವಿಪ್ರನನ್ನು ಮಾನಿಸಲಿ " ಎಂದಿದ್ದಾರೆ.

ಇನ್ನು ತಮ್ಮ ಅಣಿಮಾದಿಸಿದ್ಧಿ, ಶರೀರ ಶುದ್ಧಿ ಮುಂತಾದ ಮಹಿಮೆ ವಿವರಿಸುತ್ತಾರೆ. " ಬಲಗೈಯಿಂದ ಊರ್ಧ್ವಾಂಡ ಮುಟ್ಟುತ್ತೇನೆ. ಎಡಗೈಯಿಂದ ಕೆಳಗಿನ ಖರ್ಪರ ಮುಟ್ಟಬಲ್ಲೆ, ತ್ರಸರೇಣುವಿಗಿಂತ ಸೂಕ್ಷ್ಮವಾಗಬಲ್ಲೆ, ಸೌಭರಿಯಂತೆ ನಾನಾ ದೇಹ ಧರಿಸಬಲ್ಲೆ, ಹಾಗೆಯೇ ಮಣಿಮಂತ ನನ್ನು ಜಜ್ಜಿ ಹಾಕಬಲ್ಲೆ. ಆಚಾರ್ಯರು ಸರ್ಪರೂಪದ ಆ ದೈತ್ಯನನ್ನು ಕಾಲಿನಿಂದ ಒರಸಿದರು. ಆ ಆಚಾರ್ಯರೇ ದೈತ್ಯ ಪೀಡೆಗೆ ಬಗ್ಗದ ಸುರೋತ್ತಮರು. ಇತರರು ದೈತ್ಯರಿಂದ ಕಚ್ಚಲ್ಪಡುತ್ತಾರೆ. ದೈತ್ಯರನ್ನು ನಿಗ್ರಹಿಸಲಾರರು. ಮಧ್ವಾಚಾರ್ಯರು ದೈತ್ಯರನ್ನು ನಿಗ್ರಹಿಸಿ ಸನ್ಮತ ಸ್ಥಾಪನೆ ಮಾಡಿದ ವಜ್ರಕಾಯರು, ನಾನೂ ಹಾಗೆಯೇ, ಮಧ್ವಾಚಾರ್ಯರದ್ದೇ ಉತ್ತಮ ಮತ. ಸರ್ವ ವೇದಗಳು ಹರಿ ಸರ್ವೋತ್ತಮತ್ವ ಹೇಳುವ ಸಚ್ಛಾಸ್ತ್ರ, ಗುರುಗಳಲ್ಲಿ ಪೂರ್ಣ ಪ್ರಜ್ಞರೇ ಸರ್ವಜ್ಞ ಸಿದ್ಧಿದಾಯಕಗುರು. ಹೀಗೆ ಸತ್ಸಿದ್ಧಾಂತ, ಇಂಥ ಆಚಾರ್ಯರಿಗೆ ಮಂತ್ರ ಸಿದ್ಧಿಯಿಂದ ಅವರ ಅಸ್ಥಿಗಳೆಲ್ಲಾ ಚಕ್ರ ಶಂಖಾಂಕಿತ ಗಳಾಗಿವೆ, ಹರಿಪಾದತೀರ್ಥ ಪ್ರಾಶನದಿಂದ ಅತಿ ಪವಿತ್ರಗಳಾಗಿವೆ. ಭುಜಾಸ್ಥಿ ಶಂಖ ಚಕ್ರ ಮೂಡಿದೆ, ಜಾನ್ವಸ್ಥಿ ಪದ್ಮ ಗದೆಗಳು. ಎದೆ ಅಸ್ಥಿ ಹರಿಮೂರ್ತಿ, ಶಿರೋಸ್ಥಿ ನಾರಾಯಣಮುದ್ರೆ, ದಂತಾಸ್ಥಿ ಪಾದ ಚಿಹ್ನೆ. ವೃಂತಾಸ್ಥಿ (ಎದೆಗೂಡು) ಶಾಂರ್ಙ್ಗಧನುಸ್ಸು, ಕರ್ಣಾಸ್ಥಿ ಬಾಣಚಿಹ್ನೆ, ಪಾದಾಸ್ಥಿ ಪಾದಚಿಹ್ನೆ ಹೀಗೆ ದೇಹವೆಲ್ಲಾ ನನಗೂ ಆಗಿ ನನ್ನ ಅವಯವಗಳೆಲ್ಲಾ ನನ್ನನ್ನು ಹರಿ ಸೇವೆಗೇ ಎಳೆಯುತ್ತವೆ. ಸಂಸಾರ ಕೊಡೋದಿಲ್ಲ, ಎಲೈ ವಿಪ್ರನೇ ! ನಾನು ಭಕ್ತಿಪಾಶದಿಂದ ಹರಿಪಾದಗಳನ್ನು ಬಿಗಿಯಾಗಿ ಕಟ್ಟಿ ಜ್ಞಾನಿಯಾಗಿ ಬದುಕಿ ಕೊನೆಯಲ್ಲಿ ಯೋಗದಿಂದ ದೇಹವನ್ನು ತ್ಯಜಿಸಿ ಭೀಮಸೇನ ಲಾಕ್ಷಾಗೃಹದ ಸುರಂಗ ದಿಂದ ಹೊರಗೆ ಬಂದು ವೇದವ್ಯಾಸರನ್ನು ಸೇರಿದಂತೆ ನಾನೂ ದೇವರ ಸಮೀಪಕ್ಕೆ ಹೋಗಿ ಸೇರುತ್ತೇನೆ, ಮುಂದಿನ ಜನ್ಮದಲ್ಲಿ ರಾಜನಾಗಿ ಹುಟ್ಟಿ ಆ ದಾರಳನ್ನು ಸ್ವೀಕರಿಸಿ ಭೀಮನಂತೆ ಧರ್ಮಮಾರ್ಗದಲ್ಲೇ

ಇರುತ್ತೇನೆ. ಲಕ್ಷ್ಮೀಪತಿ, ಈ ವೈಭವ ಸಜ್ಜನರಿಗೆ ತಿಳಿಸು. ನಾನು ಏಕಾದಶೀ ಹಂಸಸ್ವಾಮಿ ಅರಮನೆಗೆ ಹೋಗಿ ಶ್ವಾಸನಿಯಮನ ಕಲಿತು ಲೋಕೋದ್ಧಾರ ಪ್ರೇರಣೆ ಮಾಡಿ ಸರ್ವ ಭೃತ್ಯರನ್ನೂ ಭವಸಾಗರ ದಿಂದ ಮೋಚನೆ ಮಾಡಿಬಿಡುತ್ತೇನೆ. ಆ ಸ್ವಾಮಿ ನನಗೆ ಹಿಂದಿನ ಜ್ಞಾನ ದೃಢ ಮಾಡಿದ. ಅನಂತರ ಆನಂದ ತೀರ್ಥರ ಸಂಗಡ ಮಂತ್ರಾಲೋಚನೆ ಮಾಡಿ ಅವರ ಪಾದಕ್ಕೆ ಅಡ್ಡ ಬಿದ್ದೆ. ಅವರ ಜೊತೆಯಲ್ಲಿ ಬದರಿಗೆ ಬಂದು ಶುಕ ತಾತವ್ಯಾಸ ದೇವರನ್ನು ಕಂಡೆ. ಅವರಿಗೆ ನಮಿಸಿ, ಅಪ್ಪಣೆ ಪಡೆದು ಘನೋದಕ ದಾಟಿ ಮಧುವನ್ನು ಕೊಲ್ಲಲು ಹಯಗ್ರೀವಸ್ವಾಮಿ ಹಿಡಿದಿದ್ದ ಧನುಸ್ಸು, ಬಾಣಗಳನ್ನೂ ನೋಡಿದೆ. ಆ ಪ್ರಾಸವನ್ನೂ ನೋಡಿದೆ. ಇದೆಲ್ಲಾ ಹರಿದಾಸ್ಯ ಪ್ರಭಾವ. ದ್ವೈತ ಮತದ ಸಿದ್ಧಿ. ಅಹಂಬ್ರಹ್ಮಾಸ್ಮಿ ಉಪಾಸಕ ಅಂಧಂ ತಮಸ್ಸಿಗೆ ಬೀಳುತ್ತಾನೆ. ಆ ಪಾಪಕ್ಕೆ ಪ್ರಾಯಶ್ಚಿತ್ತವೇ ಇಲ್ಲ. 63–76 ಈ ಹನ್ನೊಂದು ಶ್ಲೋಕ ಮಧ್ವಮತದ ತಿರಳು. ಸೋಹಂಭಾವ ಪರಬ್ರಹ್ಮನನ್ನೇ ಕೊಂದಂತೆ ಮಹಾ ಬ್ರಹ್ಮಹತ್ಯೆ. ದಾಸೋಹಂ ಎಂಬ ಉಪಾಸನೆ ಮಾಡಿದರೆ ತಮಸ್ಸಾಗುವುದಿಲ್ಲ. ಹೇ ಭೇದವಾದಿಯೇ ! ನೀನು ಹೇಳುವ ಭೇದವು ಸತ್ಯವಾಗಬೇಕಾದರೆ ವೇದಾದಿ ಪ್ರಮಾಣಗಳು ಸತ್ಯವಾಗಬೇಕೆಂದು ಮೊದಲು ಸಾಧಿಸು, ನಂತರ ಜಗತ್ತು ಸತ್ಯ, ದೇವರ ಗುಣ ಪ್ರಕಾಶಗಳು ಸತ್ಯ ಎಂದು ಒಪ್ಪಿಸು. ಐಕ್ಯವಾದವನ್ನು ಬ್ರಹ್ಮನನ್ನು ದೋಷಿ ಮಾಡುವ ವಿರುದ್ಧ ಪ್ರಕ್ರಿಯೆ ಎಂದು ತಳ್ಳು, ದ್ವೈತವಾದವನ್ನು ಶಿಷ್ಯರಲ್ಲೂ ಸ್ಥಾಪಿಸಿ ಹರಿಧ್ಯಾನದಿಂದ ಹರಿಮಂದಿರ ಸೇರಿ ಇದೆಲ್ಲಾ ಅಭೇದವಾದದ ಜಯದ ಪ್ರಭಾವವೆಂದು ತಿಳಿ. ನಾನು ಘನೋದಕ ದಾಟಿ ವಿಪ್ರನಿಗೆ ಬೋಧಿಸುತ್ತೇನೆ. ವಿಪ್ರನೇ, ನೀನು ಹೃದಯ ಸ್ಥಿತ ಹರಿಯನ್ನು ನೋಡು. ನೆಲ್ಲಿನ ಮೇಲಿರುವ ಸಣ್ಣ ಎಸಳಿನಂತೆ ಕಾಣುವ ಸುವರ್ಣ ಜ್ಯೋತಿಯ ಮಧ್ಯವನ್ನೂ ನೋಡು. ಅಲ್ಲೇ ಆತ್ಮ ನಾಮಕ ಹರಿ ಸಣ್ಣ ಆಕಾರದಲ್ಲಿದ್ದರೂ ಗಗನದ ಮಹಾಕಾಶದ ಸೂರ್ಯ ಮಂಡಲದಂತೆಯೇ ಕಾಣುತ್ತಾನೆ. ಕೋಟಿ ಸೂರ್ಯಕಾಂತಿ ಸದೃಶ, ಚಂದ್ರಕೋಟಿಗಳಂತೆ ಆಹ್ಲಾದಕ. ಆ ಬಿಂಬಸ್ವಾಮಿ ದಿವ್ಯಕಿರೀಟಾದಿ ಅಲಂಕೃತ. ಅತ್ಯಂತ ಭಿನ್ನ, ಅತಿಸುಂದರ. ಅವನು ತನ್ನ ಸರ್ವ ರೂಪಾಭಿನ್ನ. ದಾಸ್ಯಭಾವದಿಂದ ಅವನನ್ನು ನೋಡಿ ನಲಿದು ಸ್ತುತಿಸು. ನನ್ನ ಉಪದೇಶದಿಂದ ಯಾರಿಗೆ ಕಾಣುವುದಿಲ್ಲ ? ಬ್ರಾಹ್ಮಣ, ನಾನು ಚಂದ್ರಾಂಶಯಾಮಿ ಹರಿಯನ್ನು ನೋಡಿ ಸರ್ವಕಾಮ ಹೀನನಾಗಿ ಆನಂದದಿಂದ ಶ್ಲೋಕಗಳನ್ನು ಸ್ವಪ್ನದಲ್ಲಿ ಸೃಷ್ಟಿಸುತ್ತೇನೆ. ಸಪ್ತಸಮುದ್ರ, ಸಪ್ತದ್ವೀಪಗಳಲ್ಲಿ ಎಲ್ಲಿಗೆ ಬೇಕೋ ಅಲ್ಲಿಗೆ ಹೋಗಿ ಸರ್ವತ್ರ ಪೂಜಿತನಾಗಿ ಸುವರ್ಣಾಲಂಕೃತನಾಗಿ ರಾಜನಂತೆ ವೇಂಕಟಾದ್ರಿಗೂ ಹೋಗಿ ಅಲ್ಲಿ ಚತುರ್ಮುಖನ ಜನಕನನ್ನು ಕಣ್ಣು ತುಂಬ ನೋಡಿ ಸುಖಿಯಾಗುತ್ತೇನೆ. ತ್ರಿವಿಕ್ರಮೋತ್ಸವ ಸಮೀಪವಾದರೆ ಉಡುಪಿಯಲ್ಲಿ ಯತಿಗಳೊಂದಿಗೆ ನೈವೇದ್ಯ ಸ್ವೀಕರಿಸಿ, ಸೋದೆಗೆ ಮೂರು ಕೋಟಿ ಯತಿಗಳೊಂದಿಗೆ ಬಂದು, ನಿನ್ನ ಮೃಷ್ಟಾನ್ನ ಸ್ವೀಕಾರಮಾಡಿ ನಿನಗೆ ಹರಸುತ್ತೇನೆ. ನೀನು ಕಳೆದುಕೊಂಡಿದ್ದನ್ನೆಲ್ಲಾ ತಿರುಗಿ ಕೊಡುತ್ತೇನೆ. ಗುರುವಾದ ನನ್ನ ಪೂಜೆಮಾಡು. ನನ್ನ ಆಜ್ಞಾಪಾಲಿಸಿ ಅಜ್ಞಾನ ಕಳೆದುಕೋ. ನಿನ್ನಂಥ ಜ್ಞಾನಿಗಳಿಲ್ಲ ಹಾಗಾಗುತ್ತಿ, ನನ್ನಂಥ ಯತಿಗಳೂ ಇಲ್ಲವೇ ಇಲ್ಲ " ಎಂದಿದ್ದಾರೆ. ನಂತರ ಮಂಗಳ. ಹೀಗೆ ಹೇಳಿದ್ದೆಲ್ಲಾ 150 ವರ್ಷಗಳ ಮೇಲೆ ನಡೆದು ವೃಂದಾವನಾಚಾರ್ಯರು ಜ್ಞಾನಿಗಳಾದರು, ಎಂದ ಮೇಲೆ ಮಧ್ವಮತವನ್ನು ಕೊಂಡಾಡುವ ಈ ಅದ್ಭುತ ಗ್ರಂಥಕ್ಕೆ ಎಷ್ಟು ಪೂಜೆ ಮಾಡಿದರೆ ಸಾಕು ? ಶ್ರೀಕೃಷ್ಣಾರ್ಪಣಮಸ್ತು.

ದಶಮಾಧ್ಯಾಯ ವೈಭವ ಪರ್ವತದ ದೊಡ್ಡ ಅಧ್ಯಾಯ 167 ಶ್ಲೋಕ 17 ಪ್ರಕರಣ. ಗುರುರಾಜರು ಹೇಳುತ್ತಾರೆ ;- " ಬ್ರಾಹ್ಮಣ ! ಭೂತರಾಜನು ಕುಬೇರ ಕೊಟ್ಟ ಕಿರೀಟವನ್ನು ತಂದು ನನ್ನ ತಲೆಯ ಮೇಲೆ ಇಟ್ಟು ಸೇವಿಸಿದನು. ನಂತರ ಅವನೇ ನಿನ್ನ ಪುತ್ರನ ಕಾಲುಬಳೆಯನ್ನು ಹಾರಿಸಿ ಬಿಟ್ಟಿದ್ದಾನೆ. ಚಿಂತಿಸಬೇಡ. ಅದಕ್ಕೆ ಮೂರರಷ್ಟು ಬೆಳ್ಳಿ ಕೊಡಿಸುತ್ತೇನೆ. ಮಗನಿಗೆ ಕಾಲುಬಳೆ ಮಾಡಿಸು " ಎಂದಿದ್ದಾರೆ. ಇದು ಒಂದು ಪ್ರಾರಬ್ಧೋಪಮರ್ದನ ರೀತಿ. ಈ ಮಹಿಮೆ ತೋರಿಸುವ ಇನ್ನೊಂದು ಕಥೆ ಹೇಳಿದ್ದಾರೆ. '' ಪಾರ್ವತಿಯನ್ನು ಭಕ್ತ ಪೈಲಮುನಿಯು ತನ್ನ ಪ್ರಾರಬ್ಧನಾಶಕ್ಕೆ ಏನು ಮಾಡಲಿ ಎಂದು ಕೇಳಿದನು. ಆಕೆ '' ಕೈಲಾಸದ ಸುತ್ತಲೂ ದೀಪ ಹಚ್ಚು '' ಹೋಗುತ್ತದೆ '' ಎಂದಳು. ಪೈಲನಿಗೆ ಆಗ ಶ್ರೀವಾದಿರಾಜರ ವೃಂದಾವನ ಜ್ಞಾಪಕವಾಯಿತು. ಆತನಲ್ಲಿ ಶೇಷನ ಆವೇಶ. ಆತ ಬತ್ತಿ, ತುಪ್ಪ ಎಲ್ಲವನ್ನೂ ತೆಗೆದುಕೊಂಡು ಬಂದು ವೃಂದಾವನದ ಸುತ್ತಲೂ ದೀಪ ಹಚ್ಚಿ ತನ್ನ ಪ್ರಾರಬ್ಧ ಕಳೆದುಕೊಂಡನು. ಹೀಗೆ ಎಲ್ಲ ಋಷಿಗಳೂ ಮಾಡಿದ್ದಾರೆ '' ಎಂದಿದೆ. ಹಾಗೆ ವಿಪ್ರನಿಗೂ ಹೇಳಿದ್ದಾರೆ: " ನಿನಗೆ ಮೃತ್ಯು ಸನ್ನಿಹಿತವಾಗಿದೆ. ಗರುಡ ಕದ್ರೂ ಮಕ್ಕಳನ್ನು ಸರ್ಪಗಳಾದರೂ ಮುಟ್ಟದೆ ರಕ್ಷಿಸಿದಂತೆ ನಿನ್ನನ್ನು ರಕ್ಷಿಸಬೇಕೆಂದು ದೇವರನ್ನು ಬೇಡುತ್ತೇನೆ " ಎಂದಿದ್ದಾರೆ. ವೃಂದಾವನದ ಮುಂದೆ ಆಖ್ಯಾನ ವ್ಯಾಖ್ಯಾನದಿಂದ ನನ್ನನ್ನು ಸಂತೋಷಪಡಿಸು ಎಂದು ಲಕ್ಷ್ಮೀಪತಿಗೆ ಹೇಳಿದ್ದಾರೆ. ಮುಂದೆ ವಿಪ್ರನಿಗೆ ರಹಸ್ಯಾರ್ಥದ ಒಗಟು ಶ್ಲೋಕ ಹೇಳಿದ್ದಾರೆ, ವೃಂದಾವನಾಚಾರ್ಯರ ಕೃಪೆಯಿಂದ ಅದೆಲ್ಲಾ ಈಗ ವ್ಯಾಖ್ಯಾತವಾಗಿದೆ. " ಮಹೀಜ ವ್ಯಾಸದೇವರು ಮತ್ತು ಹಯಗ್ರೀವ ದೇವರು ಏಕಾಂತವಾಗಿ ನಿನ್ನ ಪೆಟ್ಟಿಗೆಗೆ ಜೊತೆಯಾಗಿ ಸೇರಿದರು. ಪುನಃ ಶ್ರೀಕೃಷ್ಣನ ಜೊತೆಯಲ್ಲಿ ವ್ಯಾಸದೇವರ ಪೂಜೆ ಆಗುತ್ತೆ. ತಪ್ಪುವುದಿಲ್ಲ, ಚೋರರಿಗೆ ಸೂರ್ಯೋದಯ ಬೇಡ, ಸುಖಕಾಮಿಗಳಿಗೆ ನಮೀ ಬೇಡ. ದುರ್ಜನರಿಗೆ ವಿಪ್ರಬೇಡ. ಹರಿವಾಯುಗಳ ಸಾತ್ವಿಕ ಪ್ರೇರಣೆಯಿಲ್ಲದವರು ಏನಾದರೂ ಮಾಡಲಿ, ಎಷ್ಟಾದರೂ ಹೊಟ್ಟೆಗಿಚ್ಚು ಮಾಡಲಿ, ಅವನನ್ನು ಮುಂದಕ್ಕೇ ತರುತ್ತೇನೆ. ವೃಂದಾವನಾಚಾರ್ಯ ದ್ವೇಷಿಗಳಿಗೆ ನನ್ನ ಮಹತ್ವ ಬೇಡವೆನ್ನಿಸುತ್ತದೆ. ಆದರೂ ನನ್ನ ವೃಂದಾವನ ಅನೇಕ ಕೋಟಿದೇವ ಸಹಿತರಾಗಿ, ಹನುಮ ಭೀಮಮಧ್ವರಿಂದ ಅಲಂಕೃತವಾಗಿ ಮೆರೆಯುತ್ತೆ. ದೇವತೆಗಳು ಪರ್ವಕಾಲದಲ್ಲಿ ಬಂದು ಸ್ನಾನಾದಿಗಳಿಂದ ಪ್ರಾರಬ್ಧಪಾಪ ಕಳೆದುಕೊಳ್ಳುತ್ತಾರೆ. ಧವಳಗಂಗೆಯು ಧನ್ವಂತರೀ ಸನ್ನಿಧಾನದಿಂದ ಸರ್ವರೋಗವನ್ನೂ ಪರಿಹರಿಸುತ್ತಾಳೆ. ದುರಾಚಾರದ ಪಾಪಗಳನ್ನು ಪ್ರಾರ್ಥನೆ ಮಾತ್ರದಿಂದ ತೊಳೆದು ಬಿಡುತ್ತಾಳೆ. ಅದು ಗಂಗೆಯ ಪ್ರಭಾವ. ಈ ಅದ್ಭುತ ಮಹಿಮೆ ಕಲಿ ಪ್ರಭಾವದಿಂದ ಬುದ್ಧಿರಹಿತರಿಗೆ ತಿಳಿಯುವುದಿಲ್ಲ. ಹಯಗ್ರೀವ ಮತ್ತು ಹಂಸರೂಪಿ ಶ್ರೀಹರಿಯು ನನ್ನಿಂದ ಪ್ರಾರ್ಥಿತರಾಗಿ ವೃಂದಾವನದ ಮಹಿಮೆ ಹೆಚ್ಚಿಸುತ್ತಾರೆ ''. 44.

ಲಕ್ಷ್ಮೀಪತಿಗೆ ವೈಭವ ವಿಶೇಷ ವರ್ಣಿಸಿದ್ದಾರೆ. ನಾನು ಶಾಲ್ಮಲೀ ದ್ವೀಪಕ್ಕೆ ಹೋಗಿದ್ದೆ. ಅಲ್ಲಿನ ಸುಮಶಾಲೀ ಎಂಬ ರಾಜನು ನನ್ನ ಲಕ್ಷಣಗಳನ್ನು ನೋಡಿ ಆಶ್ಚರ್ಯಯುಕ್ತನಾಗಿ '' ತಾವು ವ್ಯಾಘ್ರಚರ್ಮನಿಂದಲೂ ಆರಾಧಿತರು. ನಮ್ಮ ಆಸ್ಥಾನದ ಶುಕ್ರಾಚಾರ್ಯರು ಹೇಳಿದ್ದಾರೆ. ವಾದಿರಾಜರು ಹಯಗ್ರೀವೋಪಾಸಕರು, ತುಂಬ ದೊಡ್ಡವರು ಎಂದು ಬೋಧಿಸಿದ್ದಾರೆ, ಅನುಗ್ರಹಿಸಬೇಕು '' ಎಂದನು,

ಯಶೋದಾತನಾದ ದೇವರ ಕೃಪೆಯನ್ನು ಮನಸಾ ವಂದಿಸಿ ಆ ರಾಜನನ್ನು ಅನುಗ್ರಹಿಸಿ ಹೊರಟು ಅಲ್ಲಿಯೇ ಒಂದು ವನದಲ್ಲಿ ವಾನರ ದೇವತೆಗಳ ಪರಮ ಪವಿತ್ರ ಸಭೆಯನ್ನು ನೋಡಿದೆ. ಅವರ ಮತವನ್ನು ಕೇಳು. "ಮಧ್ವಮತವೇ ದಿವ್ಯಮತ, ಹಾಗೆಂದು ಬ್ರಹ್ಮರಾಯನಿಗೆ ನಾರಾಯಣ ದೇವರು ಹೇಳಿದರು. ಆ ಮತದ ಪ್ರಕಾರ ಜಗತ್ಸತ್ಯತ್ವ, ವಿಷ್ಣು ಸರ್ವೋತ್ತಮತ್ವಾದಿಗಳೇ ಪ್ರಮಾಣಸಿದ್ಧ ಎಂದು ಸಾಧಿಸಲ್ಪಟ್ಟು ವ್ಯಾಸ ಸೇವೆ ಮಾಡಿದಂತಾಗಿದೆ. ದುರ್ಮತಗಳನ್ನು ಧ್ವಂಸಮಾಡಿ ಮಧ್ವಾಚಾರ್ಯರು ನನ್ನ ಸಮೀಪಕ್ಕೆ ಬರುತ್ತಾನೆ. ಅವನ ಮೂಳೆಗಳೆಲ್ಲಾ ನನ್ನ ಶಂಖಚಕ್ರಾಂಕಿತ. ಆ ಮತದಲ್ಲಿ ಅಗ್ರಹ ಉಳ್ಳವರು ಶ್ರೇಷ್ಠ ಲೋಕಗಳನ್ನು ಹೊಂದುತ್ತಾರೆ." ಹೀಗೆ ನಾರಾಯಣ ಬ್ರಹ್ಮರಾಯನಿಗೆ ಹೇಳಿದ್ದನ್ನು ಆ ಸಭೆಯ ವಾನರಾಧ್ಯಕ್ಷರು ಪ್ರಕಟಿಸಿದರು. ಲಕ್ಷ್ಮೀಪತಿ, ಪಂಡಿತರಿಗೆಲ್ಲಾ ನೀನೂ ಹೇಳು. ಪಂಚ ವೃಂದಾವನ ಪ್ರತಿಷ್ಠೆ ಮಾಡಿ ಬೇಕಾದ್ದನ್ನು ಪಡಿ. ಪ್ರಸನ್ನನಾಗುತ್ತೇನೆ" ಎಂದಿದ್ದಾರೆ.

ನಂತರ ವಿಪ್ರನಿಗೆ ಹೇಳುತ್ತಾ, "ನನ್ನ ವೃಂದಾವನ ಕಲಿಯುಗದ ಕಾಮಧೇನು. ವೇದವೇದ್ಯರ ವೃಂದಾವನವೂ ಹಾಗೆ. ಆಖ್ಯಾನ ಕೃತಿಯನ್ನು ಪಾರಾಯಣ ಮಾಡಿದರೆ ಸರ್ವಪಾಪ ಹೋಗುತ್ತೆ. ಅರ್ಥಜ್ಞಾನ ಪೂರ್ವಕವಾಗಿ ಪಠಿಸಿದರೆ ಸರ್ವೇಷ್ಟ ಪ್ರಾಪ್ತಿಯಾಗುತ್ತೆ. ಕೃತಿಖ್ಯಾಪನ ಶ್ರೇಷ್ಠ ಕೆಲಸ. ಜೊತೆಗೆ ಭಾರತ ಪಾರಾಯಣ ಶುಭ, ಪಂಚವೃಂದಾವನದಲ್ಲಿ ಪಂಚಮೂರ್ತಿ ತಿಳಿ. ಜ್ಞಾನ ಸಾಲದಿದ್ದರೆ ವೃಂದಾವನ ಸ್ಥಾಪಿಸಿ ಪೂಜಿಸಲಿ, ಭಕ್ತರ ವಿಭೂತಿಗಾಗಿ ಈ ಮಹಿಮೆ ಸ್ವಲ್ಪ ಹೇಳಿದೆ, ಸೇವೆಯೂ ವಿಹಿತವಾಗಿದೆ. ನಾನು ಪೂರ್ಣಕಾಮ, ನನಗೆ ಯಾವುದರ ಅವಶ್ಯಕತೆಯೂ ಇಲ್ಲ. ಲಕ್ಷ್ಮೀಪತಿ ! ವಿಪ್ರನೇ ಪ್ರಧಾನ ಅನುಗ್ರಾಹ್ಯ, ಅವನ ಸ್ವಪ್ನದಲ್ಲೇ ಹೇಳಿದ್ದು. ನೀನು ಕೃತಿಯನ್ನು ಖ್ಯಾತಿಮಾಡಿ ವಿಪ್ರನನ್ನು ಸೇವಿಸಿ ಜ್ಞಾನಹೊಂದು. ಇತರರು ಆಖ್ಯಾನ ಶ್ರವಣ ಮಾಡಿ ನನ್ನನ್ನು ಸೇವಿಸಿ ಎಲ್ಲಾ ವರವನ್ನೂ ಪಡೆಯಲಿ, ಎಲ್ಲರಿಗೂ ವ್ರತಾನುಸಾರ ಫಲಬರುತ್ತೆ. 105 ಎಂದಿದ್ದಾರೆ. ಅನಂತರ ವಿಪ್ರನಿಗೆ "ನಿನ್ನ ಅನಶನವ್ರತಸಾಕು. ನನ್ನ ಮಂತ್ರ ಜಪಿಸು. ನನ್ನ ಪಾದಗತಿ ಕೊಡುತ್ತೇನೆ. ಭಾರತ ಓದು. ವೇದವೇದ್ಯರನ್ನು ಸೇವಿಸು." "ಹೇ ವೇದವೇದ್ಯ ! ದುರ್ಮತಧ್ವಂಸ ಮಾಡು, ಆಖ್ಯಾನವನ್ನು ಯೋಗ್ಯ ವಿವಕ್ಷಿತ ಪಾತ್ರರಿಗೆ ನಿನ್ನ ಪ್ರೇರಣೆಯಿಂದ ತಲಪಿಸು. ವಿಪ್ರನನ್ನು ಕಾಪಾಡು. ಜನರಿಗೆ ನಂಬಿಕೆ ಬರಲೆಂದು ಇವನಿಗೇ ಸ್ವಪ್ನದರ್ಶನ ಕೊಟ್ಟಿದ್ದೇನೆ. ಅಶರೀರಿ ನಾನಾದ್ದರಿಂದ ವ್ಯಾಕರಣ ದೋಷ ಆಖ್ಯಾನದಲ್ಲಿ ಹೇಳಕೂಡದು. ವಸ್ತುತಃ ಛಂದೋ ಭಂಗಾದಿಗಳು ಇಲ್ಲ. ಗ್ರಂಥ ನನ್ನ ಶಾಸನ ಎಂದು ತಿಳಿದು ಆಚರಿಸಬೇಕು" ಎಂದಿದ್ದಾರೆ. "ಶೇಷ, ಆಖ್ಯಾನ ನಿರ್ದೋಷವೆಂದು ಖ್ಯಾಪಿಸು. ಪಂಚ ಉತ್ಸವ ಮಾಡಿಸಿ, ಮುಕ್ತನಾಗು. ವಿಪ್ರನನ್ನು ಬಿಡದೆ ಪೂಜಿಸು." ಶೇಷಾದ್ರಿ ಪಂಡಿತನಿಗೂ ತಿಳಿಸೆಂದು ಲಕ್ಷ್ಮೀಪತಿಗೆ ಹೇಳಿ ಆಪಂಡಿತ ನಿರ್ಮತ್ಸರ ನಾಗಬೇಕೆಂದು ಸೂಚಿಸಲು ಮೂವತ್ತು ದೋಷ ಪಂಡಿತರಲ್ಲಿರಬಾರದೆಂದು ಹೇಳಿ ಕೆಲವು ದೋಷಗಳನ್ನು ನಿರ್ದೇಶಮಾಡಿ "ಅಂಥ ದೋಷಗಳನ್ನು ಬಿಡು" ಎಂದು ಶೇಷಾದ್ರಿ ಪಂಡಿತನಿಗೆ ತಿಳಿಸಬೇಕೆಂದು ಲಕ್ಷ್ಮೀಪತಿಗೆ ಅಪ್ಪಣೆ ಮಾಡಿದ್ದಾರೆ. ನಂತರ ಮಂಗಳ. ಈ ಅಧ್ಯಾಯದಲ್ಲಿ ಸೂಚಿತ ನಿರಶನ ವ್ರತವನ್ನು 12 ವರ್ಷ ವೃಂದಾವನಾಚಾರ್ಯರು ಮಾಡಿದ್ದಾರೆ. ಶ್ರೀಕೃಷ್ಣಾರ್ಪಣಮಸ್ತು.

ಹನ್ನೊಂದನೆಯ ಅಧ್ಯಾಯದಲ್ಲಿ 99 ಶ್ಲೋಕ 15 ಪ್ರಕರಣಗಳಿವೆ. ಆರಂಭದಲ್ಲಿ ಲಕ್ಷ್ಮೀಪತಿಗೆ ಹೇಳುತ್ತಾರೆ. ಈ ಗ್ರಂಥದಲ್ಲಿ ಅಪ್ರಾಮಾಣ್ಯ ಶಂಕಾಕಾರಣಗಳೇ ಇಲ್ಲ. ಈ ಕೃತಿ ಅಲೌಕಿಕ. ಅಶರೀರ ರಚಿತ. ಋಜುಪ್ರಣೀತ. ಇಷ್ಟರ ಮೇಲೆ ಆಖ್ಯಾನ ಸ್ವಾಪ್ನಕೃತಿ ವಾಸನಾತ್ಮಕ ಶಬ್ದಗಳಿಂದ ಬೋಧನೆ, ಸ್ವಪ್ನದ ಧನ, ವಸ್ತ್ರ ಮುಂತಾದವು ಎದ್ದ ಮೇಲೆ ಕಾಣಿಸುವುದೇ ಇಲ್ಲ. ಏಕೆಂದರೆ ಅವು ಅತಿ ಸೂಕ್ಷ್ಮ ಸಂಸ್ಕಾರದವು, ಆದರೂ ಸ್ವಾಪ್ನ ಶಬ್ದಗಳು ಬ್ರಾಹ್ಮಣ, ದೇವತಾ, ವೃಷಭ, ರಾಜಾದಿಗಳಿಂದ ಹೇಳಲ್ಪಟ್ಟರೆ ಪ್ರಮಾಣವಾಗುತ್ತವೆ. ಇತರ ಧ್ವನಿಗಳೂ ಸತ್ಯವಾದವು ಮತ್ತು ಸೂಚಕವಾದವು. ಆದರೆ ಸ್ವಾಪ್ನ ಗಜ, ತುರಗ, ರಥ, ರಷ್ಮಿ, ಜನ ಇತ್ಯಾದಿಗಳೆಲ್ಲಾ ಸತ್ಯವಾದರೂ ಸೂಕ್ಷ್ಮ. ಸಿನಿಮಾ ಚಿತ್ರಗಳಂತೆ ಸೂಕ್ಷ್ಮವಾದವು. ಜಾಗೃತ್ಕಾಲೀನ ವಸ್ತುಗಳಂತೆ ಪರಿಮಾಣಯುಕ್ತವಲ್ಲ. ಅರಮನೆ ಆನೆ ಕಂಡೆ ಎಂದು ತಿಳಿಯುವುದು ಭ್ರಾಂತಿ. ತಾತ ಸ್ವಪ್ನದಲ್ಲಿ ಬಂದಿದ್ದರು ಎಂದು ತಿಳಿಯುವುದೂ ಭ್ರಾಂತಿ. ಆನೆ, ತಾತ ಮುಂತಾದ ಯಾರೂ ಇನ್ನೊಬ್ಬರ ಸ್ವಪ್ನಕ್ಕೆ ಬರಲಾರರು. ಅವರನ್ನು ನೋಡಿದ ಅಥವಾ ಕೇಳಿದ ಸಂಸ್ಕಾರದಿಂದ ಮಾನಸ ಚಿತ್ರಗಳಾಗಿ ಸ್ವಪ್ನ ಆಗುತ್ತೆ. ಹೀಗೆ ಹೇಳಿ " ನನಗೆ ವಿಪ್ರನ ಜನ್ಮಾಂತರ ಸಂಸ್ಕಾರ ಗೊತ್ತು. ಅವುಗಳನ್ನು ಯೋಗ್ಯರೀತಿಯಲ್ಲಿ ಉದ್ಬೋಧನೆ ಮಾಡಿ ತತ್ವ ಬೋಧಿಸುತ್ತೇನೆ. ಇದನ್ನು ತಿಳಿದು ವ್ಯಾಖ್ಯಾನ ಮಾಡುವ ಲಕ್ಷ್ಮೀಪತಿ ಕೀರ್ತಿಗಳಿಸುತ್ತಾನೆ. ಹೆಂಗಸರೂ ಈ ಕೃತಿ ಬರೆದು ಅಥವಾ ಬರೆಯಿಸಿ ಗಂಡಸರಿಗೆ ಕೊಡಬಹುದು. ವೃಂದಾವನದ ಸುತ್ತಲೂ ಮಾರ್ಜನ ಮಾಡಿ ಅಲಂಕಾರ ಮಾಡಬಹುದು. ಆರ್ತಿ ಮಾಡಿಕೊಡೋಣ, ಚಿತ್ರ ಬರೆಯೋಣ, ನಾಮ ಸಂಕೀರ್ತನೆ ಹಾಡೋಣ ಮುಂತಾದ ನಿರುಪಾಧಿಕ ಸೇವೆಗಳನ್ನು ಮಾಡಬಹುದು. ' ನನ್ನ ಭಕ್ತರು ಮೂರು ಜನ. ನಾಗಶಯನ, ಹನುಮಂತ, ವಿಠ್ಠಲ. ವಿಪ್ರನೇ ! ಸ್ವಾದಿಯಲ್ಲಿ ಶತ್ರು ಬಂದಿದ್ದಾನೆ. ನೀನು ಬೇರೆ ಕಡೆಗೆ ಪ್ರಯಾಣ ಮಾಡು. ನಾನು ಸರ್ಪಭೂಷಣನಾಗಿ, ಆ ಅಭಿಚಾರಿಕ ಪಾಪಿಯನ್ನು ನಿಗ್ರಹಿಸುತ್ತೇನೆ ' ಎಂದಿದ್ದಾರೆ. ಆಖ್ಯಾನ ವ್ಯಾಸ, ಸೀತಾಪತಿ, ಶೇಷರಿಗೆ ಇನ್ನೂ ಕಳಿಸಿಲ್ಲ. ಅವರು ಶ್ರವಣಮಾಡಿ ಸಂತೋಷ ಹೊಂದುವವರಿಗೂ ವಿಪ್ರನ ನೈವೇದ್ಯ ನನಗೆ ಬೇಡ ಎಂದೂ ಹೇಳಿದ್ದಾರೆ. ಅನಂತರ ರಾಮನಿಗೆ ನಮಸ್ಕರಿಸಿ ಒಗಟು ಶ್ಲೋಕ ಹೇಳಿದ್ದಾರೆ. ಆ ಮೂರು ಪದ್ಯವನ್ನು ಶೇಷ ತನ್ನ ರಾಜನಿಗೆ ಹೇಳಿ, ಆ ರಾಜನಿಗೆ ರಾಜ್ಯ ಶಾಂತಸ್ಥಿತಿಗೆ ಬಂದಮೇಲೆ, ಅವನನ್ನು ಸೋದೆಗೆ ಕರೆದುತಂದು ಸೇವೆ ಮಾಡಿಸಬೇಕೆಂದು ಭಾವ. (ಅರಸನೇ ! ನಿನ್ನ ಪಾಳುಮಗಾರರು ವಿರೋಧಿಗಳು, ನಿರಶನ ವ್ರತದ ಗುರುವನ್ನು ಆಶ್ರಯಿಸು. ಸಾಮಂತರಲ್ಲಿ ತುಂಬ ದುರ್ಜನನೊಬ್ಬನನ್ನು ಶಿಕ್ಷಿಸು. ಇತರರು ಓಡಿಹೋದ ಮೇಲೆ ಸೋದೆಗೆ ಬಂದು ಸೇವೆ ಮಾಡಿಸು. ದರಿದ್ರ ಸ್ಥಿತಿಗೆ ನಿನ್ನ ಶತ್ರುಗಳು ಬಂದು ನಿನಗೆ ಬಾಧಕ ಮಾಡದಂತೆ ಅನುಗ್ರಹಿಸುತ್ತೇನೆ. ನಿನ್ನ ರಾಜ್ಯದಲ್ಲಿ ಶಾಂತಿ ಉಂಟಾಗುತ್ತೆ). ಶೇಷನಿಗೆ ಕೃತಿ ಖ್ಯಾಪನೆಗೆ ಅಪ್ಪಣೆ ಕೊಟ್ಟಿದ್ದಾರೆ. ಪಾರಾಯಣ ಮಾಡದ ಮಠೀಯರಿಗೆ ದಂಡವನ್ನಾದರೂ ಮಾಡಲಿ. ಪಠನ ಮಾಡದವರು ನನ್ನ ದ್ರೋಹಿಗಳು ಎಂದಿದ್ದಾರೆ. ' ವಿಪ್ರ ! ಸೀತಾಪತಿ ಬಳಿಗೆ ನೀನಾದರೂ ಹೋಗಿ ಕೃತಿಯನ್ನು ಬೋಧಿಸು. ವ್ಯಾಸ, ಶೇಷರೂ ತಿಳಿಯಲಿ. ಶೇಷಾದ್ರಿಯೂ ಪಾರಾಯಣ ಮಾಡಲಿ " ಎಂದು ಜ್ಞಾಪಿಸಿ ಸೀತಾಪತಿಗೆ ಸೂಕ್ಷ್ಮ ಹಿತೋಕ್ತಿ ಹೇಳಿದ್ದಾರೆ. " ಸೀತಾಪತಿ ! ವಿಪ್ರನನ್ನು ಬಿಟ್ಟುಹೋಗಬೇಡ. ಅಲ್ಪವಿಷಯ ಮನಸ್ಸಿಗೆ ಹಚ್ಚಿಕೊಂಡು ಕೊರಗಬೇಡ. ಮಠ ಸರಿಯಾಗಿ ನೋಡಿಕೋ. ಆಖ್ಯಾನ ಪಾರಾಯಣ ಮಾಡದವರಿಗೆ

ಅನ್ನ ಹಾಕಬೇಡ. ಏನೂ ಸಂಬಳವಿಲ್ಲದೆ ಬ್ರಾಹ್ಮಣ ಉಪದೇಶ ಮಾಡಿದರೂ ಅವನಲ್ಲಿ ಅವಿಶ್ವಾಸ ಮಾಡಿದರೆ ನನ್ನ ದ್ರೋಹಿಗಳಾಗುತ್ತಾರೆ." "ವಿಪ್ರನೇ, ಹಿರಿಯಣ್ಣ ಸೀತಾಪತಿಯನ್ನು ಉದಾಸೀನ ಮಾಡಬೇಡ."

"ಹೇ ವಿಪ್ರ ಪರಮಗುರುವೇ! ವಿಠಲನನ್ನು ಕ್ಷಮಿಸಿ ಆಧಿಪತ್ಯದ ಬೀಗದ ಕೈಯನ್ನು ಅವನಿಗೆ ಕೊಡು. ಅವನು ದುರುಪಯೋಗ ಮಾಡಿಕೊಳ್ಳದಂತೆ ನೋಡಿಕೊಳ್ಳುತ್ತೇನೆ. ಆತ ನಿನಗೆ ಅಪರಾಧ ಮಾಡಿದ್ದಕ್ಕೆ ಈಗ ಪಶ್ಚಾತ್ತಾಪ ಹೊಂದಿದ್ದಾನೆ." "ಹೇ ದುಷ್ಟ ಜನರೇ! ನನ್ನ ವಾಕ್ಯಗಳು ಪ್ರಮಾಣ ಸುಸಿದ್ಧವಾದವು. ಅಪ್ರಾಮಾಣ್ಯ ಕಾರಣಗಳೊಂದೂ ಇಲ್ಲ. ಸರ್ವವೂ ಉಪಾದೇಯ. ಆವಿಷ್ಟನಾಗಿ ವಿಪ್ರನ ಬಾಯಿಂದ ಹೇಳಿಸಿ ಬರೆಯಿಸಿದ್ದೇನೆ. ನಿರ್ಮೂಲ ಶಂಕೆ ಅಥವಾ ಉದಾಸೀನತೆ ಮಾಡುವವರು ಅಶುಭವನ್ನು ಹೊಂದಿಯೇ ಹೊಂದುತ್ತಾರೆ. ನನ್ನ ತಪಃಫಲವನ್ನು ನೋಡಿ. ನಂಬಿ ಪಠಿಸುವವರಿಗೆ ಶುಭವು ಆಗಿಯೇ ಆಗುತ್ತೆ. ಆಖ್ಯಾನಕ್ಕೆ ಅಧ್ಯಾತ್ಮಾರ್ಥವಿದೆ, ಈಶ್ವರಪರವಾದ ಅರ್ಥವಿದೆ. ಇದಕ್ಕೂ ಕಲಶವಿಟ್ಟಂತೆ ಯುಕ್ತಿಮಲ್ಲಿಕೆ ಇದೆ."

"ಹೇ ಬ್ರಾಹ್ಮಣ! ಅಪ್ಪಣ್ಣ ಕೃಷ್ಣಭಟ್ಟನನ್ನು ದೂರಮಾಡು. ಅವನ ಬಲೆಗೆ ಬೀಳಬೇಡ. ವಿಠಲನಿಗೇ ಅವನು ದ್ರೋಹ ಮಾಡುತ್ತಾನೆ. ಮುಂದೆ ಅವನು ನನ್ನ ಭಕ್ತನಾಗಿ ಆಖ್ಯಾನ ಪಾರಾಯಣ ರತನಾದರೆ ಸುಖಿಯಾಗಲಿ. ಈಗ ಅವನ ಸಹವಾಸ ಬೇಡ ಈಗ ನೀನು ಸ್ವಲ್ಪ ಕಷ್ಟ ಸಹಿಸು. ತಿನ್ನಲಿಕ್ಕೆ ಅನ್ನ ಸಾಲದು. ಹೊದೆಯುವ ವಸ್ತ್ರ ಕೂಡ ನಿನಗೆ ಕೊಟ್ಟಿಲ್ಲ. ಶ್ರೀಶ ಪ್ರಸಾದದಿಂದ ಎಲ್ಲಾ ಒದಗುತ್ತೆ ನೋಡು. ಕಂಬ ಹಿಡಿದು ನಿಲ್ಲಿಸಿದ್ದೇನೆ. ಗುರುಗಳು ಕೆಳಗಾದರಲ್ಲಾ ಎನ್ನಬೇಡ. ಎಲ್ಲಾ ದೇವತೆಗಳೂ ಹೀಗೆ." "ವೇದನಿಧಿ! ನಿನ್ನ ಅದೃಷ್ಟೋಲ್ಲೇಖ ಹನ್ನೊಂದನೆಯ ಅಧ್ಯಾಯದ ಉತ್ತರ ಭಾಗದಲ್ಲಿ ನೋಡು. ಅಗ್ನಿಹೋತ್ರಿಗಳ ಕುಲದಲ್ಲಿ ಉದ್ಭವ ಕಾಣುತ್ತೆ. ನಿನ್ನ ವೃದ್ಧಿತಾರೆ ಗಗನ ಗುರಿಯನ್ನು ನಿರ್ವಿಘ್ನವಾಗಿ ಮುಟ್ಟುತ್ತೆ. ವೇದವೇದ್ಯರ ವಂಶಾವಳಿಯು ಚಂದ್ರನಂತೆ ಉದಯ ಹೊಂದುತ್ತೆ. ''ಮತ್ಪಟ್ಟ ದಿವ್ಯಸರಸೀ'' ಎಂದರೆ ನನ್ನ ಮಠವೆಂಬ ಸರೋವರದ ಕಮಲ ಎಂದು ಸೂಚಿಸಿದ್ದಾರೆ. ಈಗಲಂತೂ ರಥೋತ್ಸವದ ವಿಘ್ನಗಳನ್ನೂ ತಳ್ಳಿ ಬಿಟ್ಟಿದ್ದೇನಷ್ಟೇ! ಮುಂದೂ ನಿನಗೆ ನಿರ್ವಿಘ್ನ ಅಭ್ಯುದಯ ಕಾದಿದೆ. ನಿನ್ನನ್ನೂ ವೇದ ವೇದ್ಯರನ್ನೂ ನೋಡಿದರೆ ನನಗೆ ಪ್ರಮೋದ;" ಎಂದು ಆತನ ಭವಿಷ್ಯ ಹೇಳಿ, ಧೈರ್ಯತುಂಬಿ ಮಂಗಳ ಮಾಡಿದ್ದಾರೆ ಶ್ರೀಕೃಷ್ಣಾರ್ಪಣಮಸ್ತು.

ಹನ್ನೆರಡನೆಯ ಅಧ್ಯಾಯ 111 ಶ್ಲೋಕ 17 ಪ್ರಕರಣ. ಇನ್ನು ಕೊನೆಯವರೆಗೂ ನಿದರ್ಶನ ಪರ್ವ. ಮೊದಲನೇ ನಾಂದಿ ಅಧ್ಯಾಯ ಸೇರಿ 12 ಅಧ್ಯಾಯ ನಿದರ್ಶನ ಪರ್ವ, ಆಖ್ಯಾನ ಪ್ರಾಧಾನ್ಯಕ್ಕೆ ನಿದರ್ಶನಗಳಿವೆ, ವಾದಿರಾಜರನ್ನು ಸೇವಿಸಿ ಉದ್ಧೃತರಾದವರ ನಿದರ್ಶನಗಳಿವೆ. ಕಥೆ ಕಮ್ಮಿ. ಧರ್ಮಬೋಧೆ ಹೆಚ್ಚು. ಅಧ್ಯಾತ್ಮಾರ್ಥ ಗಹನವಾಗಿ ತುಂಬಿದೆ. ಅಧಿಕಾರಿಗಳಿಗೆಲ್ಲಾ ಸಂಬಂಧ ಪಟ್ಟ ವಿಷಯಗಳಿವೆ. ಸ್ವಪ್ನಾದಿ ಮೂಲಕ ತನ್ನ ಸಂಬಂಧಿ ಶ್ಲೋಕಗಳನ್ನು ತಿಳಿದುಕೊಂಡು ಅಧಿಕಾರಿ ವೃಂದಾವನ ಸೇವೆ ಮಾಡಬೇಕು.

ಮೊದಲು ಬ್ರಾಹ್ಮಣನಿಗೆ ಹೇಳುತ್ತಾರೆ. "ನಿನಗೆ ಪಲ್ಲಕ್ಕಿ ಉತ್ಸವ ಮಾಡಿಸುತ್ತೇನೆ. ಅದು ಸತ್ಯವಾದ ಮೇಲೆ, ಇತರ ವಿಷಯಗಳೂ ಹಾಗೆಯೇ ಎಂದು ತಿಳಿದು 'ಅನ್ನಕ್ಕೇನು ಗತಿ? ಪರ್ಯಾಯಕ್ಕೇನು ಗತಿ?' ಎಂಬ ಚಿಂತೆ ಬಿಟ್ಟು ಸುಖವಾಗಿರು. ನಿನ್ನ ಹೆಸರನ್ನು 'ವೃಂದಾವನಾಚಾರ್ಯ' ಎಂದು ಕರೆಯುವೆ, ನಾವು ನಿರ್ದೇಶ ಮಾಡಿ ನಿನ್ನನ್ನು ಕರೆಯುವವನು ನನ್ನ ದ್ರೋಹಿ. ಅವನು ಹೆಣಕ್ಕೆ ಸಮಾನ."

"ಲಕ್ಷ್ಮೀಪತೆ! ನೀನು ಆಖ್ಯಾನ ಪ್ರಚಾರ ಮಾಡು. ಇಚ್ಛಾ ಫಲವನ್ನೂ ಹೊಂದು. ಯುಕ್ತಿಮಲ್ಲಿಕೆಯೂ ನಿನಗೆ ಬುದ್ಧಿವಶವಾಗಿದೆ. ಅದರ ಶ್ರವಣದಿಂದ 'ನಿಃಸಂಗೋಜಾಯತೇ' ಅಧಿಕಾರಿ ನಿರಭಿಮಾನಿ ವಿರಕ್ತನಾಗುತ್ತಾನೆ. ಲಕ್ಷ್ಮೀಪತಿ, ವಿಪ್ರನನ್ನು ಹೊಂದಿಕೊಂಡು ದೇವರನ್ನು ಸೇವಿಸು. ವಿಪ್ರನಲ್ಲಿ ಉಪೇಕ್ಷೆ ಅಪಮೃತ್ಯು ಉಂಟುಮಾಡುತ್ತೆ. ವಿಪ್ರಾಂತರ್ಯಾಮಿಯಾದ ನನ್ನಿಂದ ಆಖ್ಯಾನ ಮಾಡಲ್ಪಟ್ಟಿದೆ. ಆದ್ದರಿಂದ ಅವನನ್ನು ಹಿಂಸೆ ಮಾಡಿದವನು ನನ್ನ ಹಿಂಸೆ ಮಾಡಿದಂತೆ ಆಯಿತು. ಅವನಿಗೆ ಅನ್ನ ನೀಡಿದರೆ ನನಗೆ ಭಿಕ್ಷೆ ಮಾಡಿಸಿದಂತೆ ಆಗುತ್ತೆ. ಅವನ ಋಣ ತೀರಿಸಿದವನು ದೀರ್ಘಾಯುವಾಗುತ್ತಾನೆ. ಗ್ರಂಥೋಕ್ತ ಫಲಗಳು ರವಿಗೋಚರವಾದ ಮೇಲೆ ಸಂಶಯಕ್ಕೆ ಕಾರಣವೆಲ್ಲಿ?" "ಸೀತಾಪತಿ! ಹರಿಯಲ್ಲಿ ಅಪಾರ ಭಕ್ತಿಮಾಡು, ಗುರುವಿನಲ್ಲಿ ಭಕ್ತಿ ಭಾರಮಾಡು. ಅಪಾರ ಸಂಸಾರ ದಾಟಲು ಯತ್ನಿಸು," "ವಿಪ್ರನೇ! ಸ್ವಪ್ನ ಸತ್ಯತ್ವ ವಿಷಯದಲ್ಲಿ ವಾದಮಾಡಿ ಪರಪಕ್ಷವನ್ನು ಸೋಲಿಸಬೇಕಾದರೆ ಈ ನನ್ನ ಗ್ರಂಥವನ್ನು ತತ್ವವಾದಿಗಳು ಅಂಗೀಕರಿಸಲಿ." "ಶೇಷ! ವಿಪ್ರನಿಗೆ ಸತ್ರಕಾಲ. ನೋಡಿ ಅನ್ನ ದಾನಮಾಡು, ಮಾಡಿಸು, ಅವನು ಸತ್ಪಾತ್ರ. ಸ್ವಾಮಿ, ಸಖಾ, ಬಂಧು, ಸುಹೃತ್ ಎಲ್ಲವೂ ಗುರುರಾಜರೇ ಎಂದು ನಂಬಿರುವ ಅವನಿಗಿಂತ ಬೇರೆ ಸತ್ಪಾತ್ರ ಯಾರಿದ್ದಾರೆ ಹೇಳು. ಅವನು ಶರಣಾಗತ, ನಾನು ಬಿಡುವುದಿಲ್ಲ. ನೀನು ನನ್ನ ಸೇವಕನಾದ್ದರಿಂದ ಪೂಜಿಸು, ಒಳ್ಳೆವಸ್ತ್ರಕೊಡು," "ವಿಪ್ರನೇ, ಕಾರ್ಪಣ್ಯಬೇಡ, ಯಥೇಷ್ಟಕೊಡು, ಈಶ್ವರ ಕೊಟ್ಟಿದ್ದು ಸಾಕುಎನ್ನು, ಕೊನೆಯಲ್ಲಿ ಸುತ್ರಾಮಲೋಕ ನಿನಗೆ ಕಾದಿದೆ, ವೇದವೇದ್ಯರ ಭಜನೆಯಲ್ಲಿರು." "ಹೇ ಸೀತಾಪತಿ! ವಿಪ್ರನನ್ನು ಬಿಡುವುದೇಕೆ? ಬಿಟ್ಟು ಹುಚ್ಚರ ಸೇವೆ ಮಾಡಬೇಡ. ದೇಹವನ್ನು ಬೀಡಬೇಡ," "ಲಕ್ಷ್ಮೀಪತಿ! ಪ್ರಕೃತಿ ಪ್ರತ್ಯಯಾದಿ ದೇವತೆಗಳು ನನ್ನ ಆಳುಗಳು, ಆದ್ದರಿಂದ ಆಖ್ಯಾನದಲ್ಲಿ ಶಬ್ದದೋಷಗಳಿಲ್ಲ, ಪ್ರತೀತಾರ್ಥಬಾಧಿತವಾಗಿದ್ದರೆ ಅಂತರ್ಯಾಮಿ ಪರಅರ್ಥ ಮಾಡು, ಸೀತಾಪತಿ ಸಂಶಯ ಕಳೆದು ಅವನಿಗೆ ಉತ್ಸಾಹ ಹುಟ್ಟಿಸು," 64, "ಹೇ ವಿಪ್ರ! ವಾದಿರಾಜಭಟ್ಟರಿಗೆ ನನ್ನ ಮಹಿಮೆ ಹೇಳು. ನಿನಗೆ ಲಜ್ಜೆಯಾದರೆ ಲಕ್ಷ್ಮೀಪತಿಗೆ ಹೇಳುತ್ತೇನೆ. ಲಕ್ಷ್ಮೀಪತಿ ಬೋಧಿಸಿದಾಗ ನೀನು ಸುಮ್ಮನಿರು, ನನ್ನ ತೇಜಸ್ಸಿನಿಂದ ಸರ್ವ ಲೋಕಗಳೂ ಜಿತವಾಗಿವೆ. ದೇವತೆಗಳೆಲ್ಲರೂ ನನ್ನನ್ನು ನಮಸ್ಕರಿಸುತ್ತಾರೆ. ಇಂಥ ನನ್ನನ್ನು ಧ್ಯಾನ ಮಾಡು." "ಲಕ್ಷ್ಮೀಪತಿ! ವಿಪ್ರನ ಸನ್ಮಾನದಿಂದ ಪುಣ್ಯಗಳಿಸಿ ಹಯಗ್ರೀವನನ್ನು ಧ್ಯಾನಿಸು. ಸೀತಾಪತಿಗೂ ಆಖ್ಯಾನವನ್ನು ಹೇಳು." ವಿಪ್ರನೇ; ಬರೆಯಿಸುವಾಗ ತಪ್ಪು ಮಾಡಬೇಡ. ಅಚ್ಯುತ ನನ್ನು ಧ್ಯಾನಿಸು. ನನ್ನಲ್ಲಿ ಮನಸ್ಸಿಟ್ಟು ಹೇಳಿದರೆ ತಪ್ಪಾಗುವುದಿಲ್ಲ. ಈ ವೃಂದಾವನಾಖ್ಯಾನವನ್ನು ಸದ್ವಲಂದಕ್ಕೆಲ್ಲಾ ಹೇಳಿಬಿಡು. ನಾನೇ ಹೇಳೋಣವೆಂದರೆ ಸಭಿಕರು ನನ್ನ ತೇಜಸ್ಸನ್ನು ತಡೆಯಲಾರರು,

ವಿಪ್ರ ಪ್ರತ್ಯಕ್ಷವೇ ನಂಬಿದ ಭಕ್ತರಿಗೆ ಪ್ರಮಾಣ. ನಾನು ದೇವಲೋಕಗಳಲ್ಲಿ ಸಂಚರಿಸುತ್ತಾ ಸಕಾಲದಲ್ಲಿ ಇಳಿದು ಬಂದು ವಿಪ್ರ ಸ್ವಪ್ನದಲ್ಲಿ 3, 5, 7, ಶ್ಲೋಕ ಹಾಡಿ ಹೇಳಿ ಹೊರಟು ಹೋಗುತ್ತೇನೆ. ಆತನು ಧಾರಣ ಮಾಡುತ್ತಾನೆ.'' "ಲಕ್ಷ್ಮೀಪತಿ! ಹೀಗೆ ವಿಪ್ರನನ್ನು ಪುಣ್ಯದಿಂದ ತುಂಬುತ್ತೇನೆ. ನನ್ನ ಮಹಿಮೆಯನ್ನು ವಿಪರೀತ ತಿಳಿದರೆ ನರಕವಾಗುತ್ತೆ. ಯಥಾರ್ಥವಾಗಿ ತಿಳಿದರೆ ಮೋಕ್ಷಕ್ಕೇ ಸಾಧನೆ. ನನ್ನ ಅನುಗ್ರಹದಿಂದ ನೀನು ಕೃಷ್ಣ ಭಕ್ತಿಮಾಡು. ನಿನ್ನ ಪಾಪ ಬಗ್ಗಿ ಹೋಯಿತು. ನೀನು ಕವಚಧಾರಿ ಆಗಿಬಿಟ್ಟೆ. ಪಾಪ ನಿನ್ನ ಒಳಕ್ಕೆ ಹೋಗಲಾರದು." '' ವಿಪ್ರನೇ, ನನ್ನಲ್ಲಿ ಭಕ್ತಿಮಾಡಿ ನೀನು ವಿಸ್ತಾರ ಕೀರ್ತಿ ಸಂಪಾದಿಸುತ್ತಿ, ನಿನ್ನ ರಾಜಕಾರ್ಯ ಸಾಕು, ನನ್ನ ಧ್ಯಾನಮಾಡು. ಈಶ್ವರನ ಸಂಕಲ್ಪವಿದ್ದಂತೆ ಆರಾಜ ಕಾರ್ಯ ನಡೆಯುತ್ತೆ. ನೀನು ಹೆಚ್ಚಾಗಿ ಕೈ ಹಾಕಬೇಡ, ರಾಜರು ಪ್ರಾಯಿಕವಾಗಿ ಪಾಪಿಗಳೇ, ನಿನ್ನಲ್ಲೂ, ನನ್ನಲ್ಲೂ ಶರಣಾಗತರಲ್ಲ, ನೀನು ಭಕ್ತಿಯಿಂದ ಕೇಳು, ನನ್ನ ಅಂತರ್ಯಾಮಿ ವಿಷ್ಣು ಗುಣಗಳ ವೈಭವವನ್ನು ವರ್ಣಿಸುತ್ತೇನೆ. ಆದರೂ ಹೆಚ್ಚು ಸೂಕ್ಷ್ಮಗಳನ್ನು ಹೇಳುವುದಿಲ್ಲ. ಇದು ಕಲಿಗಾಲ, ಜನರು ಅವಿಶ್ವಾಸಿಗಳು. ನೀನು ಪ್ರಚಾರ ಮಾಡಿದರೆ ಕೇಳುವ ಯೋಗ್ಯತೆ ಅವರಿಗಿಲ್ಲ. ಎದುರಿಗಿದ್ದುದನ್ನು ಇಲ್ಲವೆನ್ನುತ್ತಾರೆ. ಶಾಪಕೊಟ್ಟು ಸುಟ್ಟುಬಿಡಬೇಕೆನಿಸುತ್ತೆ. ಆದ್ದರಿಂದ ನೀಚ ಸೇವಾರತರಾದ ಜನರಿಗೋಸ್ಕರ ಹೇಳಬಾರದುದನ್ನು ಹೇಳುವುದೇ ಇಲ್ಲ. ಸೂಕ್ಷ್ಮವೃತ್ತಾಂತ ಬಿಟ್ಟು ಬಿಟ್ಟು "ವಕ್ತವ್ಯ ಮೇವ ವಕ್ಷ್ಯಾಮಿ" ಅಧಿಕಾರಿಗಳ ಹಿತಕ್ಕಾಗಿ ಯೋಗ್ಯವಾದಷ್ಟು ಮಾತ್ರ ಹೇಳುತ್ತೇನೆ." ಹೀಗೆ ವಿಪ್ರ, ಸೀತಾಪತಿ, ಲಕ್ಷ್ಮೀಪತಿ, ಶೇಷರಿಗೆ (ಮುಂದೆ ಆಗುವ) ಹಿತೋಕ್ತಿ ನಿದರ್ಶನಗಳಿವೆ. ಶ್ರೀಕೃಷ್ಣಾರ್ಪಣಮಸ್ತು.

ತ್ರಯೋದಶಾಧ್ಯಾಯ ದಲ್ಲಿ 101 ಶ್ಲೋಕ ಹನ್ನೊಂದು ಪ್ರಕರಣ ಇವೆ. ಈ ಅಧ್ಯಾಯ ದಲ್ಲಿ ವಾದಿರಾಜಭಟ್ಟರನ್ನು ಹಿತೋಕ್ತಿಯಿಂದ ವಶಮಾಡಿಕೊಂಡು ವಿಪ್ರನ ಪೋಷಕ ಜ್ಯೇಷ್ಠರನ್ನಾಗಿ ಮಾಡಿದ್ದಾರೆಂದಿದೆ. ಅನೇಕ ಉತ್ತಮಾಧಿಕಾರಿಗಳಿಗೆ ಯೋಗ್ಯ ಸಾಧನೆ ತಿಳಿಸಿರುವುದರಿಂದ ಪಾತ್ರಸಾಮ್ಯ ನೋಡಿಕೊಂಡು ಅಧ್ಯಾತ್ಮಾರ್ಥ ರೀತಿಯಿಂದ ವಾಚಕರೂ ತಮ್ಮ ತಮ್ಮ ಸಾಧನೆ ತಿಳಿಯುತ್ತಾರೆ. ಈ ಕಾರಣದಿಂದ ಈ ಆಖ್ಯಾನದ ನವ್ಯತೆ ಮಹತ್ವಗಳು ಆರಿಹೋಗುವ ಹಾಗೆ ಇಲ್ಲವೇ ಇಲ್ಲ. ಪ್ರಕೃತ ವಾದಿರಾಜಭಟ್ಟರಿಗೆ ಮೂರು ವಿಷಯ ಬೋಧಿಸುತ್ತಾರೆ. "ಆಖ್ಯಾನವನ್ನು ಪಠಿಸು; ವೃದ್ಧ (ವಿಪ್ರ) ನನ್ನು ಭಜಿಸು; ಕುಮತಿ ಸಂಗಬಿಟ್ಟು ಸುಮತಿ ಸಂಗಹಿಡಿ". ಹೀಗೆ ಮಾಡಿದರೆ ದೀರ್ಘ ಆಯುಸ್ಸು. ಇಲ್ಲದಿದ್ದರೆ ನರಕ, ನೀವು ಹೇಳಿದ ಮಾತ್ರಕ್ಕೆ ನರಕವೇ ಎನ್ನುವ ಹಾಗಿಲ್ಲ. ಶ್ಲೋಕ 16. (ಅರ್ಥ :– ಪರಲೋಕ ಸಾಧನೆ ಬೋಧಿಸುವ ಅಧಿಕಾರಉಳ್ಳ ನನಗೆ ವಿಪ್ರನನ್ನು ಪ್ರವಚನ ಕಾರ್ಯಕ್ಕೆ ಉಪಯೋಗಿಸಿಕೊಂಡಾಗಲೇ ಪ್ರಭುತ್ವವೇ ಹರಿವಾಯುಗಳಿಂದ ಕೊಡಲ್ಪಟ್ಟಿದೆ. ಆದ್ದರಿಂದ ನನ್ನ ಆಜ್ಞೆಯಿಂದ ಸಾಧನೆ ನಿರ್ಣಯ. ಆ ನನ್ನ ಶಕ್ತಿ ವಿಪ್ರನಿಗೂ ಇದೆ) ಎಂದಿದ್ದಾರೆ. ಆದ್ದರಿಂದ ಅವರನ್ನು ಬಿಟ್ಟು ಆಖ್ಯಾನ ಬಿಟ್ಟು ಸಾಧನೆ ಸಾಧ್ಯವಿಲ್ಲ. ವಾದಿರಾಜಭಟ್ಟರಿಗೆ ಭೇದ ಜ್ಞಾನ ಸಂಪಾದಿಸು ಎಂದಿದ್ದಾರೆ, '' ನಾನು ಜ್ಞಾನಿ ಪ್ರಿಯ '' ಎಂದು ಎರಡಾವರ್ತಿ ಹೇಳಿದ್ದಾರೆ. '' ಈ ಉಪದೇಶ ಧಾರಣೆ

ಯಿಂದ ಶ್ವಾಸ ಎಳೆತವಿದ್ದರೂ ಬದುಕಿ ಅಭೀಷ್ಟ ಹೊಂದುತ್ತಾನೆ. ಆದ್ದರಿಂದ ಆಖ್ಯಾನ ಹೇಳಿಸಿಕೋ ಜ್ಞಾನಿಯಾಗು, ಭಕ್ತನಾಗು '' ಎಂದಿದ್ದಾರೆ. "ವಿಪ್ರನೇ ಸಂಸಾರ ಚಿಂತೆ ಮನಸ್ಸಿಗೆ ಹಚ್ಚಿಕೊಳ್ಳಬೇಡ. ಆಖ್ಯಾನ ಜಪಿಸಿದರೆ ಅಂಭ್ರಣೀದೇವಿ ನಿನ್ನನ್ನು ಪೋಷಿಸುತ್ತಾಳೆ. ಅಷ್ಟಾಧ್ಯಾಯ ಪಾರಾಯಣದಿಂದ ಅಸಾಧ್ಯವಾದ ಅಭೀಷ್ಟವಿಲ್ಲ." "ಎಲೈ ವಿಷ್ಣು ಭಕ್ತರಾದ ಪಂಡಿತ ಸೀತಾಪತ್ಯಾದಿಗಳಿರಾ ! ಈ ನನ್ನ ಕೃತಿಯು ತತ್ವವಾದವೆಂಬ ಮಧ್ವಶಾಸ್ತ್ರಕ್ಕೇ ಸೇರಿದ್ದೆಂದು ಅಂಗೀಕರಿಸಿ,'' 32. '' ವಿಪ್ರನೇ ಈ ದಿವ್ಯ ಆಖ್ಯಾನಕ್ಕೆ ನೀನೆ ಪ್ರವಚನ ಕರ್ತೃ. ನನ್ನ ಅಪೂರ್ವಗುಣ ಪ್ರವಕ್ತೃತ್ವ, ನನ್ನ ಕೃಪಾ ಪಾತ್ರತ್ವವೆಂಬ ಎರಡು ನಿಮಿತ್ತಗಳಿಂದ ನೀನೇ ಆಚಾರ್ಯನು, ಶೇಷನಿಗೂ ಹೇಳು, ದಿವ್ಯ ಆಖ್ಯಾನ ಉಪೇಕ್ಷೆ ಮಾಡಿದರೆ ಇಂದ್ರ ಲೋಕಕ್ಕೆ ಹೋಗಿಬಿಡುತ್ತೆ. ಸರಿಯಾಗಿ ಬರೆಯಿಸು ''. ಹೇ ಲಕ್ಷ್ಮಿಪತೇ ! ಈ ಬ್ರಾಹ್ಮಣ ಅನ್ನಕ್ಕೇನು ಗತಿ ಎಂದು ಚಿಂತಿಸುತ್ತಾನೆ. ಲೋಕ ವಾರ್ತಾ ಶ್ರವಣ ಮಾಡುತ್ತಾನೆ, ಆದ್ದರಿಂದ ಮಧ್ಯೇ ಮಧ್ಯೇ ತಪ್ಪು ಬರೆಯಿಸುತ್ತಾನೆ, ಆದ್ದರಿಂದ ನಾನು ಸೂಕ್ಷ್ಮವೃತ್ತಾಂತ ಬರೆಸಿಲ್ಲ. ಇದನ್ನೂ ನಾನಾ ರಾಗಗಳಿಂದ ಬರೆಯಿಸಿದ್ದೇನೆ. ಅನೇಕ ಶಾಸ್ತ್ರ ಉಪದೇಶ ಮಾಡಿಲ್ಲ. ಗ್ರಂಥಗೌರವ ಆಗಬಾರದು. ದೇವತೆಗಳು, ಪರೋಕ್ಷಪ್ರಿಯರು. ಸ್ವರಾದಿದೇವ ಭಾಷಾ ಪದಗಳು ಬಹ್ವರ್ಥಕವು. ಇವನ್ನೆಲ್ಲಾ ವಿಚಾರ ಮಾಡಿ ವೈಷ್ಣವ ಸಾಧನೆಗೆ ಹೇಳಿದಷ್ಟು ಸಾಕಾಗಿದೆ ಎಂದೂ ತಿಳಿದು, ಹೆಚ್ಚು ಹೇಳಿ ನೀಚರ ಸೇವೆ ಮಾಡುವ ಅಯೋಗ್ಯರಿಗೆ ವಜ್ರದಂಥ ಮಹಾ ಪ್ರಮೇಯಗಳನ್ನು ಏತಕ್ಕೆ ಚೆಲ್ಲಬೇಕು ಎಂದು ವಿಮರ್ಶೆಯಿಂದ ದೇವರು ತಾನಾಗಿಯೇ ಪ್ರೇರಿಸಿ ಮಾಡಿಸಿದ್ದು ಸಾಕೆಂದು ನಿಲ್ಲಿಸಿದ್ದೇನೆ. ಈ ಗ್ರಂಥ ರತ್ನವನ್ನು ಉಪೇಕ್ಷಿಸಿದವನಿಗೆ ದಾನವರಿಗಾಗುವ ಗತಿ ಆಗುತ್ತೆ. '' " ಲಕ್ಷ್ಮೀಪತೇ ! ಸೀತಾಪತ್ಯಾದಿಗಳಿಗೆ ಹೋಗಿ ಹೇಳಿಬಿಡು, ಅವರು ಆದರ ಪೂರ್ಣರು, ನನ್ನ ಆಜ್ಞಾ ನೆರವೇರಿಸಿದರೆ ನಿನ್ನ ರಕ್ಷಣೆ ನಾನು ನೋಡಿ ಕೊಳ್ಳುತ್ತೇನೆ. '' " ಹೇ ದಾಸರುಗಳೇ ನೀವು ಭಕ್ತರು. ಈ ಶ್ಲೋಕಗಳಿಂದ ಕುಣಿಯಿರಿ, ಇದೇ ನೀವು ಮಾಡುವ ಪ್ರೀತಿ ಸಾಧನ ಸೇವೆ. ಲಕ್ಷ್ಮೀ ನಿಮ್ಮ ಮನೆಗೆ ಒಲಿದು ಬಂದು ಇರಲಿ, ನಿಮ್ಮ ಭಜನೆ ಕೇಳಿದರೆ ಜನರಿಗೆ ವೈರಾಗ್ಯ ಭಕ್ತಿ ಬರುತ್ತೆ. " "ವಿಪ್ರನೇ ! ಘೋರಕಾಲ, ನೀನೇ ಅನ್ನಯತ್ನಮಾಡು, ಯೋಗ್ಯರು ನಿನ್ನನ್ನು ಸತ್ಕರಿಸುವುದಿಲ್ಲ. ನೀನು ನನ್ನ ಧ್ಯಾನದಲ್ಲಿ ಮಗ್ನನಾಗಿರು. (ಅದೇ ಯತ್ನ). ನಾನು ನಿನ್ನ ಸಂತತ ಪಾಲಕ." "ಹೇ ವಾದಿರಾಜಭಟ್ಟ ! ವಿಪ್ರನಿಗೆ ಆಶ್ರಯ ನೀಡು. ಲೋಭ ಮಾಡಬೇಡ, ಇತರರಿಂದ ಕೊಡಿಸಿದರೆ ಸಾಲದು, ನೀನೇ ಕೊಡು, ಆಯುರ್ವೃದ್ಧಿ ಆಗುತ್ತೆ. ಸಾತ್ವಿಕ ಬುದ್ಧಿಹೊಂದಿ ಕೃತಿಯನ್ನು ಪಠಿಸು. ಜನರಿಗೆ ಮಾರ್ಗದರ್ಶಿ ಆಗು. ನನಗೆ ತುಂಬ ಪ್ರಿಯವಾಗುತ್ತೆ. ವಿಪ್ರನಲ್ಲಿದ್ದು ನಾನೇ ಭೋಜನ ಮಾಡುತ್ತೇನೆ. " "ಹೇ ಸೀತಾಪತಿ! ವಿಪ್ರಕರ್ಣ ಮಣಿಯನ್ನು ಆ ಅಂಗಡಿಯಲ್ಲಿಟ್ಟಿದ್ದಾನೆ. ಒಂದನ್ನಾದರೂ ಬಿಡಿಸಿಕೊಂಡು ಬಂದು ಬಲಗಿವಿಯಲ್ಲಿಡು. ಬರೀ ಕಿವಿಯಲ್ಲಿದ್ದರೆ ಉಪದೇಶವಿಲ್ಲ " '' ಹೇ ವಿಪ್ರ, ಬೇಗ ಧರಿಸು, ಗುರ್ವಾಜ್ಞೆಯನ್ನು ಮೀರಬೇಡ '' ಎಂದಿದ್ದಾರೆ. ಈ ಆಜ್ಞೆಗಳೆಲ್ಲಾ ಅವರುಗಳ ಅನೇಕ ಜನ್ಮಗಳ ಮಧ್ಯದಲ್ಲಿ ಯಾವುದೋ ಜನ್ಮದ ಅವಸ್ಥಾವಿಶೇಷದಲ್ಲಿ ಸಾಧನೆ ಮಾಡಿ ಸುತ್ತವೆ, ಯಾವ ಜನ್ಮಕ್ಕೂ ಅನ್ವಯಿಸದೆ ಇದ್ದರೆ ಅಂತರ್ಯಾಮಿಪರ ಅರ್ಥ ತಿಳಿಯಬೇಕು. ವಾಕ್ಯಕ್ಕೆ ಅಪ್ರಾಮಾಣ್ಯ ಇಲ್ಲ, ವೈಯರ್ಥ್ಯವಿಲ್ಲ. ಶ್ರೀಕೃಷ್ಣಾರ್ಪಣಮಸ್ತು.

ಚತುರ್ದಶಾಧ್ಯಾಯ ದಲ್ಲಿ 98 ಶ್ಲೋಕ 6 ಪ್ರಕರಣ. ಮೊದಲು ಸೀತಾಪತಿಗೆ ನಿದರ್ಶನ ಹೇಳಿದ್ದಾರೆ. " ನೀನು ಸುವರ್ಣ ಕರ್ಣಾಭರಣ ಬಿಡಿಸಿಕೊಂಡು ಬಂದು ವಿಪ್ರನ ಬಲಕಿವಿಗೆ ಇಟ್ಟದ್ದು ಆದ್ದರಿಂದ ಕೃತಿ ಉಪದೇಶಕ್ಕೆ ಅನುಕೂಲವಾಯಿತು. ಪುಣ್ಯಾತ್ಮ, ಅವನಿಗೆ ನನಗೆ ಸಹ ಸೇವೆ ಆಯಿತು" ಎಂದು ಹೇಳಿದ್ದಾರೆ. ನಂತರ ಶೇಷನಿಗೆ ಆಜ್ಞೆ ಮಾಡಿದ್ದಾರೆ. '' ವಿಪ್ರನ ದಾರಿದ್ರ್ಯವನ್ನು ನಾಶಮಾಡಿ ನನ್ನ ಭಕ್ತ ಸತ್ಕಾರದ ಪುಣ್ಯ ಹೊಂದು. ಅವನಿಗೆ ಸೇವೆ ಮಾಡಿದರೆ ನನಗೇ ಮಾಡಿದಂತೆ ಆಗುತ್ತೆ ''. ನಂತರ ವಿಠ್ಠಲನಿಗೆ ಹೇಳುತ್ತಾರೆ. '' ಕಪಟವಿಲ್ಲದೆ ವಿಪ್ರನನ್ನು ಪಾಲಿಸು. ಪೂರ್ವಕಷ್ಟ ಸ್ಮರಿಸು ''. '' ಲಕ್ಷ್ಮೀಪತೇ ! ಪೂರ್ತಿ ಆಖ್ಯಾನವನ್ನು ಸೇವಿಸು. ವಿಪ್ರ ನಿಷ್ಕಪಟಿ, ಅವನ ಸ್ತ್ರೀಮುಖ ನನ್ನನ್ನು ಆಕರ್ಷಿಸುವುದಿಲ್ಲ. ನಾನು ನಿಃಸಂಗ. ಅಧ್ಯಾಯಕ್ಕೆ ನೂರು ಶ್ಲೋಕ ಮಾಡಿ ಎಂದು ಹೇಳಿದ್ದು ಆಗಿದೆ, ನೋಡು, ನಾನು ಸತ್ಯ ಸಂಕಲ್ಪ. ಬ್ರಾಹ್ಮಣನಿಗೆ ಇಲ್ಲಿ ಸ್ವಲ್ಪ ಕಷ್ಟವಾದರೂ ಸತ್ತು ವಿಮಾನವನ್ನೇರಿ ನನ್ನ ಬಳಿಗೇ ಬರುತ್ತಾನೆ ''. " ವಿಪ್ರನೇ ! ಜನ ಈ ಕೃತಿ ವಂಚನೆ ಎಂದು ಬೈದರೂ ಸುಮ್ಮನಿರು. ಆಖ್ಯಾನ ಪಠಿಸು. ನಿನ್ನ ಪರಮಗುರು ಇದೇನೆಂದು ಕೇಳಿದರೆ, ತೋರಿಸು. ಆತ ನೋಡಿ ಸಂತೋಷದಿಂದ ಹೇಳಿದ ಹಿತೋಕ್ತಿ ಧರಿಸು, ಅವನ ಕೊಠಡಿ ಬಾಗಿಲು ಕಾಯಿ. ಅಲ್ಲೇ ಮಲಗು. ದೂರ ಹೋಗಿ ಮನಸ್ಸು ಕೆಡುವ ಸ್ಥಳಗಳಲ್ಲಿ ಮಲಗಬೇಡ. ಈ ಬುದ್ಧಿ ಚಾತುರ್ಯ ನಿನ್ನನ್ನು ಉದ್ಧರಿಸುತ್ತೆ. ಒಬ್ಬ ಕಾಮೀ ಉದರ ಪರಾಯಣ ಇದ್ದಾನೆ. ಆ ಭ್ರಷ್ಟ ನಿನ್ನಲ್ಲಿಗೆ ಬಂದು ಏನೇನೋ ಹೇಳಿ ಕೊಡುತ್ತಾನೆ, ಅವನ ಮಾತನ್ನು ನೀನು ಕೇಳಬೇಡ. ಅಪ್ಪಣ್ಣ-ಕೃಷ್ಣಭಟ್ಟನನ್ನೂ ಹಾಗೆ ದೂರ ಇರಿಸು, ಇವರು ಕೃತಿ, ವಿಪ್ರಕಲ್ಪಿತ " ಎಂದು ಕಲ್ಪಿಸುತ್ತಾರೆ, ಯಮಲೋಕದಲ್ಲಿ ನಗರಗಸದಿಂದ ಕುಯ್ಯಿಸಿ ಕೊಳ್ಳುತ್ತಾರೆ, ಅವರು ವಿಪ್ರನನ್ನು '' ವೃಂದಾವನಾಚಾರ್ಯರು ''ಎಂದು ಕರೆಯುವುದೇ ಇಲ್ಲ. ಇಂಥ ಪಾಪಿಗಳನ್ನು ನರಕಕ್ಕೆ ಎಳೆಯಿಸುತ್ತೇನೆ. ನೀನು '' ಬನ್ನಿ, ಹೋಗಿ '' ಎಂದು ಮಾತ್ರ ಭಾಷಿಸು, ಹೆಚ್ಚಿಗೆ ಬೇಡ. ನಿನಗೆ ಅಯೋಗ್ಯ ಶ್ರವಣ ಆಗದಂತೆ ರಕ್ಷಿಸುತ್ತೇನೆ. ನಿನ್ನಿಂದ ಅಯೋಗ್ಯರಿಗೆ ಉಪದೇಶ ಆಗದಂತೆ ನೋಡಿಕೊಳ್ಳುತ್ತೇನೆ ". ಹೀಗೆ ಬೋಧಿಸಿ ಮುಂದೆ ವಿಪ್ರ ಪ್ರಕರಣದಲ್ಲಿ ವಿಠ್ಠಲನ ವಿಚಾರ ಹೇಳುತ್ತಾರೆ. '' ವಿಠಲ ಎಂದರೆ ಜ್ಞಾನ ಶೂನ್ಯರನ್ನು ರಕ್ಷಿಸುವವನು ಎಂದರ್ಥ. ವಿಠಲ ಹೆಸರಿಗೆ ತಕ್ಕಂತೆ ಅಯೋಗ್ಯರನ್ನು ಪೋಷಿಸುತ್ತಾನೆ. ನಾನು ಋಜು. ನಿರ್ದೋಷ. ಎಂದು ತಿಳಿಯಬೇಕೆಂದು ತಮ್ಮ ಸ್ವಭಾವ ವರ್ಣನೆ ಹತ್ತು ಶ್ಲೋಕದಿಂದ ಮಾಡಿದ್ದಾರೆ. ನನಗೆ ದ್ವೇಷಾದಿಗಳಿಲ್ಲ. ಶಾಪ ಕೊಟ್ಟು ಪುಣ್ಯ ಹಾನಿಮಾಡಿಕೊಳ್ಳುವುದಿಲ್ಲ. ಭಕ್ತರನ್ನು ಕೈ ಬಿಡುವುದಿಲ್ಲ. ಅವರು ಹೃದಿಸ್ಥ ಹರಿಧ್ಯಾನದಿಂದ ಸುಖವಾಗಿರಲಿ ಎಂದು ಹೇಳಿ ವಿಠ್ಠಲನ ದೋಷ ವ್ಯಕ್ತ ಮಾಡುತ್ತಾರೆ. '' ನಾನು ಬೇಡಿದವರ ಇಷ್ಟಾರ್ಥ ದಾತಾ '' ಎನ್ನಿಸಿಕೊಳ್ಳಬೇಕೆಂದು ವಿಠ್ಠಲ ಕೆಟ್ಟ ಪ್ರತಿಜ್ಞೆ ಮಾಡಿದ್ದಾನೆ. ಇದರಿಂದ ದುರ್ಜನರಿಗೆ ವಶನಾಗಿದ್ದಾನೆ. ವಿಠ್ಠಲ ಪೂಜೆಮಾಡಿ ಹೊರಗೆ ಬಂದರೆ ಸರಿ, ಆ ದುರ್ಜನರು ಕಾದಿದ್ದು ಬೇಕಾದ್ದನ್ನು ಕೇಳಿ ಒಯ್ಯುತ್ತಾರೆ. ಅಯೋಗ್ಯ ದಾನದಿಂದ ವಿಠ್ಠಲನಿಗೆ ಪಾಪ ಬರುತ್ತೆ. '' ವಿಠ್ಠಲ ! ಆ ಪ್ರತಿಜ್ಞೆ ಬಿಟ್ಟು ಬಿಡು. ಪಾತ್ರಾ ಪಾತ್ರ ನೋಡಿ ದಾನ ಮಾಡು. " ಎನ್ನುತ್ತಾರೆ. '' ನನಗೂ ಸ್ವಪ್ನ ಏಕಾಗಬಾರದು ? ವಿಪ್ರನು ನನಗೇ ಎಲ್ಲವನ್ನೂ ಏತಕ್ಕೆ ಹೇಳಬಾರದು ? '' ಎಂದು ಮುಂತಾಗಿ ಲಕ್ಷ್ಮೀಪತಿ ಚಿಂತಿಸುತ್ತಾನೆ, '' ಹಾಗೆಲ್ಲಾ ಚಿಂತಿಸಬಾರದು. ಸ್ವಪ್ನ ವಿಪ್ರನಿಗೇ ಮೀಸಲು. ಈ (ಏಡಮೂಕ)

ಜನ್ಮದಲ್ಲೇ ಅಂಥ ಶ್ರವಣ. ಆಗಲೂ ಸ್ವಪ್ನದಲ್ಲಿ ಸಾವಿರಾರು ಶ್ಲೋಕ ಹೇಳಿದ್ದರೂ ಬೆಳಿಗ್ಗೆ ಹೇಳುವಾಗ ಬಾಯಿಂದ ಎರಡು ಮೂರೇ ಶ್ಲೋಕಗಳು ವ್ಯಕ್ತವಾಗುತ್ತವೆ. ಉಳಿದದ್ದನ್ನು ಅಪಹರಿಸಿ ಬಿಡುತ್ತೇನೆ. ಕೇಳುವ ಜನರ ಯೋಗ್ಯತೆ ಅಲ್ಪತೆ ನೋಡಿಕೊಂಡು ಹಾಗೆ ಮಾಡಿದ್ದೇನೆ.'' '' ಹೇ ವಿಠ್ಠಲ ! ನೀನು ಭಕ್ತಿಯಿಂದ ಸಾಧನೆಮಾಡು. ನಿನಗೆ ಬ್ರಹ್ಮಲೋಕ ಕಾದಿದೆ. ಬ್ರಾಹ್ಮಣನಿಗೆ ಏನಾದರೂ ಸಹಾಯ ಮಾಡು. ಸುಮ್ಮನಿದ್ದರೆ ಮರೆಯಂತ್ತಿ ಎಂದು ಪುನಃ ಪುನಃ ಜ್ಞಾಪಿಸಿದ್ದೇನೆ. ನನ್ನ ಆಶ್ರಿತ ವಿಪ್ರನು ನಿನ್ನ ಉಪಕಾರದಿಂದಲೂ ಋಣ ಹೀನನಾಗಿ ಬಾಳಲಿ. ನೀನು ನನ್ನನ್ನು ಶರಣು ಹೊಂದಿ ಸುಖವಾಗಿ ಬಾಳು''. '' ಲಕ್ಷ್ಮೀಪತೇ ! ಈ ದುರವಸ್ಥೆಯ ಕಾಲ ನೋಡು. ಕೃತಿ ಎಲ್ಲಾ ಕೃತ್ರಿಮವೇ ಎಂಬ ಜನರೂ ಇದ್ದಾರಲ್ಲ ? ವಿಪ್ರನೇ ಮಾಡಿದ್ದೆಂದು ಅನಾದರ ಮಾಡುತ್ತಾರೆ. ನಾನು ಏತಕ್ಕೆ ವ್ಯಸನ ಪಡಲಿ ? ಸುವಿಶಾರದ ಹಯಗ್ರೀವಸ್ವಾಮಿ, ನಿನ್ನ ಕರುಣಾಪೂರ್ಣ ರಸ ವರ್ಷಿ ದೃಷ್ಟಿಯನ್ನು ನಮ್ಮ ಮೇಲೆ ಸುರಿಸು. ಭಕ್ತವಶ್ಯನೆಂಬ ಬಿರುದನ್ನು ಬಿಡಬೇಡ. ವಿಪ್ರನ ಕಾರ್ಯವನ್ನು ಸಫಲಗೊಳಿಸು. ಭಕ್ತರನ್ನು ಆಖ್ಯಾನ ನಿಮಿತ್ತದಿಂದ ಉದ್ಧಾರ ಮಾಡಬೇಕೆಂಬ ನನ್ನ ಸಂಕಲ್ಪವನ್ನು ಪೂರ್ತಿಮಾಡು. ನನ್ನ ಮಾತುಗಳನ್ನು ಸತ್ಯಮಾಡು, ಎಂದು ಅಚ್ಛಿನ್ನ ಭಕ್ತಿ ಸಂಛನ್ನನಾಗಿ ಅವನನ್ನು ನೋಡಿ ನೋಡಿ ಪ್ರಾರ್ಥಿಸುತ್ತೇನೆ" ಎಂದಿದೆ. ಒಂದೇ ಪಾತ್ರಕ್ಕೆ ಎರಡು ಮೂರು ತರಹ ಉಪದೇಶವಾದರೆ ಮೊದಲು ಸಲ ಬೈಗಳ ಇರುತ್ತೆ, ಎರಡನೇಸಲ ಸೌಮ್ಯ ಮಾತಿರುತ್ತೆ. ಮೂರನೇಸಲ ಪ್ರಶಂಸೆಯೇ ಇರುತ್ತೆ. ವಾದಿರಾಜರ ಸೇವೆಯಿಂದ, ಆಖ್ಯಾನ ಪಾರಾಯಣದಿಂದ ಅಂಥ ಪ್ರಗತಿ ಕಾಲ ಕಾಲಕ್ಕೆ ಬರುತ್ತೆಂದು ಸೂಚನೆ. ಶ್ರೀಕೃಷ್ಣಾರ್ಪಣಮಸ್ತು.

ಪಂಚದಶಾಧ್ಯಾಯ ದಲ್ಲಿ 112 ಶ್ಲೋಕ 12 ಪ್ರಕರಣ. ಮೊದಲು ವಿಪ್ರನಿಗೆ ಹೇಳುತ್ತಾರೆ. " ವಿಪ್ರನೇ ! ಸಾಲವಿದ್ದರೂ ಗುರುಗಳನ್ನು ಶರಣುಹೊಂದಿ ಅವರ ಕಾರುಣ್ಯದಿಂದ ಸಂಸಾರ ಜಯಿಸು. ವೇದವೇದ್ಯರನ್ನು ಭಜಿಸು, ನನ್ನಲ್ಲಿ ಅಚಂಚಲ ಭಕ್ತಿಮಾಡು, ನಿನ್ನನ್ನು ನಾನು ಬಿಡುವುದಿಲ್ಲ ". ಶ್ಲೋಕ 4 ರಲ್ಲಿ, ಮಧ್ವೇಶಸ್ವಾಮಿ ನನಗೆ ಒಲಿದಿದ್ದಾನೆ, ಆದ್ದರಿಂದ ಎಲ್ಲಾ ಹರಿ ಭಕ್ತರೂ ನನ್ನನ್ನು ನಿತ್ಯವೂ ಭಜಿಸುತ್ತಾರೆ ಎಂದು ಹೇಳಿದ್ದಾರೆ. " ಆಖ್ಯಾನ ಶ್ರವಣ, ಪಾರಾಯಣಮಾಡಿ, ಎಲ್ಲಾ ದುಃಖವೂ ಪಾಂಡವರಿಗೆ ಹೋದಂತೆ ಹೋಗುತ್ತೆ, ಯೋಗ್ಯರಿಗೆ ಉಪದೇಶ ಮಾಡಿದರೆ ಸರ್ವಾಭೀಷ್ಟವೂ ಆಗುತ್ತೆ. ಉಪಕಾರಕ್ಕೆ ಪ್ರತ್ಯುಪಕಾರ ಗುರುವಿಗೆ ಏನಾದರೂ ಮಾಡು, ಮೂರು ರೀತಿ ಜನರಿದ್ದಾರೆ. ಕೆಲವರು ಅಪಕಾರ ಹೊಂದಿದರೂ ಅಪಕಾರ ಮಾಡಿದವರು ಯೋಗ್ಯರಾಗಿದ್ದರೆ ಅವರಿಗೆ ಜ್ಞಾನವನ್ನೇ ಕೊಟ್ಟು ಬಿಡುತ್ತಾರೆ. ರಹೂಗಣ ಭರತ ಪಲ್ಲಕ್ಕಿ ಹೊರಿಸಿದ್ದರೂ ಅವನಿಗೆ ಜ್ಞಾನವನ್ನೇ ಕೊಟ್ಟನು. ಉಪಕಾರಕ್ಕೆ ಪ್ರತ್ಯುಪಕಾರ ಮಾಡುವವರು ರಾಜಸರು, ಪ್ರತ್ಯುಪಕಾರದ ಅಪೇಕ್ಷೆ ಇಲ್ಲದೇ ಸೇವೆ ಮಾಡಿದರೆ ಸಾತ್ವಿಕವೇ. ಉಪಕಾರ ಮಾಡಿಸಿಕೊಂಡ ಬದಲಾಗಿ ಏನೂ ಉಪಕಾರ ಮಾಡದೆ ಅಪಕಾರವನ್ನೇ ಮಾಡಿದರೆ ಅಂಥವರು ತಾಮಸರು. ಇದು ಲೋಕನೀತಿ. ನೀನು ತಾಮಸನಲ್ಲ. ನನ್ನ ನಿರೂಪ ಶಾಸನವೇದು ತಿಳಿದು ಅಧಿಕಾರಿಗಳಿಗೆ ಹೇಳು, ನೀನೂ ಆಚರಿಸು ". " ಸಿ ತಾಪಸೇ ! ನಾನು ಹಿಂದಿನ ರಾಜನನ್ನು ಪ್ರೇರಿಸಿ ವಾಮನ ದ್ವಾದಶೀದಿನ ಮೂರರಲ್ಲಿ ಮಧ್ಯದ ಗ್ರಾಮವನ್ನು ಬ್ರಾಹ್ಮಣರಿಗೆ ದಾನ ಮಾಡಿಸಿದೆ, ಆದರೆ

ರಾಜನ ಕಡೆಯ ಅಧಿಕಾರಿಗಳು ಬ್ರಾಹ್ಮಣರಿಗೆ ಗ್ರಾಮವನ್ನು ಕೊಟ್ಟೀ ಇಲ್ಲ, ಅದರ ಫಲ ಇಲ್ಲಿ ಸಂತತಿನಾಶ. ನಂತರ ಮನಂಕಲ್ಪನರಕ, ನಂತರ ವಿಷ್ಠಾಕ್ರಿಮಿತ್ವ, ವಿಪ್ರಗ್ರಾಮದಲ್ಲಿ ರಾಜನು ಕಂದಾಯ ವಸೂಲ್ಮಾಡಿದರೆ ರೌರವನರಕವಾಗುತ್ತೆ. ರಾಜನನ್ನು ವೃಂದಾವನ ಸೇವೆ ಮಾಡಿದರೆ, ರಕ್ಷಿಸುತ್ತೇನೆ, ನೀನು ಹೇಳು. ಸೀತಾಪತೇ ! ನನ್ನ ಇಷ್ಟವಾದ ಕಾರ್ಯತ್ರಯವನ್ನು ನಿನ್ನ ಸ್ವಾಮಿಗಳಿಂದ ಮಾಡಿಸಿ ನನ್ನ ಲೋಕಕ್ಕೆ ಬಾ. ಧ್ಯಾನಮಾಡು. ನನ್ನ ಪಾದನೋಡು, ನನ್ನ ಆಕಾರದಲ್ಲಿ ಹರಿಮೂರ್ತಿ ನೋಡು, ಕೊಂಡಾಡು, ನಿನಗೆ ಸಂಸಾರ ಭಯವಿಲ್ಲ, ಆ ಮೂರನೇ ರಾಜಾ ರಾಮನಾಮಕ ನನ್ನ ಅನುಗ್ರಹದಿಂದ ಶ್ರೀರಾಮನಿಂದ ರಕ್ಷಿತನಾದರೂ ಈಗ ವೃಂದಾವನಾಚಾರ್ಯರ ಒಂದು ಮಾತನ್ನೂ ನಡೆಸುವುದಿಲ್ಲವಲ್ಲಾ ! ಗುರುವಿಗೆ ಸರಿಯಾಗಿ ನಡೆದುಕೋ ಎಂದು ರಾಜನಿಗೆ ತಿಳಿಸು. ಶಿಷ್ಯನ ಹಿತಚಿಂತಕ ಗುರು. ಗುರುದ್ವಾರಾ ಪ್ರಸನ್ನನಾಗಿಯೇ ದೇವರು ವಿದ್ಯಾರ್ಥಿ ರಕ್ಷಕ. ಹೀಗಿದ್ದರೂ ರಾಜಸೇವಾ ನಿರತನಾಗಿ ನನ್ನ ಮಾತನ್ನು ಕೇಳದೆ ನನ್ನ ಸೇವೆ ಮಾಡದೆ ನರಕ ಮಾರ್ಗ ಹಿಡಿದಿದ್ದಾನೆ. ನೀನು ಇದೆಲ್ಲಾ ಆ ರಾಮ ರಾಜನಿಗೆ ತಿಳಿಸು. ವೃಂದಾವನ ಸೇವೆ ಮಾಡಿದರೆ ಆರೋಗ್ಯ, ರಾಜ್ಯಸ್ಥೈರ್ಯ ಎಲ್ಲಾ ಉಂಟಾಗುತ್ತೆಂದು ಹೇಳು. ಶೇಷನಿಗೆ ಐದು ಮಕ್ಕಳಾಗುತ್ತೆಂದು ಹಿಂದೆ ಹೇಳಿದ್ದು ಆಗಿಲ್ಲ ಎಂದು ಶಂಕಿಸಬೇಡ. ಪಂಚವೃಂದಾವನವೇ ಪಂಚಪುತ್ರರು. ಔರಸ ಪುತ್ರರೇ ಏಕಾಗಿಲ್ಲ ಎಂದರೆ ಹಿಂದಿನ ಜನ್ಮದಲ್ಲಿ ಶೇಷ ಕೂರ್ಮನಾಮಕರಾಜನು ಸ್ತ್ರೈಣನಾಗಿ ಸಂಧ್ಯಾಕಾಲದಲ್ಲಿ ನರ್ಮದಾ ನದಿಯಲ್ಲಿ ಜಲವಿಹಾರ ಮಾಡುತ್ತಿದ್ದ. ಆ ನದೀ ತೀರದಲ್ಲಿದ್ದ ಅಣಿಮಾಂಡವ್ಯರು ಸಿಟ್ಟಾಗಿ ಶಾಪ ಕೊಟ್ಟರು. ಅಣಿಮಾಂಡವ್ಯರಿಗೆ ಯಾರು ನನ್ನ ಮೇಲೆ ಚಾಡಿ ಹೇಳಿದರು ಎಂದು ಹುಡುಕಿಸಿ ಪತ್ತೆಹಚ್ಚಿ, ಆ ವಸುಹೋತ್ರನೆಂಬ ಬ್ರಾಹ್ಮಣನನ್ನು ಹಿಡಿಸಿ ಕಾರಾಗೃಹ ದಲ್ಲಿಟ್ಟು ಅವನ ಕಣ್ಣನ್ನು ಈ ರಾಜ ಕೀಳಿಸಿದ. ಆ ವಿಪ್ರ ದ್ರೋಹದಿಂದ ಈಗ ಶೇಷನಿಗೆ ಒಳಕಣ್ಣು ಮತ್ತು ಹೊರಗಿನ ಒಂದು ಕಣ್ಣು ಸಹ ಹೋಯಿತು, ಆದರೂ ಶೇಷನನ್ನು ಉದ್ಧರಿಸುತ್ತೇನೆ. 57 ತನ್ನ ಪುರೋಹಿತನ ಪೂಜೆ ಮಾಡಿದ್ದರಿಂದ ಬ್ರಾಹ್ಮಣನಾಗಿ ಹುಟ್ಟಿದ್ದಾನೆ" ಎಂದಿದ್ದಾರೆ. ಹೀಗೆ ಶೇಷನ ಉದ್ಧಾರ ಎಂದು ಸೂಚಿತವಾಗಿದೆ. ಆಗ ಶೇಷ ಆಖ್ಯಾನದಲ್ಲಿ ಆಸಕ್ತನಾಗುತ್ತಾನೆ. ಸೀತಾಪತಿಯೂ ಜೊತೆಯಾಗುತ್ತಾನೆ. ವೃಂದಾವನಾಚಾರ್ಯ ಯತಿಗಳು ಅತ್ಯುತ್ತಮರೆಂದು ತಿಳಿದು ಸೇವಿಸಿ ಅವರ ಪ್ರಖ್ಯಾತಿಯನ್ನು ಹೆಚ್ಚಿಸಿ ತಾನೂ ಉದ್ಧೃತನಾಗುತ್ತಾನೆ 63. ವಿಪ್ರನಿಗೆ '' ಗುರುಗಳ ಕಾರ್ಯವನು ಮಾಡಿ ನೀನು ಉದ್ದೇಶ ಮಾಡಿರುವ ಯಾತ್ರೆ ಮಾಡು '', ಎನ್ನುತ್ತಾರೆ. '' ವೃದ್ಧ ಗುರುವನ್ನು ಚೆನ್ನಾಗಿ ನೋಡಿಕೋ '' ಎಂದು ಸೀತಾಪತಿಗೂ ಹೇಳಿದ್ದಾರೆ. '' ಸೀತಾಪತಿ, ವಿಪ್ರಾವಮಾನಿಗಳಾದವರ ಮಾತನ್ನು ಕೇಳಬೇಡ. ವೃದ್ಧ ಗುರುವನ್ನೂ ಚೆನ್ನಾಗಿ ನೋಡಿಕೋ '' ಹೀಗೆ ಸೀತಾಪತಿಗೂ ಈ ಅಧ್ಯಾಯದಲ್ಲಿ ನಿದರ್ಶನಗಳಿವೆ. ಈ ಜನ್ಮದಲ್ಲಿ ಶೇಷ ದೀರ್ಘ ಕಷ್ಟಾನುಭವಮಾಡಿದ್ದಕ್ಕೆ ಕಾರಣ ಹೇಳುತ್ತಾರೆ. '' ನಾನು ರಾಜನಿಗೆ ಹೇಳೆಂದು ಪೂರ್ವದಲ್ಲಿ ಹೇಳಿದ್ದೆನ್ನೆಲ್ಲಾ ಶೇಷ ರಾಜನಿಗೆ ಹೇಳಲಿಲ್ಲ. ಆ ರಾಜನೂ ಕೇಳಿದ್ದನ್ನೆಲ್ಲಾ ಮಾಡಲಿಲ್ಲ. ಈ ದ್ರೋಹದಿಂದ ಇಬ್ಬರಿಗೂ ಕಷ್ಟವಾಯಿತು. ಆಖ್ಯಾನ ಪುರಾಣ ಹೇಳುತ್ತಿದ್ದವನಿಗೆ ಏನೂ ಕೊಡದೆ ಎದ್ದು ಹೋದ, ಹಾಗೆಲ್ಲಾ ಮಾಡಬಾರದು '', ಶ್ಲೋಕ 81. ವಿಪ್ರಪ್ರಕರಣದಲ್ಲಿ ವಿಪ್ರನಿಗೆ ದರಿದ್ರ ಸ್ಥಿತಿ ಬರುತ್ತೆಂದು ಸೂಚಿಸಿ '' ವೇದವೇದ್ಯರನ್ನು ಶರಣುಹೊಂದು. ಕುಂಡಲ ಧರಿಸಿ ಊಟಮಾಡುವಾಗ ನಿನ್ನ ಅಂತರ್ಯಾಮಿಯಾದ ನನ್ನನ್ನು ಸ್ಮರಿಸಿಕೊಂಡು ಊಟಮಾಡು, '' ಎಂದು

ಹಿತೋಕ್ತಿ ಹೇಳಿದ್ದಾರೆ. ಆದರೆ ಇಲ್ಲೇ ಶ್ಲೋಕ 79 ರಲ್ಲಿ ವೃಂದಾವನಾಚಾರ್ಯರು ದೇವರಿಗೆ ನಮಸ್ಕಾರ ಮಾಡಿದ್ದನ್ನು ವರ್ಣಿಸಿದ್ದಾರೆ. '' ಬ್ರಾಹ್ಮಣ ಬುದ್ಧಿ ಪೂರ್ವಕವಾಗಿ ನಿಧಾನವಾಗಿ ಹಯಗ್ರೀವ ಸ್ವಾಮಿಗೆ ಪ್ರದಕ್ಷಿಣೆ ಮಾಡಿ ನಮಸ್ಕರಿಸಿದರು. ಆತನ ಮನಸ್ಸೆಲ್ಲಾ ನಮಸ್ಕಾರದಲ್ಲಿತ್ತು. ಆಗ ಕಳ್ಳ ಹಯಗ್ರೀವ ದೇವರ ಮೈಮೇಲಿನ ಹಾರವನ್ನೇ ಕಳಚಿ ಎತ್ತಿಕೊಂಡು ಹೊರಟು ಹೋದನು. ಹಿತ್ತಲ ಕಡೆಯಿಂದ ಓಡುತ್ತಿರುವಾಗ ಒಂದು ಮುಳ್ಳಿನ ಪೊದೆಗೆ ಕಾಲು ಸಿಕ್ಕಿಕೊಂಡು ಬಿದ್ದು ಸತ್ತೇಹೋದ. ಹಾಗೇ ವಿಪ್ರನ ಶತ್ರುಗಳನ್ನು ಕೊಂದು ವಿಪ್ರನನ್ನು ರಕ್ಷಿಸಿದ್ದೇನೆ. ಆ ವಿಪ್ರನ ಸಂಬಂಧದಿಂದ ಸೀತಾಪತ್ಯಾದಿಗಳೂ, ಶೇಷಾದ್ರಿ ಸಹ ಉದ್ಧಾರ ಹೊಂದುತ್ತಾರೆ ''. " ಹೇ ಶೇಷಾದ್ರಿ ! ನಿನ್ನ ಹಿಂದಿನ ಅದ್ವೈತ ಮಾರ್ಗ ದೂರ ಮಾಡು, ಪಶ್ಚಾತ್ತಾಪಹೊಂದು. ಭಸ್ಮ ಅಳಿಸು, ಊರ್ಧ್ವ ಪುಂಡ್ರ ಹಚ್ಚು. ನಿತ್ಯವೂ ಧವಳಗಂಗೆಯಲ್ಲಿ ಪ್ರಾತಃ ಸ್ನಾನಮಾಡು, ಆಖ್ಯಾನ ಪಾರಾಯಣ ಹಿಡಿ, ಏಕಾದಶೀ ಉಪವಾಸ ನಿರತನಾಗು. ದಾಸ್ಯಭಾವದಿಂದ ಶರಣುಹೊಂದು. ಹೀಗೆ ಮಾಡಿದರೆ ಕಪ್ಪೆ, ನಾಯಿ ಮುಂತಾದ ಕಷ್ಟ ಜನ್ಮ ತಪ್ಪುತ್ತೆ, ಅಂತಃ ಶುದ್ಧಿ ಆಗುತ್ತೆ. ಹರಿಜ್ಞಾನ ಬರುತ್ತೆ, ನಂತರ ಹಿಂದಿನ ದುಷ್ಕರ್ಮಗಳನ್ನು ಸುಡಬೇಕು, ಪುನಃ ಅದ್ವೈತ, ವಿಭೂತಿ ತರಬಾರದು, ಹಾಗೆ ಪುನಃ ಅದ್ವೈತ ಹಿಡಿದರೆ ಭೂಮಿಗೇ ಭಾರವಾಗುತ್ತಿ " ಎಂದಿದ್ದಾರೆ. ಹೀಗೆ ವಿಪ್ರನ ಬಳಗದ ಉದ್ಧಾರ, '' ವಿಪ್ರನೇ ! ಬರೆಯಿಸುವಾಗ ತಪ್ಪನ್ನು ಬರೆಯಿಸಬೇಡ, ' ನಾಹಂತಂ ಸಂಭರಾಮಿ ' ಎಂದು ಸರಿಯಾಗಿ ಬರೆಯಿಸು, ನನ್ನನ್ನೇ ಭಜಿಸು, ದುಡ್ಡನ್ನು ಭಜಿಸಬೇಡ. ದುಶ್ಚಿತ್ತ ದೂರಮಾಡಿ ಸುಚಿತ್ತನಾಗು, ಕಾಂಚನದ ಆಸೆಬಿಟ್ಟು ಸ್ವತಂತ್ರ ಚಿನ್ಮಾತ್ರನಾದ ನಾರಾಯಣನ ಆಸೆಮಾಡು ''. '' ಹೇ ರಾಮಚಂದ್ರ, ಗುಣಸಾಂದ್ರ, ರಘುಪೇಂದ್ರ, ಬ್ರಹ್ಮಾದಿವಂದ್ಯ ಸ್ವಾಮಿ, ನೀನು ದಯೆಯಿಂದ ನನ್ನ ಪ್ರಾರ್ಥನೆಯಂತೆ ರಾಮರಾಜನಿಗೆ ರಾಜ್ಯಕೊಟ್ಟೆ, ಈಗ ನೀನು ಕೊಟ್ಟ ರಾಜ್ಯವನ್ನು ಪಾಲಿಸೆಂದು ಬೇಡುತ್ತೇನೆ. ಆವನ ರಾಜ್ಯವನ್ನು ಇತರರ ಪಾಲು ಮಾಡಬೇಡ. ಅವನಿಂದಲೇ ಪುನಃ ಪುನಃ ಸಂಸೇವಿತನಾಗಿ ಅವನನ್ನು ಉದ್ಧರಿಸು. ಹೀಗೆ ವೃಂದಾವನಸ್ಥ ರಾಘವೇಂದ್ರ ನನ್ನು ನಾನು ಪ್ರಾರ್ಥಿಸಿ ಮೊರೆ ಹೊಕ್ಕಿದ್ದೇನೆ. ಮಾನವನ ಸಂಪತ್ತು ಶಾಶ್ವತವಾಗಿರಬೇಕಾದರೆ ಮಧುಸೂದನನ ಶಾಸನದಿಂದಲೇ ಸರಿ. ಅಂಥ ಶ್ರೀಹರಿಯ ಸ್ವಚ್ಛ ಮಹಿಮೆಗಳನ್ನು ಕೇಳು '' ಎಂದು ಬ್ರಾಹ್ಮಣನಿಗೆ ಬುದ್ಧಿ ಹೇಳಿ ಮಂಗಳ ಮಾಡಿದ್ದಾರೆ. ಈ ಅಧ್ಯಾಯದಲ್ಲಿ ವಿಪ್ರ, ಶೇಷ, ಸೀತಾಪತಿ, ಶೇಷಾದ್ರಿ, ಭೂಪ, ಮುಂತಾದ ಭಕ್ತರಿಗೆಲ್ಲಾ ನಿದರ್ಶನಗಳಲ್ಲಿ ವೃದ್ಧಿ ಕಂಡಿದೆ. ಶ್ರೀಕೃಷ್ಣಾರ್ಪಣಮಸ್ತು.

ಷೋಡಶಾಧ್ಯಾಯ ದಲ್ಲಿ 111 ಶ್ಲೋಕ 8 ಪ್ರಕರಣ ಇವೆ. ಮೊದಲ ಮಾತು ಶೇಷನಿಗೆ, " ಶೇಷ. ಉಷಃ ! ಕಾಲದಲ್ಲಿ ಆಖ್ಯಾನ ಪಾರಾಯಣ ಮಾಡು. ಅದು ನನ್ನ ಸೇವೆ. ಶೇಷಾದ್ರಿ ಪಂಡಿತನಿಗಿಂತ ನೀನೇ ಧೀರ. ನಿನಗೆ ಸ್ವಪ್ನವಾಗಿದೆ, ಅದು ನನ್ನ ಅನುಗ್ರಹ. ಆದರಂತೆ ವಿಪ್ರನಲ್ಲಿ ಶರಣು ಹೊಂದು. ಈ ಆಖ್ಯಾನ ಲಕ್ಷ್ಮೀಪತಿಯಿಂದ ಪ್ರವಚನ ಮಾಡಿಸಿ ನೀನೂ ಶ್ರವಣಮಾಡು. ಎಲ್ಲರಿಗೂ ಉಪಾದೇಯವೆಂದು ತೋರಿಸು. ನಿನಗೆ ಗುರುವಾದ ನನ್ನಲ್ಲಿ ಭಕ್ತಿ ಹೆಚ್ಚುತ್ತೆ. ಕೃಷ್ಣ ಒಲಿಯುತ್ತಾನೆ. ಕೃಷ್ಣನ ಗೋಪಾಲಮೂರ್ತಿಯನ್ನು ಪ್ರಾತಃಕಾಲ ಧ್ಯಾನಮಾಡು, ನಾನು ನಿನಗೋಸ್ಕರ ದೇವರನ್ನು ಪ್ರಾರ್ಥಿಸಿದ್ದೇನೆ. ನಿನ್ನ ಮನೆಗೆ ಅಗ್ನಿಹೋತ್ರಿ ಬ್ರಾಹ್ಮಣ ಬರುತ್ತಾರೆ, ಆತನಲ್ಲಿ ಆಚಾರ್ಯ ಕರಾರ್ಚಿತ

ಎರಡು ಪ್ರತಿಮೆಗಳಿರುತ್ತವೆ. ಅದರಲ್ಲಿ ಒಂದಾದ ವಿಠ್ಠಲ ಪ್ರತಿಮೆಯನ್ನು ನಿನಗೆ ಕೊಡುತ್ತಾನೆ, ಆಗಿನಿಂದ ನಿನ್ನ ಅದೃಷ್ಟ ಕುದುರುತ್ತದೆ. ನಿನ್ನ ಮಗನೂ ಅದೃಷ್ಟಶಾಲಿ". ಇಷ್ಟು ಹೇಳಿ ವಿಪ್ರನಿಗೆ ಹೇಳುತ್ತಾರೆ. "ತಪ್ಪು ಹೇಳಿ ಬರೆಯಿಸಬೇಡ, ನೀನು ನನ್ನ ಪಾದಕಮಲದ ಭ್ರಮರ. ನನ್ನ ಧ್ಯಾನದಿಂದ ನಿರ್ಮಲ ಮನಸ್ಕನಾಗು. ಐದು ಜನ್ಮ ಸಿಂಹದಂತೆ ಮೆರಿ. ಆಖ್ಯಾನ ಪುರಾಣ ಹೇಳು. ನಿನ್ನನ್ನು ಕೈ ಬಿಡೋದಿಲ್ಲ" ಎಂದಿದ್ದಾರೆ. ಅನಂತರ ಪುನಃ ಶೇಷನಿಗೆ ಹಿತೋಕ್ತಿ ಇದೆ. "ನನ್ನ ಅಭಿಪ್ರಾಯಂ ತಿಳಿಯದೆ ಖಂಡನೆ ಏತಕ್ಕೆ ಮಾಡುತ್ತಿ? ದುಡ್ಡಿನ ಆಸೆಯನ್ನು ಮಾಡಬೇಡ. ಪೂರ್ವದಲ್ಲಿ ಕುಮಾರ ಭಟ್ಟನಿಗೆ ವೇದದಲ್ಲಿ ಅಪ್ರಾಮಾಣ್ಯ ಶಂಕೆ ಬಂದುದರಿಂದ ಒಕ್ಕಣ್ಣನಾದ. ಈಗ ಎಂದರೆ ವೃಂದಾವನಾಚಾರ್ಯರ ಕಾಲದಲ್ಲಿ ಕಮಲನಾಭ ಜ್ಞಾನ ನೇತ್ರ ಕಳೆದುಕೊಂಡು ನರಕಕ್ಕೆ ಬೀಳುತ್ತಾನೆ. ಈ ತಮ್ಮಣ್ಣನಿಗೂ ನನ್ನ ಋಜುತ್ವದಲ್ಲಿ ಸಂಶಯ. ಪ್ರೀತಿಯಿಂದ ಆಖ್ಯಾನವನ್ನು ಪಠಿಸುವುದಿಲ್ಲ. ಅವನಿಗೆ ಶುಭವಾಗುವುದಿಲ್ಲ. ಅವನು ವಂಚಕ. ನಾಯಿಜನ್ಮ ಅವನಿಗೆ ಕಾದಿದೆ, ಇನ್ನು ಹೆಸರಿಗೆ ಶ್ರೀನಿವಾಸ, ಸ್ವಭಾವತ, ನಿಃಶ್ರೀನಿವಾಸನಾದ ಒಬ್ಬ ಪಾಪಿ. ನನ್ನ ಋಜುತ್ವ ದ್ವೇಷಿ, "ನಿತ್ಯಂ ಬ್ರಾಹ್ಮಣ ಸಂಬಂಧಿ ಸತ್ಯವಾಕ್ಯಂ ಮಯೋದಿತಂ" ಸತ್ಯವಾದ ಋಜುರ್ವೇದ ಸಂಹಿತೆಯು ಪ್ರಮಾಣ ಹೇಳಿದರೂ ಭ್ರಾಂತನಾಗಿಯೇ ಇದ್ದಾನೆ. ಶೇಷ! ಪೂರ್ವೋಕ್ತ ಮೂವರ ಸಂಗತ್ಯಜಿಸಿ. ಗುರುವಾದ ವಿಪ್ರನ ಪೂಜೆ ಮಾಡಿಕೊಂಡು, ಆಖ್ಯಾನ ಪಠಿಸು". "ವಿಪ್ರನೇ! ಶ್ರೀಮದನಗೋಪಾಲ ದೇವಾಲಯದಲ್ಲಿ ಆಖ್ಯಾನ ಓದು, ಅನ್ನ" ಪರ್ಯಾಯದ ಸಾಮಗ್ರಿ ಎಲ್ಲಾ ಸಿಗುತ್ತೆ. ಶೇಷನ ಹೆಂಡತಿಯು ಗರ್ಭದಲ್ಲಿ ಹೆಣ್ಣು ಶಿಶು ಇತ್ತು. ಅದನ್ನು ಗಂಡು ಮಗುವನ್ನಾಗಿ ಮಾಡಿದ್ದೇನೆ. ಅಂಶದಿಂದ ಪುಂಸ್ತ್ವ ಸಿದ್ಧಿಗಾಗಿ ನಾನೇ ತತ್ವಮಾನಿಗಳಿಂದ ಸಹಿತವಾಗಿ ವಾಸ ಮಾಡಿದ್ದೇನೆ. ಪ್ರಸೂತಿ ಕಾಲದಲ್ಲಿ ಪ್ರಧಾನ ವಾಯುದೇವರ ವ್ಯಾಪಾರವನ್ನು ಮಾಡಿದ್ದೇನೆ. ಒಬ್ಬ ಶೂದ್ರ ಸೇವೆ ಮಾಡಿದ್ದ, ಅವನನ್ನೂ ಬ್ರಾಹ್ಮಣನನ್ನಾಗಿ ಹುಟ್ಟಿಸಿದ್ದೇನೆ. "ಸಂಪೂಜ್ಯ ಬ್ರಾಹ್ಮಣಂಭಕ್ತ್ಯಾ ಶೂದ್ರೋಽಪಿ ಬ್ರಾಹ್ಮಣತಾಮಿಯಾತ್" (ಅಪರೋಕ್ಷಜ್ಞಾನಿ ಬ್ರಾಹ್ಮಣರನ್ನು ಭಕ್ತಿಯಿಂದ ಸೇವಿಸಿದರೆ ಜನ್ಮಾಂತರದಲ್ಲಿ ಬ್ರಾಹ್ಮಣ್ಯವೇ ಬರುತ್ತೆ) ಎಂಬ ಪ್ರಮಾಣ ಸತ್ಯ ಮಾಡಿದ್ದೇನೆ. ಆ ಜೀವನನ್ನು ಶೇಷನಿಗೆ ಔರಸ ಪುತ್ರನನ್ನಾಗಿಟ್ಟು ನಾನು ನಿಯಮನ ಮಾಡಿದ್ದೇನೆ. ಹೀಗೆ ಶೇಷನಿಗೆ ಗಂಡು ಮಗುವೂ ಆಗಿದೆ. ಶೇಷನೇ! ಕೃಷ್ಣಾಚಾರ್ಯಸುತ ಶ್ರೀನಿವಾಸಾಚಾರ್ಯನೂ ನನ್ನ ಋಜುತ್ವವನ್ನು ಒಪ್ಪುವುದಿಲ್ಲ. ಅಹಂಕಾರಿ, ದುರುಳ, ಆಖ್ಯಾನದಲ್ಲಿ ದೋಷ ಹುಡುಕುತ್ತಾನೆ. "ಬ್ರಾಹ್ಮಣನಿಗೆ ವಾದಿರಾಜರು ಸ್ವಪ್ನದಲ್ಲಿ ಮಂತ್ರೋಪದೇಶ ಮಾಡುತ್ತಿದ್ದರೆ ಜಾಗ್ರದವಸ್ಥೆಯಲ್ಲಿ ಈ ಬ್ರಾಹ್ಮಣನಿಗೆ ಜ್ವರ ಏತಕ್ಕೆ ಬಂತು? ಎಂದು ಪ್ರಶ್ನೆ ಕೇಳುತ್ತಾನೆ ಆ ಪಾಪಿ. ಜ್ವರ ಪಾಪದಿಂದ ಬಂದಿಲ್ಲ, ಹೆಚ್ಚು ಕೆಲಸದಿಂದ ಬಂದಿದೆ, ವಿಶ್ರಾಂತಿ, ಉಪಚಾರಗಳಿಂದ ತಾನಾಗಿಯೇ ಹೋಗುತ್ತೆ, ಔಷಧ ಬೇಕಿಲ್ಲ, ಆದರೂ ಪಾಪಾತ್ಮನು ಆಖ್ಯಾನ ಮಂತ್ರವೇ ಅಲ್ಲ ಎಂದು ಅಲಗಳೆಯುತ್ತಾನೆ. ವಿಪ್ರಕಲ್ಪಿತ ಎನ್ನುತ್ತಾನೆ. ಅದರೆ ಆಖ್ಯಾನ ಪಠನೆ ಸಂಸಾರ ದುಃಖ ಮೂಲವನ್ನೇ ಕತ್ತರಿಸುತ್ತೆ, ಪಾಪವನ್ನೂ ಸುಡುತ್ತೆ. ಜ್ವರ ಶ್ರಮದಿಂದ ನನಗೂ ಬಂದಿತ್ತು, ಅದೇನುಮಾಡುತ್ತೆ? ಅಜ್ಞಾನಿ ವಿಪ್ರ ಶ್ಲೋಕ ಹೇಗೆ ಮಾಡುತ್ತಾನೆ? ಪಾಪಿಗಳು ಪ್ರತ್ಯಕ್ಷ ವಿರುದ್ಧವಾಗಿ ಅಪಲಾಪ, ನಿಂದೆ ಮಾಡುತ್ತಾರೆ. ವಿಪ್ರ ತೇಜಸ್ವಿಯಾಗಿಯೇ ನೀರೋಗಿಯಾಗಿಯೇ ಇದ್ದಾನೆ. ಅದನ್ನು ನೋಡುತ್ತಿದ್ದರೂ, ಸ್ವಲ್ಪ ಮೈ

ಬೆಚ್ಚಗಾದ ಮಾತ್ರಕ್ಕೆ ವಿಷಮಜ್ವರ ಬಂದಂತೆ ಗಲಾಟೆಮಾಡಿ ಆಖ್ಯಾನವೇ ಮಂತ್ರವಲ್ಲ ಎಂದು ನಿಂದಿಸು ತ್ತಾರೆ. ಇಂಥ ನಿಂದಕರು ಹೊಟ್ಟೆಕಿಚ್ಚಿನ ಪಾಪಿಗಳು. ವಿಪ್ರನೇ ! ನಿನ್ನ ಜ್ವರ ಪೂರ್ತಿಯಾಗಿ ನಿಂತು ನಿನ್ನ ಶ್ರಮವೂ ಶಾಂತವಾಗಲಿ, ನಂತರವೇ ಸ್ವಪ್ನದಲ್ಲಿ ಶ್ಲೋಕೋಪದೇಶ ಮಾಡುತ್ತೇನೆ. " ಅಸ್ಪಷ್ಟ ಭಾಷೆಯಿಂದ ಸ್ವಪ್ನೋಪದೇಶವೇತಕ್ಕೆ ? ಸ್ಪಷ್ಟವಾಗಿಯೇ ಎಲ್ಲರ ಹಣೆಬರಹವನ್ನೂ ಹೇಳಿಬಿಡಲಿ " ಎಂದೂ ಕೃಷ್ಣಾಚಾರ್ಯ ಪುತ್ರ ಶ್ರೀನಿವಾಸ ನಿಂದಿಸುತ್ತಾನೆ, ಅದು ಅನ್ಯಾಯದ ನಿಂದೆ. ಭವಿಷ್ಯಾರ್ಥ ಬೋಧಕ ವಾಕ್ಯಗಳು ಅಸ್ಪಷ್ಟವಾಗಿಯೇ ಇರಬೇಕು. '' ಪರೋಕ್ಷಪ್ರಿಯಾ ಇವಹಿ ದೇವಾಃ ಪ್ರತ್ಯಕ್ಷ ದ್ವಿಷಃ '' ಎಂದು ಶ್ರುತಿಯೇ ಇದೆ. ಪರೋಕ್ಷವೆಂದರೆ ಅಸ್ಪಷ್ಟತೆ, ಹಾಗೆ ಹೇಳುವುದೇ ದೇವ ಸ್ವಭಾವ. ಭವಿಷ್ಯ ಬೋಧನೆಗೂ ಅದೇ ಯೋಗ್ಯ, ಆದ್ದರಿಂದ ದುರ್ಜನರ ನಿಂದೆಗೆ ನನ್ನ ಭಕ್ತರು ಕಿವಿಕೊಡಬಾರದು. ಒಂದರ್ಥ ತೋರಿ ಅದು ಬಾಧಿತವಾದರೆ ಇನ್ನೊಂದು ರೀತಿ ಅರ್ಥ ಮಾಡಲಿ, ಅದೂ ಬಾಧಿತವಾದರೆ ಅಂತರ್ಯಾಮಿ ಪರ ಅರ್ಥ ಮಾಡಲಿ. ಅಪ್ರಾಮಾಣ್ಯ ಸಂಶಯವನ್ನೇ ಮಾಡಿದರೆ ಪಾಪಿಯಾಗಿ ನರಕಕ್ಕೆ ಹೋಗಿ ನಾಯಿಯಾಗಿ ಹುಟ್ಟುತ್ತಾನೆ. ಮದಾಂಧರಿಗೆ ಅದೇಗತಿ. ಜ್ಞಾನಿಗಳು ವಿನಯ ಅನಹಂಕೃತಿ ಗಳಿಂದ ಯೋಗ್ಯಾರ್ಥ ಹುಡುಕುವವರ ಜೊತೆಯಲ್ಲಿದ್ದು ಅಜ್ಞಾನ ಹೀನರಾಗಿ ನನ್ನನ್ನು ಬಹುಮಾನ ಮಾಡುತ್ತಾರೆ, ಯೋಗ್ಯಾರ್ಥವನ್ನೇ ತಿಳಿಯುತ್ತಾರೆ. ಅಂಥ ಜ್ಞಾನಿಗಳು ಪೂಜ್ಯರು. ಅಜ್ಞಾನಿಗಳ ಪ್ರಸಂಗ ಸಾಕು, " ಲಕ್ಷ್ಮೀಪತೇ, ನೀನು ಅಂಥ ಸಜ್ಜನರನ್ನು ಸಭೆಯಲ್ಲಿ ಸುಖಪಡಿಸು. ದೇವರೂ, ದೇವತೆಗಳೂ, ಗುರುಗಳೂ ಯಾರ ವಿಷಯದಲ್ಲಿ ಪ್ರಸನ್ನರಾಗಿಲ್ಲವೋ ಅಂಥವನಿಗೆ ನನ್ನ ವೃಂದಾವನವು ಒಳ್ಳೇ ಕಲ್ಲಿನದು ಚೆನ್ನಾಗಿ ಕಟ್ಟಿದ್ದಾರೆ ಎಂದು ಮಾತ್ರ ತೋರುತ್ತದೆ. (81) ಪಾಪನಾಶಕ ಕ್ಷೇತ್ರ, ಜಗನ್ನಾಥನ ಪರಮಾಧಿಷ್ಠಾನ, ಅಂತರ್ಯಾಮಿ ಋಜು ದೇವತೆಯ ವರ್ಚಸ್ಸಿನಿಂದ ಸರ್ವಫಲ ಪ್ರಾಪ್ತಿಯಾಗುತ್ತೆಂದು ಸ್ಮರಣೆಗೇ ತಂದು ಕೊಡುವುದಿಲ್ಲ-ಏಕೆಂದರೆ ಅವರು ನನ್ನ ಶಾರದಾ ದ್ರೋಹಿಗಳು, ಆಖ್ಯಾನ ನಿಂದಕರು, ಭೂಮಿಯಲ್ಲಿ ಕಳ್ಳತನದ ಜೀವಿಗಳು, ನರಕಕ್ಕೆ ಹೋಗುವುದಕ್ಕೇ ಹುಟ್ಟಿದವರು. ಈ ವಾಸುದೇವಮುನಿ ಅಂಥವನಲ್ಲ. ಗುರುರಾಜರು ವೃಂದಾವನಕ್ಕೆ ಹೋದರೆ ದೇಹತ್ಯಾಗ ಮಾಡಿಬಿಡುತ್ತೇನೆಂದು ಇದ್ದ, ತೀರ್ಥ ಯಾತ್ರೆಗೆ ಹೋಗಿದ್ದ, ವಾಪಸ್ಸು ಬಂದಾಗ ಶ್ರೀವಾದಿರಾಜರು ವೃಂದಾವನದಲ್ಲಿದ್ದರು, ತುಂಬ ಸಂಕಟ ಪಟ್ಟ. ವೃಂದಾವನದ ಸುತ್ತಲೂ ಪ್ರದಕ್ಷಿಣೆ ಮಾಡಿ ಹನುಮಾದಿ ನಾಲ್ವರ ನಮಸ್ಕಾರ ಮಾಡಿ ಪಕ್ವ ಫಲದಂತೆ ಇದ್ದಾನೆ. ಪ್ರಾರಬ್ಧ ನೀಗಿ ಸದ್ಗತಿಗೇ ಹೋಗುತ್ತಾನೆ, ಹಯಗ್ರೀವ ದೇವರ ಪ್ರಸಾದದ ಫಲ, ಅಂಥ ಹಯವದನ ಸ್ವಾಮಿಯ ಪ್ರಸಾದವನ್ನು ನಾನೂ ಸಂಪಾದಿಸಿದ್ದೇನೆ. ಆ ಸ್ವಾಮಿ " ವಾದಿರಾಜ ! ಭಯಪಡಬೇಡ " ಎಂದು ತನ್ನ ಕೈಯನ್ನು ನನ್ನ ತಲೆಯ ಮೇಲೆ ಇಟ್ಟಿದ್ದಾನೆಂದಮೇಲೆ ಯಾವುದು ಅಸಂಭಾವಿತ ? ಅಸಂಭಾವನಯಾ ತಸ್ಮಾದ್ವೈಭವಂ ನ ಪರಾಹತಂ ". (ಅಜ್ಞಾನಿಗಳು ಅಸಂಭಾವಿತ ವೆಂದು ನನ್ನ ಮಹಿಮೆಯನ್ನು ಅಲೆಗಳೆದ ಮಾತ್ರಕ್ಕೆ ಆ ಮಹಿಮೆಯು ಸುಳ್ಳಾಗುವುದಿಲ್ಲ) " " ಎಲೈ ಪಾಪ ಪುರುಷರೇ ! ಯಮನ ದಂಡ ನಿಮ್ಮನ್ನು ಕರೆಯುತ್ತಿದೆ, ಅದಕ್ಕೇ ' ನಾನೂ ಶ್ಲೋಕ ಮಾಡಬಲ್ಲೆ ' ಎನ್ನುತ್ತೀರಿ, ಪಾಪನಾಶಮಾಡಿ ಶೋಕ ಪರಿಹರಿಸಿ ಚಿತ್ತಶುದ್ಧಿ ಕೊಡುವ ಶ್ಲೋಕ ಒಂದನ್ನಾದರೂ ರಚಿಸುವ ಯೋಗ್ಯತೆ ನಿಮಗಿದೆಯೇ ? ನೀವು ಬರೆದ ಶ್ಲೋಕ ಮಂತ್ರ ಸದೃಶವಾಗುತ್ತೆಯೇ ? ನಾನು ಲಕ್ಷ ಶ್ಲೋಕ ಮಂತ್ರದಂತೆ ಹೇಳಿ ವಿಪ್ರನ ಬಾಯಿಂದ ಒಂದೆರಡನ್ನು ಹೇಳಿಸುತ್ತೇನೆ, ನೀವು

ಕೃತ್ರಿಮ ಶ್ಲೋಕ ರಚಿಸಿದರೆ ಓದುವವರಿಗೆ ಪಾಪ, ಕರ್ತನಿಗೆ ಆಯುರ್ಹಾನಿ, ಅಕಾಲ ಮರಣ ಮುಂತಾದ ದುಃಖವಾಗುತ್ತೆ. ಇಷ್ಟರ ಮೇಲೆ ನೀವು ಬೇಕಾದಂತೆ ಮಾಡಿ, " ಈ ಪ್ರಸಂಗದಲ್ಲಿ ಒಬ್ಬ ಮೂರ್ಖನು ಮರಳಿ ಸನ್ಮಾರ್ಗಕ್ಕೆ ಬಂದ ನಿದರ್ಶನ ಹೇಳುತ್ತಾರೆ. ಅವನ ಕಥೆ ಪುಟ 46, ಸರ್ಗ 7 ರಲ್ಲಿ ಸಂಗ್ರಹಿಸಲ್ಪಟ್ಟಿದೆ. ಗುರುರಾಜರನ್ನು ಮೊದಲು ಅವಜ್ಞೆ ಮಾಡಿದ್ದರೂ, ಪುನಃ ಪಶ್ಚಾತ್ತಾಪದಿಂದ ಸೇವೆ ಮಾಡಿದ್ದರಿಂದ ಅವನ ಪಾಪ ಭಸ್ಮವಾಯಿತು. ಅವನ ಪಾಂಡಿತ್ಯವು ಪ್ರಜ್ವಲಿಸಿತು, ಅವನು ಸಿಂಹದಂತೆ ಅಜ್ಞಾನಿಗಳಿಗೆ ಭಯಂಕರನಾದ, ರಾಜಾದಿಗಳಿಗೆ ಇವನ ಹೊಸ ಪಾಂಡಿತ್ಯ ಏನೂ ಗೊತ್ತಾಗಲಿಲ್ಲ, ಎಂದರೆ ಇವನಿಗೆ ಖ್ಯಾತಿ ಬರಲಿಲ್ಲ, ಆದರೂ ನಾನು ಅವನನ್ನು ವಿಪ್ರ ಶೇಷಾದಿಗಳ ನಂತರ ಗಣನೀಯ 'ವಿದ್ವಾಂಸ' ನೆಂದು ತಿಳಿದು ಪಾಲಿಸುತ್ತಿದ್ದೇನೆ " ಎಂದಿದ್ದಾರೆ. ಹೀಗೆ ಈ ಅಧ್ಯಾಯದಲ್ಲಿ ಎರಡು ವಿಧದ ನಿದರ್ಶನ – ನಂಬಿದವರು, ನಿಂದಕರು – ತುಂಬಿಹೋಗಿದೆ. ಶ್ರೀಕೃಷ್ಣಾರ್ಪಣಮಸ್ತು.

ಹದಿನೇಳನೆಯ ಅಧ್ಯಾಯ ದಲ್ಲಿ **116** ಶ್ಲೋಕ **16** ಪ್ರಕರಣಗಳಿವೆ. ಪ್ರಬಲ ನಿದರ್ಶನಗಳನ್ನು ಹೇಳುತ್ತಾರೆ. ತಮಗೆ ಮುಖ್ಯ ಪ್ರಾಣ ಮಿತ್ರತ್ವ ತೋರಿಸಿದ್ದಾರೆ. ಮೊದಲು ಭೂಪಾದಿಗಳಿಗೆ ವಿಪ್ರ ಪೂಜೆ ಮಾಡಬೇಕೆಂದು ತೋರಿಸಲು ವಿಪ್ರನ ಮಹತ್ವವನ್ನು ವರ್ಣಿಸಿದ್ದಾರೆ. " ನನ್ನ ನಿತ್ಯ ದರ್ಶನದಿಂದ ವಿಪ್ರ ನಿರ್ಮಲ ಚಿತ್ತನಾಗಿದ್ದಾನೆ. ನಿರಂತರ ನನ್ನ ಧ್ಯಾನವನ್ನು ಮಾಡುತ್ತಾನೆ. ಕಾಶೀ ಮರಣದ ಪುಣ್ಯ ಸಂತತ ಅವನಿಗೆ ಉಂಟಾಗುತ್ತೆ, ಸ್ವಚ್ಛ ಜ್ಞಾನಿ, ನನ್ನ ಸೇವೆಯನ್ನಂತೂ ಮಾಡುತ್ತಲೇ ಇದ್ದಾನೆ. ಇಷ್ಟಾದರೂ ಅವನ ಬಡತನ ಹೋಗಿಲ್ಲ, ಅದರ ಜೊತೆಗೆ ಶ್ಲೋಕ ಕರ್ತಾ ಎಂದು ಅಪಖ್ಯಾತಿ ಬೇರೆ, ವಿಪ್ರನಿಗೆ ತಾನು ಬರೆಯಿಸಿದ್ದು ಏನು ಎಂದುಕೂಡ ಗೊತ್ತಿಲ್ಲ. ಕವಿಗೆ ಅರ್ಥಜ್ಞಾನ, ಶಬ್ದರಚನೆ ಎರಡೂ ತಿಳಿದಿರುತ್ತೆ. ವಿಪ್ರನಿಗೆ ಎರಡೂ ಇಲ್ಲ, ಆದ್ದರಿಂದ ಕೃತಿ ಕೇವಲ ನನ್ನದೇ. ಪ್ರಚಾರಕಾರ್ಯ ವಿಪ್ರ ಚೆನ್ನಾಗಿ ಮಾಡಿದರೂ ಸಂಬಳ ಹೆಚ್ಚಲಿಲ್ಲ, ಶೇಷಾದ್ರಿ ಸಹಾಯ ಮಾಡಲಿಲ್ಲ. ಸೀತಾಪತಿಯಾದರೂ ಸ್ವಲ್ಪ ಸಹಾಯ ಮಾಡಲಿ. ಇಲ್ಲದಿದ್ದರೆ ' ಆಚಾರ್ಯ ' ಎಂದು ನನ್ನಿಂದ ಬಿರುದು ಸಂಪಾದಿಸಿ ಭಿಕ್ಷೆಗೇ ಹೋಗಬೇಕಾಗುತ್ತೆ. ಶೇಷ ! ನೀನಾದರೂ ಔದಾರ್ಯ ತೋರಿಸು. ಹೊಗಳಬೇಡಿ ಎಂದು ನನ್ನನ್ನೇ ನಿಷೇಧಿಸಬೇಡ. ಅಂತರ್ಯಾಮಿ ವಿವಕ್ಷೆಯಿಂದ ಗುರುಗಳು ಶಿಷ್ಯನನ್ನು ಸ್ತುತಿಸಿದರೆ ಅವನಿಗೆ ಶುಭವಾಗುತ್ತೆ. ನನ್ನ ವೃಂದಾವನ ಪ್ರಸಿದ್ಧಿಗೆ ಬರುತ್ತೆಂದು ನಾನು ಹೇಳಿದ್ದೆ. ಹಾಗೇ ಆಗಿದೆ, ವಿಪ್ರನಿಗೂ ವೃಂದಾವನದ ಹೆಸರೇ ಬಂದಿದೆ ನೋಡು. ಅತನನ್ನು ವೃಂದಾವನಾಚಾರ್ಯರೆಂದು ಕರೆಯದವರನ್ನು ದಂಡಿಸು ". ನಂತರ ಶ್ರೀಪತಿಗೆ ವಿಪ್ರನ ಸತ್ಕಾರ ಮಾಡೆಂದು ಪ್ರೀತಿಯಿಂದ ಪ್ರೇರಿಸುತ್ತಾರೆ. ವಾಸುದೇವ ಮುನಿಗಾದರೂ ಹೇಳಿ ಸಕುಟುಂಬ ವಿಪ್ರನಿಗೆ ಭೋಜನ ಮಾಡಿಸು ಎಂದು ಹೇಳುತ್ತಾರೆ. " ಒಂದು ತಿಂಗಳು ವಾಸುದೇವಮುನಿಯ ಸತ್ಕಾರವನ್ನು ಸ್ವೀಕರಿಸು" ಎಂದು ವಿಪ್ರನಿಗೂ ಹೇಳುತ್ತಾರೆ. ಅಂತೂ ಕಾ ವಿಶೇಷದಲ್ಲಿ ವಿಪ್ರನಿಗೆ ತುಂಬ ಕ್ಲೇಶವಿತ್ತೆಂದು ಊಹೆಗೆ ಬರುತ್ತೆ. ಶ್ರೀಪತಿ ಹೇಳಿದಂತೆ ಮಾಡಿ ವಿಪ್ರನಿ ಅನ್ನಕೊಡಿಸಿದ್ದಾನೆಂದು ಸಂತೋಷದಿಂದ ಹೇಳುತ್ತಾರೆ. " ಏನಾದರೇನು ? ಸದಾ ಅಗಣ್ಯ ಗುಣನಾ ನನ್ನನ್ನು ರಕ್ಷಕನೆಂದು ಸ್ಮರಿಸು " ಎಂದಿದ್ದಾರೆ. " ವಿಪ್ರನೇ ನಿನ್ನ ಹೊಟ್ಟೆ ನೋವನ್ನು ಪರಿಹರಿಸಿದ್ದೇನೆ. ನಿನ್ನ ಮಗಳ ಉದರ ಶೂಲೆ ಸಹ ಒರೆಸಿಬಿಟ್ಟಿದ್ದೇನೆ. ಆದ್ದರಿಂದ ನನ್ನನ್ನು ಭಜಿಸು. ಮಗ ಬರಲಿಲ್ಲ

ವಲ್ಲಾ ಎಂಬ ಚಿಂತೆಬಿಡು '' ಎಂದಿದ್ದಾರೆ, ಸಂಸಾರ ಸಮುದ್ರದಲ್ಲಿ ನೌಕೆಯ ಹುಟ್ಟಿನಂತೆ ಹರಿಜ್ಞಾನ, ಅದನ್ನು ಹೊಂದು. ಅಂಥಜ್ಞಾನ ಕುಮಾರಭಟ್ಟನಿಗಿರಲಿಲ್ಲ. '' ನೀನು ಹಾಗಾಗಬೇಡ, ನನ್ನ ವಾಕ್ಯದಲ್ಲಿ ದೋಷ ಹುಡುಕಬೇಡ. ನಾಯಿಯಂತಿರುವ ಜನರ ಮಾತನ್ನು ಕೇಳಬೇಡ ''. " ಹೇ ತಮ್ಮಣ್ಣ ! (ಈ ತಮ್ಮಣ್ಣ ಬೇರೆ, ಇವನು ವಿಪ್ರನ ಅನುಯಾಯಿ). ಆಖ್ಯಾನ ಶ್ರವಣಮಾಡು, ಇಲ್ಲದಿದ್ದರೆ ನರಕ ತಪ್ಪುವುದಿಲ್ಲ, ಆಗಲೂ ನಾನೇ ಬಿಡಿಸಬೇಕಾಗುತ್ತೆ, ಆದುದರಿಂದ ಭುಜಗೇಶ್ವರನೆಂದು ತಿಳಿದು ನನ್ನನ್ನು ಭಜಿಸು " " ಹೇ ಭೂಪ ! ಪೂರ್ವದಲ್ಲಿ ದಾನಮಾಡಿದ ಕೇದಾರ ಗ್ರಾಮವನ್ನು ಬಿಟ್ಟುಕೊಡು, ಹಾಗೆ ಮಾಡಿದರೆ ಆಯುರಾದಿ ಸರ್ವವೃದ್ಧಿ ಆಗುತ್ತೆ. " ಸ್ವದತ್ತಾದ್ದ್ವಿಗುಣಂ ಪುಣ್ಯಂ ಪರದತ್ತಾನು ಪಾಲನೇ " (ಕಂಡವರು ಮಾಡಿದ್ದ ದಾನ ರಕ್ಷಣೆ ಮಾಡಿದರೆ, ತಾನೇ ಅಷ್ಟು ದಾನ ಮಾಡಿದ್ದಕ್ಕಿಂತ ಎರಡರಷ್ಟು ಪುಣ್ಯ ಹೊಂದುತ್ತಾನೆ) ಎಂದು ಶಾಸ್ತ್ರವಿದೆ. ಆ ಗ್ರಾಮವನ್ನು ಬಿಟ್ಟುಬಿಡು, ಶತ್ರುವನ್ನು ಜಯಿಸು. ಆ ಶತ್ರು ಧನವನ್ನು ಅಪಹರಿಸಿ ನಿನ್ನ ಕೋಶವನ್ನು ಭರ್ತಿ ಮಾಡಿಕೋ. ಬ್ರಾಹ್ಮಣರ ಜಮೀನಿಗೆ ಕಂದಾಯ ಹಾಕಬೇಡ ". ಅನಂತರ ವಿಪ್ರನಿಗೇ ಹೇಳುತ್ತಾರೆ. " ವಿಪ್ರನೇ ! ನಿನ್ನ ಪ್ರಾಣ ಕಂಠಗತವಾಗಿದೆ, ಆದರೆ ನಿನ್ನನ್ನು ನಾನು ಉಳಿಸುತ್ತೇನೆ. **ಶರಣಂ ವಜ್ರನಾಂಮುನಿಂ** (ನನ್ನನ್ನು ಶರಣು ಹೊಂದು) 55. ನಿನ್ನ ಸಹಾಯಕ ಕೃಷ್ಣಭಟ್ಟನಿಗೂ ಶುಭವಾಗುತ್ತದೆ. (ಪೂರ್ವ ಕೃಷ್ಣಭಟ್ಟನ ದ ನಿನಗೆ ಎಂದಾದರೂ ಅರ್ಥಮಾಡಬಹುದು). ನಿನ್ನ ಆಚಾರ್ಯನಾಮ ಅನ್ವರ್ಥವಾಯಿತು **58** ". ಹೀಗೆ ಹೇಳಿ ವಿಪ್ರನ ಮರಣವನ್ನು ತಪ್ಪಿಸಿದ್ದಾರೆ.

'' ಹೇ ಸೂರ್ಯ ! ಆಖ್ಯಾನ ಪಾರಾಯಣ ಮಾಡು, ನಿನ್ನ ಬುದ್ಧಿ ವಿಕಾಸ ಹೊಂದುತ್ತದೆ '', '' ಲಕ್ಷ್ಮೀಪತೇ ! ಸೂರ್ಯನಿಗೆ ಹೇಳಿಕೊಡು '' " ಹೇ ಉಪೇಂದ್ರಭಟ್ಟ ! ಕಾಮಧೇನು ಶ್ಲೋಕವನ್ನು ಸರ್ವದಾ ಪಠಿಸು, ಆಖ್ಯಾನ ಪಾರಾಯಣ ಮಾಡುತ್ತಿದ್ದಿ, ಹಾಗೇಮಾಡು, ಹಿರಣ್ಯಭಟ್ಟನೂ ಹಾಗೇ, ಸ್ವಲ್ಪ ಪಾರಾಯಣ ಮಾಡಿದರೂ ನನ್ನ ಪ್ರೀತಿ ವಿಷಯನಾಗಿದ್ದಾನೆ ". '' ಸರಸ ಭಾರತೀ ನರಸಿಂಹನಿಗೆ ಏನು ಬಂತು ? ಸರಸ ಭಾರತೀ ವಿಲಾಸವನ್ನು ಕಂಠಪಾಠ ಮಾಡಿದ್ದಾನೆ. ಆಖ್ಯಾನವನ್ನು ಮಾತ್ರ ಉಪೇಕ್ಷೆ ಮಾಡುತ್ತಾನೆ ''. '' ದಾಂಬಲದ ಹರಿ ನಾರಾಯಣರು ದುರ್ಬುದ್ಧಿಗಳು. ವಿಪ್ರನನ್ನು 'ಆಚಾರ್ಯ' ಎಂದು ಕರೆಯುವುದಿಲ್ಲ. ಸುಧಾ ಆಗಿದೆ ಎಂದು ಜಂಭವನ್ನು ಮಾಡುತ್ತಾರೆ. ಅವರು ಮದಾಂಧರು, ಆಖ್ಯಾನ ದ್ವೇಷಿಗಳು ''. " ಲಕ್ಷ್ಮೀಪತಿ ಮಾತ್ರ ಹಾಗಲ್ಲ, ಲೇಖನ ಮತ್ತು ವಾಚನಗಳಿಂದ ಪುಣ್ಯ ಗಳಿಸುತ್ತಾನೆ ". ಹೇ ವಿಪ್ರ ! ನಿನ್ನ ಮಗನ ಕಾಲುಬಳೆ ಹೋಯಿತು. ಸ್ತ್ರೀವಶವಾಯಿತು, ನಂತರ ಯಮುನ ಪಾಲಾಯಿತು. ಇಂಥ ಲೌಕಿಕ ಇನ್ನು ಹೇಳುವುದಿಲ್ಲ. ಈಗ ಜನರು ಆಖ್ಯಾನ ವಿಷಯದಲ್ಲಿ ತುಂಬ ಗರ್ವದ ಮಾತುಗಳನ್ನು ಆಡುತ್ತಾರೆ. ಒಬ್ಬ ಇದು ವಿಪ್ರನ ಕೃತಿಯೇ ಎನ್ನುತ್ತಾನೆ. ಇನ್ನೊಬ್ಬ ಅಲೌಕಿಕ ಗುರುಕೃತ, ಲೌಕಿಕ ವಿಪ್ರಕೃತ ಎನ್ನುತ್ತಾನೆ, ತಮ್ಮಣ್ಣ "ಈ ವಿಪ್ರ ಎಲ್ಲಾ ಕಡೆ ಏಕೆ ತನ್ನ ದಾರಿದ್ರ್ಯ ವರ್ಣಿಸುತ್ತಾನೆ ? " ಎಂದು ನಿಂದಿಸುತ್ತಾನೆ. ಇವರೆಲ್ಲರೂ ಹೊಟ್ಟೆಗಿಚ್ಚಿನ ಪಾಪಿಗಳು. '' ಆಖ್ಯಾನ ಆರ್ಷೇಯ, ಅನಿಂದ್ಯ '' ಎಂದು ತಿಳಿದಿಲ್ಲ. " ಹೇ ಶ್ರೀಪತೇ ! ನಿನಗೆ ಲಕ್ಷ್ಮೀಕಟಾಕ್ಷ ಆಗುತ್ತದೆ, ವಿಪ್ರನನ್ನು ನೋಡಿಕೋ, ಅವನಿಗೆ ಒಂದು ಗಂಡಾಂತರ ಕಳೆಯಿತು, ಅಲ್ಲಿವರೆಗೆ '' ವಿಪ್ರಪ್ರಾಣಾವಧಿ ''

ಎಂಬ ನನ್ನ ಪ್ರತಿಜ್ಞೆ ಪೂರ್ಣವಾಯಿತು, ಇನ್ನೊಂದು ಪ್ರಾಣಾವಧಿ ಪರ್ಯಂತ ಹೇಳುತ್ತೇನೋ
ಇಲ್ಲವೋ. ಪ್ರತಿಜ್ಞಾ ಹಾನಿಯಂತೂ ತಪ್ಪಿತು. "ಬ್ರಾಹ್ಮಣಸ್ಯ ಕೃತೇ ಮಾನಸ್ತದಂತರ್ಯಾಮಿಣೋಮಮ"
(ಬ್ರಾಹ್ಮಣನಿಗೆ ಮಾಡಿದ ಮರ್ಯಾದೆ ಅಂತರ್ಯಾಮಿಯಾದ ನನಗೆ ಆಗುತ್ತೆ) ಎಂಬ ಶ್ಲೋಕವನ್ನು ನೀನು
ಅಲ್ಲಲ್ಲಿ ಪಠಿಸು, ಜನರ ಸ್ವರೂಪ ಹೊರಬೀಳುತ್ತದೆ. ಮಠದ ಭೂಮಿಯನ್ನು ಆಕ್ರಮಿಸುವವರು
ಹಾಳಾಗುತ್ತಾರೆ ". " ಲಕ್ಷ್ಮೀಪತೇ ! ನಿನಗೆ ಯಾವ ಗಾಳಿ ಬೀಸಿತು ? ಮಠದ ದಕ್ಷಿಣ ಭಾಗದ
ಭೂಮಿಯನ್ನು ಸ್ವಲ್ಪ ಆಕ್ರಮಿಸಿದ್ದಿ, ಬಿಟ್ಟುಬಿಡು, ನನ್ನ ಶಿಷ್ಯರೆಲ್ಲರೂ ' ಆಚಾರ್ಯ' ಎಂದೇ ಬ್ರಾಹ್ಮಣ
ನನ್ನು ಗೌರವಿಸುತ್ತಾರೆ. ಈ ದಾಂಬಿಲ ನಶ್ಯ ಛಟದ ಬ್ರಾಹ್ಮಣಾಧಮ. ಹೃದಯದಲ್ಲಿ ಹಾಲಹಲಯುಕ್ತನು.
ಅವನ ಮಗ ನಾರಾಯಣನೂ ಹಾಗೆಯೇ, ಅವರು ವೃಂದಾವನಾಚಾರ್ಯರೆಂದು ಸಂಬೋಧನೆ ಮಾಡಿದರೆ
ನಾಲಿಗೆ ಸುಟ್ಟಂತೆ ತಿಳಿಯುತ್ತಾರೆ; ಕ್ರೂರವಾದ ಭರಣೀ ನಕ್ಷತ್ರದಲ್ಲಿ ಹುಟ್ಟಿದವನು ಆ ನಾರಾಯಣ;
ತಂದೆ ಮಕ್ಕಳಿಬ್ಬರೂ '' ನನ್ನ ಪಾದ ಸ್ಮರಿಸುವವನು ಪಾಪಿ, '' ಎನ್ನುತ್ತಾರೆ. ಇನ್ನು ಚಿಂತಾಮಣಿ
ಆಚಾರ್ಯ ನಾಮಕನು ಶ್ರುತಿಗಳಿಗೆಲ್ಲಾ ಸ್ತ್ರೀ ಪರವಾಗಿ ಅರ್ಥ ಯೋಜನೆ ಮಾಡುವವನು, ಅನ್ಯಾಯ
ಮಾಡಿ ವಂಚನೆಯಿಂದ ದುಡ್ಡು ಮಾಡಿಕೊಂಡು ಕಾಡಿಗೆ ಓಡಿ ಹೋಗಿದ್ದಾನೆ. ಇಂಥ ಪಾಪಿಯ ಮಗ
ನಾವರೂ ಆ ಚಿಂತಾಮಣಿಯವರ ಪುತ್ರ ಆಖ್ಯಾನ ಪಾರಾಯಣ ಮಾಡಿದರೆ ಅವನ ಸಮಾನವಿಲ್ಲವೆನಿಸಿ
ಬಿಡುತ್ತೇನೆ. ಇನ್ನು ಭಕ್ತ ಕೃಷ್ಣ ಇದ್ದಾನೆ, ಅವನು ಸಾಧು, ಅವನನ್ನು ಕಾಪಾಡುತ್ತೇನೆ, ಹೇ ಸೀತಾಪತೆ !
ನಿನ್ನ ಭಕ್ತಿ ಬೆಳೆದುಹೋಗಿದೆ, ಮಗ, ಅಳಿಯ ಎಲ್ಲರೂ ನನ್ನ ಭಕ್ತರೇ. '' ನೂರು ವರ್ಷ ಬಾಳು ''
ಎನ್ನುತ್ತಾರೆ. '' ಹೇ ವಿಠ್ಠಲ ! ಬ್ರಾಹ್ಮಣನನ್ನು ಮುಂದಕ್ಕೆ ತರುವುದಿಲ್ಲವಲ್ಲ. ಅವನಿಗೆ ಬೇಕಾದ್ದನ್ನು
ಮಾಡಿದರೆ ನಿನಗೆ ಎಲ್ಲಾ ಚೆನ್ನಾಗಿರುತ್ತೆ, ದುಡ್ಡು ಉಪಾರ ಸ್ತ್ರೀ ಮೂಲಕ ಬರುತ್ತೆ ''. ಹೀಗೆ
ಎಲ್ಲಾ ಶಿಷ್ಯರಿಗೂ ಬುದ್ಧಿ ಹೇಳಿ ಅವರನ್ನು ಹೊಗಳಿದ್ದಾರೆ. ಶಿಷ್ಯರನ್ನೇಕೆ ಹೊಗಳಬೇಕೆಂದು ಶಂಕಿ
ಸುವವರಿಗೆ ಹೇಳುತ್ತಾರೆ. '' ಗುಣವುಳ್ಳ ಶಿಷ್ಯರ ಗುಣಸ್ತವನ ಮಾಡಿ ಅವರ ಗುಣ ವೃದ್ಧಿ ಮಾಡುವುದೂ
ಸ್ವಭಾವ ದೋಷಗಳನ್ನು ದೂಷಣೆ ಮಾಡುವುದೂ ಗುಣ, ಅದು ದೋಷವಲ್ಲ. ನಾನು ಸಾರಾಸಾರ
ತಿಳಿದ ಹಂಸನಂತೆ, ಪರಮಹಂಸನಷ್ಟೇ ! ಸಚ್ಛಿಷ್ಯರ ಗುಣಸ್ತುತಿಮಾಡಿ ಅಸಜ್ಜನರನ್ನು ತ್ಯಜಿಸುತ್ತೇನೆ,
ಆದರೆ ಭಾಗ್ಯ ಯುಕ್ತನೆಂದು ದೋಷಿ ಪುರಸ್ಕಾರ ಮಾಡುವುದಿಲ್ಲ. ದರಿದ್ರನೆಂದು ಗುಣಿಯನ್ನು ಉಪೇಕ್ಷಿ
ಸುವುದಿಲ್ಲ. ನಾನು '' ರಾಗ ದ್ವೇಷ ರಹಿತ '' ಎಂದಿದ್ದಾರೆ. ಇದೆಲ್ಲಾ ಸೇವೆ ಮಾಡುವ ಭಕ್ತ ಜನರಿಗೆ
ಗುಣವೃದ್ಧಿ ಮಾಡುವ ಗುರುರಾಜರ ಕೌಶಲ, ಶ್ರೀಕೃಷ್ಣಾರ್ಪಣಮಸ್ತು.

ಹದಿನೆಂಟನೆಯ ಅಧ್ಯಾಯ 108 ಶ್ಲೋಕ 13 ಪ್ರಕರಣದ್ದು. ಗುರುರಾಜರು
ಹೇಳುತ್ತಾರೆ :- '' ವಿಪ್ರನೇ ! ಈ ಗ್ರಂಥ ದೈವಿಕ ಗ್ರಂಥ. ಮಂದರ ಪರ್ವತದಲ್ಲಿ ಶರ್ವಾದಿ ದೇವತೆ
ಗಳು ಮೌರ್ವೀ ಸೌಟಿನಲ್ಲಿ ಹೋಮ ಮಾಡಿ ದೇವರನ್ನು ಪ್ರಾರ್ಥಿಸಿ ನನ್ನನ್ನು ಕೇಳಿಕೊಂಡ ಮೇಲೆ
ನನ್ನಿಂದ ರಚಿತವಾದುದು. ಇದರ ಅರ್ಥ ಹಯಗ್ರೀವ ಮುನಿಗೆ ತಿಳಿಯುತ್ತದೆ. ಆ ಮುನಿ ಬರಲಿ,
ವೃಂದಾವನವನ್ನು ನೋಡಿ ಆನಂದದಿಂದ ಈ ಆಖ್ಯಾನ ವ್ಯಾಖ್ಯಾನ ಮಾಡುತ್ತಾನೆ, (ಅವನು ಅಪರೋಕ್ಷ
ಜ್ಞಾನಿ, ಯೋಗಿ ಎಂದು ಭಾವ). ಹದಿನಾರು ಅಧ್ಯಾಯ ವ್ಯಾಖ್ಯಾನ ಮಾಡಿ ಗೌಡ ದೇಶದವರಿಗೆಲ್ಲಾ

ಹಿತ ಮಾಡುತ್ತಾನೆ. ಕರ್ನಾಟಕ, ಉತ್ತರ, ಚೋಲ ಮುಂತಾದ ದೇಶಗಳಲ್ಲೂ ಬಹುವಿಧ ವ್ಯಾಖ್ಯಾನ ಯುಕ್ತವಾಗಿ ಇದು ಮೆರೆಯುತ್ತದೆ ''. " ಆಷಾಢದಲ್ಲಿ ಹೋಮ ಮಾಡಿದರೆ ''ಕ್ರತುಂ ಕೋಟಿ ಫಲ ಪ್ರದಾ ". ಹದಿನಾರು ಅಧ್ಯಾಯ ಪಾರಾಯಣ ಮಾಡಿದರೆ ನನಗೆ ಇಷ್ಟನಾದ ಶಿಷ್ಯನಾಗುತ್ತಾನೆ. ಹನ್ನೆರಡ ರಿಂದ ಸ್ವರ್ಗದಲ್ಲಿ ಮೆರೆಯುತ್ತಾನೆ. ಎಂಟರಿಂದಲೂ ಅಭೀಷ್ಟ ಪ್ರಾಪ್ತವಾಗುತ್ತೆ. ಸೇವಕ, ವೇದವೇದ್ಯರ ಸನ್ನಿಧಿಯಲ್ಲಿ ಕುಳಿತು, ನಾಂದೀ ಪದ್ಯ ಹೇಳಿ ಆರಂಭಿಸಿ ಅಧ್ಯಾಯ ಮುಗಿದ ಮೇಲೆ ಇತಿ ಶ್ರೀ ಇತ್ಯಾದಿ ನಾಲ್ಕು ಶ್ಲೋಕಗಳನ್ನೂ ಪ್ರತಿ ಅಧ್ಯಾಯಾಂತ್ಯದಲ್ಲೂ ಹೇಳುತ್ತಾ ಪಾರಾಯಣ ಮುಗಿಸಿ ಅರ್ಪಿಸಬೇಕು. " ವಿಪ್ರನೇ ! ನಿನ್ನ ವಿಷಯದಲ್ಲಿ ನನಗೂ ಪ್ರಾಣ ದೇವರಿಗೂ ಸಂವಾದವಾಯಿತು. '' ಆಯುಸ್ಸು ಆಯಿತು, ಒಯ್ಯುತ್ತೇನೆ '' ಎಂದು ಅವರು ಹೇಳಿದರು. " ನನ್ನ ಪ್ರಚಾರ ಕಾರ್ಯ ಮುಗಿದಿಲ್ಲ, ಈಗಲೇ ಒಯ್ಯಬೇಡಿ " ಎಂದು ನಾನು ಹೇಳಿದೆ, ಆಗ ಮಧ್ಯೇ ವಾಮನಸ್ವಾಮಿ ಮಾತಾಡಿ " ವಾದಿರಾಜ ಹೇಳಿದಂತೆ ಆಗಲಿ, ಪ್ರಾಣರಾಜ ! ಪ್ರತಿ ಏಕಾದಶೀ ಅವನನ್ನು ಕೇಳು, ನಿಮ್ಮ ಆಖ್ಯಾನ ಮುಗಿಯಿತೇ ? ಎಂದು; ಅವನು ಒಪ್ಪಿದಾಗಲೇ ನೀನು ವಿಪ್ರನನ್ನು ಕರೆದುಕೊಂಡು ಹೋಗು !" ಎಂದನು. ಪ್ರಾಣ ದೇವರು ಹಾಗೇ ಒಪ್ಪಿದರು. ನೀನು ನನ್ನ ಅಚಿಂತ್ಯ ಶಕ್ತಿ ನೆನೆಸಿಕೋ, ಪರೀಕ್ಷಿತನನ್ನು ಶ್ರೀಕೃಷ್ಣ ಉಳಿಸಿದಂತೆ ನಿನ್ನನ್ನು ನಾನು ಉಳಿಸಿದ್ದೇನೆ. ಗುರುಭಕ್ತಿ ಚೆನ್ನಾಗಿ ಮಾಡು.'' ಮುಂದೆ ಶೇಷನಿಗೆ ಹೇಳಿದ್ದಾರೆ. '' ನಾನು ' ಯೊಗ್ಯ ' ಪಾಪಿಗಳನ್ನು ನರಕದಿಂದ ಉದ್ಧಾರಮಾಡಲು ಯಮಲೋಕಕ್ಕೆ ಹೋಗಿದ್ದೆ. ಆಗ ಯಮ ' ನಿಮ್ಮನ್ನು ಯಾವ ಮಾನವರು ಋಜುವನ್ನಾಗಿ ತಿಳಿಯದೆ ನಿಂದಿಸುತ್ತಾರೆಯೋ ಅವರನ್ನು ನರಕಕ್ಕೆ ಹಾಗದೇ ಬಿಡುವದೇ ಇಲ್ಲ (35)' ಎಂದನು. ಮತ್ತು ಶ್ಲೋಕ 36 ' ವೃಂದಾವನ ಆಖ್ಯಾನದಲ್ಲಿ ಹೇಳಿದ ಮಹಿಮೆ ನಡೆಯುವುದಿಲ್ಲ ' ಎಂದು ಹೇಳುವ ಆತತಾಯಿಗಳನ್ನೂ ಬಿಡುವದಿಲ್ಲ ' ಎಂದು ಪ್ರತಿಜ್ಞೆ ಮಾಡಿದನು. ಜನರು ಕೃತಿಯನ್ನು ಪೂಜಿಸಲಿ. ಬ್ರಾಹ್ಮಣನಿಗೆ ಏನಾದರೂ ಭಿಕ್ಷೆ ನೀಡಲಿ. " ವಿಪ್ರನೇ ! ನೀನು ದುಡ್ಡಿಲ್ಲದಿದ್ದರೆ ನಾಲ್ಕಾರು ಆಖ್ಯಾನದ ಶ್ಲೋಕಗಳನ್ನು ಹೇಳಿಕೊಂಡು ವೃಂದಾವನದ ಸುತ್ತಲೂ ಕುಣಿ. ' ವಿತ್ತಂತವ ಭವಿಷ್ಯತಿ ' (ನಿನಗೆ ದುಡ್ಡು ಬರುವುದು). ಹಾಗೇ ಕ್ರಮೇಣ ಹದಿನೈದು ಅಧ್ಯಾಯ ಗಳಿಂದ ನರ್ತನ ಮಾಡಿದರೆ ಭೀಮಸೇನನನಿಗೆ ದಿಗ್ವಿಜಯದಲ್ಲಿ ಬಂದಷ್ಟು ಪುಣ್ಯ ಬರುತ್ತೆ. ಹೇ ಹಯಗ್ರೀವ ಮುನೇ ! ದುಃಸಂಗಬಿಟ್ಟು ಆಖ್ಯಾನ ಪಾರಾಯಣ ಮಾಡು. ವಿಪ್ರನಲ್ಲಿ ಮೈತ್ರಿ ಹೊಂದು. ಕೃತಿಯ ಮಹಿಮೆಯಲ್ಲಿ ಸಂಶಯ ಬೇಡ, ಯಮನ ಮಾತನ್ನು ಕೇಳು. ಪ್ರತಿಮಲ್ಲರನ್ನು ಖಂಡಿಸು. ಯೋಗಿಯಾಗಿದ್ದಿ, ನಿನಗೆ ಭಯವೇನು ? ನಾನು ಪ್ರೀತಿ ಮಾಡಿದ್ದೇನಾದ್ದರಿಂದ ನನ್ನ ಮರೀಯರೆಲ್ಲರೂ ನಿನ್ನಲ್ಲಿ ವಿಶ್ವಾಸ ಮಾಡುತ್ತಾರೆ. ನೀನು ಮಾತ್ರ ' ದೇವರೇ ನನ್ನಲ್ಲಿ ಒಲಿದಿದ್ದಾನೆ. ಈ ಆಖ್ಯಾನ ಪಾರಾಯಣದಿಂದೇನು ? ' ಎಂದು ಉಪೇಕ್ಷೆ ಮಾಡಬೇಡ. ಅಲ್ಪ ಪ್ರಯತ್ನದಿಂದ ಮಹಾಲಾಭ ಬಂದರೆ ಏತಕ್ಕೆ ಬಿಡಬೇಕು ? " " ಹೇ ವಿಠ್ಠಲ ! ಹೇ ವಾದಿರಾಜಭಟ್ಟ ! ವಿಪ್ರ ಪೋಷಣೆಯಿಂದ ನಿಮಗೆ ನನ್ನ ಅನುಗ್ರಹದಿಂದ ಅಧಿಕ ಲಾಭವಾಗುತ್ತೆ, ಬಿಡಬೇಡಿ. ಹೇ ನರಸಿಂಹ ! ಸರಸಭಾರತಿಯನ್ನು ಕಂಠಪಾಠ ಮಾಡಿರುವಂತೆ ಆಖ್ಯಾನವನ್ನೂ ಬಾಯಿಪಾಠ ಮಾಡು. ಹಯಗ್ರೀವ ಮುನ್ಯಾದಿಗಳಿಗೆ ಬೋಧಿಸು. ಭೂಪನಿಗೆ ಗ್ರಾಮವನ್ನು ಬ್ರಾಹ್ಮಣರಿಗೆ ಬಿಡುವಂತೆ ಹೇಳು. ಶೇಷಾದ್ರಿ ಪಂಡಿತ ನಿನ್ನ

ದ್ರೋಹದಿಂದ ಕಣ್ಣು ಹಾಳು ಮಾಡಿಕೊಂಡಿದ್ದಾನೆ. ನೋಡು, ನಿನ್ನ ಶಿಷ್ಯರೇ ಅವನನ್ನು ನಿಗ್ರಹಿಸಿದ್ದಾರೆ. ದ್ರುಪದನನ್ನು ದ್ರೋಣ ಶಿಷ್ಯರು ನಿಗ್ರಹಿಸಿದಂತೆ ಆಗಿದೆ. ' ಅನಾಥಂತಂಸಮುದ್ಧರ ' (ಆ ಅನಾಥನನ್ನು ಉದ್ಧರಿಸು) ಎಂದು ಶೇಷಾದ್ರಿ ಪಂಡಿತನ ಸ್ವೋತ್ತಮರನ್ನು ಸಂತೈಸಿದ್ದಾರೆ. (ಹಾಗೇ ನಾವೂ ಸ್ವೋತ್ತಮ ದ್ರೋಹ ಕಟ್ಟಿಕೊಂಡಿದ್ದರೆ ಗುರುರಾಜರು ನಮಗಾಗಿ ಆ ಸ್ವೋತ್ತಮರನ್ನು ಕ್ಷಮಿಸುವಂತೆ ಪ್ರೇರಿಸುತ್ತಾರೆಂದು ಸೂಚನೆ). " ಬ್ರಹ್ಮದ್ರೋಹ ಒಳ್ಳೆಯದಲ್ಲ. ವಿನಾಶಕಾಲದಲ್ಲೇ ಅಂಥ ಬ್ರಾಹ್ಮಣ ದ್ರೋಹದ ಬುದ್ಧಿ ಬರುತ್ತೆ. ಕಲಿ ಆವೇಶದ ಪ್ರಭಾವ. ಆದರೆ ಆ ಶೇಷಾದ್ರಿ ಸ್ವರೂಪ ಒಳ್ಳೆಯದು. ಕ್ಷಮಿಸು " ಎಂದಿದ್ದಾರೆ. ಇನ್ನೂ ನರಸಿಂಹ್ಮನಿಗೆ ಹೇಳುತ್ತಾರೆ ' ನರಸಿಂಹ್ಮ ! ನಿನ್ನ ಪ್ರಭಾವದಿಂದ ವಿಪ್ರ, ಹಯಗ್ರೀವ, ಶೇಷಾದಿ ಜನತೆಗೂ ಕೂಡ ಆಖ್ಯಾನದಲ್ಲಿ ದಾರ್ಢ್ಯ ವೃದ್ಧಿ ಆಗುತ್ತೆ. ಆ ಕೃತಿ ಋಜುಗಳೇ ಮಾಡಿದ್ದು, ವಿಪ್ರೋಕ್ತಿಯಲ್ಲ. ಇನ್ನಾರಿಗೂ ತಿಳಿದ ವಿಷಯವಲ್ಲ. ಇನ್ನಾರಾದರೂ ಹೀಗೆ ಮಂತ್ರ ಹೇಳಲಾರರು ಎಂದು ಗೊತ್ತಾಗಂತ್ತೆ. ನರಸಿಂಹ್ಮ ! ನಿನ್ನ ಸ್ವಂತ ದುಃಖವನ್ನು ಬಿಡಿಸಿ ಬಿಟ್ಟಿದ್ದೇನೆ. ' ಕಲತ್ರಪುತ್ರಾಣಾಂ ಹರಿಷ್ಯೇಮ್ಲೇಂಥ ಬಂಧನಂ ' (ಹೆಂಡತಿ ಮಕ್ಕಳಿಗೆಲ್ಲಾ ತುರಕನಿಂದ ಪ್ರಸಕ್ತ ಕಾರಾಗ್ರಹಬಂಧ ತಪ್ಪಿಸುತ್ತೇನೆ ಎಂದರ್ಥ. ಅಣ್ಣಯ್ಯಾಚಾರ್ಯರಿಗೆ ಸವಣೂರಿನ ನವಾಬನ ದೆಸೆಯಿಂದ ಇಂಥ ದುಃಖ ಪ್ರಸಂಗ ತಪ್ಪಿದೆ.) " ವಿಪ್ರನೇ ! ತಪ್ಪು ತಪ್ಪು ಬರೆಸಿದ್ದಿ, ನನ್ನ ಕೈಯನ್ನು ನಿನ್ನ ತಲೆಯ ಮೇಲೆ ಇಡುತ್ತೇನೆ. ನಿನ್ನ ಅಜ್ಞಾನವೇ ಹೋಗುತ್ತೆ " ಎಂದಿದ್ದಾರೆ. ಮುಂಚೆ ನರಸಿಂಹ್ಮನಿಗೆ ಹೇಳುತ್ತಾ ' ಈ ಕೃತಿ ಎರಡು ಸಾವಿರ ಶ್ಲೋಕಕ್ಕೆ ಮುಗಿಯುತ್ತೆ. ನಂತರ ದೇವರ ಸೇವೆ ಎಂದರೆ ದೇವರ ಮುಂದೆ ಶಂಖ ಊದುತ್ತಾ ಇರುತ್ತೇನೆ. ಜನರು ಕೃತಿಯನ್ನು ಹೇಗೆ ಉಪಯೋಗಿಸಿ ಕೊಳ್ಳುತ್ತಾರೆ. ನೋಡುತ್ತೇನೆ ' ಎಂದಿದ್ದಾರೆ. ಹೇ ಹಯಗ್ರೀವ ಮುನಿ ! ಆಖ್ಯಾನವನ್ನು ಶುಭ ನಕ್ಷತ್ರ ದಲ್ಲಿ ಆರಂಭಿಸಿ ನೂರು ನೂರು ಶ್ಲೋಕ ಹೇಳಿಸಿಕೊ ! ನನಗೆ ಪುತ್ರತುಲ್ಯನಾದ ವಿಪ್ರನಲ್ಲಿ ಸೌಮ್ಯ ಸ್ನೇಹಮಾಡು. ಅವನಿಲ್ಲದಿದ್ದರೆ ಸೋದೆಯ ಯಾವ ಉತ್ಸವವೂ ಶೋಭಿಸುವುದಿಲ್ಲ. ಆ ಯತೀಶ್ವರನೂ ಬರಲಿ ಎಂದು ಕಾಯುತ್ತಿದ್ದೇನೆ. ನೀನೂ ಅವನೂ ಸೇರಿಕೊಂಡು ಸೋದೆಗೆ ಬಂದು ಇಲ್ಲಿ ಎಲ್ಲರಿಂದಲೂ ಆದೃತರಾಗಿ ದೇವರ ಸೇವೆ ಮತ್ತು ನನ್ನ ಸೇವೆಯನ್ನು ಚೆನ್ನಾಗಿ ಮಾಡಿ. ಸಂತರು ನಿಮ್ಮನ್ನು ನೋಡಿ ಸಂತೋಷಿಸಲಿ". " ವಿಪ್ರನೇ ಪುನಃ ವ್ಯತ್ಯಾಸ ಬರೆಸಿದ್ದಿ. "ತಸ್ಥಿವಾಂಸಿ" ಎಂದು ನಾನು ಹೇಳಿದ್ದಕ್ಕೆ '' ತಸ್ಥುಷಾಂಸಿ " ಎಂದು ಬರೆಸಿದ್ದಿ. ಇದರ ಸೂಚನೆ ಏನು ಗೊತ್ತೆ ? ನನ್ನ ಅಸ್ಥಿಗಳು ಕ್ಲೀಬವಾಗಿ ನನಗೆ ಪುನರ್ಜನ್ಮ ಕೊಡುವುದಿಲ್ಲ ಎಂಬ ಅರ್ಥದಿಂದ ನಾನು ನಪುಸಕಲಿಂಗ ಶಬ್ದ ಪ್ರಯೋಗ ಮಾಡಿದ್ದೆ. ನಿಮ್ಮಗಳ ಅಸ್ಥಿಗಳು ಇನ್ನೂ ಪುನಃ ಪುನಃ ನಿಮ್ಮನ್ನು ಹುಟ್ಟಿಸುತ್ತವೆ. ಆದ್ದರಿಂದ ಸಂಸಾರ ವೃದ್ಧಿಯೇ ಆಗುತ್ತದೆ. ಹೀಗೆ ಅರ್ಥ ವ್ಯತ್ಯಾಸ ಇದೆ. ಇನ್ನು ಮೇಲೆ ಸರಿಯಾಗಿ ಬರೆಸು. '' ವಿದ್ವಾಂಸರೇ, ನನ್ನ ಲಿಂಗ, ವಚನ, ಪ್ರತ್ಯಯ ಪ್ರಯೋಗಗಳಲ್ಲಿ ನೀವು ದೋಷ ಹುಡುಕ ಬೇಡಿ. ನನಗೆ ಅಜ್ಞತಾ ಇಲ್ಲ. ॥ ಶ್ರೀ ಕೃಷ್ಣಾರ್ಪಣಮಸ್ತು ॥

ಹತ್ತೊಂಭತ್ತನೆಯ ಅಧ್ಯಾಯ 107 ಶ್ಲೋಕ 14 ಪ್ರಕರಣಾತ್ಮಕ. ವಾದಿರಾಜರು ಪ್ರಸನ್ನರಾಗಿ ಬ್ರಾಹ್ಮಣನಿಗೆ ಹೇಳುತ್ತಾರೆ ; '' ಬ್ರಾಹ್ಮಣನೇ ! ನೀನು ಭಿಕ್ಷಾಮಾತುಗಳನ್ನು ಬಿಡು.

ಯಾರು ಭಕ್ತಿಯಿಂದ ಕರೆಯುತ್ತಾರೋ ಅವರ ಮನೆಗೆ ಹೋಗು. ವೃಂದಾವನಸ್ಥ ನನ್ನ ಸೇವೆಯನ್ನು ಬಿಡದೆ ಮಾಡು". ನಂತರ ಅಪ್ಪಣ್ಣ ಕೃಷ್ಣಭಟ್ಟರನ್ನುನಿಂದಿಸುತ್ತಾರೆ. "ಅಪ್ಪಣ್ಣ ವೃಂದಾವನಾಚಾರ್ಯರ ಅಪಕರ್ಷಕ. ಸುಳ್ಳಿನ ಮನುಷ್ಯ. ಆಖ್ಯಾನ ನಿಂದಕ. ನನ್ನ ತಾಯಿ ಶ್ರಾದ್ಧಕ್ಕೆ ಇವನು ಗರ್ಭಿಣಿ ಪತಿಯಾಗಿದ್ದರೂ ಬ್ರಾಹ್ಮಣಾರ್ಥಕ್ಕೆ ಹೋಗಿದ್ದ. ಕೃಷ್ಣದೇವರು ಶ್ರೀವತ್ಸ ಧರಿಸಿದ್ದಾರೆ. ಕೃಷ್ಣಭಟ್ಟ ಇದಕ್ಕೆ ವಿಪರೀತವಾಗಿ ವತ್ಸ ಶ್ರೀ ಧಾರಕ. (ಪಶು ಎಂದರ್ಥ). ಕೃಷ್ಣ ಕ್ಷೇತ್ರದಲ್ಲಿ ಪಾಪ ಮಾಡಿದರೆ ವಜ್ರಲೇಪವಾಗುತ್ತದೆ. ಈ ಕೃಷ್ಣ ಭಟ್ಟ ಅಂಥ ಕೃಷ್ಣ ಕ್ಷೇತ್ರದ ಪಾಪಿ. ಕೇವಲ ಸ್ವಾರ್ಥ. ಆದಕ್ಕೇ ಇವನು ವಂಶ-ಹೀನನಾಗಿದ್ದಾನೆ. ಸಮೂಹಕ್ಕೆ ಪಾಪ ಬಂದರೆ ಸಮೂಹವೇ ಒಟ್ಟಾಗಿ ಹಡಗು ಮುಳುಗಿಯೋ, ಅಥವಾ ಯಾನ ಬಿದ್ದೋ ಎಲ್ಲರೂ ಸಾಯುತ್ತಾರೆ. ಈ ಅಪ್ಪಣ್ಣ ಸಮೂಹ ನಾಯಕ. ನಂತರ ಲಕ್ಷ್ಮೀ ಪತಿಗೆ ಹೇಳುತ್ತಾರೆ. ಶ್ಲೋಕ 15. (ಅರ್ಥ :– ಈ ನನ್ನ ದೈವಿಕ ಗ್ರಂಥವನ್ನು ಯಾವ ದುರ್ಜನರು ಹೃದಯ ಗ್ರಂಥಿಯುಕ್ತರಾಗಿ ಎಂದರೆ ಕೆಟ್ಟ ಹಟದಿಂದ ವಿಶ್ವಾಸ ಮಾಡುವುದಿಲ್ಲವೋ ಅವರೆಲ್ಲರನ್ನೂ ಯಮಕಿಂಕರರು ಬಂಧಿಸುತ್ತಾರೆ. ಆದರೆ ಆಖ್ಯಾನ ಪ್ರವಚನ ಶೀಲನು ಮತ್ತು ಪಾರಾಯಣ ಮಾಡುವವನು ಯಮಭಟರ ವಶನಾಗುವುದಿಲ್ಲ. "ಕೋವಾ ಮತ್ಸದೃಶೋ ಯತಿಃ" (ನನ್ನ ಸದೃಶವಾದ ಯತಿಗಳು ಯಾರಿದ್ದಾರೆ?) ಎಂದಿದ್ದಾರೆ. "ಹೇ ವೃಂದಾವನ ಸ್ವಾಮಿನ್! ನನ್ನ ಭಕ್ತ ವಿಪ್ರನಿಗೆ ಅನ್ನ ನೀಡು. ಮಠದ ಸ್ವಾಮಿಗಳ ಮೂಲಕ ಸುಖಪಡಿಸು. ಅವನ ದುಷ್ಕರ್ಮ ಬಲವಾಗಿದ್ದರೆ ನಿನ್ನ ಕೋಮಲ ಕೈಯನ್ನು ಅವನ ತಲೆಯ ಮೇಲಿಟ್ಟು ಆಶೀರ್ವದಿಸು. ನಾನು ಶರಣಾಗತನನ್ನು ಬಿಡಲಾರೆ" ಎಂದಿದ್ದಾರೆ.

ಹೇ ಲಕ್ಷ್ಮೀ ಪತೇ! ವಿಪ್ರನಿಗೆ ಗೋವನ್ನು ಕೊಡಿಸುತ್ತೇನೆ ಎಂದು ಹೇಳಿ ನೀನು ಏನನ್ನೂ ಕೊಡಿಸಲಿಲ್ಲ. ಸುಳ್ಳು ಹೇಳಬೇಡ. ಹಯಗ್ರೀವ ಆರಾಧನೆ ಮಾಡಿ ಎಲ್ಲಾ ಪಾಪವನ್ನು ಕಳೆದುಕೊ". "ಶ್ರೀಪತೇ! ಈ ಹಯಗ್ರೀವ ಮುನಿಗೆ ಆಖ್ಯಾನ ಉಪದೇಶಮಾಡು. ಆತ ಅರ್ಹ". ಹೇ ಹಯಗ್ರೀವ ಮುನಿಯೇ! ವೃಂದಾವನವನ್ನು ನೋಡು. ಆಖ್ಯಾನವನ್ನು ಶ್ರವಣಮಾಡಿ ಪಾರಾಯಣ ಮಾಡು; "ಕೋಪರಹಿತಶ್ಚೇತ್ ಸುಪಾವನಂ" (ಕೋಪವಿಲ್ಲದೆ ಪಠಿಸಿದರೆ ಸುಪಾವನ). ವಿಪ್ರನಿಗೆ ಏನಾದರೂ ಸ್ವಲ್ಪ ಹಿತಮಾಡು" ಎಂದಿದ್ದಾರೆ. ಇನ್ನು ಮೇಲೆ ಕೃಷ್ಣಾಚಾರ್ಯ ಸುತ ಶ್ರೀನಿವಾಸನ ವಿಷಯ ಹೇಳುತ್ತಾರೆ. ಆತನೇನೊ ವಿಷ್ಣು ಭಕ್ತ. ಆದರೆ ಆಸೆ ಬಿಟ್ಟಿಲ್ಲ. ಕೋಪ ಹೋಗಿಲ್ಲ. ದೇವರ ಸಂಕಲ್ಪ. ವೈಷ್ಣವರ ನಿಂದೆ ಮಾಡುತ್ತಾನೆ. ಆ ಬ್ರಹ್ಮ ನಿಂದೆ ತುಂಬಾ ಕೆಟ್ಟದ್ದು. ಈ ಸಂಪೇಸರು ಗ್ರಾಮವನ್ನು ರಾಜನು ಇನ್ನೂ ಬ್ರಾಹ್ಮಣರಿಗೆ ವಾಪಸು ಕೊಟ್ಟಿಲ್ಲ. ರಾಜನಿಗೆ ಯಾರು ಹಿತ ಹೇಳುತ್ತಾರೆ? ಸ್ವಾರ್ಥಕ್ಕಾಗಿ ಎಷ್ಟೋಜನ ಬದುಕುತ್ತಾರೆ. ಬ್ರಾಹ್ಮಣರಿಗಾಗಿ ಬದುಕುವವರೇ ಸಜ್ಜನರು. ಸೀತಾಪತೇ! ನೀನು ರಾಜನಿಗೆ ಹೇಳಿ ಅದರಿಂದ ಮೇರುವಿನಷ್ಟು ಪುಣ್ಯಗಳಿಸು". "ಹೇ ಶ್ರೀಪತೇ! ಈ ಕೃಷ್ಣಾಚಾರ್ಯಸುತ ಶ್ರೀನಿವಾಸ "ಈ ಬ್ರಾಹ್ಮಣರಿಗೆ ಏತಕ್ಕೆ ಜಹಗೀರಿ?" ಎಂದು ಗಟ್ಟಿಯಾಗಿ ಬೈದನು. ಅದನ್ನು ಕೇಳಿ ಎಲ್ಲಾ ಬ್ರಾಹ್ಮಣರೂ, ಯತಿಗಳೂ ಕೂಡ ಬಾಯಿ ಮುಚ್ಚಿಕೊಂಡು ಸುಮ್ಮನಿದ್ದರು. (ಯಾರೂ ಮುಂದುವರಿಸಿ ರಾಜನಿಗೆ ಹೇಳಲೇ ಇಲ್ಲ. ಇನಾಮತಿ

ಬ್ರಾಹ್ಮಣರಿಗೆ ಬರಲೇ ಇಲ್ಲ). ಈ ಧೂರ್ತ ಶ್ರೀನಿವಾಸ ಬ್ರಾಹ್ಮಣ ದ್ರೋಹದಿಂದ ಬ್ರಹ್ಮ ರಾಕ್ಷಸನಾದ, ವೃಂದಾವನಸ್ಥ ಕಾಳಿಯ ಮರ್ದನ ಕೃಷ್ಣಕೃಪೆ ಮಾಡುವವರಿಗೂ ಆ ಬ್ರಹ್ಮ ರಾಕ್ಷಸ ಜನ್ಮ ಅನುಭವಿಸ ಬೇಕಾಯಿತು. ವೃಂದಾವನದ ಸಮೀಪದಲ್ಲಿ ಯಾರೋ ಆಖ್ಯಾನ ಪಾರಾಯಣ ಮಾಡುತ್ತಾ '' ಬಹ್ವೀಃ ಸಮಾಃ ಮಹಾವಹ್ನಿ ಸಂತಪ್ತ ಇವತಪ್ಯತೇ '' (ಬಹು ವರ್ಷಗಳ ಪರ್ಯಂತ ದೊಡ್ಡ ದೆಂಕಿಯಲ್ಲಿ ಹಾಕಿ ಸುಡಲ್ಪಟ್ಟವನಂತೆ ತಪಿಸುತ್ತಾನೆ) ಎಂದು ಪಾರಾಯಣ ಮಾಡಿದ್ದನ್ನು ಶ್ರವಣ ಮಾಡಿದಾಗ ಆ ಕೆಟ್ಟ ಜನ್ಮ ನೀಗಿದ. ಆಗ ನಾನು ಸರ್ಪ ಕವಚ ಧರಿಸಿದ್ದೆ. ಆ ಪಾಪವನ್ನು ಸುಟ್ಟು ಅವನನ್ನು ಕಾಪಾಡಿದೆ ". ಎಂದಿದ್ದಾರೆ. ಹೀಗೆ ಕೃಷ್ಣಾಚಾರ್ಯ ಪುತ್ರ ಶ್ರೀನಿವಾಸನ ಉದ್ಧಾರ ರೀತಿ ಹೇಳಿ ಮುಂದೆ ಚಿಂತಾಮಣಿ ಆಚಾರ್ಯರ ಪುತ್ರ ಲಕ್ಷ್ಮೀನಾರಾಯಣನ ದೌರ್ಜನ್ಯ ವಿವರಿಸುತ್ತಾರೆ. ಈ ದುಷ್ಟನು '' ಕೃತಿ ವಿಪ್ರನದೇ ಎಂದು ನಾನು ಪ್ರಮಾಣ ಮಾಡುತ್ತೇನೆ " ಎನ್ನುತ್ತಾನೆ. ಹಾಗೆ ಮಾಡಿದರೆ ಅವನು ಏಳು ದಿನಕ್ಕೆ ಸಾಯುತ್ತಾನೆ. ಗುರುರಾಜ ಭಕ್ತ ಶೇಷನು ವೃಂದಾವನದ ಸನ್ನಿಧಾನದಲ್ಲಿ ಸುಳ್ಳು ಹೇಳಿದರೆ ಅನರ್ಥ ತಪ್ಪುವುದಿಲ್ಲವೆಂದು ತಿಳಿದು, ಆ ಚಿಂತಾಮಣಿ ಆಚಾರ್ಯರ ಪುತ್ರನನ್ನು ಮೂದಲಿಸಿ ಹೊರಕ್ಕೆ ಕರೆದು '' ನೀನು ವೃಂದಾವನದ ಮುಂದೆ ಕೃತಿ ವಿಪ್ರನದೇ ಎಂದು ಪ್ರಮಾಣ ಮಾಡು; ಕೃತಿ ವಾದಿರಾಜರದ್ದೇ ಎಂದು ನಾನು ಪ್ರಮಾಣ ಮಾಡುತ್ತೇನೆ. ಸುಳ್ಳು ಹೇಳಿದವರು ಸತ್ತು ಹೋಗಲಿ ಒಪ್ಪುತ್ತೀಯೋ ? '' ಎಂದು ಜೋರಿನಿಂದ ಕೇಳಿದನು. ಆದರೆ ಶೇಷನ ಕಾರ್ಯಕ್ಕೆ ಗುರುರಾಜರು ಸಂತೋಷ ಪಡಲಿಲ್ಲ. '' ಶೇಷ ! ಪ್ರಮಾಣ ಮಾಡು ಎಂದು ಬಲವಂತ ಮಾಡಿ ಆ ಪಾಪಿಯನ್ನು ಹಾಗೆ ಮಾಡಿಸಿ ಅವನನ್ನು ಕೊಂದರೆ ನನಗೆ ಅಪ್ರೀತಿಯಾಗುತ್ತೆ. ಅವನು ಎಷ್ಟು ಪಾಪಿಯಾದರೂ ನನ್ನ ಭಕ್ತ. ಅವನನ್ನು ಕೊಲ್ಲಲು ನಾನು ಒಪ್ಪುವುದಿಲ್ಲ '' ಎಂದು ಹೇಳಿ, ಶೇಷನಿಗೆ '' ಸುಮ್ಮನಿರು '' ಎನ್ನುತ್ತಾರೆ. ಆ ಚಿಂತಾಮಣಿ ಆಚಾರ್ಯ ಪುತ್ರನನ್ನು ತಿದ್ದ ಬೇಕೆಂದು ತಾವೇ ಭಯ ಜನಕ ಮಾತಾಡುತ್ತಾರೆ. ಅವನನ್ನು ಶಪಿಸಲಿಲ್ಲ. '' ಕಲಿಯುಗ, ಭಕ್ತರು ಅಪರಾಧ ಮಾಡಿದರೆ ಸಹಿಸಬೇಕು. ದುರಾವೇಶದಿಂದ ಮಲೀಮಸರಾಗುತ್ತಾರೆ ಸ್ವಭಾವ ದೌರ್ಜನ್ಯವಿಲ್ಲದೆ ಆವೇಶದಿಂದ ಅನ್ಯಾಯ ಮಾಡಿದರೆ ಸಾಧುಗಳು ತಾಳಬೇಕು, ಆದರೆ ಅವರ ದಾನಾದಿಗಳನ್ನು ತಿರಸ್ಕರಿಸಬಹುದು. ಸರ್ವದಾ ಅವಿಶ್ವಾಸ ಮಾಡುವ ಮಲೀಮಸರು ತಮ್ಮ ಪಾಪ ದಿಂದಲೇ ಭಸ್ಮೀ ಭೂತರಾಗಿ ಹಾಳಾಗುತ್ತಾರೆ. ಯಮನು ನರಕಕ್ಕೆ ಹಾಕುತ್ತಾನೆ. ನಿಷ್ಕಲಂಕರಿಗೆ ಏನೂ ಆಗುವುದಿಲ್ಲ. ಈ ಲಕ್ಷ್ಮೀನಾರಾಯಣ ಈಗ ದುಷ್ಟನೇ, ಆತ ಇತರರಿಗೆ ವೃಂದಾವನ ಮಹಿಮೆಯಲ್ಲಿ ಸಂಶಯ ತುಂಬಿಸುತ್ತಾನೆ. ಬೇರೆ ಒಬ್ಬ ದುಷ್ಟ. ಅವನ ಹೆಸರೂ ಲಕ್ಷ್ಮೀನಾರಾಯಣ, ಅವನು ಲಕ್ಷ್ಮೀಪತಿ ಮನೆಗೆ ಲಕ್ಷ್ಮೀಪೂಜೆ ದಿವಸ ಹೋಗಿದ್ದಾಗ ಅಲ್ಲಿ ವೃಂದಾವನಾಖ್ಯಾನದ ನಿಂದಾ ಮಾಡಿದ. ಆಗಲೇ ತಲೆ ತಿರುಗಿ ಮೂರ್ಛೆಬಿದ್ದ. ಈ ಚಿಂತಾಮಣಿ ಆಚಾರ್ಯ ಪುತ್ರನೂ ಪಾಪಾಧಿಕ್ಯವನ್ನು ಹೊಂದುತ್ತಾನೆ. ಇವನನ್ನು ಚೆನ್ನಾಗಿ ಬೈಯಿ ಎಂದು ಲಕ್ಷ್ಮೀಪತಿಗೆ ಆಜ್ಞೆ ಮಾಡಿದ್ದಾರೆ. '' ನಾನು ವೃಂದಾವನವು ಭೂಮಿಯಲ್ಲಿರುವವರಿಗೂ ಇರಬೇಕು. ಇವನ ನಿಂದೋಕ್ತಿಯಿಂದ ಇತರರು ಕೆಡುತ್ತಾರೆ. ಹೇ ಹಯಗ್ರೀವದೇವ ! ಇವನ ನಾಲಿಗೆ ಕಠೋರವಾಗಿದೆ, ನನಗೆ ಕೆಟ್ಟ ಹೆಸರು ಬೇಡ. ಕ್ಷಮಾಸಾಗರನಾದ ನೀನೇ ಇವನನ್ನು ಸರಿಮಾಡು '' ಎಂದು ಬೇಡಿದ್ದಾರೆ. '' ನಾನು ಶಾಪಕೊಟ್ಟು ತಪೋಹಾನಿಮಾಡಿ ಕೊಳ್ಳುವುದಿಲ್ಲ. ಅನಂದ ತೀರ್ಥರನ್ನು ಬೈದರೇನೇ ನಾನು ಶಾಪಕೊಡುವುದು. ಈಗ ಕೌಸ್ತುಭರತ್ನಧಾರಿ

ಲಕ್ಷ್ಮೀನಾರಾಯಣ ದೇವರನ್ನೇ ಬೇಡುತ್ತೇನೆ '' ಎಂದಿದ್ದಾರೆ. ಆ ಸ್ವಾಮಿ ಕ್ಷಮಾಸಾಗರ, ಭೂದೇವಿ ಕ್ಷಮಾಪರಳು. ಕ್ಷಮೆಯಿಂದ ಸರ್ವತಪಃಪ್ರಾಪ್ತಿ ಇದೆ. ದ್ರೌಪದೀ ಕ್ಷಮಿಸಿದಳು. ಭೀಮಸೇನ ಕ್ಷಮಿಸಿದ್ದಾನೆ. ಅರ್ಜುನಾದಿಗಳು ಕ್ಷಮಿಸಿದ್ದಾರೆ. ದಾಶರಥಿರಾಮ ದೇವ ಕ್ಷಮಾ ಮಹಿಮೆ ತೋರಿಸಿದ್ದಾನೆ. ಶೇಷ ! ನೀನೂ ಕ್ಷಮೆಯನ್ನು ಅವಲಂಬಿಸು. ಚಿಂತಾಮಣಿ ಆಚಾರ್ಯ ಪುತ್ರನನ್ನು ಕೊಲ್ಲಬೇಡ. ದೊಡ್ಡವರೆಲ್ಲಾ ಕ್ಷಮಾವಂತರು, ನಮಸ್ಕಾರ ಮಾಡಿದರೆ ಕೋಪವನ್ನೇ ಬಿಟ್ಟು ಬಿಡುವರು. ಆ ನಿಃಶ್ರೀನಿವಾಸನಿಗೆ ಈ ಕ್ಷಮಾ ಇಲ್ಲ. ಅವನು ಊರಿಂದೂರಿಗೆ ಓಡುತ್ತಾ ಭಟರಿಂದ ಬಾಧಿಸಲ್ಪಡುತ್ತಾನೆ. ಅವನಿಗೆ ಎಲ್ಲೂ ಮಾನವಿಲ್ಲ, ಕಲಿ ಪ್ರೇರಣೆಯಿಂದ ಬುದ್ಧಿ ಕೆಟ್ಟ ಯೋಗ್ಯರ ವಿಷಯದಲ್ಲಿ ಕ್ಷಮಾ ತಾಳಿದರೆ ತಪೋವೃದ್ಧಿ ಆಗುತ್ತೆ. ದೇವರು ನಮ್ಮನ್ನು ರಕ್ಷಿಸುತ್ತಾನೆ '' ಎಂದಿದ್ದಾರೆ. ಈ ಅಧ್ಯಾಯದಲ್ಲಿ ಬುದ್ಧಿ ಕೆಟ್ಟವರಿಗೆ ಶಿಕ್ಷಣ ಕೊಡುವ ನಿದರ್ಶನಗಳಿವೆ. ಶ್ರೀಕೃಷ್ಣಾರ್ಪಣಮಸ್ತು.

ಇಪ್ಪತ್ತನೆಯ ಅಧ್ಯಾಯ 99 ಶ್ಲೋಕ, 15 ಪ್ರಕರಣಯುಕ್ತ. ಲಕ್ಷ್ಮೀಪತಿಗೆ ಹೇಳುತ್ತಾರೆ. '' ಈ ಹಯಗ್ರೀವ ಮುನಿಯ ಇಬ್ಬರು ಶಿಷ್ಯರು ಒಳ್ಳೆಯವರು. ಆದರೂ ಉಗ್ರ ಭಾಷಿಗಳು. ಲಕ್ಷ್ಮೀಪತಿ ಎಂದು ಒಬ್ಬನ ಹೆಸರು. ಇನ್ನೊಬ್ಬನು ಸದಾನಂದನಾಮಕ. ಅವರ ಕ್ರೌರ್ಯ ಅವರ ಜ್ಞಾನನಾಶಕ್ಕೆ ಕಾರಣ. ಆ ಶೇಷಾದ್ರಿ ಪಂಡಿತನಿಗೆ ಈ ಐದು ಪದ್ಯಗಳನ್ನು ಹೇಳು. (ಅರ್ಥ :- ಹೇಳಿದಂತೆ ಮಾಸಿಕ ಪ್ರತಾಪವನ್ನು ವಿಪ್ರನಿಗೆ ಕೊಡಲಿಲ್ಲ. ಅನೃತ ನೃಸಿಂಹನಿಗೆ ಅಪ್ರಿಯ. ನೃಗ ರಾಜನಿಗೆ ಆದಂತೆ ಹೀನ ಜನ್ಮದಾಯಕ. ನಾನು ಹೇಳಿದ ಮೇಲೆ ಒಂದೇ ಮಾತು ಎಂಬ ನಿನ್ನ ಜಂಭ ಎಲ್ಲಿ ಹೋಯಿತು ? ಆಖ್ಯಾನದಲ್ಲಿ ಸಂದೇಹಬಿಡು, ಪ್ರಾಣ ಇರುವವರಿಗೂ ಬ್ರಾಹ್ಮಣನಿಗೆ ಕೊಟ್ಟೇ ಕೊಡುತ್ತೇನೆಂದು ಹೇಳಿದ್ದನ್ನು ಸತ್ಯಮಾಡು '') ಎಂದು ಪದ್ಯ ಹೇಳಿದ್ದಾರೆ. ಆದರೆ ಶೇಷಾದ್ರಿಯೇ ಕಾಣಿಸಿಕೊಂಡಾಗ ಅವನ ಭಯವನ್ನು ನೋಡಿ ಅಭಯ ಕೊಡುತ್ತಾರೆ : '' ನೀನು ಭಯಪಡಬೇಡ. ನಿನಗೆ ಭಾಗ್ಯವೃದ್ಧಿ ಮಾಡುತ್ತೇನೆ, ನೀನು ನನ್ನನ್ನು ಇಲ್ಲೇ ಶನಿವಾರ ಸೇವಿಸು, ವಿಪ್ರನಿಗೆ ನೀನು ಭಾಷೆ ಮಾಡಿದ್ದನ್ನು ಕೊಡು. ನನ್ನ ಪ್ರಸಾದದಿಂದ ನಿನಗೆ ಶ್ರೇಯಸ್ಸಾಗುತ್ತೆ ''. ಹೀಗೆ ಶೇಷಾದ್ರಿಗೆ ನಿದರ್ಶನ. ನಂತರ ಹಯಗ್ರೀವ ಮುನಿಗೆ ಹೇಳುತ್ತಾರೆ. '' ನಾನು ವಿಪ್ರನನ್ನು ಜೀವಿತನನ್ನಾಗಿ ಮಾಡಿದ್ದೇನೆ. ನಿನ್ನ ಆಗಮನ ಸಂತೋಷಕರ, ಶ್ರೀನಿವಾಸ ಚತುರ್ಮುಖರು ಪರಸ್ಪರ ದರ್ಶನ ಮಾಡದಂತಾಯಿತು. ಹೀಗೇ ಪ್ರೀತಿ ವೃದ್ಧಿ ಆಗಲಿ. ನಿನ್ನನ್ನು ನನ್ನ ಧ್ಯಾನ ಚಿತ್ತದಲ್ಲಿ ಕರೆದಿದ್ದೆ, ನೀನು ಬಂದೆ, ಇನ್ನು ವಿಪ್ರನ ಸಂಗಡ ಸೇರಿಕೊಂಡು ರಥೋತ್ಸವ ಮಾಡು, ನಿನ್ನ ದೇಹ ರಥದಲ್ಲೂ ಕಾಮಾದಿಗಳನ್ನು ಜಯಿಸು ಎಂಬ 23, 24, 25, 26, ಶ್ಲೋಕಗಳಿವೆ. (ನೀನೇ ರಥಿಕ, ಸುಗ್ರೀವನು ರಾವಣಾದಿಗಳನ್ನು ಗೆದ್ದಂತೆ ನೀನು ಕಾಮಾದಿಗಳನ್ನು ಗೆಲ್ಲು, ವೈರಾಗ್ಯ ಪೂರ್ವಕ ಜ್ಞಾನವೆಂಬ ಬಾಣವನ್ನು ಬಿಟ್ಟು ಮೊದಲು ಕಾಲನೇಂಗ್ರಸ್ತ ಕಾಮ ಶತ್ರುವನ್ನು ಗೆಲ್ಲು. ನಂತರ ಮದ ಮತ್ಸರ ಮೋಹಗಳನ್ನೂ, ಕ್ರೋಧ ಲೋಭಗಳನ್ನೂ, ವೈರಾಗ್ಯ ಧನುಸ್ಸಿನಿಂದಲೇ ಕೊಂದುಬಿಡು. ಈ ಶ್ಲೋಕ ಪಠನದಿಂದ ಶಕ್ತಿ ಬರುತ್ತೆ) ಕೃತಿಯ ಮೇಲೆ ನಿನ್ನ ದೃಷ್ಟಿಬೀರು. ದೇವತೆಗಳೂ ಇದನ್ನು ಒಯ್ಯುತ್ತಾರೆ. ಈ ಅಮೌಲ್ಯ ಗ್ರಂಥದಲ್ಲಿ ಅಪ್ರಾಮಾಣ್ಯ ಶಂಕೆ ಮಾಡುವವರಿಗೆ ತಪ್ತ ಪಾಷಾಣಾದಿ ಮೂರು ನರಕ ಯಾತನೆಗಳನ್ನು ಯಮ ವಿಧಿಸಿದ್ದಾನೆ. ಆದ್ದರಿಂದ

ನೀನೂ ಆಖ್ಯಾನ ಪಾರಾಯಣ ಸ್ವಲ್ಪ ಇಟ್ಟುಕೋ. ನೃಸಿಂಹ ಯತಿಗಳ ಪ್ರಸಾದವನ್ನು ಸಂಪಾದಿಸು '' ನಂತರ ಲಕ್ಷ್ಮೀನಾರಾಯಣನಿಗೆ ಹೇಳುತ್ತಾರೆ. 'ಎಲೈ ಅಯೋಗ್ಯನೇ ! ಅಮಂಗಳ ದಿವಸಕ್ಕೆ ಮಂಗಳವಾರ ಎಂದು ಹೆಸರಿಟ್ಟಂತೆ, ಅಲಕ್ಷ್ಮೀಕನಾದ ನಿನಗೆ ಲಕ್ಷ್ಮೀನಾರಾಯಣ ಎಂದು ಹೆಸರಾಗಿದೆ. ಪ್ರಮಾಣ ಮಾಡುತ್ತೇನೆಂಬ ಶಪಥದಿಂದ ನರಕಕ್ಕೆ ಬೀಳುತ್ತಿ, ಕೂಡಲೇ ಶರಣುಹೊಂದು. ನಿನ್ನ ಕೆಟ್ಟ ಮಾತು ನನಗೆ ಬಾಣತುಲ್ಯ. ನೀನಾದರೋ ಇಂಥ ಅನ್ಯಾಯ ಮಾಡಿದ್ದೇನೆಂದು ತಿಳಿಯಲಾರದ ಕಲ್ಲು ". ಎಂದು ಭಯ ಪ್ರದರ್ಶನ ಮಾಡಿದ್ದಾರೆ. ನಂತರ ಶೇಷಾದ್ರಿಗೆ ಅಹಂಕಾರ ಮಟ್ಟ ಮಾಡಲು ಹೇಳುತ್ತಾರೆ. ''ಜಗತ್ತಿನಲ್ಲಿ ನನ್ನ ಸಮಾನ ಪಂಡಿತರೇ ಇಲ್ಲ ಎಂದು ಗರ್ವದಿಂದ ತುಂಬಿದ್ದಿ, ಕೇವಲ ಬುದ್ಧಿವಂತಿಕೆ ಮಾತಾಡುವುದರಲ್ಲಿ ನೀನು ಮೇಲು, ಅಭೀಷ್ಟಪ್ರದ ವೃಂದಾವನಸ್ಥರಲ್ಲಿ ವಾದಿರಾಜರು ಮೇಲು. ಸಾಯುವ ಬ್ರಾಹ್ಮಣನನ್ನೂ ಅವರು ಬದುಕಿಸಿದ್ದಾರೆ ಎಂದು ತಿಳಿ. ನೀನು ನಿನ್ನ ಜಾತಿಯ ಅಜ್ಞ ಜನರಿಂದ ಹೊಗಳಲ್ಪಟ್ಟಿದ್ದಿ." ಅನಂತರ ವಿಪ್ರನಿಗೇ ಹಿತೋಕ್ತಿ. "ನಿನ್ನ ದೌರ್ಭಾಗ್ಯತನ ಹೆಚ್ಚಾಯಿತು. ಅನ್ನವಿಲ್ಲ ನಿನಗೆ, ನಾನು ಕೆಲವು ದಿನ ಬರುವುದಿಲ್ಲ. ವೃಂದಾವನಸ್ಥ ಹಯಗ್ರೀವ ದೇವರೇ ಅನ್ನ ಒದಗಿಸುತ್ತಾನೆ. ನೀನು ಆಖ್ಯಾನ ಪಠಿಸು. ಭಾರತವನ್ನಾದರೂ ಪಠಿಸು." ''ಹೇ ಶ್ರೀಪತಿ ! ವಿಪ್ರನಿಂದ ಭಾರತ ಸೇವೆ, ಆಖ್ಯಾನ ಪಾರಾಯಣ ಮಾಡಿಸಿ ವಿಪ್ರನಿಗೆ ಏನೂ ಬಹುಮಾನ ಮಾಡ ಬೇಡವೇ ? ನಿನ್ನ ದೇಹವನ್ನು ನಾನು ಬಿಟ್ಟು ಬಿಟ್ಟರೆ ನೀನು ಮೃತನಾಗುತ್ತಿ. ಗೊತ್ತೇ ? '' ಎಂದಿದ್ದಾರೆ. ದಾಂಬಳ ಗ್ರಾಮಸ್ಥ ಚಿತ್ರವಾಲಿ ನಾರಾಯಣನಿಗೆ "ಹೇಗುಣಾಧಮ ! ತಿರುಗಿ ಜಗಳಕ್ಕೆ ಕಾಲು ಕೆರೆಯುತ್ತಿದ್ದಿ, ಧಿಕ್ಕಾರ ನಿನ್ನ ಹುಡುಗ ಬುದ್ಧಿಗೆ, ಈ ಕನಕಾ ಕೃಷ್ಣಭಟ್ಟನು ದುಡ್ಡಿನಲ್ಲೇ ಮನಸ್ಸುಳ್ಳವನಾದರೂ ಸ್ವಲ್ಪ ಆಖ್ಯಾನ ಪಾರಾಯಣ ಮಾಡಿ ಮಾಡಿ ಅಭೀಷ್ಟವನ್ನು ಹೊಂದುತ್ತಾನೆ ನಿನಗೆ ಅಷ್ಟು ಯೋಗ್ಯತೆಯೂ ಇಲ್ಲ" ಎಂದು ನಿಂದಾ ನಿದರ್ಶನ ತೋರಿಸಿದ್ದಾರೆ. "ಹೇ ವಿಠ್ಠಲ ! ಶೇಷಾದ್ರಿ ಪಂಡಿತ ಅನೃತವನ್ನು ಬಿಡಲೇ ಇಲ್ಲ. ಅನೃತಕ್ಕಿಂತ ಹೆಚ್ಚಿನ ಪಾಪ ಯಾವುದು ? ಅಂಥವನ ಅಭೀಷ್ಟ ಹೇಗೆ ಪ್ರಾಪ್ತವಾಗುತ್ತೆ ?" ಎಂದು ವಿಠ್ಠಲನೂ ಸುಳ್ಳಾಡಿರಬಹುದೆಂದು ಸೂಚನೆ ಮಾಡಿ ಮುಂದೆ ಹೇಳುತ್ತಾರೆ" ನಾನು ನಿನ್ನ ಸಂಗಡ ಜಗಳಕ್ಕೆ ನಿಂತಿಲ್ಲ, ನಿನ್ನ ಸುಳ್ಳು ನಿನ್ನನ್ನೆ ತಿನ್ನುತ್ತೆ 'ಹಾಗಿಲ್ಲ, ನಾನು ಯೋಗ್ಯ ನಿಮ್ಮನ್ನೇ ನಂಬಿದ್ದೇನೆ' ಎಂದು ನೀನು ಹೇಳುವ ಪಕ್ಷಕ್ಕೆ ನಿನಗೆ ಹಗಲೋ ರಾತ್ರಿಯೋ ಸ್ವಪ್ನದಲ್ಲೋ ಜಾಗ್ರದ್ದಶೆಯಲ್ಲಿಯೋ ಕೃತಿಯು ವಾದಿರಾಜರೇ ಮಾಡಿದ್ದು ಎಂದು ನೀನು ನಂಬುವಂತೆ ನಿದರ್ಶನ ತೋರಿಸುತ್ತೇನೆ. ಆದ್ದರಿಂದ ನಿನಗೆ ಭಕ್ತಿವೃದ್ಧಿ ಸಹ ಆಗುತ್ತೆ" ಎಂದಿದ್ದಾರೆ, ಲಕ್ಷ್ಮೀಪತಿಗೆ ನಂತರ ಹೇಳುತ್ತಾರೆ. ''ಲಕ್ಷ್ಮೀಪತೇ ! ಮನೆ ಇಲ್ಲ ಎಂದು ಪೇಚಾಡಬೇಡ. ನಿನ್ನ ದೇಹದಲ್ಲಿ ನಾನೇ ನಿನಗೆ ಆಶ್ರಯ ಕೊಟ್ಟು ವಾಸ ಮಾಡುತ್ತೇನೆ. ನಾನೇ ಮನೆ ಎಂದು ತಿಳಿ. ಸ್ವಲ್ಪ ದಿನಗಳಲ್ಲಿ ನಾನು ಕೃತಿಯನ್ನು ಮುಗಿಸಿ ಹಿಮ ಕೋಕಿಲದಂತೆ ಮೌನಧರಿಸಿ ದೇವರ ಎದುರಿಗೆ ಶಂಖ ಸೇವೆ ಮಾಡುತ್ತೇನೆ. ನಾರದರಿಗೆ ನನ್ನ ಶಂಖ ಧ್ವನಿ ಕೇಳಿ ಆಶ್ಚರ್ಯವಾಗುತ್ತದೆ''. ಶೇಷಾದ್ರಿ ! ಸುಳ್ಳು ತ್ಯಜಿಸು, ಹೇ ಹಯಗ್ರೀವಮುನೇ ! ಗ್ರಹಣ ಹಿಡಿಯಿತು. ನಿನ್ನ ಅನುಷ್ಠಾನ ಹೆದರದೆ ಮಾಡು. ಸೀತಾಪತೇ ! ನೀನೂ ಈ ಗ್ರಹಣ ಕಾಲದಲ್ಲಿ ರಾಮನಿಗಾಗಿ ದಾನ ಮಾಡು: ನೀನು ಸುಳ್ಳು ಪ್ರತಿಜ್ಞೆಯವನಲ್ಲ, ನಿನಗೆ ದಾನಫಲ ಬೇಗ ಬರುತ್ತೆ. ಗ್ರಹಣ ಕಾಲದಲ್ಲಿ, ನಾನು ಬದುಕಿದ್ದಾಗ, ಸುವರ್ಣದಾನ ನೆಂಟರಿಂದ ಮಾಡಿಸಿದ್ದೆ,

ಕುಲೋದ್ಧಾರ ಆಯಿತು ". ಇನ್ನೊಂದು ನಿದರ್ಶನ : " ಯಾರೋ ವೃಂದಾವನಾಚಾರ್ಯರ ಜಮೀನನ್ನು ಆಕ್ರಮಿಸುತ್ತಿದ್ದಾರ, ಅವನು ವೃಂದಾವನ ದ್ರೋಹಿಯಾಗಿ ಅಶುಭ ಹೊಂದುತ್ತಾನೆ. ನಾನು ಸಜ್ಜನೋದ್ಧಾರಕ್ಕಾಗಿ ದೇವರ ಕಾರುಣ್ಯ ಪ್ರವಾಹ ಹರಿಯಲೆಂದು ಶ್ರೀಹಯಗ್ರೀವನನ್ನು ಸ್ತುತಿಸುತ್ತೇನೆ. ನನ್ನ ಸದ್ಭಕ್ತಿ ಸಂಭೂತಿಯನ್ನು ವಿಪ್ರ ಹೇಳಿದ ವಾಕ್ಯಗಳಿಂದ ತಿಳಿದು ಈ ವಾದಿರಾಜರು ಋಜುಗಳು, ಭಕ್ತಿಪೂರ್ಣರು, ನಮ್ಮನ್ನು ಉದ್ಧರಿಸುತ್ತಾರೆಂದು ನಂಬಿ ಸೇವಿಸಿದವರಿಗೆ ಸಂಪದಭಿಮಾನಿಗಳು ಒಲಿದು ಸುಖಪಡಿಸುತ್ತಾರ ಎಂದು ಹೇಳುತ್ತಾರೆ : " ಬಾಳೆಹಣ್ಣು ಒಂಟಿಗೆ ಆಗುವುದಿಲ್ಲ, ನನ್ನ ಸ್ವರೂಪ ಜ್ಞಾನಪೂರ್ವಕವಾದ ಸ್ತುತಿ ಹೀನನು ಎಂಟು ವಿಧ ಘೋರನರಕ ಕಷ್ಟ ಹೊಂದುತ್ತಾನೆ. ಆದ್ದರಿಂದ ಶಿಷ್ಯರು ನನ್ನ ಕೃತಿ ಪಾರಾಯಣ ಮಾಡಿ ಭಕ್ತಿ ಮಾಡಲಿ. ಅವರಿಗೆ ಇಷ್ಟಪ್ರಾಪ್ತಿ ಆಗುತ್ತೆ, ಇಲ್ಲೂ ಅಲ್ಲೂ ಎಲ್ಲೂ ಕಷ್ಟವಾಗುವುದಿಲ್ಲ (86). ಯಾವ ಪುಣ್ಯ ಹೀನನು ನನ್ನನ್ನು ಮಿಥ್ಯಾವಾದಿ ಎಂದು ತಿಳಿಯುತ್ತಾನೆಯೋ ಅವನು ನರಕಕ್ಕೆ ಹೋಗುತ್ತಾನೆ, ಆದ್ದರಿಂದ ಇದೆಲ್ಲಾ ಸತ್ಯವೇ, ಸಂಸಾರ ತಾರಕವೇ ಸ್ವಾಪ್ನ ಶ್ಲೋಕೋಕ್ತವಾದರೂ ಫಲಿಸುತ್ತದೆ, ಸರ್ವಾರ್ಥದಾಯಕ. ಹೇ ವಾಸುದೇವಮುನೇ ! ನೀನು ಶ್ರೀನಿವಾಸ ಭಕ್ತಿ ಮಾಡಬೇಕೆಂದಿದ್ದಿ ಮಾಡು, ನನ್ನ ವೃಂದಾವನದಲ್ಲಿ ವೆಂಕಟೇಶ ಬಂದಿದ್ದಾನೆ. ತ್ರಿಕೂಟೇಶ, ಕಾರಕಸಿದ್ಧರೂ ಸಹ ಬಂದಿದ್ದಾರೆ. ಆದ್ದರಿಂದ ನೀನು ಇಲ್ಲಿಯೇ ಶನಿವಾರ ಶ್ರೀನಿವಾಸನ ಪೂಜೆ ಮಾಡು. ನಿನ್ನ ಮಾಧವೀವೃತ್ತಿಯನ್ನು ಮಾಡು. ಬಿಂದುಮಾಧವನೂ ಬಂದಿದ್ದಾನೆ. ಆದ್ದರಿಂದ ಕಾಶಿಯೂ ಇದೇ. ಬಿಂದುಮಾಧವನ ದರ್ಶನದ ಪುಣ್ಯವು ಇಲ್ಲೇ ಬರುತ್ತದೆ ". ಹೀಗೆ ಅಧ್ಯಾಯ ನಿದರ್ಶನ ಪೂರ್ಣವಾಗಿದೆ. ಶ್ರೀಕೃಷ್ಣಾರ್ಪಣಮಸ್ತು.

ಇಪ್ಪತ್ತೊಂದನೆಯ ಅಧ್ಯಾಯ 109 ಶ್ಲೋಕ 18 ಪ್ರಕರಣಾತ್ಮಕ. ಆರಂಭದಲ್ಲಿ ವಿಪ್ರನಿಗೆ ಹೇಳುತ್ತಾ " ನಿನಗೆ ಮರಣ ತಪ್ಪಿಸಿ ಆಯುಸ್ಸು ಕೊಟ್ಟಿದ್ದೇನೆ. ನಿನ್ನ ಪತ್ನೀ ಪ್ರಾರ್ಥನೆಯೂ ಕಾರಣ. ನೀನು ಧರ್ಮಪತ್ನಿಯನ್ನು ಸಂಕಟಪಡಿಸಬೇಡ. ಸೂತಿಕಾವಾಯು ರೋಗದಿಂದ ಕೆಲವು ವೇಳೆ ನಿನ್ನ ಸೇವೆಗೆ ಅವಳು ಅಸಮರ್ಥಳು. ಅವಳ ಭಾವವನ್ನು ವಿಪರೀತ ತಿಳಿಯಬೇಡ" ಎಂದಿದ್ದಾರೆ. ಹಾಗೆ ಶೇಷನಿಗೂ '' ನಿಷ್ಠುರ ಮಾತನ್ನೂ ಕಲಹವನ್ನೂ ತ್ಯಜಿಸು '' ಎಂದಿದ್ದಾರೆ. ಆಮೇಲೆ ಬಹುಜನ ವಿದ್ವಾಂಸರಿಗೆ ಹೇಳುತ್ತಾರೆ. " ಈ ಕಮಲನಾಭ ಮಧ್ವಾಚಾರ್ಯರ ಸಿದ್ಧಾಂತ ಪದ್ಧತಿಯನ್ನು ಬಿಟ್ಟು ಮಣಿಮಂತನ ಮತವನ್ನು ಅವಲಂಬಿಸಿದ್ದಾನೆ. ವಾಯು ವಿರಿಂಚಿರು ನನಗೆ ತಮ್ಮ ಸರ್ವಾಧಿಕಾರ ಕೊಟ್ಟು ನಾನು ಋಜು ಎಂದು ಸೂಚಿಸಿದ್ದರೂ ಇವನು, ಇವನ ಪತ್ನೀ, ಇವನ ಸ್ನೇಹಿತರೂ ಸಹ ನಂಬುವುದಿಲ್ಲ, ಕಲಹ ಮಾಡುತ್ತಾರೆ. ಇದರಿಂದ ಇವರಿಗೆ ಬ್ರಾಹ್ಮಣ್ಯ ನಾಶವಾಗುತ್ತೆ. '' ಬಹಿಷ್ಕುರುತ ತಂ ವಿಪ್ರಂ ಅಸಹಿಷ್ಣುಂ ಮಮೋಚ್ಛ್ರಯಂ '' (ನನ್ನ ಜೀವೋತ್ತಮತ್ವವನ್ನು ಒಪ್ಪದಿರುವ ಈ ವಿಪ್ರನಿಗೆ ಬಹಿಷ್ಕಾರ ಮಾಡಿ), ಗುರುದ್ರೋಹದಿಂದ ಬ್ರಾಹ್ಮಣ್ಯ ಹಾನಿಯಾಗುತ್ತೆಂದು ಅರ್ಥ. ಶೇಷನಿಗೆ ಇಂಥವರ ಸಂಗ ಬೆರೆಯಬಾರದೆಂದು ಅವರ ಸ್ವರೂಪ ಹೇಳುತ್ತಾರೆ. ಕಮಲನಾಭ ಕಲಿ, ತಮ್ಮಣ ಮಯ ಕಲಿಯ ಆವೇಶಯುಕ್ತ. ಶ್ರೀನಿವಾಸನು ಮಣಿಮಂತ. ತದುಸ್ಸಿಗೆ ಸಾಧನೆ ಮಾಡಿಕೊಳ್ಳುತ್ತಾರೆ. ಗುರು ದ್ವೇಷ ಬಹುಕಷ್ಟ ಪಡಿಸುತ್ತೆ". ನಂತರ ಹಯಗ್ರೀವಮುನಿಯ ಜ್ಞಾನವನ್ನು ಕೊಂಡಾಡಿ ಭಕ್ತರ ಸ್ವರೂಪ

ಹೇಳುತ್ತಾರೆ. '' ವಾದಿರಾಜಭಟ್ಟ, ವಿಪ್ರ, ಶ್ರೀಪತಿ, ವ್ಯಾಸರಾಜ, ಗೋಪಣ್ಣ, ವಾಸುದೇವಮುನಿ, ಉಪೇಂದ್ರಭಟ್ಟ, ಸೂರಣಭಟ್ಟ, ಕನಕಾ ಕೃಷ್ಣಭಟ್ಟ, ಹಿರಣ್ಯಭಟ್ಟ, ಮಣಿಬಾಲವೆಂಕಟಾದ್ರಿ ಇವರೇ ಮೊದಲಾದವರು ವಾದಿರಾಜ ಭಕ್ತರು. ಪ್ರಾಣೋಪಾಸಕರು. ಕಮಲನಾಭ, ದಾಂಬಲ ನಾರಾಯಣ, ಚಿಂತಾಮಣಿ ಪುತ್ರ ಲಕ್ಷ್ಮೀನಾರಾಯಣ, ತಮ್ಮಣ್ಣ, ಶ್ರೀನಿವಾಸ, ಈ ಐವರೂ ಅವಿಶ್ವಾಸಿಗಳು. ದಾಂಬಲಹರಿ ಚಂಚಲಚಿತ್ತ. ವಿಪರೀತ ಜ್ಞಾನಿಯೇ. ಅಪ್ಪಣ್ಣ ಕೃಷ್ಣಭಟ್ಟ ಬದಲಾಯಿಸಿ ಹೋಗಿ ಈಗ ನನ್ನ ಭಕ್ತ. ವಿಠಲಾದಿಗಳು ನಮ್ಮ ಮಠದವರೇ. ಕೃಷ್ಣಾಚಾರ್ಯ ಪುತ್ರ ಶ್ರೀನಿವಾಸನೂ ಭಯಂಕರತ್ವವನ್ನು ಬಿಟ್ಟು ಸೌಮ್ಯತೆ ಹೊಂದಿದ್ದಾನೆ. ನಮ್ಮ ಮಠದ ಸ್ವಾಮಿಗಳೂ ಭಕ್ತರೇ, ವಿಪ್ರನ ಅಳಿಯ ರಾಮಚಂದ್ರನೂ ಭಕ್ತ. ಹೀಗೆ ಮೂರು ವಿಧ ಜನರಿದ್ದಾರೆ, ವಿಪ್ರನೇ ಇನ್ನೇನು ಕೇಳಬೇಕು ? ದುರ್ಜನರು ಯಮನ ದೆಸೆಯಿಂದ ದಂಡಿಸಲ್ಪಡುತ್ತಾರೆ. ಅಷ್ಟು ತಿಳಿ '' ಎಂದಿದ್ದಾರೆ. ಮುಂದೆ ಬಹು ಭಕ್ತರಿಗೆ ಹೇಳುತ್ತಾ '' ಗ್ರಂಥದಲ್ಲಿ ಅವಿಶ್ವಾಸ ಮಾಡಬೇಡಿ, ಶ್ರದ್ಧಾ ಭಕ್ತಿ ಉಳ್ಳವರಿಗೆ ಒಳ್ಳೇ ಲೋಕ ಕೊಡಿಸುತ್ತೇನೆ. ವಾಸುದೇವಮುನಿಯ ಪೂಜೆಯಿಂದ ಸನ್ನಿಧಾನ ಹೆಚ್ಚಿಸುತ್ತೇನೆ ", ಎಂದು ಹೇಳಿ " ಎಲೈ ವೇದನಿಧಿಯೇ ! ಇತಿ ಶ್ರೀ ಬರೆದು ಅಧ್ಯಾಯ ಮುಗಿಸಬೇಡ, " ಮತ್ಸುತಸ್ಯ ಭಾಗೋಯಂ ಸಮಾಪ್ತಿಃ ಶ್ರೀರಮಾತ್ಮಿಕಾ " ಎಂದಿದ್ದಾರೆ. (ಅರ್ಥ :- ಕೊನೆಯ ಎರಡು ಅಧ್ಯಾಯಗಳು ವೇದ ವೇದ್ಯರ ಮಹಿಮೆ, ಲಕ್ಷ್ಮ್ಯಾತ್ಮಕ ಮಂಗಳಕ್ಕೆ ಮೀಸಲಾಗಿದೆ). " ವಿಪ್ರನೇ ನೀನು ವೇದವೇದ್ಯರ ಪಾದೋದಕ ಕುಡಿ. ಅದು ಜ್ವರನಾಶಕ, ಲಕ್ಷ್ಮೀಪತಿ ಮನೆಯಲ್ಲಿ ಒಂದು ಸಮಾರಾಧನೆಗೆ ಅನೇಕ ಜನರು ಬಂದಿದ್ದಾಗ ಒಬ್ಬ ಯಾಜಕನಿಗೆ ವೇದವೇದ್ಯರ ಪಾದೋದಕವು ಜ್ವರಕ್ಕೆ ಔಷಧಿ ಎಂದು ಸ್ವಪ್ನ ವಾಯಿತು. ಎಲ್ಲರೂ ನಂಬಿದರು ". " ಹೇ ವೇದನಿಧಿ ! ನೀನು ಆಖ್ಯಾನದಲ್ಲಿ ವಿಶ್ವಾಸ ಕಮ್ಮಿ ಮಾಡಿಕೊಬೇಡ, ಅದರಲ್ಲಿನ ಅನ್ನಮಂತ್ರ (ಮಮಭೋಜನ ..... ಫಲಶ್ರುತಿ ಎಂಬ 52, 53, 54 ಶ್ಲೋಕಗಳು) ಭಜಿಸು " ಎಂದಿದ್ದಾರೆ. ಆಖ್ಯಾನ ದೇವಾಧಿಕಾರಿಗಳಿಂದಲೂ ಸೇವ್ಯವೆಂದಾಯಿತು. ನಂತರ ಇಹ ಎಂದರೆ ಪ್ರಿಯ ಎಂದು ಬರೆಯಿಸಬೇಡ ಎಂದು ವಿಪ್ರನಿಗೆ ತಿಳಿಸಿ, ಪುನಃ ವೇದನಿಧಿಗಳಿಗೇ '' ನಿನಗೆ ಅನ್ನಮಂತ್ರ ಜಪದಿಂದ ಪರ್ಯಾಯ ಕಾಲದಲ್ಲಿ ಅನ್ನ ಉಕ್ಕುತ್ತೆ, ಎಷ್ಟು ಬಡಿಸಿದರೂ ಇನ್ನೂ ಇದೆ ಎಂಬಂತೆ ಸಿದ್ಧಿ ಬರುತ್ತೆ. ಗೌತಮರು ಕ್ಷಾಮ ಕಾಲದಲ್ಲಿ ಅನ್ನದಾನ ಮಾಡಿದಂತೆ ನೀನೂ ಮಾಡು. ಜನ್ಮಾಂತರದಲ್ಲಿ ನೀನು ಅನ್ನದಾನ ಕಮ್ಮಿ ಮಾಡಿದ್ದಿ, ಆ ದೋಷ ಹೋಗುತ್ತೆ, ನನ್ನ ಸೌಖ್ಯ ನೀನು ಮಾಡುವ ಗ್ರಂಥ ಪ್ರಚಾರದಿಂದ ಪೂರ್ಣವಾಗುತ್ತೆ. ನನ್ನ ಸದ್ಭಕ್ತಿ ಸಂಭೂತಿ ತಿಳಿದು ನನ್ನನ್ನು ಭಜಿಸು '' ಎಂದು ಉಪದೇಶಿಸಿದ್ದಾರೆ, ನಂತರ ಬಹು ಭಕ್ತರಿಗೆ ವೇದವೇದ್ಯ ಮುನಿಗಳ ಮಹಿಮೆ ಹೇಳುತ್ತಾರೆ, '' ಸಜ್ಜನರೇ ! ನನ್ನ ಶಿಷ್ಯ ವೇದವೇದ್ಯ ಆದರ್ಶಯತಿ, ನನ್ನ ತಪಃಫಲ ಅಂಥ ಶಿಷ್ಯ ದೊರೆತದ್ದು. ಸ್ನಾನ, ಧ್ಯಾನ, ಅರ್ಚನೆ, ಭೋಜನ, ವಾದ, ಪ್ರವಚನಾದಿ ಸರ್ವವನ್ನೂ ವೇದಶಾಸ್ತ್ರ ರೀತಿಯಿಂದ ಮಾಡಿ ದೇವರಿಗೆ ಅರ್ಪಿಸುತ್ತಾನೆ. ವೃಥಾ ಒಂದು ಕ್ಷಣ ಕಳೆಯುವುದಿಲ್ಲ. ನಿತ್ಯವೂ ಶೋಕ ಕೋಪ ಹೀನನಾಗಿ ಲೋಕೋಪಕಾರ ಶೀಲನಾಗಿದ್ದಾನೆ. ನನಗೆ ಆನಂದ ಪ್ರದನಾಗಿ ನನಗೆ ಸಮನಾಗಿಯೇ ನಡೆಯುತ್ತಾನೆ '' ಎಂದಿದ್ದಾರೆ. '' ವಾದಿರಾಜಭಟ್ಟ ! ವೃಂದಾವನಾಚಾರ್ಯರಿಗೆ ಮನೆ ದಾನ ಮಾಡಿ ಬಿಟ್ಟಿದ್ದಿ. ಪಾರ್ಥನಂತೆ ನಿನ್ನ ಜನ್ಮ ಸಾರ್ಥಕವಾಯಿತು. ವಿಪ್ರನಿಗಾಗಿ ಲಕ್ಷ್ಮೀ

ಪತಿಯ ಕೈಯಲ್ಲಿ ಪತ್ರತಾಪ ರುದ್ರನು ದ್ರವ್ಯವನ್ನು ಕೊಟ್ಟು ಆ ಸೇವೆಯಿಂದಲೇ ತನ್ನ ಪ್ರಾರಬ್ಧವನ್ನು ಶುಷ್ಕವನ್ನಾಗಿ ಮಾಡಿ ಬದುಕಿಹೋದ. ನೀನೂ ಹಾಗೆ ಆದಿ. ಧನ್ವಂತರಿ ಮತ್ತು ಕೃಷ್ಣರನ್ನು ಭಜಿಸು. ಭಟ್ಟನೇ ! ಪಾರ್ಥನಂತೆಯೇ ದೇವರಲ್ಲೂ ಶರಣುಹೊಂದು. ವೇದವೇದ್ಯರನ್ನೂ ಭಜಿಸು. ವೇದವೇದ್ಯರೆಂದರೆ ಸರ್ವಜ್ಞಯತಿ, ವಾದಜಯಿಷ್ಣು. ಪ್ರಾತಃ ಸ್ಮರಣೀಯ ದಿವ್ಯಮೂರ್ತಿ. ಇಂದ್ರನು ವಜ್ರಾಯುಧದಿಂದ ಶತ್ರುವನ್ನು ಕೊಂದಂತೆ ನಾನು ವೇದವೇದ್ಯರ ಅಂತಃ ಇದ್ದು ಅವರ ಶತ್ರುಗಳನ್ನು ನಿಗ್ರಹಿಸುತ್ತೇನೆ. ಆ ಶತ್ರುಗಳ ನಾಲಿಗೆಯನ್ನೇ ಒಣಗಿಸಿ ಬಿಡುತ್ತೇನೆ, ಹೇ ವೇದವೇದ್ಯ ! ನೀನು ನನ್ನ ಮತ್ತು ಆನಂದ ತೀರ್ಥರ ಗ್ರಂಥಗಳೆಂಬ ಅಸ್ತ್ರಗಳಿಂದ ಸಹಿತನಾಗಿ ದೇಹ ರಥದಲ್ಲಿ ಸ್ಥಿತನಾಗಿ ಶತ್ರುಗಳನ್ನು ಗೆಲ್ಲು. ಅದ್ವೈತ ಪಕ್ಷವನ್ನು ಸಡು. ಇನ್ನು '' ತಿಮಿರಂ ಸಮರೇ ರಮ್ಯಂ '' ಎಂಬ ಒಗಟು ಶ್ಲೋಕದ ಅರ್ಥ ನಿನಗೆ ಗೊತ್ತು. ಹಾಗೆಯೇ ಅದ್ವೈತಿಗಳು ನಿನ್ನನ್ನು ನೋಡಲಿಕ್ಕೇ ಭಯವಾಗುವಂತೆ ನಿನ್ನ ಪ್ರತಿಭೆ ಹೆಚ್ಚಿಸಿ ಕಾಪಾಡುತ್ತೇನೆ. ನಿನ್ನ ಜ್ಞಾನ ಸಾಗರದಿಂದ ಸಂಸಾರಿಗಳ ಬುದ್ಧಿ ಕೂಪಗಳನ್ನು ತುಂಬಿ ಕಾಪಾಡು. ನಿನಗೆ ದಾಸ್ಯತ್ವವಿದೆ, ಸಾಮ್ಯವನ್ನೇ ಕೊಟ್ಟಿದ್ದೇನೆ. ಇನ್ನು ಲೋಕದಲ್ಲಿ ನಿನ್ನ ಸಮರು ಎಲ್ಲಿಂದ ಬರುತ್ತಾರೆ ? ಋಜುವಿಗೆ ಋಜುವೇ ಸಮ ಎಂದು ಭಾವ. ನಿನ್ನ ವಿರೋಧಿಗಳು ಗೀತೋಕ್ತ ಅಸುರರೇ ಸರಿ, ಅವರು ಅಸೂಯಾಪರರು. ತಮಸ್ಸಿಗೆ ಹೋಗುತ್ತಾರೆ '' ಹೀಗೆ ಅಧ್ಯಾಯ ಮುಗಿದಿದೆ, ಶ್ರೀಕೃಷ್ಣಾರ್ಪಣಮಸ್ತು.

ಇಪ್ಪತ್ತೆರಡನೆಯ ಅಧ್ಯಾಯ ದಲ್ಲಿ ಲಕ್ಷ್ಮ್ಯಾತ್ಮಕ ಮಾಂಗಳಿಕ ಉಪಸಂಹಾರವಿದೆ. 89 ಶ್ಲೋಕ 13 ಪ್ರಕರಣ. ಆರಂಭದಲ್ಲಿ ಶ್ರೀಪತಿಗೆ ಎಷ್ಟು ಗೃಹಕೃತ್ಯವಿದ್ದರೂ ಬಿಡದೆ ವೇದವೇದ್ಯರ ಮುಂದೆ ಆಖ್ಯಾನದ ಅಂತ್ಯಭಾಗವನ್ನಾದರೂ ಪಾರಾಯಣ ಮಾಡೆಂದು ಹಿತೋಕ್ತಿ ಹೇಳಿದ್ದಾರೆ. ಶೇಷಾದ್ರಿಗೂ ಒಂದೇ ಶ್ಲೋಕದಲ್ಲಿ ಪೂರ್ವಾರ್ಜಿತಕರ್ಮ ಶೇಷವನ್ನು ವೃಂದಾವನಾಶ್ವತ್ಥ ಸೇವೆಗಳಿಂದ ಕಳೆದುಕೋ ಎಂದು ಹೇಳಿದ್ದಾರೆ. ನಂತರ ವಾಸುದೇವಮುನಿಯ ಪ್ರಶಂಸೆ ಇದೆ. ಆ ಮುನಿ ಮಾಧವಾನ್ನದಿಂದ ತನ್ನ ಪ್ರಾರಬ್ಧ ಕಳೆದುಕೊಂಡಿದ್ದಾನೆ. ದ್ರೌಪದೀ ಹಸ್ತದ ಅನ್ನದಂತೆ ಆ ಭಿಕ್ಷಾನ್ನವೂ ಸ್ವವರ್ಣಾಶ್ರಮ ಧರ್ಮ ಪ್ರಾಪ್ತವಾದ್ದರಿಂದ ಪರಮ ಪಾವನವೇ ಎಂದಿದ್ದಾರೆ. '' ಮುನಿಯೇ ! ನಿನ್ನ ಪಾಪ ಹೋಯಿತು. ಹೃದ್ಗತದೇವ ಪೂಜಾಧಿಕಾರ ಬಂತು. ಸಂಸಾರ ತಾಪ ನಿನಗೆ ಇಲ್ಲೂ ಇಲ್ಲ, ದೇವಲೋಕಗಳಲ್ಲೂ ಇಲ್ಲ. ನನ್ನ ಮಾತು ಸುಳ್ಳಲ್ಲ '' ಎಂದಿದ್ದಾರೆ. ಅನಂತರ ವೇದವೇದ್ಯರ ಪ್ರಕರಣ. " ಅಮುಂಚನ್ನಮುಂಚಿಃ " ಎಂಬ ಒಗಟು ಶ್ಲೋಕಕ್ಕೆ ವೇದವೇದ್ಯರೇ ಅರ್ಥ ಬಲ್ಲರು. ಸಾಕ್ಷಾತ್ತಾಗಿಯೂ ಅರ್ಥವನ್ನು ನೋಡಿ ವಾಕ್ಯಾರ್ಥವನ್ನು ವಿವರಿಸ ಬಲ್ಲರು. ಉಪಕ್ರಮಾದಿಗಳಿಂದಲೂ ಆ ವಾಕ್ಯಾರ್ಥವನ್ನು ಸಾಧಿಸಬಲ್ಲರು. " ಹೇ ವೇದವೇದ್ಯ ! ಉಭಯ ರೀತಿಯಿಂದ ನಿರ್ಣಾಯಕತ್ವ (ಮಧ್ವಾಚಾರ್ಯರಿಗಿರುವಂತೆ) ನಿಮಗೇ ಸರಿ. ನಿಮ್ಮ ಕಥೆ ಪರಮ ಮಂಗಳ, ನಿರ್ದೋಷ, ನನ್ನ ಪೂರ್ಣ ಸಾದೃಶ್ಯ ನಿಮಗೆ ಬಂದಿದೆ. ನಿಮಗೆ ಸರ್ವ ಮಂಗಳವಾಗಲಿ " ಎಂದು ಹರಸಿದ್ದಾರೆ. ಮುಂದೆ ಶ್ರೀಪತಿಗೆ ಅಥವಾ ಶೇಷನಿಗೆ ಹೇಳುತ್ತಾರೆ. '' ಶ್ರೀಪತೇ ! (ಅಥವಾ ಶೇಷ !) ವಿಪ್ರನಿಗೆ ಅನ್ನದಾನ ಮಾಡು, ಇಲ್ಲದಿದ್ದರೆ ನಾನು ಯಾರನ್ನಾದರೂ ಬಡವರನ್ನು ಪ್ರೇರಿಸಿ ಅವನಿಗೆ ಕೊಡುತ್ತೇನೆ;

ನೀನು ವಿಧೇಯನಾಗಿದ್ದಿ, ರುದ್ರದೇವರು ನಿನ್ನ ಮನಸ್ಸನ್ನು ಸರಿಯಾಗಿಯೇ ಪ್ರೇರಿಸಿದ್ದಾರೆ, ನೀನೇ ರಕ್ಷಸು '' ಎನ್ನುತ್ತಾರೆ. '' ವಿಪ್ರನೇ ! ನಿನ್ನ ಜ್ಞಾನದಿಂದ ನಿನ್ನ ಮೂರು ಕುಲ ಪವಿತ್ರವಾಯಿತು; ಇದು ನನ್ನ ಅನುಗ್ರಹದ ಫಲ. ನನ್ನನ್ನು ನೀನು ಸೇವಿಸಿ ಕಾಪಾಡಬೇಕೆಂದು ಬೇಡಿಕೊಂಡೆ, ಕಾಪಾಡಿದ್ದಾಯಿತು. ನೀನು ಇನ್ನು ಭಿಕ್ಷೆಗೆ ಹೋಗಬೇಡ, ಮಠದ ಅನ್ನದಿಂದಲೇ ಭೋಜನ ಯಜ್ಞವಾಗಲಿ ". '' ಹಯಗ್ರೀವ ಯತಿಯೇ ! ನಿನ್ನ ಖಂಡನೆ ಮಾತುಗಳನ್ನು ಕೇಳಿ ಅದ್ವೈತಿಗಳು ನಡುಗುತ್ತಾರೆ. ವೇದವೇದ್ಯ ಸೂರ್ಯನಿಂದ ಆ ದುರ್ಮತವೆಂಬ ತಮಸ್ಸು ನಾಶವನ್ನೇ ಹೊಂದುತ್ತೆ ''. " ವೇದವೇದ್ಯರೇ ! ನಿನಗೆ ಯಾರಾದರೂ ಒಂದು ಕೆಟ್ಟ ಮಾತಾಡಿದರೆ ನಾನು ಸಹಿಸುವುದೇ ಇಲ್ಲ. ನಿನ್ನ ಅಪರಾಧಿಗಳು ಯಮನಿಂದ ನರಕಕ್ಕೇ ಒಯ್ಯಲ್ಪಡುತ್ತಾರೆ ". '' ವಾದಿರಾಜ ಭಟ್ಟನೇ ! ನನ್ನ ಆಖ್ಯಾನವು ಎಲ್ಲಾ ದುರ್ಮತಗಳನ್ನೂ ಧ್ವಂಸ ಮಾಡಿದೆ. ನೀನೂ ಪರಮಾದರದಿಂದ ಪಠಿಸು. ಪರಮ ಪುರುಷ ಹರಿ ಪ್ರಸನ್ನನಾಗುತ್ತಾನೆ ''. " ಲಕ್ಷ್ಮೀಪತೇ ! ಕಾರ್ಯತ್ರಯ ಉಳಿದೇ ಹೋಯಿತು, ನೀನು ಈಗ ಕೃತಿಯನ್ನು ಪೂರ್ಣಮಾಡಿ ಕೃತಕೃತ್ಯನಾಗು. ನಿನ್ನ ಸೇವೆ ಪುತ್ರ ಸೇವೆ ಎನ್ನಿಸುತ್ತೆ, ನಿನಗೆ ಪುಣ್ಯ ಬರುತ್ತದೆ. ನನ್ನ ಸೇವೆ ಮಾಡಿ ನೂರು ವರ್ಷ ಬದುಕು. ನಾನು ವೃಂದಾವನದಲ್ಲಿ ನಿಮ್ಮಗಳ ಕ್ಷೇಮಕ್ಕಾಗಿ ಇರುತ್ತೇನೆ. ಕರದಾನಕ್ಕಿಂತ ಕೃತ್ಯತ್ರಯ ಹೆಚ್ಚಿನ ಸೇವೆ. ಇದು ನನ್ನ ಕೃತಿಯೇ ಎಂದು ನಿನಗೆ ನಿಶ್ಚಯವಿದ್ದರೆ ಕಾರ್ಯತ್ರಯ ಮಾಡು, ಹಾಗೆ ಮಾಡಿದರೆ ಇಂದ್ರನಿಗೆ ಜಯಂತನಂತೆ ನೀನು ನನ್ನ ಪುತ್ರ. ನೀನು ಮಾಡದಿದ್ದರೂ ಪೂರ್ಣ ಕಾಮನಾದ ನನಗೇನೂ ಇಲ್ಲ. ನಿನಗೆ ಹೆಚ್ಚು ಲಾಭ. ಆಖ್ಯಾನದ ಅರ್ಥ ಪ್ರವಚನ ಮಾಡಿ ಇಲ್ಲಿಗೆ ಮುಗಿಸಿ ಕೃಷ್ಣಾರ್ಪಣ ಮಾಡೋದು, ಕಲ್ಲಿನಲ್ಲಿ ಕೆತ್ತಿಸೋದು, ಅನ್ನ ಮಂತ್ರ ಪಠಿಸಿ ಅನ್ನದಾನ ಮಾಡುವುದು ಹೀಗೆ ಮೂರು ಕಾರ್ಯ. ಇದು ನಿನ್ನ ಹಿತಕ್ಕೆ ಹೇಳಿದ್ದು " ಎಂದಿದೆ. '' ಹಯಗ್ರೀವಮುನೇ ! ಬೇಕಾದಷ್ಟು ದುಡ್ಡಿದೆ, ದಾನ ಮಾಡುತ್ತಿ, ವಿದ್ಯಾವಂತ, ಆದರೆ ಬ್ರಾಹ್ಮಣನ ಸಂಗಡ ಸೇರಿಕೊಂಡು ಅಧ್ಯಯನ ತಿಥಿಗಳಲ್ಲಿ ಆಖ್ಯಾನಾರ್ಥ ವಿಚಾರ ಮಾಡಿ ಕೃಷ್ಣಾರ್ಪಣ ಮಾಡಿದರೆ ವೈದಿಕದಾನ, ಜ್ಞಾನಯಜ್ಞ ಎನ್ನಿಸುವುದು. ಅನೇಕರಿಗೆ ದುಡ್ಡು ಹೆಚ್ಚಿನ ಪದಾರ್ಥ, ಲೌಕಿಕ ಪರಿತ್ಯಾಗ ಮಾಡು (44). ಈ ಜಗತ್ತು ಮಾಯಾ ಕಲ್ಪಿತ, ಮಿಥ್ಯಾ ಎಂದು ಅದ್ವೈತಿಗಳು ಹೇಳುತ್ತಾರೆ. ನಾವು '' ಜಗತ್ತು '' ಎಲ್ಲಾ ಹರೀಚ್ಛೆಯ ಅಧೀನ, ಅಸ್ವತಂತ್ರ, ಸ್ವತಂತ್ರವಾದುದು ಯಾವುದೂ ಇಲ್ಲ " ಎನ್ನುತ್ತೇವೆ. ಅಂಥ ತುಚ್ಛ ಲೌಕಿಕವನ್ನು ಏನು ವಿಚಾರ ಮಾಡುವುದು ? ಎಂದು ನೀನು ನಿಶ್ಚಯಿಸು. ಆದ್ದರಿಂದ '' ಪೃಚ್ಛ ಸಚ್ಛಾಸ್ತ್ರ ತತ್ವಾನಿ, ಮಯೋಕ್ತಾನಿ ನವೈವ್ಯೃಷಾ '' ಶಾಸ್ತ್ರದ ತತ್ವಗಳನ್ನು ವಿಚಾರ ಮಾಡಿದರೆ ಪುಣ್ಯ ಬರುತ್ತೆ, ಲೌಕಿಕ ಪಾಪಿ ಜನರ ವಾರ್ತೆ ಬೇಡ ಎಂದು ಧಿಕ್ಕರಿಸಿದ್ದಾರೆ. ವಿಪ್ರನಿಗೆ ಜ್ವರ ಬಂದಿದೆ ಯಲ್ಲಾ ಎಂಬ ಪೂರ್ವಪಕ್ಷ ಅಸೂಯೆ ಮೂಲಕ, '' ನನಗೆ ಇನ್ನೂ ದೇವರು ಕಾಣಿಸಿಲ್ಲವಲ್ಲಾ ಎಂದು ಅವನಿಗೆ ಜ್ವರ. ಸ್ವಪ್ನದಲ್ಲಿ ನನ್ನ ಕಥಾ ಶ್ರವಣದಿಂದ ಅಲ್ಲ, ಅದು ತಾನಾಗಿಯೇ ವಾಸಿಯಾಗುತ್ತೆ, ನೀನು ಪರಬ್ರಹ್ಮನ ಮಹಿಮೆ ಕೇಳು. ನನ್ನ ಸ್ವರೂಪ ದೇವತೆಗಳಿಗೆ ಗೊತ್ತು. ಮನುಷ್ಯರಿಗೆ ಈಗ ಗೊತ್ತಿಲ್ಲ, ಪುಷ್ಯನಕ್ಷತ್ರದಲ್ಲಿ ಹುಟ್ಟಿದ ಯಾವನೋ ಒಬ್ಬ ಬಲ್ಲ. (ರಘುಪ್ರವೀರ ತೀರ್ಥರು ಪುಷ್ಯ ನಕ್ಷತ್ರ ಸಂಜಾತರು) ಎಂದಿದ್ದಾರೆ. ಇಷ್ಟು ಹೇಳಿ ತತ್ವೋಪದೇಶ 11 ಶ್ಲೋಕದಲ್ಲಿ (55 - 65) ಮಾಡಿದ್ದಾರೆ. ಕಂಠಪಾಠ ಯೋಗ್ಯ, ಸಾರಾರ್ಥ ಹರಿಯೇ ಸರ್ವೋತ್ತಮ, ಜನ್ಮಾದಿ

ಕರ್ತಾ, ಸೇವಾನುಸಾರಿ ಫಲದಾತಾ, ಬ್ರಹ್ಮನನ್ನು ಸೃಷ್ಟಿಕಾರಕನನ್ನಾಗಿ ಮಾಡಿದ್ದಾನೆ. ಗರುಡವಾಹನ, ಶೇಷಶಯ್ಯಾ ಆಗಿದ್ದಾನೆ. ದೇವತೆಗಳೆಲ್ಲರೂ ಅವನ ಸೇವೆಗೆ ತವಕದಿಂದ ಓಡಿ ಬರುತ್ತಾರೆ. ಅವನ ಸೇವೆ ಮಾಡಿ ಪದವೀ ಹೊಂದಿದ್ದಾರೆ. ಪ್ರಭು ನನಗೂ ಒಂದು ಅಧಿಕಾರ ಕೊಡುತ್ತಾನೆ" ಎಂದು ಹೆಮ್ಮೆಯಿಂದ ಹೇಳಿದ್ದಾರೆ. ಮುನಿಯೇ ! ಅದ್ವೈತ ಮತದಲ್ಲಿ ಬ್ರಹ್ಮನಿರ್ಧರ್ಮಕ, ಜ್ಞಾನಸ್ವರೂಪ ಆದರೂ ಜ್ಞಾನ ಉಳ್ಳವನಲ್ಲ, ದ್ವೈತ ಮತದಲ್ಲಿ ಅನಂತಜ್ಞಾನ, ಸುಖಗಳಭೋಗ ಉಳ್ಳವನು. ಕಲ್ಯಾಣ ಗುಣ ಪೂರ್ಣ, ಅದ್ವೈತದ ಕೇವಲ ಜ್ಞಾನಸ್ವರೂಪತ್ವ ಪುರುಷಾರ್ಥವಲ್ಲ'', ಎಂದು ನಿರೂಪಿಸಿದ್ದಾರೆ, ಮತ್ತೂ ಲಕ್ಷ್ಮೀಪತಿಗೆ ಹೇಳುತ್ತಾ ''ಮಣಿಬಾಲ ರಾಮನು ದಾಂಬಲನನ್ನು ಭಯಪಡಿಸಿ ಓಡಿಸಿ ನನ್ನ ಸೇವೆ ಮಾಡಿದ್ದಾನೆ. ವಾದಿರಾಜ ಭಟ್ಟಾದಿಗಳು ಕೃತಿ ಪಾರಾಯಣ ಮಾಡಿ ಅರ್ಚಿರಾದಿಮಾರ್ಗ ಪ್ರಾಪ್ತಿಗೆ ಅರ್ಹರಾಗಿದ್ದಾರೆ. ಭಟ್ಟನು ವಿಪ್ರನಿಗೆ ಮನೆಯನ್ನೇ ಕೊಟ್ಟಿದ್ದಾನೆ'' ಎಂದು ಪ್ರಶಂಸಿಸಿದ್ದಾರೆ, ಇನ್ನು ಮುಂದಿನ ವಿಷಯ ಹೇಳುತ್ತಾರೆ. ಅಧ್ಯಾಯ (ಅಧ್ಯಾತ್ಮ) ಪರ್ಯಂತ" ಎಂದರೆ ಭಕ್ತ ಅಧಿಕಾರಿಗಳು ಈ ಗ್ರಂಥ ಪಾರಾಯಣ ಮಾಡಿ ಫಲಹೊಂದಿ ಸಿದ್ಧಿ ಪಡೆಯುವವರೆಗೂ, ವಿಪ್ರ ವೃಂದಾವನಾಚಾರ್ಯರಾಗಿ ವ್ಯಾಸ ಮುಷ್ಟಿತಂದು ಪೂಜಿಸಿ, ಅವರ ಸಂಬಂಧಿಗಳೆಲ್ಲಾ ಅಧಿಕಾರ ಹೊಂದಿ ಅವರ ಉಪದೇಶದಿಂದ ಸಿದ್ಧಿ ಹೊಂದುವವರೆಗೂ, ಇತರ ಭಕ್ತರೂ ದ್ವೇಷಿಗಳ ಸಂಗ ತ್ಯಜಿಸಿ ಸಾಧನೆ ಮಾಡಿ ಸಾಕ್ಷಾತ್ಕಾರ ಹೊಂದಿ ಕೃತಾರ್ಥರಾಗುವವರೆಗೂ, ನಾನು ತಪಿಸುತ್ತಾ ಧ್ಯಾನ ಮಾಡುತ್ತೇನೆ. ನನ್ನ ಸಂಕಲ್ಪಗಳೆಲ್ಲಾ ಈಡೇರುವುದನ್ನು ನೋಡುತ್ತೇನೆ" ಎಂದಿದೆ. ಶ್ರೀಕೃಷ್ಣಾರ್ಪಣಮಸ್ತು.

ಫಲಿತಾರ್ಥ :

ಹೀಗೆ 22 ಅಧ್ಯಾಯಗಳಲ್ಲಿ ಮಧ್ವ ಮತದ ಉತ್ಕರ್ಷವೂ, ಪುರಾಣೋಕ್ತ ವಾದಿರಾಜ ಋಜುತ್ವವೂ, ವಿಪ್ರನ ಇಂದ್ರತ್ವ, ಧವಳ ಸರೋವರದ ಗಂಗಾತ್ವ, ವಿಪ್ರ ಸಹಾಯಕರ ದಿಕ್ಪಾಲಕತ್ವ, ವೇದವೇದ್ಯರ ಋಜುತ್ವ, ವೇದನಿಧಿಗಳ ವೈನತೇಯತ್ವಾದಿ ಅದ್ಭುತ ಪ್ರಮೇಯಗಳು ಪ್ರತಿಪಾದಿತವಾಗಿವೆ. ಎಲ್ಲಾ ಸಚ್ಛಾಸ್ತ್ರಾನುಸಾರಿ ಎಂದರೆ ಮೂಲ ಶಾಸ್ತ್ರಾವಿರುದ್ಧ ಮಹಿಮೆಗಳು ವರ್ಣಿತವಾಗಿವೆ. ಭವಿಷ್ಯ ವಿಷಾದಗಳೂ ಉಕ್ತವಾದಂತೆ ಹುಟ್ಟಿಕೊಂಡಿವೆ. ವಾ. ಗು. ಚ ಗ್ರಂಥವೂ. ಎರಡು ವಿಶ್ವಪ್ರಿಯ ವಿಲಾಸಗಳೂ ಸಮಾಖ್ಯಾ ಎಂಬಂತೆ ಇವೆ. ಪಾದ್ಮಾದಿ ವಚನಗಳೂ ವಾದಿರಾಜ ಗುರುವರ ಚರಿತಾಮೃತದಲ್ಲಿ ಉದಾಹೃತವಾಗಿವೆ. ಅಯಂ ಋಜುಃ, ವಿಷ್ಣು ವಿಶಿಷ್ಟ ಪ್ರತಿಮಾತ್ವಾತ್, ಭಾವಿ ರುದ್ರ ಗರುಡಾದಿ ಸೇವಿತತ್ವೇಸತಿ ರಮ್ಯಾವರ ಪುರುಷತ್ವಾತ್ ಎಂದು ಉಪಪತ್ತಿಯೂ ಇದೆ. ಉಪಕ್ರಮ ಉಪಸಂಹಾರಾದಿ ಇತರ ಲಿಂಗಗಳು ಸ್ಪಷ್ಟವಾಗಿವೆ. ಅಬಾಧಿತ ಸಾತ್ವಿಕತಮ ವಿಷಯ ಪ್ರತಿಪಾದಕವೆಂದ ಮೇಲೆ ಆಖ್ಯಾನವು ಮಾನ್ಯವಾದ ಋಜೂಪದಿಷ್ಟ ಸ್ವತಃ ಪ್ರಮಾಣ ಶಾಸ್ತ್ರ ಗ್ರಂಥವೆಂದು ಹೇಳಲು ಅಡ್ಡಿ ಏನೂ ಇಲ್ಲ. ಆರಂಭದಿಂದ ಕೊನೆಯವರಿಗೂ ಹರಿಗುರುಭಕ್ತಿ ಎಂಬ ತಾರಕ ಭಾವವು ತುಂಬಿ ತುಳುಕಾಡುತ್ತೆ;

ಶ್ರೀಕೃಷ್ಣಾರ್ಪಣಮಸ್ತು.

॥ ಶ್ರೀ ॥

ಶ್ರೀಮದ್ಧನು ಮಂದ್ಭೀಮಮಂಧ್ವಾಂಕರ್ಗತರಾಮ ಕೃಷ್ಣವೇದವ್ಯಾಸಾತ್ಮಕ
ಶ್ರೀಲಕ್ಷ್ಮೀ ಹಯಗ್ರೀವಾಯನಮಃ ॥

ಶ್ರೀವಾದಿರಾಜಗುರುಭ್ಯೋನಮಃ ॥

ಭಾಗ ೩

ಉಪಸಂಹಾರ ವಾದಗಳು

೧. ಆಖ್ಯಾನದ ಅದ್ಭುತತ್ವ

1. ಈ ಜಗತ್ತಿನಲ್ಲಿ ಏಳು ಅದ್ಭುತಗಳೆಂದು ಕೆಲವರೂ, ಒಂಭತ್ತೆಂದು ಹಲವರೂ ಹೇಳುತ್ತಾರೆ; ಬ್ರಹ್ಮಾಂಡ ರಚನೆಯು ಪರಮಾದ್ಭುತವೆಂದು ಪೌರಾಣಿಕರು ಹೇಳುತ್ತಾರೆ. ಪಿಂಡಾಂಡವಾದ ದೇಹ ರಚನೆಯೂ ಜಗದೀಶ್ವರನ ಅದ್ಭುತ ಕೃತಿಯೇ ಎಂದು ಯೋಗೀಶ್ವರರಾದ ಶುಕನಾರದಾದಿಗಳು ಹೇಳಿದ್ದಾರೆ. ಶಬ್ದಪ್ರಪಂಚದಲ್ಲಿ ಸ್ವಾಪ್ನ ವೃಂದಾವನಾಖ್ಯಾನವು ಅತ್ಯದ್ಭುತ ಗ್ರಂಥವಾಗಿ ಶ್ರೀವಾದಿರಾಜಸ್ವಾಮಿಗಳಿಂದ ರಚಿಸಲ್ಪಟ್ಟು ಮೆರೆಯುತ್ತಿದೆ. ಗ್ರಂಥ ಶ್ರವಣ ಮಾಡಿದವನು ಶಾಲೆಗೇ ಹೋಗದ ಸುಪ್ತ ಏಡಮೂಕ ದ್ವಿಜ. ಅಂಥವನು ಶ್ರವಣ ಮಾಡಿದ್ದು ಎಂದರೆ ಮೋಕ್ಷಾದಿ ಪುರುಷಾರ್ಥ ಪ್ರದವಾದ ಗುಹ್ಯ ವೇದಾಂತ ಸಾರ. ಹೇಳಿದವರು ವೃಂದಾವನಸ್ಥ ಅಶರೀರಿ ಋಜುಯೋಗಿಗಳು. ಹೇಳಲ್ಪಟ್ಟ ಭವಿಷ್ಯಗಳು ನೂರಐವತ್ತು ವರ್ಷದ ಮೇಲೆ ನಡೆದವುಗಳು. ಗ್ರಂಥೋತ್ಪತ್ತಿ ಕಾಲದಲ್ಲಿ ಧವಳಗಂಗಾದಿಗಳು ವಿನಃ ಯಾವುದೂ ತಿಳಿಯಲ್ಪಡುವ ಹಾಗಿಲ್ಲ. ಗ್ರಂಥವಾದರೋ ಮಂತ್ರ ತುಲ್ಯ ಪ್ರಾಮಾಣಿಕ ಶಾಸ್ತ್ರದ ಗ್ರಂಥವಾಗಿ ಭಕ್ತರನ್ನು ಪಾವನಮಾಡಿ ಉದ್ಧರಿಸುತ್ತೆ. ವಾದಿರಾಜಸ್ವಾಮಿಗಳು ತಮ್ಮ ಯೋಗ ಶಕ್ತಿಯನ್ನು ಇದರ ರಚನೆಯಲ್ಲಿ ಚೆಲ್ಲಿ ತೋರಿಸಿ ಬಿಟ್ಟಿದ್ದಾರೆಂದು ಕಂಡು ಬರುವುದರಿಂದ ಈ ಗ್ರಂಥದ ಸೇವೆಯಿಂದ ಅವರು ಬಹು ಬೇಗ ಸಂತುಷ್ಟರಾಗುತ್ತಾರೆಂದು ಊಹಿಸಬಹುದು, ಹಾಗೇ ಹೇಳಿಯೂ ಇದ್ದಾರೆ. ಆದ್ದರಿಂದ ಅವರ ಕರುಣಾರಸವು ಇಲ್ಲಿ ಉಕ್ಕಿ ಹರಿಯುತ್ತೆ. ಅವರಿಗೆ ಪರಮ ಪ್ರಿಯವಾದ ಈ ಗ್ರಂಥವನ್ನು ಅಧಿಕಾರಿಗಳು ಕಲಿಯುಗದ ಕಾಮಧೇನುವೆಂದು ಆದರಿಸಿ ಸೇವಿಸಿ ತಾವು ಮೋಕ್ಷಾರ್ಥವಾಗಿ ಹೊಂದ ಬೇಕಾದ ದಿವ್ಯಜ್ಞಾನಕ್ಕೆ ಸಾಧಕವನ್ನಾಗಿ ಮಾಡಿಕೊಳ್ಳಬೇಕು. ಅವಜ್ಞೆ ಮಾಡಿ ಅಥವಾ ನಿಂದಿಸಿ ವಿಪರೀತ ಫಲವನ್ನು ಹೊಂದಬಾರದು.

2. ಆಖ್ಯಾನ ಸ್ವಾಪ್ನ ಶಬ್ದಾತ್ಮಕವಾದರೂ "ತತ್ತಥೈವಭವಿಷ್ಯತಿ" ಎಂಬ ಪ್ರಮಾಣದಿಂದ ಸತ್ಯಾರ್ಥವನ್ನೇ ಬೋಧಿಸುತ್ತೆ, ಆದರೂ ವಿಪ್ರನ ಸಂಸ್ಕಾರದ ಶಬ್ದಗಳನ್ನು ಸೇರಿಸಿ ಗುರುರಾಜರು

ವಾಕ್ಯಗಳನ್ನು ಮಾಡಿರುತ್ತಾರಾದ್ದರಿಂದ ಪ್ರಾಯೇಣ ಸಣ್ಣ ವಾಕ್ಯಗಳು ಇದರಲ್ಲಿ ತುಂಬಿವೆ. ರುಕ್ಮಿಣೀಶ ವಿಜಯದಲ್ಲಿರುವ ದೀರ್ಘಬದ್ಧ ಬೃಹತ್ಯಾದಿ ಛಂದಸ್ಸುಗಳಿಂದ ಬದ್ಧವಾದ ಬಹು ಶ್ಲೋಕಗಳಿಲ್ಲ. ಭಿನ್ನ ಭಿನ್ನ ಪ್ರಕರಣಗಳೂ ಒಂದೇ ಅಧ್ಯಾಯದಲ್ಲಿ ಬಹುತರವಾಗಿವೆ. ಆದ್ದರಿಂದ ತುಂಬ ವಿವೇಚನೆ ಮಾಡದೆ ಕೆಲವು ಕಡೆ ಅನ್ವಯಜ್ಞಾನವಾಗುವುದಿಲ್ಲ. ವಿಪ್ರ ಒಬ್ಬ ಸಂತತಶ್ರೋತಾ; ಅವನ ಸಂಗಡಿಗರೂ, ವಿರೋಧಿಗಳೂ ಗುರು ಸಮಕ್ಷಮಕ್ಕೆ ಬಂದು ಹೋಗುತ್ತಿದ್ದಾರೆ. ಹಯಗ್ರೀವಮುನಿ ಎಂದರೆ ಶ್ರೀರಘುಪ್ರವೀರತೀರ್ಥರು, ಶೇಷ ಎಂದರೆ ಮಂತ್ರಿ ನಾಗರಾಜರಾಯರು – ಹೀಗೆ ಕಂಡು ಹಿಡಿಯುವುದಕ್ಕೆ ಅಸಾಧ್ಯವಾದ ಹೆಸರುಗಳು ತುಂಬಿವೆ. ಸುಲಭವಾಗಿ ಎಲ್ಲವೂ ಅರ್ಥವಾಗುವುದಿಲ್ಲ.

ಅನೇಕ ಭವಿಷ್ಯಗಳು " ಪರೋಕ್ಷ " ಭಾಷೆಯಲ್ಲಿ ಎಂದರೆ ಅಸ್ಪಷ್ಟ ರೀತಿಯಲ್ಲಿ ಉಕ್ತವಾಗಿವೆ: '' ಕಾಂಚನೀಯಾಂಚನೀಯಾಂ ಚ '', '' ಮಹೀಜಶ್ಚಾಮಹೀಜಶ್ಚ '' ಇತ್ಯಾದಿ. ಅನೇಕ ವಾಕ್ಯಗಳು ಉಪಶ್ರುತಿ ರೂಪವಾಗಿವೆ. ಅನೇಕ ವಾಕ್ಯಗಳಲ್ಲಿ ಅಂತರಾರ್ಥ ತುಂಬಿದೆ. ಇಂಥ ವಾಕ್ಯಗಳಿಗೆಲ್ಲಾ ಫಲ ಪ್ರತ್ಯಕ್ಷವಾದ ಮೇಲೆ ಸಮೀಚೀನಾರ್ಥಗಳು ಹೊಳೆಯುತ್ತವೆ. ಸ್ವಪ್ನ ನಿರ್ದಿಷ್ಟ ಪ್ರಮೇಯಗಳೂ ಕೂಡ ಶಾಸ್ತ್ರದಲ್ಲಿ ಹೇಳಿರುವಂತೆ ಸ್ವಲ್ಪ ವ್ಯತ್ಯಾಸಾದಿ ಕ್ರಮಗಳನ್ನನುಸರಿಸಿ ಪ್ರತ್ಯಕ್ಷೋಪಲಬ್ಧಿಗೆ ವಿಷಯವಾಗುತ್ತವೆ. ಹಯಗ್ರೀವಮುನಿಗೆ ಹೇಳಿರುವುದನ್ನು ಲಕ್ಷ್ಮೀಪತಿ ಮಾಡಿದ್ದಾನೆ. ಹೀಗೆ ಕಾಲ ವ್ಯತ್ಯಾಸ, ಸಂದರ್ಭ ವ್ಯತ್ಯಾಸಗಳಿಂದಲೂ ಸಹಿತವಾಗಿ ಫಲ ಪ್ರತ್ಯಕ್ಷ ಕಂಡಿದೆ. ಆದರೂ ವಾಕ್ಯ ಸುಳ್ಳಾಗುತ್ತೆ ಎಂದು ತಿಳಿಯಬಾರದು. ಅಶ್ವತ್ಥಾಮ ಧೃಷ್ಟದ್ಯುಮ್ನ ಮುಂತಾದವರಿಗೆ ಹಾಗೆ ಸ್ವಪ್ನ ವಾಕ್ಯಗಳು ಈ ಪತ್ ವ್ಯತ್ಯಾಸದಿಂದ ಫಲಿಸಿರುವುದು ಕಂಡಿದೆ. ಇದರಿಂದ ವಾಕ್ಯ ಪ್ರಾಮಾಣ್ಯಕ್ಕೆ ಏನೂ ಬಾಧಕ ತಿಳಿಯ ಬಾರದು. ಸ್ವಪ್ನೋಪದೇಶಗಳು ಫಲಿಸುತ್ತವೆ. ಸ್ವಪ್ನದಲ್ಲಿ ದೇವರೂ ದೇವತೆಗಳೂ ಕೊಟ್ಟ ವರ ಫಲಿಸುತ್ತೆ. ಸ್ವಪ್ನದಲ್ಲಿ ಗುರು ದೇವತೆಗಳ ದರ್ಶನ ಪುಣ್ಯಜನಕ. ಇದನ್ನೆಲ್ಲಾ ಋಜುಂತ್ವ ಚಂದ್ರೋದಯದಲ್ಲಿ ಶ್ರೀ ವಿಶ್ವಾಧೀಶ ತೀರ್ಥರು ಪ್ರಮಾಣ ಕೊಟ್ಟು ಉಪಪಾದಿಸಿದ್ದಾರೆ. ಗ್ರಂಥವು ಅತಿ ಸುಲಭವೆಂದು ಊಹಿಸಿ ಮನಸ್ವೀ ಅರ್ಥ ಮಾಡುವುದಕ್ಕೆ ಹೋಗಬಾರದೆಂದು ಸಾಧಿಸಲು ನಾನು ಈ ವಿವರಗಳನ್ನು ಇಲ್ಲಿ ಕ್ರೋಡೀಕರಿಸಿದ್ದೇನೆ. ಇವಕ್ಕೆ ಸಂಬದ್ಧವಾದ ಇತರ ವಿಷಯಗಳನ್ನೂ ಈ ಸಂದರ್ಭದಲ್ಲಿ ಜ್ಞಾಪಿಸಿಕೊಂಡಿರಬೇಕು. ಎಂದರೆ ನಿಖಿಲ ವಾಕ್ಯಗಳೂ ಈಶ್ವರ ಗುಣ ಬೋಧಕಗಳೂ ಆಗಿವೆ. ಗ್ರಂಥದ ಅಂತರ ಥ= ಮರ್ಯಾದೆಯಲ್ಲಿ ತಮ್ಮ ತಮ್ಮ ಅದೃಷ್ಟ ವಿಶೇಷ ಪ್ರತಿಪಾದಕ ಭಾಗಗಳೂ ಅನೇಕರಿಗೆ ಉಪಲಬ್ಧವಾಗಿವೆ ಎಂದು ಐತಿಹ್ಯವಿದೆ. ನಮ್ಮ ಉಪಾಸ್ಯಮೂರ್ತಿ ನಮ್ಮ ಬಿಂಬ, ನಮ್ಮ ಸ್ವರೂಪ ತಿಳಿಯುವುದಕ್ಕೂ ಈ ಆಖ್ಯಾನವು ವಿಲಕ್ಷಣ ಶಾಬ್ದ ಕನ್ನಡಿ ಎನ್ನುತ್ತಾರೆ. ಸರ್ವಜ್ಞ ಋಜು ಯೋಗಿ ಪ್ರಣೀತವಾದ್ದರಿಂದ ಅಪನಂಬಿಕೆಗೆ ಕಾರಣವಿಲ್ಲ. ವಿಶೇಷತಃ ಇದು ಮಂತ್ರ ಬಂಧ. ಪಾರಾಯಣಕ್ಕಾಗಿಯೇ ರಚಿತವಾದದ್ದೆಂದು ತಿಳಿದು ಈ ದೈವಿಕ ಆಖ್ಯಾನವನ್ನು ಭಕ್ತಿಯಿಂದ ಸೇವಿಸಬೇಕು. ಸರ್ವ ಆಪತ್ತುಗಳೂ ಮಂಜಿನಂತೆ ಕರಗಿ ಹೋಗುತ್ತವೆ. ಐಹಿಕ ಫಲಗಳೂ, ಉಕ್ತವಾದ ಆಮುಷ್ಮಿಕ ಫಲ ಪ್ರಾಪ್ತಿಗೆ ಸಂಭಾವಕ ವೆಂಬಂತೆ, ಒದಗಿ ಬರುತ್ತವೆ. ಅನಿರೀಕ್ಷಿತ ಸಿದ್ಧಿಗಳು ಮನಃ ಪ್ರಸಾದವಾಗುವಂತೆ ಫಲಿಸುತ್ತವೆ. ಮುಕ್ತಿಗೇ ಸೋಪಾನ.

3. ಇವೆಲ್ಲಾ ಮರ್ಮಗಳನ್ನು ತಿಳಿಯದೆ ಈ ಆಖ್ಯಾನದಲ್ಲಿ ತಾತ್ಸಾರ ಮಾಡಿ, ಇತರರಿಗೂ ಗರ್ವದ ಮಾತುಗಳಿಂದ ಅನುಪಾದೇಯತ್ವ ಬುದ್ಧಿ ಹುಟ್ಟಿಸಿದರೆ, ಹಾಗೆ ಮಾಡುವವನು ಮಾಡಿದ ಸಾಧನೆಯನ್ನು ಹಾಳು ಮಾಡಿಕೊಂಡು, ದೇವಗುರು ದ್ರೋಹವನ್ನೂ ಹೊಂದುತ್ತಾನೆ. ಆದ್ದರಿಂದ ದೊಡ್ಡವರ ಉಪದೇಶ ಹೊಂದಿ ಭಯ ಭೀತಿಗಳಿಂದ ಸಾತ್ವಿಕ ವಿಮರ್ಶೆಯ ಮಾರ್ಗವನ್ನೇ ಈ ಆಖ್ಯಾನಾಭ್ಯಾಸ ಮಾಡುವವರು ಅವಲಂಬಿಸಬೇಕು. ಇದು ಮಹಾತ್ಮರಿಂದಲೂ ಸೇವ್ಯ ಗ್ರಂಥ. ಶ್ರೋತವ್ಯ, ಮಂತವ್ಯ, ಪೂಜ್ಯ, ಆಖ್ಯಾನ ಗ್ರಂಥಸ್ಥ ವಿಧಿಗಳೂ ಸಾತ್ವಿಕ ಸ್ಮೃತಿ ಪುರಾಣಸ್ಥ ವಿಧಿಗಳಂತೆ ಕರ್ತವ್ಯವು, ತಿರಸ್ಕಾರ್ಯವಲ್ಲ. ಶ್ರೀಕೃಷ್ಣಾರ್ಪಣಮಸ್ತು.

೨. ಪೂರ್ವಪಕ್ಷ ಪ್ರಕ್ರಿಯೆಗಳು

1. ಈ ಗ್ರಂಥಕ್ಕೆ ವಿರುದ್ಧವಾಗಿ ಬರೆಯಬೇಕೆಂದು ಯಾರಾದರೂ ಚಿಂತಿಸಿದರೆ ಅಂಥವರು ಈ ನಿತ್ಯಾತೀಂದ್ರಿಯ ವಿಷಯದಲ್ಲಿ ಆಗಮ ಪ್ರಮಾಣವನ್ನು ಕಂಡು ಹಿಡಿಯಬೇಕು. ಪಂಡಿತಾಭಾಸರು ಯತ್ನಿಸುವಂತೆ ಯುಕ್ತಿವಿರೋಧವನ್ನು ತೋರಿಸಬಾರದು. ತತ್ವ ಪ್ರಕಾಶಿಕಾ 158 (III - 2 - 28) **" ಭವೇದತ್ರ ಯುಕ್ತಿವಿರೋಧೋ ಯದಿ ಬ್ರಹ್ಮ ಸ್ವರೂಪಾದಿ ಯುಕ್ತಿಗಮ್ಯಂ ಸ್ಯಾತ್ । ನೈತದಸ್ತಿ । ಕೇವಲ ಶ್ರುತಿಗಮ್ಯತ್ವಾದಿತಿ ಭಾವಃ ॥ "** ಎಂದಿದೆ. ಪ್ರತ್ಯಕ್ಷ ವಿರೋಧದ ಸಂಭವ ವಿಲ್ಲ. ವಾದಿರಾಜರ ದೇಹವು ದುರ್ಲಕ್ಷಣ ಹೀನವಾಗಿಯೂ, ಪೂರ್ಣ ಲಕ್ಷಣ ಸಂಪನ್ನವೂ ಆಗಿತ್ತೆಂದು ಐತಿಹ್ಯವಿದೆ. ಅವರೇ ಮಾಡಿಸಿ ಕೊಟ್ಟಿರುವ ಅವರ ಪ್ರತಿಮೆಯು, ಅವರೇ ಮಾಡಿಸಿರುವ ಪ್ರತಿಮೆ ಯಂತೆ ಸರ್ವ ಲಕ್ಷಣ ಸಂಪನ್ನವಾಗಿದೆ. ಸರ್ವತ್ರ ಜಯಶೀಲವಾದ ನಿರ್ವಿಕಾರ ನಿರ್ಭೀತ ವರ್ತನೆಯೂ, ಅಗಮ್ಯ ಬದರೀ ಸಹ್ಯಾದ್ರಿ ಯಾತ್ರೆಗಳನ್ನು ಮಾಡಿದ ಅವರ ಜೀವನ ಚರಿತ್ರೆಯೂ, ಭಾರತಾರ್ಥ ಪ್ರಕಾಶಿತ್ವಾದಿ ಜ್ಞಾನಕಾರ್ಯವೂ, ವಿಲಕ್ಷಣ ಹಯಗ್ರೀವ ಪ್ರಸಾದ ಪಾತ್ರತ್ವ, ಭೂತರಾಜಾದಿ ಸೇವ್ಯತ್ವ ಮಹಿಮೆಯೂ, ಹೆಬ್ಬೆಟ್ಟಿನಿಂದ ಮೆಟ್ಟಿ ಅಸಾಧ್ಯ ಶಿಲೆಯನ್ನು ಎರಡು ಹೋಳು ಮಾಡಿದ ಅವರ ದೇಹ ಬಲವೂ ಸಾಧಾರ ಯುಕ್ತಿಗಳು. ಅವು ಮಧ್ವ ಸಾಮ್ಯವನ್ನೇ ಸೂಚಿಸುತ್ತವೆ. ಆದ್ದರಿಂದ ಕೇವಲ ಯುಕ್ತಿಯು ನಿತ್ಯಾತೀಂದ್ರಿಯ ಸ್ವರೂಪ ನಿರ್ಣಯ ವಿಷಯದಲ್ಲಿ ಉಪಯೋಗಿಸಲ್ಪಡಬಾರದು. ಅದು ನಿರ್ಣಾಯಕವಲ್ಲವೆಂದೇ ಭಗವತ್ಪಾದರ ಸಿದ್ಧಾಂತ. **" ಅದುಷ್ಟ ಬುದ್ಧೀನಾಂ ಸ್ವತಏವ ಸಿದ್ಧತ್ವಾಚ್ಚ ಪ್ರಾಮಾಣ್ಯಸ್ಯ । .... ಪ್ರಾಮಾಣ್ಯಂಚ ಸ್ವತಏವ ಸಿದ್ಧಂ ॥ "** **" ಪಿಪೀಲಿಕಾ ಲಿಪಿಶ್ಚಾಪಿ ಪ್ರಮಾಣಮವಿರೋಧತಃ "** ಇತ್ಯಾದಿ ವಾಕ್ಯಗಳಿಂದ ಸ್ವಾಪ್ನ ವೃಂದಾವನಾಖ್ಯಾನವು ಸ್ವತಃ ಪ್ರಮಾಣತ್ವ ಉಳ್ಳದ್ದೇ. ವೇದವೇದ್ಯಾದಿಗಳ ಐತಿಹ್ಯ, ಕರ್ನಾಟಕ ಜ್ಞಾನಿಜನರ ನಿರೂಪಣೆ, ಆಖ್ಯಾನೋಕ್ತ ಭವಿಷ್ಯಗಳ ಉಪಲಬ್ಧಿ, ಸಾತ್ವಿಕ ಪ್ರಮೇಯ ಭರಿತತ್ವ, ವೃಂದಾವನಾಚಾರ್ಯರೇ ಮುಂತಾದ ಬಹು ಮಹನೀಯರ ಸಂವಾದಗಳೂ ಸಹ ನಿರವಕಾಶತನದಿಂದ ಪ್ರಾಮಾಣ್ಯ ದಾರ್ಢ್ಯಕ್ಕೇ ಸಾಧಕವಾಗಿವೆ. ನಿರವಕಾಶ ಬಾಧಕ ಪ್ರಮಾಣವು ಒಂದೂ ಇಲ್ಲ. ಆಗಮಾಧಾರ ರಹಿತ ಯುಕ್ತಿಗಳು

ಶುಷ್ಕ ತರ್ಕವನ್ನೆಸುತ್ತವೆ. ಆದ್ದರಿಂದ ಆಖ್ಯಾನೋಕ್ತ ಋಜುತ್ವಾದಿ ಪ್ರಮೇಯಗಳೆಲ್ಲಾ ಸುಳ್ಳೆಂದು ತೋರಿಸಲು ಊಹೆಯಿಂದ ಯುಕ್ತಿ ಪ್ರಯೋಗಕ್ಕೆ ಹೋಗದೆ ತೂಷ್ಣೀಂ ಭಾವ ಹೊಂದುವುದೇ ಶತ್ರುವಿಗೂ ಭೂಷಣ.

2. ಅನ್ಯಥಾ ಸೈಂಧವನಿಗೆ ಸೋತದ್ದರಿಂದ ಭೀಮಸೇನನು ಋಜುವಲ್ಲ, ಕ್ಷೌರಮಾಡಿಸಿ ಕೊಂಡಿದ್ದರಿಂದ ಕೃಷ್ಣನು ಜ್ಞಾನಮಯ ದೇಹಿಯಲ್ಲ ಇತ್ಯಾದಿ ಬಹು ತತ್ತ್ವ ವಿಪ್ಲವಗಳು ದುರ್ಯುಕ್ತಿ ಫಲವಾಗಿ ಪ್ರಾಪ್ತವಾಗುವುವು. ಹಾಗೆಲ್ಲಾ ಯುಕ್ತಿವಿನ್ಯಾಸ ಮಾಡಬಾರದೆಂದು ಒಪ್ಪುವುದಾದರೆ ವೃಂದಾವನಾಖ್ಯಾನವು ದಿವ್ಯ ಸ್ವತಃ ಪ್ರಮಾಣ ಲೋಕೋಪಕಾರಿ ಶಾಸ್ತ್ರಗ್ರಂಥವೆಂದೇ ಸಿದ್ಧವಾಗುತ್ತದೆ. ಅಧ್ಯೇತೃ ಜನರ ಸಾಕ್ಷಿಯೂ. ದಾಸಕೂಟದವರ ಸಾಕ್ಷ್ಯವೂ, ಸೇವಾ ಮಾಡುವ ಋಜುತ್ವ ಭಾವುಕರ ಫಲಹೊಂದಿದ ಅನುಭವಗಳೂ ಗ್ರಂಥ ಪ್ರಾಮಾಣ್ಯಕ್ಕೆ ದಾರ್ಢ್ಯವನ್ನೇ ಉಂಟು ಮಾಡುತ್ತವೆ. ಪ್ರತಿಮಾ ಪ್ರತ್ಯಕ್ಷವೂ ಶಂಕಾನಿರಾಸಕವಾಗಿದೆ, ಬಾಧಕವಾಗಿಲ್ಲ ಎಂದೂ ಹೇಳಿಯಾಗಿದೆ.

3. ವಾದಿರಾಜ ವಿರೋಧಿಗಳಾದ ಕೆಲವರು ಶ್ರುತಿಕಲ್ಪಕರು; ಅಥವಾ ಸ್ಮೃತಿಕಲ್ಪಕರು, ಅಥವಾ ಐತಿಹ್ಯ ಕಲ್ಪಕರು, ಅಥವಾ ಸ್ವಪ್ನ ಕಲ್ಪಕರಾಗಿದ್ದಾರೆ. ಕೆಲವರು ಅಜಿಜ್ಞಾಸಾರತಶಠರು. ಎಂದರೆ "ನನಗ ಅವರ ಋಜುತ್ವ ವಿಚಾರ ಬೇಡ, ನಾನು ಸ್ನಾನಮಾಡಿ ಕೈ ಮುಗಿಯುತ್ತೇನೆ. ನನಗೆ ಅಷ್ಟೇ ಸಾಕು" ಎಂದು ಹೆದರುವ ಅನಧಿಕಾರಿಗಳು. ಇನ್ನೊಂದು ಗುಂಪಿನವರು ಸ್ನಾಬರಿ '(Snobbery)" ಎಂದು ಆಂಗ್ಲರಲ್ಲಿ ಕರೆಯಲ್ಪಡುವ ದೋಷವುಳ್ಳವರು; ಎಂದರೆ ಪ್ರಭುತ್ವ, ದ್ರವ್ಯ ಸಂಪತ್ತಿ, ಬಾಂಧವ್ಯ, ದಂಭಾದಿ ಕಾರಣಗಳಿಂದ ದುರ್ಬಲರನ್ನು ದಬಾಯಿಸಿ, "ಸರಸ್ವತಿಗಿಂತ ಲಕ್ಷ್ಮೀ ಅಧಿಕಳು. ಮುಚ್ಚು ಬಾಯಿ: ಆ ವಿಚಾರ ಆಮೇಲಾಗಲಿ" ಎಂದು ಸಭಾಕಾರ್ಯವನ್ನು ಸಮಾಪ್ತಿಮಾಡಿ ಎದ್ದು ಬಿಡುತ್ತಾರೆ. ಈ ಎಲ್ಲಾ ಮಾರ್ಗಗಳೂ ದೇವತೆಗಳನ್ನಾದರೂ ಪತನ ಹೊಂದಿಸದೆ ಬಿಡುವುದಿಲ್ಲ. ಈ ಎಲ್ಲಾ ಮಾರ್ಗಗಳ ನಿಶ್ಚಯಗಳೂ ಪೂರ್ವೋಕ್ತ ಬಹು ನಿರವಕಾಶ ಪ್ರಮಾಣ ವಿರುದ್ಧ.

4. "ಸ್ತೋತ್ರ ಮಂಜರೀ" ಕಾರರ ದೋಷ ತೋರಿಸಿಯಾಗಿದೆ. "ಋಜು ಯೋಗಿಗಳಾದ ವಾದಿರಾಜರು ಅನೇಕ ಅದ್ಭುತಗಳನ್ನು ಮಾಡಿ ತೋರಿಸಿದರು" ಎಂದು ವೇದನಿಧ್ಯಾದಿಗಳ ವಾಕ್ಯವಿದ್ದರೂ, "ಋಜು ಯೋಗಿಗಳಾದ" ಎಂಬ ಭಾಗ ಬಿಟ್ಟು "ವಾದಿರಾಜರು ಅನೇಕ ಅದ್ಭುತಗಳನ್ನು ಮಾಡಿ ತೋರಿಸಿದರು" ಎಂದು ಅವರು ಉದಾಹರಿಸುತ್ತಾರೆ. ವಿಶೇಷಣಗಳ ಅವಿವಕ್ಷೆ ಮಾತ್ರದಿಂದ ವ್ಯಕ್ತಿಗಳ ಮಹಿಮೆಗೆ ಅಸತ್ವ ಉಂಟಾಗುತ್ತದೆಯೇ ? ಈ ರೀತಿಯ ವಾದಿರಾಜರ ಸ್ತುತಿ ಅಥವಾ ಚರಿತ್ರೆಯು ತತ್ತ್ವಸಂಖ್ಯಾನ ಟೀಕೆಯಲ್ಲಿ ಟೀಕಾಚಾರ್ಯರು ತೋರಿಸಿರುವ ಪುರುಷಾರ್ಥಾನುಪಯೋಗಿತ್ವ ದೋಷದಿಂದ ಕೆಟ್ಟು ಹೋಗುತ್ತದೆ. [1] ಸಂಶಯ ಹುಟ್ಟುವುದರಿಂದ ಅಂಥ ಗ್ರಂಥಾಭ್ಯಾಸದಿಂದ ಪಾಪವೂ ಬರುತ್ತದೆ.

---

1) "ಪುರುಷಾರ್ಥೋಪಯೋಗಾನುಪಯೋಗಾಭ್ಯಾಂ ವಿಶೇಷಾತ್" - ತತ್ತ್ವಸಂಖ್ಯಾನ ಟೀಕಾ. Madras Edition, published by Swamiji of Sri Bhandarikere mutt, 1971. ಋಜುತ್ವಜ್ಞಾನಪೂರ್ವಕವಾಗಿ ಮಹಿಮೆ ತಿಳಿದರೆ ಅವರ ಮಹತ್ತ್ವ ತಿಳಿಯುವುದರಿಂದ ಯೋಗ್ಯ ಭಕ್ತಿ ಹುಟ್ಟಿ ಪುಣ್ಯ ಬರುತ್ತೆ. ಋಜುತ್ವಜ್ಞಾನವಿಲ್ಲದೆ ಮಹಿಮೆ ಶ್ರುತವಾದರೆ ಅವರ ಸ್ವರೂಪ ನಿರ್ಣಯವಿಲ್ಲದೆ ಯೋಗ್ಯ ಭಕ್ತಿ ಹುಟ್ಟದೆ ಪುಣ್ಯಕ್ಷಯ, ಅವಜ್ಞಾನಿಮಿತ್ತ ಪಾಪಾದಿಗಳ ಸಂಭವ ಉಂಟು. ಅಧ್ಯಾಯ 6 ರಲ್ಲಿ ವಿವರ ಕೊಟ್ಟಿದೆ.

ಶುಷ್ಕ ತರ್ಕವೆನ್ನಿಸುತ್ತವೆ. ಆದ್ದರಿಂದ ಆಖ್ಯಾನೋಕ್ತ ಋಜುತ್ವಾದಿ ಪ್ರಮೇಯಗಳೆಲ್ಲಾ ಸುಳ್ಳೆಂದು ತೋರಿಸಲು ಊಹೆಯಿಂದ ಯುಕ್ತಿ ಪ್ರಯೋಗಕ್ಕೆ ಹೋಗದೆ ತೂಷ್ಣೀಂ ಭಾವ ಹೊಂದುವುದೇ ಶತ್ರುವಿಗೂ ಭೂಷಣ.

2. ಅನ್ಯಥಾ ಸೈಂಧವನಿಗೆ ಸೋತದ್ದರಿಂದ ಭೀಮಸೇನನು ಋಜುವಲ್ಲ, ಕ್ಷೌರವಮಾಡಿಸಿ ಕೊಂಡಿದ್ದರಿಂದ ಕೃಷ್ಣನು ಜ್ಞಾನಮಯ ದೇಹಿಯಲ್ಲ ಇತ್ಯಾದಿ ಬಹು ತತ್ವ ವಿಪ್ಲವಗಳು ದುರ್ಯುಕ್ತಿ ಫಲವಾಗಿ ಪ್ರಾಪ್ತವಾಗುವುವು. ಹಾಗೆಲ್ಲಾ ಯುಕ್ತಿವಿನ್ಯಾಸ ಮಾಡಬಾರದೆಂದು ಒಪ್ಪುವುದಾದರೆ ವೃಂದಾವನಾಖ್ಯಾನವು ದಿವ್ಯ ಸ್ವತಃ ಪ್ರಮಾಣ ಲೋಕೋಪಕಾರಿ ಶಾಸ್ತ್ರಗ್ರಂಥವೆಂದೇ ಸಿದ್ಧವಾಗುತ್ತದೆ. ಅಧ್ಯೇತೃ ಜನರ ಸಾಕ್ಷಿಯೂ. ದಾಸಕೂಟದವರ ಸಾಕ್ಷ್ಯವೂ, ಸೇವಾ ಮಾಡುವ ಋಜುತ್ವ ಭಾವುಕರ ಫಲಹೊಂದಿದ ಅನುಭವಗಳೂ ಗ್ರಂಥ ಪ್ರಾಮಾಣ್ಯಕ್ಕೆ ದಾರ್ಢ್ಯವನ್ನೇ ಉಂಟು ಮಾಡುತ್ತವೆ. ಪ್ರತಿಮಾ ಪ್ರತ್ಯಕ್ಷವೂ ಶಂಕಾನಿರಾಸಕವಾಗಿದೆ, ಬಾಧಕವಾಗಿಲ್ಲ ಎಂದೂ ಹೇಳಿಯಾಗಿದೆ.

3. ವಾದಿರಾಜ ವಿರೋಧಿಗಳಾದ ಕೆಲವರು ಶ್ರುತಿಕಲ್ಪಕರು; ಅಥವಾ ಸ್ಮೃತಿಕಲ್ಪಕರು, ಅಥವಾ ಐತಿಹ್ಯ ಕಲ್ಪಕರು, ಅಥವಾ ಸ್ವಪ್ನ ಕಲ್ಪಕರಾಗಿದ್ದಾರೆ. ಕೆಲವರು ಅಜಿಜ್ಞಾಸಾರತಶರರು. ಎಂದರೆ " ನನಗ ಅವರ ಋಜುತ್ವ ವಿಚಾರ ಬೇಡ, ನಾನು ಸ್ನಾನಮಾಡಿ ಕೈ ಮುಗಿಯುತ್ತೇನೆ. ನನಗೆ ಅಷ್ಟೇ ಸಾಕು " ಎಂದು ಹೆದರುವ ಅನಧಿಕಾರಿಗಳು. ಇನ್ನೊಂದು ಗುಂಪಿನವರು ಸ್ನಾಬರಿ ‘ (Snobbery) " ಎಂದು ಆಂಗ್ಲರಲ್ಲಿ ಕರೆಯಲ್ಪಡುವ ದೋಷವುಳ್ಳವರು; ಎಂದರೆ ಪ್ರಭುತ್ವ, ದ್ರವ್ಯ ಸಂಪತ್ತಿ, ಬಾಂಧವ್ಯ, ದಂಭಾದಿ ಕಾರಣಗಳಿಂದ ದುರ್ಬಲರನ್ನು ದಬಾಯಿಸಿ, '' ಸರಸ್ವತಿಗಿಂತ ಲಕ್ಷ್ಮೀ ಅಧಿಕಳು, ಮುಚ್ಚು ಬಾಯಿ: ಆ ವಿಚಾರ ಆಮೇಲಾಗಲಿ '' ಎಂದು ಸಭಾಕಾರ್ಯವನ್ನು ಸಮಾಪ್ತಿಮಾಡಿ ಎದ್ದು ಬಿಡುತ್ತಾರೆ. ಈ ಎಲ್ಲಾ ಮಾರ್ಗಗಳೂ ದೇವತೆಗಳನ್ನಾದರೂ ಪತನ ಹೊಂದಿಸದೆ ಬಿಡುವುದಿಲ್ಲ. ಈ ಎಲ್ಲಾ ಮಾರ್ಗಗಳ ನಿಶ್ಚಯಗಳೂ ಪೂರ್ವೋಕ್ತ ಬಹು ನಿರವಕಾಶ ಪ್ರಮಾಣ ವಿರುದ್ಧ.

4. '' ಸ್ತೋತ್ರ ಮಂಜರೀ '' ಕಾರರ ದೋಷ ತೋರಿಸಿಯಾಗಿದೆ. '' ಋಜು ಯೋಗಿಗಳಾದ ವಾದಿರಾಜರು ಅನೇಕ ಅದ್ಭುತಗಳನ್ನು ಮಾಡಿ ತೋರಿಸಿದರು '' ಎಂದು ವೇದನಿಧ್ಯಾದಿಗಳ ವಾಕ್ಯವಿದ್ದರೂ, '' ಋಜು ಯೋಗಿಗಳಾದ '' ಎಂಬ ಭಾಗ ಬಿಟ್ಟು " ವಾದಿರಾಜರು ಅನೇಕ ಅದ್ಭುತಗಳನ್ನು ಮಾಡಿ ತೋರಿಸಿದರು " ಎಂದು ಅವರು ಉದಾಹರಿಸುತ್ತಾರೆ. ವಿಶೇಷಣಗಳ ಅವಿವಕ್ಷೆ ಮಾತ್ರದಿಂದ ವ್ಯಕ್ತಿಗಳ ಮಹಿಮೆಗೆ ಅಸತ್ವ ಉಂಟಾಗುತ್ತದೆಯೇ ? ಈ ರೀತಿಯ ವಾದಿರಾಜರ ಸ್ತುತಿ ಅಥವಾ ಚರಿತ್ರೆಯು ತತ್ವಸಂಖ್ಯಾನ ಟೀಕೆಯಲ್ಲಿ ಟೀಕಾಚಾರ್ಯರು ತೋರಿಸಿರುವ ಪುರುಷಾರ್ಥಾನುಪಯೋಗಿತ್ವ ದೋಷದಿಂದ ಕೆಟ್ಟು ಹೋಗುತ್ತದೆ. [1] ಸಂಶಯ ಹುಟ್ಟುವುದರಿಂದ ಅಂಥ ಗ್ರಂಥಾಭ್ಯಾಸದಿಂದ ಪಾಪವೂ ಬರುತ್ತದೆ.

---

1) " ಪುರುಷಾರ್ಥೋಪಯೋಗಾನುಪಯೋಗಾಭ್ಯಾಂ ವಿಶೇಷಾತ್ " - ತತ್ವಸಂಖ್ಯಾನ ಟೀಕಾ. Madras Edition, published by Swamiji of Sri Bhandarikere mutt, 1971. ಋಜುತ್ವಜ್ಞಾನಪೂರ್ವಕವಾಗಿ ಮಹಿಮೆ ತಿಳಿದರೆ ಅವರ ಮಹತ್ವ ತಿಳಿಯುವದರಿಂದ ಯೋಗ್ಯ ಭಕ್ತಿ ಹುಟ್ಟಿ ಪುಣ್ಯ ಬರುತ್ತೆ. ಋಜುತ್ವಜ್ಞಾನವಿಲ್ಲದೆ ಮಹಿಮೆ ಶ್ರುತವಾದರೆ ಅವರ ಸ್ವರೂಪ ನಿರ್ಣಯವಿಲ್ಲದೆ ಯೋಗ್ಯ ಭಕ್ತಿ ಹುಟ್ಟದೆ ಪುಣ್ಯಕ್ಷಯ, ಅವಜ್ಞಾನಿಮಿತ್ತ ಪಾಪಾದಿಗಳ ಸಂಭವ ಉಂಟು. ಅಧ್ಯಾಯ 6 ರಲ್ಲಿ ವಿವರ ಕೊಟ್ಟಿದೆ.

5. "ನಯ ಸಿದ್ಧಾಂತ ಸಂಗ್ರಹ" ವಾದಿರಾಜರಿಂದ ರಚಿತವೆಂದು 1969 ರಲ್ಲಿ ಶಿವಮೊಗ್ಗೆಯಲ್ಲಿ ಪ್ರಿಂಟಾದ ಒಂದು ಗ್ರಂಥವು ಇನ್ನೂ ಹೆಚ್ಚು ದೋಷವುಳ್ಳದ್ದು: ನೂರು ವರ್ಷದ ಹಿಂದೆ ಅಬ್ಬಾರಣ್ಯ ಮಾಹಾತ್ಮ್ಯ" ಎರಡನೆಯ ಭಾಗ ಎಂದು ಕಲ್ಪನೆ ಮಾಡಿ ಕೆಲವರು ವಾದಿರಾಜರು, ಋಜುಗಳಲ್ಲವೆಂದು ಸಾಧಿಸಲು ಯತ್ನಿಸಿದರು. [1] ಅದರ ಅನುಜನಂತೆ ಈ ಸಣ್ಣ ಪುಸ್ತಕವಿದೆ, "ವಾದಿರಾಜರು ಐದನೇ ಪರ್ಯಾಯಕ್ಕೆ ದುಡ್ಡಿಲ್ಲ ಏನು ಗತಿ ? ಎಂದಿದ್ದರು; ಸುಧಾ ಹೇಳು ಎಂದು ಸ್ವಪ್ನ ಆಯಿತು; ಹಾಗೆ ಶಿಷ್ಯ ಬಂದನು; ಸ್ವಲ್ಪ ದಿನದಲ್ಲೇ ಪ್ರವಚನ ಮಂಗಳ ಆಯಿತು; ಮತ್ತೆ ಸ್ವಪ್ನ ಆಗಿ, ಅಚ್ಯುತರಾಯ ಕರೆಸಿಕೊಂಡು ಖಾಯಿಲೆ ವಾಸಿ ಮಾಡಿಸಿಕೊಂಡು ಪರ್ಯಾಯದ ಸಾಮಾನುಗಳನ್ನೆಲ್ಲಾ ಕೊಟ್ಟನು. ಆಗ "ಜಯತೀರ್ಥಗುರುಂ ಭಜೇ" ಎಂದು 222 ಶ್ಲೋಕ ಮಾಡಿದರು. ಇದು ವಿಜಯನಗರದ ಕಡೆ ಐತಿಹ್ಯ. ಬೇರೆ ಐತಿಹ್ಯವೂ ಇದೆ." ಹೀಗೆ ಅವತಾರಿಕೆಯಲ್ಲಿ ಹೇಳಿದ್ದಾರೆ. ಅನಂತರ ಶ್ರೀ ಕೂಡ್ಲಿ ಆರ್ಯ ಅಕ್ಷೋಭ್ಯತೀರ್ಥರ ಮಠದ ರಾಮಧ್ಯಾನತೀರ್ಥರು ಅನುಗ್ರಹ ಪತ್ರಿಕೆ ಬರೆದು ಸ್ತುತಿಸಿದ್ದಾರೆ. "ಗುರ್ವರ್ಥ ದೀಪಿಕಾ" ಎಂಬ ಎರಡು ಗ್ರಂಥಗಳು ವಾದಿರಾಜಕೃತ. ಗುರ್ವರ್ಥ ಎಂದರೆ ಜಯತೀರ್ಥ ಗುರುಗಳ ತಾತ್ಪರ್ಯ. ಆದ್ದರಿಂದಲೂ ವಾದಿರಾಜರಿಗೆ ಜಯತೀರ್ಥರು ಗುರುಗಳು ಎಂದು ಯುಕ್ತಿ ಹೇಳಿದ್ದಾರೆ. ಹೀಗೆ 21 ಪುಟದ ಕನ್ನಡಾಕ್ಷರ ಪುಸ್ತಕ ಒಂದು ಬೆಂಕಿಯ ಬಾಣದಂತಿದೆ.

6. **ಖಂಡನೆ:–** ಆದರೆ ಇದೆಲ್ಲಾ ಅಸತ್ಕಲ್ಪನೆ. ವಾದಿರಾಜರ ಐದನೆಯ ಪರ್ಯಾಯ 1596ರಲ್ಲಿ ಬಂತು. ಆ ಪರ್ಯಾಯಕ್ಕೆ ಅವರು ಉಡುಪಿಗೆ ಹೋಗಲೇ ಇಲ್ಲ. ವೇದವೇದ್ಯರನ್ನೇ ಮಾಡೆಂದು ಕಳುಹಿಸಿದರು. ತಾವು ಸೋದೆಯಲ್ಲಿಯೇ ಉತ್ಸವ ಮಾಡಿಕೊಂಡಿದ್ದರು. ಅಚ್ಯುತರಾಯನು ಆಗ ರಾಜನೇ ಅಲ್ಲ. 1585 ರಿಂದ 1614ರ ವರೆಗೆ ವೀರವೆಂಕಟಪತಿರಾಯ ವಿಜಯನಗರದ ರಾಜ. ಹಣದ ಕೊರತೆ ವಾದಿರಾಜರಿಗೆ ಹೇಗೆ ಬರಬೇಕು ? ಏಕೆಂದರೆ ಅವರೇ ವಾಲಿ ಭಂಡಾರದ ರಾಶಿ ರಾಶಿ ಕೋಟಿಗಟ್ಟಲೆ ಹಣವನ್ನು ಕೃಷ್ಣರಾಯ ಅಚ್ಯುತರಾಯರಿಗೆ ಕೊಟ್ಟಿದ್ದಾರೆ. ಇವರಿಗೆ ಅವರು ಕೊಡುವ ಪ್ರಸಕ್ತಿ ಬರಲಿಲ್ಲ. ಅಚ್ಯುತರಾಯ (1530–1542) ಮಾಡಿದ ಸೇವೆಗಾಗಿ ಅವನು ಖಾಯಿಲೆ ಬಿದ್ದಾಗ ವಾದಿರಾಜರು ಜಲಮಂತ್ರಿಸಿ ವಾಸಿ ಮಾಡಿ, ಕೂಡಲೆ ಉಡುಪಿಗೆ ಬಂದರು. ಅದು ಪರ್ಯಾಯ ಕಾಲವಲ್ಲ. ಅವರ ಮಧ್ಯ ವಯಸ್ಸು. ಸುಧೆಯನ್ನು 15 20 ದಿನಗಳಲ್ಲಿ ಮುಗಿಸಿ ಮಂಗಳ ಮಾಡಿದರೆ ಯಾವ ಸಂಪತ್ತಿನ ಸುರಿಮಳೆಯೂ ಆಗುವದಿಲ್ಲ. ಅಂಥ ಪ್ರವಚನ ಯಕ್ಷಿಣೀ ಪ್ರವಚನ. 600 ಪತ್ರಗಳ ಪುಸ್ತಕ ಒಂದೆರಡು ವರ್ಷ ಓದಿ ಮಂಗಳ ಮಾಡಿದರೆ ಸಂಪುಟ ಲಕ್ಷ್ಮೀ ಸಂಪತ್ತನ್ನು ಕೊಡುತ್ತಾಳೆಂದು

1) ಋಜುತ್ವ ಸಿದ್ಧಾಂತ ಪುಟ 125·126 ಅಧ್ಯಾಯ 11 ಖಂಡನೆಯನ್ನು ನೋಡಿ. ಉಪಲಕ್ಷಣ ರೀತಿಯಿಂದ "ಅಶ್ವಧಾಟಿಯ ಶ್ರೀಪಾದರಾಜಾಷ್ಟಕ ಮುಂತಾದವೂ ವಾದಿರಾಜಕೃತವಲ್ಲವೆಂದು ತಿಳಿಯಬಹುದು. ತತ್ಕೃತತ್ವ ಪ್ರಸಿದ್ಧಿಯು ಇದ್ದಿದ್ದರೆ ಉಡುಪಿಯ ಗ್ರಂಥಮಾಲೆಗಳಲ್ಲಿ ಎಲ್ಲಾದರೂ ಆ ಪುಸ್ತಕದ ಅಥವಾ ಪದ್ಯದ ಹೆಸರು ಕಾಣುತ್ತಿತ್ತು. ಐತಿಹ್ಯವೂ ಇಲ್ಲ.

ಅನಪರೋಕ್ಷಿಗಳ ಅನುಭವವಿರುವುದು. ಆದ್ದರಿಂದ ಈ ಪರ್ಯಾಯ ಕಥೆ, ಸ್ವಪ್ನ ಮುಂತಾದ್ದೆಲ್ಲಾ ಕಲ್ಪನೆ. ಜಾಲಿಹಾಳು ಶ್ರೀನಿವಾಸಾಚಾರ್ಯರು 1976 ರಲ್ಲಿ ಹುಬ್ಬಳ್ಳಿಯಲ್ಲಿ ವಾದಿರಾಜರು ಋಜುಗಳೇ ಎಂದು ಉಪಾಸನೆ ಮಾಡಬೇಕೆಂದು ಸಾಲು ಉಪನ್ಯಾಸಗಳನ್ನು 15 ದಿನ ಮಾಡಿರುತ್ತಾರೆ. ಅವರು ಇಂಥ ಪುಸ್ತಕ ತಯಾರು ಮಾಡಿಲ್ಲ, ಕೊಡಲು ಕಾರಣವಿಲ್ಲ. ಈ ಪುಸ್ತಕ ವಾದಿರಾಜರು ಬರೆದಿದ್ದಾರೆಂದು ಉಡುಪಿಯಲ್ಲಾಗಲೀ, ಬೇರೆ ಕಡೆಯಲ್ಲಾಗಲೀ ಪ್ರಸಿದ್ಧಿಯಿಲ್ಲ. ಅದರಲ್ಲಿ ಹಯಗ್ರೀವ ಸ್ತುತಿಯೇ ಇಲ್ಲ. 223 ಅಧಿಕರಣದನಾಮಾವಳಿಯು ಶೈಲಿ ಮತ್ತು ರೀತಿಗಳಿಗೆ 222 ಅಧಿಕರಣದ ನಯಸಿದ್ಧಾಂತ ಸಂಗ್ರಹವು ವಿರುದ್ಧವಾಗಿಯೇ ಇದೆ. ವಾಗೀಶ ತೀರ್ಥ ಕರಕಮಲ ಸಂಜಾತ ವಾದಿರಾಜರು ಇದನ್ನು ಬರೆದಿಲ್ಲ. ಯಾರೋ ಗೃಹಸ್ಥ ಪಂಡಿತ ವಾದಿರಾಜನೋ ಬೇರೆ ಹೆಸರಿನವನೋ ಬರೆದಿರಬಹುದು. ಕೆಲವು ತುಂಟ ಜನರು ನಿರಪರಾಧಿ ರಾಮಧ್ಯಾನರನ್ನು ಅನುಗ್ರಹ ಪತ್ರಿಕೆ ಬರೆಯಿಸಿ ಹಳ್ಳಕ್ಕೆ ಕೆಡವಿದ್ದು ಶೋಚನೀಯ. ಏಕೆಂದರೆ ಈ ಕಲ್ಪನೆ ಗ್ರಂಥ ವಾದಿರಾಜರಿಗೆ ದ್ರೋಹ ರೂಪ. ಅವರಿಗೆ ಸ್ವಲ್ಪ ಮಾಡಿದರೂ ಮೇರುವಿನಂತೆ ಮಹತ್ತರವಾಗುತ್ತದೆ. ಫಲ ಏನಾಯಿತೆಂದು ಹೇಳಲು ದುಃಖವಾಗುತ್ತೆ. ಶ್ರೀರಾಮಧ್ಯಾನರು ಪೂರ್ವಾಶ್ರಮದಲ್ಲಿ ಆರ್ಯ ಅಕ್ಷೋಭ್ಯ ತೀರ್ಥರ ಮಠದ ಅಧಿಪತಿಗಳಾದ ಶ್ರೀರಘುವೀರ ತೀರ್ಥರ ದಿವಾನರು. ಈ ದಿವಾನರು ಅನ್ಯಾಯದ ಕಲ್ಪನೆಗೆ ಹೋಗುವವರೇ ಅಲ್ಲ. ನನ್ನ ಗುರುಗಳಾದ ರಘುವೀರ ತೀರ್ಥರ ಬಳಿಗೆ ಅವರು ಮೈಸೂರಲ್ಲಿದ್ದ ಎರಡು ವರ್ಷವೂ ನಾನು ಪಾಠಕ್ಕೆ ಹೋಗುತ್ತಿದ್ದುದರಿಂದ ಅವರನ್ನು ನಾನು ಚೆನ್ನಾಗಿ ಬಲ್ಲೆ. ಅವರು ಶಿವಮೊಗ್ಗೆಗೆ ಹೋದ ಮೇಲೆ ದಿವಾನರು ಸ್ವಾಮಿಗಳಾದರು. ಈ ಕಲ್ಪಕರ ವಶರಾಗಿ ಗೊತ್ತಿಲ್ಲದ ಪುಸ್ತಕಕ್ಕೆ 1969 ರಲ್ಲಿ ಅನುಗ್ರಹ ಪತ್ರಿಕೆ ದೂರದಲ್ಲಿ ಎಂದರೆ ಮಲಖೇಡದಲ್ಲಿ ರುಜು ಮಾಡಿದರು. ಸ್ವಲ್ಪ ಕಾಲದ ಮೇಲೇನೇ ಮದ್ರಾಸಿಗೆ ಹೋದರು. ಅದೇ ವರ್ಷ ಅಪಮೃತ್ಯುವಿಗೆ ವಶರಾಗಿ ಸಂಸ್ಥಾನವನ್ನು ಇನ್ನೊಬ್ಬರಿಗೆ ಕೊಡಲು ಅವಕಾಶವಿಲ್ಲದೆ ದೈವಾಧೀನರಾದರು. ದೇವರೆಲ್ಲಾ ಬೀಗದ ಕೋಣೆಯಲ್ಲಿ ಕೆಲವು ಬೇರೆ ಕಡೆ ಇದ್ದು ಕೋರ್ಟಿನಲ್ಲಿ 7-8 ವರ್ಷ ವ್ಯವಹಾರವಾಗಿ ಬೇರೊಬ್ಬರು ಸ್ವಾಮಿಗಳು ಆರ್ಯ ಅಕ್ಷೋಭ್ಯ ತೀರ್ಥರ ಸಂಸ್ಥಾನಕ್ಕೆ ಅಧಿಪತಿಗಳೆಂದು ಪ್ರಸಿದ್ಧರಾಗಿ ಶಿವಮೊಗ್ಗೆಗೆ 1978 ರಲ್ಲಿ ಬಂದರು. ಸಹಾಯಕರು ಎಲ್ಲೆಲ್ಲಿ ಹೇಗಿದ್ದಾರೋ ಎಂಬುದನ್ನು ವಾಚಕರೇ ತಿಳಿಯಲಿ. ಈ ಕಾರ್ಯವು ವಾದಿರಾಜರ ಸೇವೆಯಾಗಿದ್ದರೆ ಜ್ಞಾನ ವಿಳಂಬಿತ ಸಾಧು ಮರಣ ಅಥವಾ ಆಯುರ್ವೃದ್ಧಿಯಾಗುತ್ತಿತ್ತೇ ಹೊರತು ಆಕಸ್ಮಿಕ ಸಾವು ರಾಮಧ್ಯಾನ ತೀರ್ಥರನ್ನು ಅಪ್ಪುತ್ತಿರಲಿಲ್ಲ ಎಂದು ಎಲ್ಲಾ ವಾದಿರಾಜ ಸೇವೆ ಶ್ರದ್ಧಾಳುಗಳೂ ಹೇಳುತ್ತಾರೆ. " ಕಾಲಯಾಮ್ಯಪಮೃತ್ಯುತಾಂ " (ಅಪಮೃತ್ಯು ಪರಿಹರಿಸುತ್ತೇನೆ) ಎಂದು ಆಖ್ಯಾನದಲ್ಲಿದೆ. (V-64).

7. " ತುಷ್ಯತು ದುರ್ಜನಃ " ಎಂಬ ನ್ಯಾಯದಿಂದ " ನಯಸಿದ್ಧಾಂತ ಸಂಗ್ರಹ " ವು ಸೋದೆ ಮಠದ ಸ್ವಾಮಿಗಳಾದ ವಾದಿರಾಜರು ಬದುಕಿದ್ದಾಗ ರಚಿಸಿದ ಕೃತಿ ಎಂದು ಒಪ್ಪಿದರೂ ವಾದಿರಾಜರು ಜಯತೀರ್ಥ ಶಿಷ್ಯರೆಂದು ಸಿದ್ಧಿಸುವುದಿಲ್ಲ. ಏಕೆಂದರೆ ಜ್ಞಾನಿಗಳ ಬದುಕಿನ ನಡೆವಳಿಕೆಗಳೆಲ್ಲಾ ಸಂಮುಗ್ಧ, ಅಸ್ಪಷ್ಟ, ಸಾವಕಾಶ, ಅನಹಂಕೃತಿಯಿಂದಲೂ. ಲೋಕದ ಅಲ್ಪಾಧಿಕಾರಿಗಳಿಗೆ ಪಾಠಕಲಿಸು

ವುದಕ್ಕೂ. ಕ್ವಚಿನ್ಮೋಹನಾರ್ಥವಾಗಿಯೂ, ವೇದವ್ಯಾಸಾದಿ ಜಗನ್ನಾಥದಾಸಾಂತ ಅಪರೋಕ್ಷಿಗಳೆಲ್ಲರೂ ಜ್ಞಾನಗೂಹನ ಪರರಾಗಿ ವರ್ತಿಸಿದ್ದಾರೆ. ಋಜುತ್ವ ಸಿದ್ಧಾಂತದ ಪುಟ 230, 268, 269, 270, 186, 20 ರಿಂದ 23; 22 ಪಾದ ಟಿಪ್ಪಣಿ, 149, 150, 159, ಮುಂತಾದ ಸ್ಥಳಗಳಲ್ಲಿ ತೋರಿಸಿರುವಂತೆ ದೊಡ್ಡವರು ಪಾಪಿಗಳ ಜೊತೆಯಲ್ಲಿ ತಮ್ಮನ್ನು ಸೇರಿಸಿಕೊಂಡು ದೇವರನ್ನು, ಇತರ ನೀಚ ದೇವತೆಗಳನ್ನೂ ಕೂಡಾ; ಋಷಿಗಳನ್ನೂ ಕೂಡಾ " ನನ್ನನ್ನು ಕಾಪಾಡು, ನಾನು ಪಾಪಿ " ಎಂದು ಮುಂತಾಗಿ ಸ್ತುತಿಸಿದ್ದಾರೆ. ವ್ಯಾಸರೇ ನಾರದರನ್ನು ಪ್ರಾರ್ಥಿಸಿದ್ದಾರೆ. ಬ್ರಹ್ಮದೇವರು " **ಕೃಶಂ ಕೃತಘ್ನಂ ದುಷ್ಕರ್ಮ ಕಾರಿಣಂ ಪಾಪ ಭಾಜನಂ । ಅಪರಾಧ ಸಹಸ್ರಾಣಾಂ ಆಕರಂ ಕರುಣಾಕರ ॥ ಕೃಪಯಾ ಮಾಂ ಕೇವಲಯಾ ಗೃಹಾಣ ಮಧುರಾಧಿಪ । ವಿಷಯಾರ್ಣವಮಗ್ನಂ ಮಾಮುದ್ಧರ್ತುಂ ತ್ವಮಿಹಾರ್ಹಸಿ** ॥46॥ ಎಂದು ತಾವೇ ಸ್ತುತಿಸಿದ್ದಾರೆ. (ನಾನು ಪಾಪಿ, ಕಾಪಾಡು ಎಂದರ್ಥ) ಹಾಗೇ ಇತರ ತಮ್ಮ ಶಿಷ್ಯರು ಸ್ತುತಿಸಬೇಕೆಂದು ಅವರ ಭಾವ. ಪುರಂದರದಾಸರು **"ಶರಣುಸಿದ್ಧಿ ವಿನಾಯಕ, ಶರಣು ವಿದ್ಯೆ ಪ್ರದಾಯಕ"** ಎಂದು ಮುಂತಾಗಿ ತಮಗಿಂತ ಕಮ್ಮಿಯಾದ ಗಣಪತಿಯನ್ನು ಸ್ತುತಿಸಿದ್ದಾರೆ. ಗಣಪತಿಗಿಂತ ಕಮ್ಮಿಯಾದ ನಾವೆಲ್ಲಾ ಹಾಗೆ ಭಜಿಸ ಬೇಕೆಂದು ಅವರ ಭಾವ. ವಿಜಯದಾಸರೂ ಹಾಗೇ ತೋರಿಸಿದ್ದಾರೆ. ವಾದಿರಾಜ ತೀರ್ಥರೂ ಮಾದರೀ ಹರಿದಾಸರಾಗಿದ್ದರಿಂದ ಗುರೂಪಾಸನೆ, ದೇವತೆಗಳ ಉಪಾಸನೆ; ತೀರ್ಥ, ಕ್ಷೇತ್ರ, ವೃಕ್ಷ, ಯತಿ, ವೃಂದಾವನ, ಶಾಸ್ತ್ರಗ್ರಂಥ, ವೈಷ್ಣವ ಕರ್ಮ ಮುಂತಾದ ಬಹು ಅಧಿಷ್ಠಾನಗಳಲ್ಲಿ ಹರಿಯನ್ನು ತಾವು ಕೇವಲವಾಗಿ ಉಪಾಸನೆ ಮಾಡುತ್ತಾ, ಇತರರಿಗೆ ಸ್ವಾಧಿಷ್ಠಾನ ಭಗವಂತನ ಭಜನೆ, ಪೂಜೆಗಳನ್ನು ಕಲಿಸಿದ್ದಾರೆ. ಗೌರಿ, ಶಚಿ, ರತಿ, ಗಣೇಶ, ನಂದಿ ಮುಂತಾದ ದೇವತೆಗಳಿಗೆ ನಮಸ್ಕರಿಸಿದ್ದಾರೆ. **"ಅಹಂ ನಮಾಮಿ ಕಾಮೇನ ಮಾನವಾಯಾನ್ನದಾಯಚ"** (ಅನ್ನದಾನ ಮಾಡುವ ಮಾನವನಿಗೆ ನಾನು ಮನಃಪೂರ್ವಕ ನಮಸ್ಕರಿಸುತ್ತೇನೆ) ಎಂದು ಆಖ್ಯಾನ ಅಧ್ಯಾಯ 5, ಶ್ಲೋಕ 71 ರಲ್ಲಿ ಹೇಳಿದ್ದಾರೆ. ಒಬ್ಬೊಬ್ಬ ಅನ್ನದಾನಿ ಮನುಷ್ಯನಿಗೂ ಅವರು ನಮಸ್ಕರಿಸುತ್ತಾರೆಯೇ ? ಅವರು " ಜಯತೀರ್ಥಗುರುಂ ಭಜೇ " ಎಂದರೂ ಸೂರ್ಯ ಚಂದ್ರಾದಿ ದೇವತೆಗಳಿಗೂ ಋಷಿ, ಮನುಷ್ಯಾದಿಗಳಿಗೂ ಗುರುವಾದ ಜಯತೀರ್ಥರನ್ನು ಅವರಿಗಿಂತ ಕಮ್ಮಿಯವರು ಭಜಿಸಲಿ ಎಂದು ಅರ್ಥ. ವಾದಿರಾಜರಿಗೇ ಜಯತೀರ್ಥರು ಗುರುವೆಂದು ವಿವಕ್ಷಿತಾರ್ಥವಲ್ಲ. " **ಅಸ್ಮದ್ಗುರು ಮಧ್ವಃ** " **ಗುರುಶ್ಚ ಮಧ್ವನಾಮಾನೋ** " ಮುಂತಾದ ವಾಕ್ಯಗಳಲ್ಲೂ, ಸ್ವಾಪ್ನ ವೃಂದಾವನಾಖ್ಯಾನದಲ್ಲೂ ತನಗೆ ವ್ಯಾಸ ಮಧ್ವರೇ ಗುರುಗಳೆಂದು ವಾದಿರಾಜರು ನಿರವಕಾಶವಾಗಿ ಹೇಳಿದ್ದಾರೆ. ಈ 222 ಸಲ " ಜಯತೀರ್ಥ ಗುರುಂ ಭಜೇ " ಎಂಬುದು ಲೋಕ ಶಿಕ್ಷೆಗಾಗಿ. ಹಾಗೆಯೇ ಶ್ರೀಪಾದ ರಾಜರ ಅಷ್ಟಕವನ್ನೂ ಅವರೇ ಮಾಡಿದ್ದರೂ ಅದು ಸಜ್ಜನ ಶಿಕ್ಷೆಗಾಗಿ. ಸುಖ ಪ್ರಾರಬ್ಧ ಪೂರ್ಣರಾದ ಶ್ರೀಪಾದರಾಜರನ್ನು ಅವರಿಗಿಂತ ಅಧಮರೆಲ್ಲರೂ ಸ್ತುತಿಸಲೇಬೇಕು. ವಾದಿರಾಜರು ಭಜಿಸಬೇಕೆಂದಲ್ಲ. " **ಗುರ್ವರ್ಥ ದೀಪಿಕಾ** " ಎಂದರೂ ವಾದಿರಾಜರಿಗೆ ಗುರುವಾದ ಜಯತೀರ್ಥ ಗುರುಗಳ ಅರ್ಥಪ್ರಕಾಶಿಕಾ ಎಂದರ್ಥವಲ್ಲ. ಅದೂ ಸಾವಕಾಶ. ಭಾಷ್ಯಕ್ಕೆ ವ್ಯಾಖ್ಯಾನ ಮಾಡುವಾಗಲೂ, ಅನುವ್ಯಾಖ್ಯಾನಕ್ಕೆ ವ್ಯಾಖ್ಯಾನ ಮಾಡುವಾಗಲೂ ಜಯತೀರ್ಥರು, " ಗುರು " ಗಳಾದ ಮಧ್ವಾಚಾರ್ಯರ ವಿವಕ್ಷಿತಾರ್ಥಕ್ಕಿಂತ ಭಿನ್ನಾರ್ಥಗಳನ್ನು ಅಲ್ಲಲ್ಲಿ ತೋರಿಸಿರುತ್ತಾರೆ ವಾದಿರಾಜರು

ಮಧ್ವ ಸಮಾನರಾದ್ದರಿಂದ ಮಧ್ವಾಚಾರ್ಯರ ಹಾರ್ದಾರ್ಥಗಳನ್ನು ಎತ್ತಿ ಹಿಡಿದು "**ವಸ್ತುತಸ್ತು**" ಇತ್ಯಾದಿ ವಾಕ್ಯಗಳಿಂದ ಶ್ರೀಮಧ್ವಾಚಾರ್ಯರ ಅರ್ಥವನ್ನು ತೋರಿಸಿ, ಜಯತೀರ್ಥರು ಬೇರೆ ಅರ್ಥವನ್ನು ಅಭ್ಯುಪಗಮವಾದಾದಿ ಕಾರಣಗಳಿಂದ ನಿರೂಪಿಸಿರುತ್ತಾರೆ ಎಂದು ಗೂಢ ವಿವರಗಳನ್ನು ವಿದ್ವಾಂಸರಿಗೆ ತಿಳಿಸಿದ್ದಾರೆ. ಕ್ವಚಿತ್ ಖಂಡಿಸಿಯೂ ಇದ್ದಾರೆ. ಆದ್ದರಿಂದ ಅಲ್ಲಿ '' ಗುರು '' ಶಬ್ದಕ್ಕೆ ಮಧ್ವಗುರುಗಳೆಂದು ಮುಖ್ಯಾರ್ಥ. ಅಮುಖ್ಯಾರ್ಥ ಇಟ್ಟುಕೊಂಡರೆ ಲೋಕ ಶಿಕ್ಷೆಗಾಗಿ ಬರೆದಿದ್ದು ಎಂದು ತಿಳಿಯಬೇಕು. "ಅಹಂತು ಮಾನುಷಃ" ಎಂದು ತಮ್ಮನ್ನು ತಾವೇ ಮನುಷ್ಯನೆಂದು **ಲಕ್ಷ್ಯಾಲಂಕಾರ** ಗ್ರಂಥದ ಕೊನೆಯಲ್ಲಿ ಹೇಳಿಕೊಂಡಿದ್ದಾರೆ. ಅವರು ಸ್ಪಷ್ಟವಾಗಿಯೇ ಏತಕ್ಕೆ ತಮ್ಮ ಸ್ವರೂಪ ಹೇಳಿ ಬಿಡಬಾರದು ಎಂಬುದಕ್ಕೆ ಋಜುತ್ವ ಸಿದ್ಧಾಂತದ ಹಿಂದೆ ಹೇಳಿದ 230, 269 ಮುಂತಾದ ಪುಟಗಳಲ್ಲಿ ಸಮಾಧಾನ ಹೇಳಲಾಗಿದೆ. ಇಲ್ಲೂ ಒಂದೆರಡು ಪ್ರಮಾಣ ಕೊಟ್ಟು ಈ ವಿಚಾರ ಮುಗಿಸುತ್ತೇನೆ. **ಮಹಾಭಾರತ ತಾತ್ಪರ್ಯ ನಿರ್ಣಯ – ಅಧ್ಯಾಯ 14 ಶ್ಲೋಕ 4, ಮತ್ತು ಅಧ್ಯಾಯ 22 ಶ್ಲೋಕ 339, 340** ರಲ್ಲಿ ಆಚಾರ್ಯರೇ ಜ್ಞಾನಿಗಳ ಗೂಢೋಕ್ತಿ, ಗೂಡಾಚರಣೆ, ಜ್ಞಾನಗೂಹನ ನೀಚಸೇವೆ ಮುಂತಾದವುಗಳಿಂದ ಅವರಿಗೆ ಪುಣ್ಯ ವೃದ್ಧಿ, ಹರಿಪ್ರೀತಿ ವಿಷಯತ್ವರೂಪ ಮಹಾಫಲವಿದೆ ಎಂದು ಹೇಳಿದ್ದಾರೆ. "**ಮಾನುಷಂಚ**" ಎಂದು ಶ್ರುತಿಯೂ ಇದೆ. ಆದ್ದರಿಂದ ವಾದಿರಾಜರು ತಮ್ಮ ಅನುಜ ಸುರೋತ್ತಮ ತೀರ್ಥರನ್ನಾಗಲೀ, ತಮ್ಮ ಶಿಷ್ಯ ವೇದವೇದ್ಯರನ್ನಾಗಲೀ, ಗೌರಿಗಣೇಶ, ಬಸವರನ್ನಾಗಲೀ, ಅನ್ನದಾನಿಯನ್ನಾಗಲೀ, ಅಷ್ಟಮಠದ ಯತಿಗಳನ್ನಾಗಲೀ ನೀವೇ ಅಧಿಕರು ಎಂದು ಹೊಗಳಿದರೂ, ಜ್ವರ, ಆಂಧ್ಯ, ಅಜ್ಞಾನ ಮುಂತಾದುವನ್ನು ಅನುಭವಿಸುವಂತೆ ಜನತೆಗೆ ಕಾಣಿಸಿಕೊಂಡರೂ, ಗೌಣಾರ್ಥವನ್ನು ಮಾಡಿ ಅವರ ವಾಕ್ಯ ಭಾಗವನ್ನು ತಿಳಿಯಬೇಕೇ ಹೊರತು ಅವರು ಋಜುಗಳಲ್ಲವೆಂದು ದುರರ್ಥ ತಿಳಿಯಬಾರದು. ಅವರು ಪೂರ್ಣ ಅಣಿಮಾದಿಸಿದ್ಧಿಯುಳ್ಳ ಜಾತಾಪರೋಕ್ಷಿಗಳು.

8. ಜಾತಾಪರೋಕ್ಷಿಗಳು ಎಂದು ತಿಳಿದರೆ ಅವರ ಬಾಲ್ಯದ ಅನೇಕ ಆಚರಣೆಗಳು ಲೋಕ ಸಂಗ್ರಹಾರ್ಥವಾಗಿ ಮಾಡಲ್ಪಟ್ಟವೆಂದು ಗೊತ್ತಾಗುತ್ತದೆ. ಅವರ ಬಾಲ್ಯಕಾಲದ ಕ್ರೀಡೆ, ಬಾಲ್ಯದ ವಿದ್ಯಾಭ್ಯಾಸ, ವಾಗೀಶತೀರ್ಥರಲ್ಲಿ ವಿದ್ಯಾಭ್ಯಾಸ ಸಹ "**ವಿಡಂಬನಂ ಹಿ**" ಲೋಕಾನುಸರಣ ಮಾಡಿ ದೇವರನ್ನು ಸಂತೋಷಪಡಿಸಲು ಮಾಡಿದ್ದು ಎಂದು ತಿಳಿಯಬೇಕು. ಸ್ವಾವರ ಜನರ ನಮಸ್ಕಾರಗಳೆಲ್ಲಾ ಆತ್ಮ ಸ್ವರೂಪಗೂಹನೆ ಮಾಡಿಕೊಂಡು ದೇವರನ್ನು ಮೆಚ್ಚಿಸುವುದಕ್ಕಾಗಿಯೂ ಲೋಕ ಶಿಕ್ಷೆಗಾಗಿಯೂ ಮಾಡಿದ್ದು. "**ಸುಧಾಯಾಃ ಶ್ರೀಕರತ್ವೇ ವಯಮೇವ ಸಾಕ್ಷಿಣಃ**" ಎಂದು ಬರೆದಿರುವುದು ವೈಷ್ಣವ ಅನಪರೋಕ್ಷಿ ಜನರ ಶಿಕ್ಷೆಗಾಗಿ. ಏಕೆಂದರೆ ಋಷ್ಯಾದಿ ಅಪರೋಕ್ಷ ಜ್ಞಾನಿಗಳಿಗೆ ತಮ್ಮ ಜ್ಞಾನ ಪ್ರಭಾವದಿಂದಲೇ ಸಂಪತ್ತು ಬರುತ್ತೆ; ಸುಧಾ ಓದಿ ಸಂಪತ್ತನ್ನು ಅವರು ಹೊಂದಬೇಕಾಗಿಲ್ಲ. [1]

1. ಸರ್ವೇಽಪಿ ಪುರುಷಾರ್ಥಾಃ ಸ್ಯುರ್ಜ್ಞಾನಾದೇವನಸಂಶಯಃ ‖ ಎಂದು ಅಣುಭಾಷ್ಯ. (ಎಲ್ಲಾ ಪುರುಷಾರ್ಥಗಳೂ ಋಷ್ಯಾದಿ ಮಧ್ಯಮ ಮತ್ತು ಉತ್ತಮಾಧಿಕಾರಿ ಅಪರೋಕ್ಷ ಜ್ಞಾನಿಗಳಿಗೆ ಆ ಜ್ಞಾನ ಸಾಮರ್ಥ್ಯದಿಂದಲೇ ಆಗುತ್ತವೆ). ಅವರು ಸುಧಾಪ್ರವಚನ ವಾಯುಸ್ತುತಿ ಪಾರಾಯಣಾದಿ ಬೇರೆ ಸೇವೆ ಮಾಡಬೇಕಾಗಿಲ್ಲ. ಋಜುಯೋಗಿಗಳಂತೂ ಸಂಕಲ್ಪ ಸಿದ್ಧರು.

ಋಜುಯೋಗಿಗಳು ಸತ್ಯಕಾಮರು, ಸಂಕಲ್ಪ ಮಾತ್ರದಿಂದ ಬೇಕಾದ ಸಂಪತ್ತನ್ನು ಸುಧಾ ಬರೆದವರಿಗೂ ಕೊಡಿಸಬಲ್ಲರು. ಆ ಜಯತೀರ್ಥ ಸ್ವಾಮಿಗಳ ಕೀರ್ತಿ ವೃದ್ಧಿಯಾಗಲೆಂದೇ ಎರಡು ಪುಸ್ತಕ ಬರೆದು ಆ ಎರಡು ಪುಸ್ತಕ ಆರಂಭದಲ್ಲೂ ಜಯತೀರ್ಥರಿಗೆ ನಮಸ್ಕರಿಸದಿದ್ದರೂ, ಅವರನ್ನು ಕನ್ನಡದಲ್ಲೂ, ಸಂಸ್ಕೃತದಲ್ಲೂ ಅಲ್ಲಲ್ಲಿ ಹೊಗಳಿದ್ದಾರೆ. " ವಾಯುಸ್ತುತಿ ಪರೋ ನಿತ್ಯಂ " ಎಂದೂ ಬರೆದಿರು ವುದೂ ಲೋಕ ಶಿಕ್ಷೆಗಾಗಿ. "ವಾಯು ದೇವತೆಯ ಗುಣದರ್ಶನವನ್ನು ಯೋಗ ಚಕ್ಷುಸ್ಸಿನಿಂದ ಮಾಡುತ್ತಾ ಸಂತೋಷ ಹೊಂದುತ್ತಿದ್ದೇನೆ " ಎಂದು ವಾದಿರಾಜರ ಅರ್ಥ. ಪಂಡಿತಾಚಾರ್ಯರ ವಾಯುಸ್ತುತಿ ಮಾಡದರೆ ವಾಯುದೇವರು ಸಂತೋಷ ಪಡುತ್ತಾರೆ, ಎಂದು ಜನತೆಗೆ ಅರ್ಥವಾಗುತ್ತದೆ. ಹೀಗೆ ಕರುಣೆಯಿಂದ ಲೋಕ ಸಂಗ್ರಹ ಮಾಡಿದ್ದಾರೆ ಎಂದು ತಿಳಿಯಬೇಕು. ನದೀ ಸ್ತುತಿಗಳಲ್ಲೂ, ನಂದಿಕೇಶ್ವರಾದಿ ಸ್ತುತಿಗಳಲ್ಲೂ, ಅವರ ಸ್ವರೂಪ ಗೂಹನವೂ, ಲೋಕ ಸಂಗ್ರಹೇಚ್ಛೆಯೂ ಚೆನ್ನಾಗಿ ಕಾಣುತ್ತದೆ.

9. ಅವರ ಈ ಸ್ವಭಾವವು ಗ್ರಂಥ ರಚನೆಯಲ್ಲಿ ಹೇಗೆ ಕಾಣಿಸುತ್ತದೆಯೋ, ಹಾಗೆಯೇ ಅವರ ಅನೇಕ ಆಚರಣೆಗಳಲ್ಲೂ ಕಾಣಿಸುತ್ತದೆ. ಮಾತಿನಲ್ಲೂ ಕಾಣಿಸುತ್ತದೆ. ಅಂಧ್ಯ ಬಂದರೆ ಜಗದಾಂಧ್ಯವನ್ನು ಪರಿಹರಿಸುವ ತಾವು ಒಂದು ಕ್ಷಣ ಅನುಭವಿಸಿದಂತೆ ಕಾಣಿಸಿಕೊಂಡು, ದೇವರ ಪ್ರಾರ್ಥನೆಯಿಂದ ಪರಿಹಾರವಾದಂತೆ ತೋರಿಸಿಕೊಂಡಿದ್ದಾರೆ. ಜ್ವರ ದೇವತೆ ನಿಮ್ಮಲ್ಲಿ ವಾಸಮಾಡಬೇಕೆಂದು ವಾದಿರಾಜರನ್ನು ಕೇಳಿಕೊಂಡನು. ಮೂರು ವರ್ಷ ಅವಕಾಶ ಕೊಟ್ಟರು. ಯಾವ ದೇವಕಾರ್ಯವನ್ನೂ ನಿಲ್ಲಿಸಲಿಲ್ಲ. ಅವರ ಪೂಜಾಕಾಲದಲ್ಲಿ ಶರೀರವು ಆ ಜ್ವರದಿಂದ ನಡುಗುತ್ತಿತ್ತು. ಜ್ವರವು ಮಾನಿತವಾಗಿ ಹೋಗುವಾಗ "ನಿಮ್ಮ ಭಕ್ತರಿಗೆ ಬಾಧೆ ಕೊಡೋದಿಲ್ಲ" ಎಂದು ಹೇಳಿ ಹೋಯಿತಂತೆ. ಅಷ್ಟು ಜ್ಞಾನಗೂಹನ. ಸೂರ್ಯಗ್ರಹಣ ಕಾಲದಲ್ಲಿ ಸುವರ್ಣ ದಾನವನ್ನು ಸ್ವಜನರ ಮೂಲಕ ಮಾಡಿಸಿದರಂತೆ. ಇವೆಲ್ಲಾ ಸಜ್ಜನರಿಗೆ ಧರ್ಮ ಬೋಧೆಗಾಗಿ ಮಾಡಿದ್ದು. ಮುಂದೆ ಕೊಡುವ ಮಹಿಮಾ ಪಟ್ಟಿಯಲ್ಲಿ ಕೆಲವು ಅರ್ಥವಾಗದಿದ್ದರೂ ಅವರ ಋಜುತ್ವಕ್ಕೆ ವಿರೋಧವಿಲ್ಲದಂತೆ ತಿಳುವಳಿಕೆ ಹೊಂದಿ ಅವರನ್ನು ಉಪಾಸನೆ ಮಾಡಬೇಕು. ಏಳು ಜನ ಮಠಾಧಿಪತಿಗಳಿಗೂ, ಮಹಾರಾಜನಿಗೂ ಅಪಾರ ಸಂಪತ್ತನ್ನು ಕೊಟ್ಟಿದ್ದಾರೆ. ಎಲ್ಲಾ ಅವರ ಜ್ಞಾನ ಸಾಮರ್ಥ್ಯದಿಂದಲೇ ಅವರಿಗೆ ಮತ್ತು ಅವರನ್ನು ನಂಬಿದ ಅನೇಕರಿಗೂ ಸಕಲ ಪುರುಷಾರ್ಥಗಳೂ ದೊರಕುತ್ತವೆ. ಆದ್ದರಿಂದ ಅವರಲ್ಲಿ ಅಜ್ಞಾನ, ದೋಷ, ದೌರ್ಬಲ್ಯ ದಾರಿದ್ರ್ಯಾದಿಗಳನ್ನು ಆಪಾದಿಸ ಬಾರದು. ಅವರು ಸ್ವರೂಪತಃ ಸಾಕ್ಷಾತ್ ಲಕ್ಷ್ಮೀದೇವಿಯ ಪುತ್ರರೆಂಬುದನ್ನೂ ಮರೆಯಬಾರದು.

10. ನಿರ್ಣಾಯಕವಿಲ್ಲದೆ ನಿರ್ಣಯವನ್ನು ಹೇಗೆ ಮಾಡುವುದು ? ಎಂಬ ಪ್ರಶ್ನೆಗೆ ಉತ್ತರವಿದೆ. ನಿರವಕಾಶ ಪ್ರಮಾಣ, ಸಾವಕಾಶ ಪ್ರಮಾಣ ಎಂದು ಪ್ರಮಾಣಗಳು ಎರಡು ವಿಧವಾಗಿವೆ. ಸ್ವತಃ ಪ್ರಮಾಣ ಗ್ರಂಥಗಳಲ್ಲೇ " ಶ್ರಿಯಂ ವಸಾನಾ ಅಮೃತತ್ವಮಾಯನ್ " (ಲಕ್ಷ್ಮೀ ಉಪಾಸಕರು ಮುಕ್ತಿ ಹೊಂದುತ್ತಾರೆ) " ನಾನ್ಯಃ ಪಂಥಾ ಅಯನಾಯ ವಿದ್ಯತೇ " " ಮೋಕ್ಷದಸ್ತು ಜನಾರ್ದನಃ " (ವಿಷ್ಣುವಿನ ಉಪಾಸನೆ ಬಿಟ್ಟು ಮುಕ್ತಿಗೆ ಬೇರೆ ಮಾರ್ಗವಿಲ್ಲ. ಮುಕ್ತಿ ಪ್ರದನು

ವಿಷ್ಣುವೇ) ಎಂದು ಎರಡು ರೀತಿಯ ವಾಕ್ಯಗಳಿವೆ. ಸಂಶಯ ಹುಟ್ಟುತ್ತದೆ, ಏನುಗತಿ ? ಎಂದರೆ ಬ್ರಹ್ಮಲೋಕದಿಂದ ಇಳಿದು ಬಂದು ನಮ್ಮನ್ನುದ್ಧರಿಸಿದ ಮಧ್ವಗುರುಗಳು ನಿರ್ಣಯ ರೀತಿಯನ್ನು ತೋರಿಸಿ ಬಿಟ್ಟಿದ್ದಾರೆ. ಇನ್ನು ಯಾರೂ ಆ ಕೆಲಸ ಸ್ಪಷ್ಟವಾಗಿ ಮಾಡಿಲ್ಲ. ನಿರವಕಾಶ ಪ್ರಮಾಣದಿಂದ ಸಿದ್ಧಾಂತ ತಿಳಿಯಬೇಕು. ಸಾವಕಾಶ ವಾಕ್ಯಗಳನ್ನು ನಿರವಕಾಶ ಪ್ರಮಾಣಕ್ಕೆ ಅವಿರುದ್ಧವಾಗಿ ಅರ್ಥ ಮಾಡಬೇಕು. ನಿರವಕಾಶಾಭಾಸವನ್ನು ನಿರವಕಾಶವೆಂದು ತಿಳಿದು ಮೋಸ ಹೋಗಬಾರದೆಂದೂ ಭಾಗವತ ತಾತ್ಪರ್ಯ, ತತ್ವ ನಿರ್ಣಯಾದಿ ಗ್ರಂಥಗಳಲ್ಲಿ ಎಚ್ಚರಿಕೆ ಕೊಟ್ಟಿದ್ದಾರೆ. ಆ ನ್ಯಾಯದಿಂದ ನಾವು ಸಮಗ್ರ ವಾದಿರಾಜರ ಸಾಹಿತ್ಯವನ್ನು ಪರಿಶೀಲಿಸಿದರೆ, ಬದುಕಿರುವಾಗ ನಡೆದ ಗುರುರಾಜರ ಆಚರಣೆಗಳು ಸಾವಕಾಶವಾಗಬಹುದಾದರೂ, ವೃಂದಾವನಸ್ಥರಾದ ಮೇಲೆ ಅವರು ಯೋಗಜ ಸಾಮರ್ಥ್ಯದಿಂದ ಯೋಗ್ಯ ಅಧಿಕಾರಿಗೆ ಮಾಡಿದ ಉಪದೇಶವು ಅನ್ಯಾರ್ಥಕವಾಗಲಾರದೆಂದೇ ತಿಳಿಯಬೇಕು. ವೇದವೇದ್ಯರ ಸಮಾಖ್ಯೆ, ವೇದನಿಧಿಗಳ ಶಿಲಾಶಾಸನ, ವಾದಿರಾಜ ಗುರುವರಚರಿತಾಮೃತ, ಅಲ್ಲಿರುವ ಪುರಾಣ ವಾಕ್ಯಗಳು, ವೃಂದಾವನಾಚಾರ್ಯರ ಜಾತಿ ಸ್ಮೃತಿ, ಕರ್ನಾಟಕ ದಾಸರ ಉಕ್ತಿಗಳು ಮುಂತಾದ ಸಂವಾದಗಳು ನಿತರಾಂ ದಾರ್ಢ್ಯ ಜನಕವೆಂದು ಎಂಥ ವಿದ್ವಾಂಸರಿಗೂ ಗೊತ್ತಾಗುವ ವಿಷಯ. ಫಲೋಪಲಬ್ಧಿ, ಪ್ರತಿಮಾದರ್ಶನ, ರುಕ್ಮಿಣೀಶ ವಿಜಯ ಮತ್ತು ಯುಕ್ತಿ ಮಲ್ಲಿಕಾದಿ ಗ್ರಂಥ ಸಮೀಕ್ಷೆ, ಲಕ್ಷಾಲಂಕಾರ ನಿರ್ಮಾಣ ಮುಂತಾದ ಅತಿಶಯಗಳು ಸಾಮಾನ್ಯರಿಗೂ ನಂಬಿಕೆಯನ್ನು ವೃದ್ಧಿ ಮಾಡುತ್ತವೆ. ತಥಾ ಚ ಋಜುತ್ವ ಸಿದ್ಧಾಂತದಲ್ಲಿ ಎಂಟು ರೀತಿ ತೋರಿಸಿದಂತೆ ಬಹು ಪ್ರಮಾಣಗಳು ವಾದಿರಾಜ ಋಜುತ್ವಕ್ಕೇ ನಿರವಕಾಶವಾಗಿ ಅನುಕೂಲವಾಗಿವೆ. ತತ್ರಾಪಿ ಸ್ವಾಪ್ನ ವೃಂದಾವನಾಖ್ಯಾನವು ಚಿನ್ನದ ಸರಪಣಿಯಂತೆ ಮೊದಲಿಂದ ಕೊನೆಯವರಿಗೂ ಏಕರೀತಿ ನಿರ್ದೋಷತನದಿಂದ ಅವರ ಋಜುತ್ವವನ್ನು ಪ್ರಕಾಶಪಡಿಸಿ ಜನರಿಗೆ ಮೋಕ್ಷ ಮಾರ್ಗದ ವಿಘ್ನ ನಿವಾರಕವಾಗಿಯೂ, ಅದೇ ಸನ್ಮಾರ್ಗದಲ್ಲಿ ಪ್ರಗತಿ ಹೊಂದುವವರಿಗೆ ಉತ್ತೇಜಕ ದಿವ್ಯ ಕರಣವಾಗಿಯೂ ಮೆರೆಯುತ್ತಿದೆ. ಆಖ್ಯಾನದ III 7, VIII 52, VIII 97 ವಾಕ್ಯಗಳು ವಚನ ವ್ಯಕ್ತಿಯಿಂದಲೇ ವಾದಿರಾಜರು ಋಜುಗಳೆಂದು ಬೋಧಿಸುತ್ತವೆ. ನಿರ್ಮೂಲ ಶಂಕೆಕಳೂ, ನಿರಾಧಾರ ಯುಕ್ತಿಗಳೂ, ಕಲ್ಪಿತ ಐತಿಹ್ಯ, ಸ್ವಪ್ನಾದಿಗಳೂ, ಗ್ರಂಥಾಭಾಸಗಳೂ ಯಾವ ನಿಶ್ಚಯವನ್ನೂ ಹುಟ್ಟಿಸಲಾರವೆಂದು ಮಾತ್ರವಲ್ಲ, ಪ್ರತ್ಯವಾಯ ಬೆಂಕಿಯು ತನ್ನ ಉಗ್ರ ಜ್ವಾಲೆಯಿಂದ ಉದ್ಧತ ವಿಮರ್ಶಾಭಾಸಕರ ಕಾರ್ಯಗಳನ್ನೆಲ್ಲಾ ದಹಿಸಿ ಬಿಡುತ್ತದೆ. [1] ಅಂಥ ಗುರು

1) ಒಂದು ದೃಷ್ಟಾಂತ :- ಏಕಾದಶೀ ವೇಧ ನಿರ್ಣಯಕ್ಕೆ " ದ್ವ್ಯೇಕಲಿಪ್ತಿ ... ದ್ವಾದಶ ... ಷೋಡಶ" ಎಂದು ಅರುಣೋದಯದ ಹಿಂದೆ ಗಣನೆ ಮಾಡಬೇಕಾದ ಕಾಲ ಪ್ರಮಾಣವನ್ನು ಶ್ರೀಮಂದಾಚಾರ್ಯರು ತಮ್ಮ ಶಿಷ್ಯರಾದ ತ್ರಿವಿಕ್ರಮ ಪಂಡಿತಾಚಾರ್ಯರಿಗೆ ಹೇಳಿದರು, " ನ ನಿಬಬಂಧ ಸದಗ್ರಣೀಃ " (ಸತ್ತಮರು ಗ್ರಂಥದಲ್ಲಿ ಬರೆಯಿಲಿಲ್ಲ) ಎಂದೂ ವಾದಿರಾಜ ಸ್ವಾಮಿಗಳು ತಮ್ಮ ಏಕಾದಶೀ ನಿರ್ಣಯ ಗ್ರಂಥದಲ್ಲಿ ಹೇಳಿದ್ದಾರೆ. ಸಾವಕಾಶ ಊಹೆಯಿಂದ ನಿರ್ಣಯಿಸುವ ವಿಮರ್ಶಕರು " ವಾದಿರಾಜರೂ ತಪ್ಪು ಬರೆದಿದ್ದಾರೆ, ಆ ಶ್ಲೋಕ ತಿಥಿ ನಿರ್ಣಯ ಎಂಬ 38 ನೇ ಆಚಾರ್ಯರ ಗ್ರಂಥದ್ದು. ಒಂದು ಎಡಿಷನ್ ತಿಥಿ ನಿರ್ಣಯಲ್ಲಿ ಆ ಶ್ಲೋಕ ಮುದ್ರಿತವಾಗಿಲ್ಲ, ಆದರೂ ಇನ್ನೊಂದರಲ್ಲಿದೆ ". ಎಂದಿದ್ದಾರೆ. ಇಂಥ ವಿಮರ್ಶೆಗೆ ಯಾವ ಸ್ಥಾನ ಕೊಡಬೇಕೆಂಬುದನ್ನು ವಾಚಕರೇ ನಿರ್ಧರಿಸಲಿ.

ದ್ವೇಷದ ಕಾರ್ಯಗಳು ಪ್ರೇಕ್ಷಾವಂತರಿಂದ ಆದರಿಸಲ್ಪಡುವುದಿಲ್ಲವೆಂಬುದು ಕೈಮುತ್ಯಯುಕ್ತಿ ಸಿದ್ಧವಾದ ಅರ್ಥ. ಶ್ರೀಕೃಷ್ಣಾರ್ಪಣಮಸ್ತು.

III. ಸಹಾಯಕ ಗ್ರಂಥಗಳು

1. ವಾದಿರಾಜ ಗುರು ಸಾರ್ವಭೌಮರು. 2. ವಾದಿರಾಜ ಋಜುತ್ವ ಸಿದ್ಧಾಂತ. 3. ವಾದಿರಾಜ ಗುರುವರ ಚರಿತಾಮೃತ. 4. ಶ್ರೀ ವಾದಿರಾಜ ಗುಣ ರತ್ನಮಾಲಾ. 5. ವಿಶ್ವಪ್ರಿಯ ಲೀಲಾ ವಿಲಾಸ – ಸೇತು ಮಾಧವಾಚಾರ್ಯ ಸೂರಿ ವಿರಚಿತ. 6. ವಿಶ್ವಪ್ರಿಯ ಲೀಲಾ ವಿಲಾಸ – ಕೊಚ್ಚ ರಂಗಪ್ಪಾಚಾರ್ಯ ವಿರಚಿತ. 7. ಶ್ರೀ ವಾದಿರಾಜ ಗುರುವರ ಕೀರ್ತನ ಮಂಜರಿ. 8. ಸ್ವಾಪ್ನ ವೃಂದಾವನಾಖ್ಯಾನ ಪ್ರಾಮಾಣ್ಯ ಬೋಧಿನೀ–ಶ್ರೀ ರಘುಪ್ರವೀರ ತೀರ್ಥ ರಚಿತ. Oriental Library, Mysore. 9. ಸ್ವಾಪ್ನ ವೃಂದಾವನಾಖ್ಯಾನ ವ್ಯಾಖ್ಯಾನ–ಶ್ರೀಮುಷ್ಣಾಚಾರ್ಯ ಕೃತ. 10. ಋಜುತ್ವ ಚಂದ್ರೋದಯ – ಶ್ರೀ ವಿಶ್ವಾಧೀಶ ಸ್ವಾಮಿಭಿಃ ವಿರಚಿತ. 11. ಲಕ್ಷಾಲಂಕಾರ ಭಾಗ ೧. – ಶ್ರೀ ವಿಶ್ವೋತ್ತಮ ತೀರ್ಥ ವಿರಚಿತ ಅವತಾರಿಕೆ ಸಮೇತ. 12. ಮಹಾಭಾರತ ತಾತ್ಪರ್ಯ ನಿರ್ಣಯ–ವಾದಿರಾಜ ಸ್ವಾಮಿಗಳ ಭಾವ ಪ್ರಕಾಶಿಕಾ ಸಮೇತ. 13. ವೃತ್ತರತ್ನ ಸಂಗ್ರಹ (ಸ್ತೋತ್ರ ಮಹೋದಧಿಯಲ್ಲಿ ಅಚ್ಚಾಗಿರುವುದು). 14. ಶ್ರೀ ಜಂಖಿಂಡಿ ವಾದಿರಾಜಾಚಾರ್ಯ ವಿರಚಿತವಾದ ಋಜುತ್ವ ಶಂಕಾ ಪಂಕಪ್ರಕ್ಷಾಳನಾದಿ ಅನೇಕ ಗ್ರಂಥಗಳು. 15. ಶ್ರೀ ವಾದಿರಾಜ ಗುರುವರ ಚರಿತೆ – ಶ್ರೀನಿವಾಸಭಟ್ಟ ರಚಿತ, ಉಡುಪಿ. 16. ಭಕ್ತಿವಿಜಯ, ವೃಂದಾವನಾಚಾರ್ಯರ ಚರಿತ್ರೆ – ಶ್ರೀಗೋವಿಂದ ರಾಯರಿಂದ ವಿರಚಿತ – ಮೈಸೂರು.

2. ಈ ಗ್ರಂಥಗಳ ಪಟ್ಟಿಯು ಹೇಗೆ ' ವಾದ ' ವಾಗುತ್ತೆ ಎಂದು ಶಂಕಿಸಕೂಡದು. ವೇದವು ಬುದ್ಧಿಮಟ್ಟವು ಕಮ್ಮಿ ಇರುವವರ ವಿವಕ್ಷೆಯಲ್ಲಿ ವರ್ಣಾಶ್ರಮ ಧರ್ಮಬೋಧಕವಲ್ಲ, ಮೋಕ್ಷ ಬೋಧಕ ವಲ್ಲ, ಪರಬ್ರಹ್ಮನೆಂದು ನಾರಾಯಣನನ್ನೇ ಏನೂ ತೋರಿಸುವುದಿಲ್ಲ. ಬುದ್ಧಿಮಟ್ಟವೇ ಉನ್ನತವೆಂದು ಕೊಂಡಾಡಲ್ಪಡುವ ಮಧ್ವಾಚಾರ್ಯರ ಸೂಕ್ಷ್ಮ ಪ್ರಜ್ಞೆಯಲ್ಲಿ ಅದೇ ವೇದವು " ನಾರಾಯಣನು ಪರಬ್ರಹ್ಮನು, ಮೋಕ್ಷವು ಅವನು ಕೊಡುವ ಮಹಾ ಪುರುಷಾರ್ಥವು, ವೇದವು ಅವನ ಸರ್ಕಾರದ ಕಾಯಿದೆ ಗ್ರಂಥ, ವರ್ಣಾಶ್ರಮ ಧರ್ಮಗಳು ಅವನಿಂದ ವಿಹಿತವಾದ ಕರ್ತವ್ಯಗಳೆಂದು " ನಿಃಸಂಶಯವಾಗಿ ನಿರ್ಣೀತವಾಗಿದೆ. ಕೆಲವು ತತ್ವಗಳು ಅವಕ್ಕೆ ತಕ್ಕ ಬುದ್ಧಿಮಟ್ಟ ಇದ್ದರೇನೇ ಗೊತ್ತಾಗುತ್ತವೆ. ಅತ್ಯಂತಾಭಾವ ಪ್ರತಿಯೋಗಿಯು ಕ್ವಚಿತ್ ಪ್ರಾಮಾಣಿಕವೂ ಆಗಬಹುದೆಂದು ಹೀಗೆಯೇ ಕೆಲವರು ಅಧಿಕ ತಾರ್ಕಿಕರ ಸಂಗದಿಂದ ಬುದ್ಧಿ ಕಮ್ಮಿಯಾಗಿ ಅಥವಾ ಮಲಿನವಾಗಿ ನಂಬಿದ್ದರೂ, ಉಚ್ಚ ನಿರ್ಮಲ ಬುದ್ಧಿಯುಳ್ಳವರು ಅದು ಅಸಂಭಾವಿತವೆಂದು ತಿರಸ್ಕರಿಸಿ, ಅತ್ಯಂತಾಭಾವವು ಸರ್ವದಾ ಅಪ್ರಾಮಾಣಿಕ

ಪ್ರತಿಯೋಗಿಕವೇ ಎಂದು ನಿರ್ಣಯಜ್ಞರಾಗಿದ್ದಾರೆ.[1] ಹಾಗೆಯೇ ಉತ್ತಮ ನಿರ್ಮಲ ಬುದ್ಧಿಯುಳ್ಳವರು ಅದ್ವೈತವು ಪ್ರಮಾಣ ಬದ್ಧ ಯುಕ್ತಿಗೂ ಅನುಭವಕ್ಕೂ ವಿರುದ್ಧವೆಂದೇ ತಿಳಿಯುತ್ತಾರೆ. ಪೂರ್ವ ಸಂಸ್ಕಾರ, ಸತ್ಸಂಗಗಳೆಂಬ ಸಹಕಾರಿಗಳು ಇದ್ದರೆ ಮೇಲು. ಇನ್ನೂ ಅನೇಕ ದೃಷ್ಟಾಂತಗಳಿವೆ. ಹಟದಿಂದ ವಿರುದ್ಧ ಮನಸ್ಕನಾದವನಿಗೆ ಎಷ್ಟು ಪುಸ್ತಕಗಳನ್ನು ತೋರಿಸಿದರೂ ಏನೂ ಪ್ರಯೋಜನವಿಲ್ಲ. ಅಂಥ ಬುದ್ಧಿ ದೋಷವಿಲ್ಲದ, ಉನ್ನತ ಮಟ್ಟದ ಎಂದರೆ ಯಾವ ತತ್ವ ಗ್ರಹಣಕ್ಕೆ ಎಂಥ ಬುದ್ಧಿ ಎಷ್ಟು ಮಟ್ಟದ್ದು ಬೇಕೋ ಅಷ್ಟು ಬುದ್ಧಿಯುಳ್ಳ ತತ್ವಾನ್ವೇಷಿಗೆ ಮೇಲ್ಕಂಡ ಆಕರ ಗ್ರಂಥಗಳ ಅಭ್ಯಾಸವು ವಾದದಂತೆ ಪ್ರಚೋದಕವಾಗುತ್ತದೆ. ಸದರೀ ಅಧಿಕಾರಿಗೆ ವಾದಿರಾಜ ಋಜುತ್ವವೂ, ಆಖ್ಯಾನ ಪ್ರಾಮಾಣ್ಯವೂ ಅನರ್ಘಪ್ರಮೇಯಗಳೆಂದೇ ತೋರುತ್ತೆ ಎಂಬ ಭಾವದಿಂದ ಈ ಪಟ್ಟಿಯನ್ನು ಕೊಡಲಾಗಿದೆ. ಈ ಪ್ರಮೇಯಗಳೂ, ಮುಂದಿನ ಅಧ್ಯಾಯೋಕ್ತ ಪ್ರಮೇಯಗಳೂ ಪೂರ್ವಗ್ರಹ ದುಃಸಂಗಾದಿ ದೋಷ ರಹಿತವಾದ ಸಾಮಾನ್ಯ ಬುದ್ಧಿಯುಳ್ಳವರಿಗೂ ಗುರೂಪದಿಷ್ಟವಾದರೆ ಸುದೃಢ ವಿಶ್ವಾಸಕ್ಕೆ ವಿಷಯವಾಗಿ, ಅಪರೋಕ್ಷ ಜ್ಞಾನಕ್ಕೆ ಸಾಧನವಾದ ದಿವ್ಯ ಭಕ್ತಿಯನ್ನೇ ಹುಟ್ಟಿಸಿ ಬಿಡುತ್ತವೆ. ಇವು ರಾಜಸತಾಮಸ ಗ್ರಂಥಗಳಲ್ಲ, ಮುಂದೆ ಹೇಳಲ್ಪಡುವ ಮಹಿಮೆಗಳೂ ಪರಮ ಪ್ರಾಮಾಣಿಕಗಳು. ಶ್ರೀಕೃಷ್ಣಾರ್ಪಣಮಸ್ತು.

---

1) ಸದಾಭಾವಕ್ಕೆ ಪ್ರತಿಯೋಗಿಯು ನಿಯಮೇನ ಅಪ್ರಾಮಾಣಿಕವೇ. ಯಸ್ಯ ಅಭಾವಃ ಉಚ್ಯತೇಸ ಪ್ರತಿಯೋಗೀ ಎಂದು ಟೀಕಾ ಇದೆ. ಯಾವುದರ ಅಭಾವವು ನಿರೂಪಿಸಲ್ಪಡುತ್ತೆಯೋ ಅದು ಪ್ರತಿಯೋಗೀ. ಯಾವುದನ್ನು ಇಲ್ಲ ಎನ್ನುತ್ತೇವೆಯೋ ಅದು ಸದಾಭಾವ ಪ್ರತಿಯೋಗಿ ಎಂದು ನಿಯಮವಿಲ್ಲ. ನಮ್ಮ ಮನೆಯಲ್ಲಿ ಚಿನ್ನ ಇಲ್ಲ ಎಂದು ಹೇಳಿದಾಗ ಚಿನ್ನ ಪ್ರತಿಯೋಗಿಯಾಗಬೇಕಾಗುತ್ತೆ. ಚಿನ್ನ ಪ್ರತಿಯೋಗಿ ಎಂದು ತಿಳಿದರೆ ಭ್ರಾಂತಿ. ಅದು ಸದ್ಯಾಭಾವ ಪ್ರತಿಯೋಗಿಯಲ್ಲ. ಮತ್ತೇನೆಂದರೆ "ನಮ್ಮ ಮನೆ ಚಿನ್ನ" ಎಂಬ ವಿಶಿಷ್ಟದ ಅಭಾವವು ಹೇಳಲ್ಪಡುತ್ತೆ. ಆ 'ವಿಶಿಷ್ಟ' ಪ್ರತಿಯೋಗಿ, ಇದನ್ನು ತಿಳಿಯದಿದ್ದರೆ ಭ್ರಾಂತಿ ಹೋಗುವುದಿಲ್ಲ. ಮನೆ ಇದೆ, ಚಿನ್ನ ಇದೆ. ಸಂಬಂಧ ಎಂಬ ಪದಾರ್ಥ ಇದೆ. ಆದರೂ ಈ ಮೂರರ ವಿಶಿಷ್ಟವು ಇಲ್ಲ ಎಂದು ನಮ್ಮ ಮನೆಯಲ್ಲಿ ಚಿನ್ನ ಇಲ್ಲ ಎಂದು ಹೇಳಿದವನ ಅಭಿಪ್ರಾಯ. ವಿದ್ಯಮಾನಸ್ಯನ (ತ್ರೈಕಾಲಿಕ) ನಿಷೇಧಃ ಎಂಬ ವ್ಯಾಪ್ತಿ ಮರೆಯಬಾರದೆಂದು ವಾದಿರಾಜರು ಹೇಳಿದ್ದಾರೆ, ಸದಾ ವಿದ್ಯಮಾನಃ ಅಭಾವಃ ಸದ್ಯಾಭಾವ ಎಂದಿದ್ದಾರೆ. ಪ್ರತಿಯೋಗಿ ಪ್ರಾಮಾಣಿಕವಾದರೆ ಅದರ ಅತ್ಯಂತ ಅಭಾವವು ಇರಲು ಶಕ್ಯವಿಲ್ಲ. ಪ್ರಾಮಾಣಿಕ (ಎಂದರೆ ಕಾಲದಲ್ಲಿ ಇರುವುದು) ಅದು ಮೂರು ಕಾಲದಲ್ಲೂ ಇಲ್ಲ ಎಂದು ಅರ್ಥವಾಗುತ್ತೆ. ಅದು ವ್ಯಾಹತಿ. ನಿರವಧಿಕಾಭಾವಃ ಸದ್ಯಾಭಾವಃ ಎಂಬ ಲಕ್ಷಣವೂ ಹೋಗುತ್ತೆ. ಆದ್ದರಿಂದ ಪ್ರತಿಯೋಗಿ ಅಪ್ರಾಮಾಣಿಕವಾದರೆ ಅದರ ಸದಾ ಅಭಾವ ಪ್ರಾಮಾಣಿಕವಾಗುತ್ತೆ. ಪ್ರತಿಯೋಗಿ ಪ್ರಾಮಾಣಿಕವಾದರೆ (ಇದ್ದರೆ) ಅದರ ಅಭಾವ ಅಪ್ರಾಮಾಣಿಕವಾಗುತ್ತೆ. ಹೀಗೆ ನಿಯಮ ಇದೆ. ಇದು ಎಂದೂ ತಪ್ಪದ ನಿಯಮ. ಆದ್ದರಿಂದ ಸತ್ಯವಾದ ಸದಾ ಅಭಾವಕ್ಕೆ ನಿಯಮೇನ ಸದಾ ಅಸತ್ತಾದ ವಂಧ್ಯಾಪುತ್ರ, ಚದುರ ವೃತ್ತ, ವಿಷ್ಣುದೋಷ ಮುಂತಾದ ವಿಶಿಷ್ಟಗಳು ಪ್ರತಿಯೋಗಿಗಳು.

2. ಈ ಶೋಧನೆಯಿಂದ ಇನ್ನೊಂದು ನಿಯಮ ಗೊತ್ತಾಯಿತು. ಸದಾಭಾವಕ್ಕೆ ನಿಯಮವಾಗಿ ವಿಶಿಷ್ಟವು ಪ್ರತಿಯೋಗಿ. ಶ್ರಾದ್ಧ ನಿಯಮಕ್ಕಿಂತ ಹೆಚ್ಚಿನ ನಿಯಮ. ಘಟದ ಅತ್ಯಂತಾಭಾವ, ಚಿನ್ನದ ಅತ್ಯಂತಾಭಾವ, ಹಾಗೆ ದೋಷದ ಅಥವಾ ಗುಣದ ಅತ್ಯಂತಾಭಾವ ಹೀಗೆ ಹೇಳುವವನು

ಪಾದ ಟಿಪ್ಪಣೀ ಅನುವೃತ್ತ

ಭ್ರಾಂತನು. ಘಟ, ಚಿನ್ನ, ದೋಷ, ಗುಣ, ಇವು ಇವೆ. ಅವನ್ನು ಮೂರು ಕಾಲದಲ್ಲೂ ಇಲ್ಲ ಎನ್ನುವವನು ಹುಚ್ಚನು. ಮತ್ತೇನೆಂದರೆ ರಾಜನ ತಲೆಮೇಲೆ ಜೇಡಿ ಮಣ್ಣಿನ ಘಟವಿಲ್ಲ, ದಟ್ಟ ದರಿದ್ರನಲ್ಲಿ ಚಿನ್ನವಿಲ್ಲ. ಹರಿಯಲ್ಲಿ ದೋಷವಿಲ್ಲ, ಕಲಿಯಲ್ಲಿ ಹರಿಭಕ್ತಿ ಎಂಬ ಗುಣವಿಲ್ಲ – ಎಂದು ನಿಷೇಧಿಸಿದಾಗ " ರಾಜ ಗಡಿಗೆ ಸಂಬಂಧ ", " ದರಿದ್ರ ಚಿನ್ನ ಸಂಬಂಧ ", " ವಿಷ್ಣು ದೋಷ ಸಂಬಂಧ ", " ಕಲಿ, ಹರಿಭಕ್ತಿ ಸಂಬಂಧ " ಇವುಗಳ ಅಭಾವವು ಪ್ರತಿಪಾದಿತವಾಗಿವೆ. ಆಪಾತತಃ ನಿಷೇಧ್ಯವಾದ ಗಡಿಗೆ, ಚಿನ್ನ, ದೋಷ, ಗುಣಗಳನ್ನು ಸದಾಭಾವ ಪ್ರತಿಯೋಗಿ ಎಂದು ಭ್ರಮಿಸಬಾರದು. ಅವು ಪ್ರಾಮಾಣಿಕ. ಅವಕ್ಕೆ ತ್ರೈಕಾಲಿಕಾಭಾವ ಹೇಳುವವನು ಭ್ರಾಂತನು. ಆದ್ದರಿಂದ ಎಲ್ಲಾ ಸದಾ ಅಭಾವಕ್ಕೂ ವಿಶಿಷ್ಟಗಳೇ ಪ್ರತಿಯೋಗಿ, ಶುಕ್ತಿರಜತ, ಶಶವಿಷಾಣ, ರಜ್ಜು ಸರ್ಪ, ಲುರ್ಡ ಜಯತೀರ್ಥರು, ಹರಿಯ ದೋಷ, ಕಲಿಯ ಸದ್ಗುಣ, ಇತ್ಯಾದಿಗಳೇ ಮುಖ್ಯ ನಿಷೇಧ್ಯ, ಅವೇ ಪ್ರತಿಯೋಗಿಗಳು. ಅವುಗಳ ಅಭಾವವೇ ಪ್ರತಿಪಾದ್ಯ. ಹೀಗೆ ಹೇಳಿದ್ದರಿಂದ ಅತ್ಯಂತಾ ಭಾವಕ್ಕೆ ಪ್ರತಿಯೋಗಿಯ.ಂತೆ ಪ್ರಧಾನವೂ ವಿರೋಧಿ ಇತ್ಯಾದಿ ರೀತಿಯಾದ ಮಾತುಗಳು ಹುಚ್ಚು ಮಾತುಗಳು. ಕಲ್ಪನೆ ಎಂದಾಯಿತು. ವಿಶಿಷ್ಟವೇ ಪ್ರತಿಯೋಗಿ, ಪ್ರತಿಯೋಗಿಗೂ ಸದಾ ಭಾವಕ್ಕೂ ಸಾಕ್ಷಾದ್ವಿರೋಧವಿದೆ. ವಿಶಿಷ್ಟವೇ ಅತ್ಯಂತಾಭಾವಕ್ಕೆ ಪ್ರತಿಯೋಗಿ, ಆದ್ದರಿಂದ ಸ್ವಾಮಿಗಳ ಅತ್ಯಂತಾಭಾವ, ದೋಷಾತ್ಯಂತಾಭಾವ ಹೀಗೆ ನುಡಿಯುವವನು ಭ್ರಾಂತನೇ.

3. ಶಶವಿಷಾಣಂನಾಸ್ತಿ, ಹರೌದೋಷೋನಾಸ್ತಿ ಎಂದರೆ ಅಪ್ರಾಮಾಣಿಕ ಶಶವಿಷಾಣವು ಇಲ್ಲ ಪ್ರಾಮಾಣಿಕ ಶಶವಿಷಾಣ ಇರಬಹುದು ಎಂದಾಗಲಿಲ್ಲವೇ ? ಅಪ್ರಾಮಾಣಿಕ ದೋಷವಿಲ್ಲದಿದ್ದರೂ ಹರಿಯಲ್ಲಿ ಪ್ರಾಮಾಣಿಕ ದೋಷ ಬರಲಿ ! ಎಂದು ಶಂಕಿಸುವವನೂ ಭ್ರಾಂತನು. ಶಶವಿಷಾಣ ಶಬ್ದಕ್ಕೆ ಶಶವಿಷಾಣಸಂಬಂಧಗಳ ವಿಶಿಷ್ಟ ಎಂದರ್ಥ. ಕೇಳಿದವನಿಗೆ ಅಷ್ಟೇ ಪ್ರತೀತಿ ಬರುತ್ತೆ. ವಿಧಿ ನಿಷೇಧೌಅವಧೂಯ ಪ್ರತ್ಯಯೂ ಅಯೋಗಾತ್ ಆಕಾಂಕ್ಷಾ ಮಾತ್ರ ಬರುತ್ತೆ. ಪೂರ್ಣ ಪ್ರತ್ಯಯ, ಶಾಬ್ದ ಬೋಧ ಹುಟ್ಟೋದಿಲ್ಲ, ಆ ' ವಿಶಿಷ್ಟ ' ನಾಸ್ತಿ ಎಂದು ವಿಧೇಯ ಭಾಗದಿಂದ ಗೊತ್ತಾದ ಮೇಲೆ ಶಶ ವಿಷಾಣವು ಅಸತ್ತು ಎಂದು ಗೊತ್ತಾಗುತ್ತೆ. ಶಕ್ತಿ ಶ್ಚೈವಾನ್ವಿತೇ ಸ್ವಾರ್ಥೇ ' ಎಂಬ ಆಚಾರ್ಯರ ಶ್ಲೋಕಾರ್ಥವನ್ನು ಚೆನ್ನಾಗಿ ಅನುಸಂಧಾನ ಮಾಡಬೇಕು. ಶಬ್ದಾದಿಕರಣಗಳಿಗೆ ಎಷ್ಟು ಸಾಮರ್ಥ್ಯವೋ ಅಷ್ಟನ್ನೇ ಒಪ್ಪಬೇಕು. ವಿಷ್ಣುವಿನಲ್ಲಿ ನಿಜವಾದ ದೋಷಗಳೇ ಸಾಕ್ಷಾತ್ ನಿಷೇಧ್ಯ. ಆ ದೋಷ ಪ್ರತಿಯೋಗಿಯಲ್ಲ. ದೋಷ ಮೂರು ಕಾಲದಲ್ಲಿ ಎಲ್ಲೂ ಇಲ್ಲ ಎಂದು ಹೇಳಿಲ್ಲ. ವಿಶಿಷ್ಟವಾದ "ಸತ್ಯ ವಿಷ್ಣು ಸತ್ಯದೋಷ ಸತ್ಯ ಸಂಬಂಧವೆಂಬ ವಿಲಕ್ಷಣ ಸಮುದಾಯವು'' ಎಂದು ಮಾತ್ರ ''ವಿಷ್ಣು ದೋಷಃ'' ಎಂಬುದಕ್ಕೆ ಅರ್ಥ. ನಾಸ್ತಿ ಎಂದು ಶ್ರುತವಾದ ಮೇಲೆ ಆ ವಿಶಿಷ್ಟವು ಅಪ್ರಾಮಾಣಿಕ ಎಂದು ಗೊತ್ತಾಗುತ್ತೆ. ವಿಶಿಷ್ಟವು ಪದಾರ್ಥಾಂತರ, ಆ ವಿಶಿಷ್ಟವೇ ಇಲ್ಲ. ಆದರ ಅಪ್ರಾಮಾಣಿಕತ್ವಕ್ಕೆ ನಿಷೇಧ ಮಾಡಿಲ್ಲ. ವಿಶಿಷ್ಟವಾಚಕ ಶಬ್ದ ಶ್ರವಣದಿಂದ '' ಪ್ರಾಮಾಣಿಕ, ಅಪ್ರಾಮಾಣಿಕ '' ಇತ್ಯಾದಿ ವಿವರ ತಿಳಿಯುವುದಿಲ್ಲ. ಆಕಾಂಕ್ಷೆ ಮಾತ್ರ ಹುಟ್ಟುತ್ತೆ, ಅಸತ್ತಿಗೂ ಪ್ರತೀತಿ ಬರುತ್ತೆ. ಒಂದು ಆಕಾರ ಮನಸ್ಸಿಗೆ ಬಂದು, ಆ "ಹರಿದೋಷ ವಂಧ್ಯಾ ಪುತ್ರ '' ಇವೆಯೋ ? ಎಂದು ಶಂಕೆ ಬರುತ್ತೆ, ನಿಷೇಧಿಸಿದ ಮೇಲೆ ಪ್ರತ್ಯಯ ಪೂರ್ಣವಾಗುತ್ತೆ. ಅಸತ್ತು ಎಂದು ಗೊತ್ತಾಗುತ್ತೆ. ನಿಷೇಧಕ್ಕೆ ಮೊದಲು ಹೇಗೆ ತಿಳಿಯಲ್ಪಡುತ್ತೆ ? ನಿಷೇಧದ ನಂತರ ಹೇಗೆ ? ಎಂದು ಚಿಂತಿಸಬೇಕು.

4. ಇತರ ಚರ್ಚೆಗಳು ಅಕಾಂಡ ತಾಂಡವ, ' ವಿಶಿಷ್ಟ ' ವನ್ನು ವಾಚಕ ಪದ ಹೇಳಿ ಅನುವಾದ ಮಾಡಿದ ಮಾತ್ರಕ್ಕೆ ಅಷ್ಟರಿಂದಲೇ ಪ್ರಾಮಾಣಿಕತ್ವವಾಗಲಿ, ಅಪ್ರಾಮಾಣಿಕತ್ವವಾಗಲಿ ಎಲ್ಲಿ ಗೊತ್ತಾಗುತ್ತೆ ? ಕಶ್ಚಿತ್ಯಾಂತಾ ವಾಕ್ಯಾರ್ಥ ಮಾಡಬಾರದು.

IV. ವಾದಿರಾಜರ ಮಹಿಮೆಗಳು [1]

1. ಹರಕೆ ಸೇವೆ ಮಾಡಿದ ದಂಪತಿಗಳಿಗೆ ವಾಗೀಶ ತೀರ್ಥರ ಫಲಮಂತ್ರಾಕ್ಷತೆಯಿಂದ ಹೊರಗೆ ಜನನವಾದರೆ ಮಠಕ್ಕೆ ಎಂಬ ಸಂಕೇತದಿಂದ ಅವತರಿಸಿದ ಮಹಿಮೆ. 2. ಹುಟ್ಟುವಾಗಲೇ ಚಿನ್ನದ ಹರಿವಾಣದಲ್ಲಿ ಭೂ ಸ್ಪರ್ಶವಾಗದಂತೆ ಕೈ ಜೋಡಿಸಿಕೊಂಡು ಅವತರಿಸಿದ್ದು. 3. ತಂದೆ ತಾಯಿಗಳು ಯಾರು ನಿನಗೆ ಇಷ್ಟ ಎಂದರೆ " ಭೂ ವರಾಹ ದೇವರು ಇಷ್ಟ " ಎಂದದ್ದು. 4. ಮಿತ್ರ ಬಾಲಕರು ಮಠದ ಬಾಳೆಹಣ್ಣನ್ನು ಕದ್ದು ತಿನ್ನೋಣ ಎಂದರೆ - " ಬೇಡ, ದೇವರು ನೋಡಿ ನರಕ ಕೊಡುತ್ತಾನೆ. " ಎಂದು ಹೇಳಿ ಕಳ್ಳತನ ತಪ್ಪಿಸಿದ್ದು, ಆಟವು ವಿದ್ಯೆಗೆ ವಿಘ್ನ ಎಂದು ಬೋಧಿಸಿ ಸಂಗಡಿಗರನ್ನು ಆಟದಿಂದ ತಪ್ಪಿಸಿದ್ದು. 5. ಲಕ್ಷ್ಮೀ ಶೋಭನೆ ಹಾಡಿನಿಂದ ಮದುವಣಿಗನನ್ನು ಬದುಕಿಸಿದ್ದು. 6. ರಾಮೇಶ್ವರದಿಂದ ರಹಸ್ಯ ಕೇಳಿ ಹಿಂತಿರುಗಿದ್ದು. 7. ಶೂದ್ರರಾಜನನ್ನು ಸ್ತಂಭಿಸಿ ಬ್ರಾಹ್ಮಣರನ್ನು ರಕ್ಷಿಸಿದ್ದು. 8. ಜಹಗೀರದಾರನ ಪೈಶಾಚ ಸಂತಾನ ಓಡಿಸಿ ಉದ್ಧರಿಸಿದ್ದು. 9. ಕಳ್ಳರು ಕದಿಯಲಿಕ್ಕೆ ಬಂದು ನೋಡಿ ಶರಣಾಗತರಾದದ್ದು. 10. ಪೂನಾದಲ್ಲಿ ರುಕ್ಮಿಣೀಶ ವಿಜಯ 19 ದಿನದಲ್ಲಿ ನಿರ್ಮಾಣ ಮಾಡಿದ್ದು. 11. ಮಂತ್ರಿಸಿದ ನೀರಿನಿಂದ ಅಚ್ಯುತರಾಯನ (1530 - 1542) ವ್ಯಾಧಿ ನೀಗಿಸಿದ್ದು. 12. ಧರ್ಮಸ್ಥಳದಲ್ಲಿ ಮಂಜುನಾಥ ಪ್ರತಿಷ್ಠೆ ಮಾಡಿ ಭೂತ ಕ್ಷೇತ್ರವನ್ನು ಧರ್ಮ ಕ್ಷೇತ್ರವನ್ನಾಗಿ ಮಾಡಿದ್ದು. 13. ಹಯಗ್ರೀವ ಸಾಲಿಗ್ರಾಮ ಧನಿಕ ಲೋಭಿಗೆ ಸ್ವಲ್ಪ ಕಾಲ ಪೂಜೆಗಾಗಿ ಕೊಟ್ಟು ಅವನನ್ನು ಉದಾರ ವೈಕುಂಠದಾಸನನ್ನಾಗಿ ಮಾಡಿದ್ದು. 14. ಹಯಗ್ರೀವ ಸ್ವಾಮಿ ತನ್ನನ್ನು ಕದಿಯಲು ಬಂದಿದ್ದ ಕಳ್ಳರನ್ನು ಎರಡುಸಲ ಓಡಿಸಿ ವಾದಿರಾಜರ ಬಳಿಗೆ ಬಂದದ್ದು. 15. ಹಯಗ್ರೀವ ಸಾಲಿಗ್ರಾಮ ಬೇಡಿದ ಬ್ರಾಹ್ಮಣನಿಗೆ ಕೊಡಲು ಆ ಸಾಲಿಗ್ರಾಮ ದೇವರು ಆ ಬ್ರಾಹ್ಮಣನನ್ನು ಭೀತಿಪಡಿಸಿ ಪುನಃ ವಾದಿರಾಜರ ಬಳಿಗೇ ಬಂದದ್ದು. 16. ಅಯೋಧ್ಯೆಯ ಗರುಡ ಮುಖ್ಯ ಪ್ರಾಣರನ್ನು ಶ್ರೀಕೃಷ್ಣ ಮಠದಲ್ಲಿ ಪ್ರತಿಷ್ಠೆ ಮಾಡಿದ್ದು. 17. ಒಂದು ಮಧ್ವ ಪ್ರತಿಮೆಯನ್ನು ಕೃಷ್ಣ ಮಠದಲ್ಲೂ, ಇನ್ನೊಂದು ಮಧ್ವ ಪ್ರತಿಮೆಯನ್ನು ಪಾಜಕ ಕ್ಷೇತ್ರದಲ್ಲೂ ಪ್ರತಿಷ್ಠೆ ಮಾಡಿದ್ದು. 18. ದೆಹಲಿ ರಾಜನು ಕಳುಹಿಸಿದ ನಾಣ್ಯಗಳಿಂದ ಕೃಷ್ಣ ಮಠಕ್ಕೆ ಬಂಗಾರದ ತಗಡು ಮಾಡಿಸದೆ ಭೂಗತ ಮಾಡಿ ನಾಗ ಪ್ರತಿಷ್ಠೆ ಮಾಡಿ, ಉಳಿದ ನಾಣ್ಯಗಳನ್ನು ಸೋದೆ ಮಠದಲ್ಲಿ ಭೂಗತಮಾಡಿ ಭೂತರಾಜರ ಪ್ರತಿಷ್ಠೆ ಮಾಡಿದ್ದು. 19. ಕೋಟೇಶ್ವರ ಗ್ರಾಮಸ್ಥರನ್ನು ಸೋದೆ ಮಠದ ಶಿಷ್ಯರನ್ನಾಗಿ ಮಾಡಿಕೊಂಡದ್ದು. 20. ಸೊನ್ನೆಗಾರನಿಂದ ಹಯಗ್ರೀವ ಪ್ರತಿಮೆ ಸಂಪಾದಿಸಿ ಸೋನಾರರನ್ನು ಸೋದೆ ಮಠದ ಶಿಷ್ಯರನ್ನಾಗಿ ಮಾಡಿಕೊಂಡದ್ದು. 21. ಏಕಾದಶೀ ದಿನ ಮಾನಸ ಪೂಜೆ ಮಾಡಿ ಅಲಂಕಾರ ಪೂಜೆಯಾದ ಮೇಲೆ ಫಲಸಮರ್ಪಣೆ ಮಾಡಿ ಸಾಧನ ದ್ವಾದಶಿ ಪೂಜೆ ಮಾಡಿದ್ದು, 22. ನಾರಳ ಗ್ರಾಮದ ನಾರಾಯಣಾಚಾರ್ಯರಿಗೆ ಶಾಪಕೊಟ್ಟು ಅವರನ್ನು ಉದ್ಧರಿಸಿದ್ದು,

---

1) ಇವೆಲ್ಲಾ ಪ್ರಾಚೀನ ಗ್ರಂಥದಲ್ಲಿದ್ದ ಪಟ್ಟಿ. ಇವುಗಳ ವಿವರಣೆ 1, 2, 3, 4, 15, ಮುಂತಾದ ಸಹಾಯಕ ಗ್ರಂಥಗಳಲ್ಲಿ ಅಲ್ಲಲ್ಲಿ ಸಿಗುತ್ತವೆ. ಕೆಲವಕ್ಕೆ ಐತಿಹ್ಯ ಕೇಳಿ ತಿಳಿಯಬೇಕು.

23. ಮಠದ ಗುಮಾಸ್ತನನ್ನು ಮುಂದಿನ ಜನ್ಮದಲ್ಲಿ ಜಗನ್ನಾಥ ದಾಸರನ್ನಾಗಿ ಮಾಡಿದ್ದು (ಕೊಂಡಪ್ಪ)
24. ಮೂಢ ಶಿಷ್ಯನಿಂದ ಪಂಡಿತನ ವಿಜಯ ಮಾಡಿಸಿದ್ದು. 25. " ಬಾರೋ ಬೇಗ ಬಾರೋ ವೇಲಾಪುರದ ಚೆನ್ನ " – ಎಂದು ಹಾಡು ಹೇಳಿ ಬೇಲೂರಲ್ಲಿ ತೇರೆಳೆದು ದೇವರ ರಥ ಮುಂದೆ ಬರುವಂತೆ ಮಾಡಿದ್ದು.

26. ಧನಿಕನಿಗೆ ಒಂದು ಕಣ್ಣಿಗೆ ಬೆಣ್ಣೆ ಹಚ್ಚಿಸಿ ಇನ್ನೊಂದು ಕಣ್ಣಿನಿಂದ ಕುದುರೆ ರೂಪದ ದೇವರನ್ನು ತೋರಿಸಿ ಕಡಲೇ ಹೊಲವನ್ನು ಸೋದೆ ಮಠಕ್ಕೆ ಪಡೆದದ್ದು. 27. ಹಾಗೇ ಬೇಲೂರು ಹತ್ತಿರ ಪಾಳ್ಯದ ಪಾಳೆಯಗಾರನಿಗೆ ಕುದುರೆ ದೇವರನ್ನು ತೋರಿಸಿದ್ದು. 28. ಗಿರಿ ನಾಮಕನ ಕುಷ್ಠರೋಗ ಪರಿಹರಿಸಿ ಸಂತಾನ ಅನುಗ್ರಹಿಸಿದ್ದು. 29. ಪಾದಮೃತ್ತಿಕಾ ಲೇಪದಿಂದ ಕುಷ್ಠಿಯ ರೋಗ ಪರಿಹರಿಸಿದ್ದು. 30. ತುರುಕನ ತಲೆನೋವನ್ನು ಕಳೆದುದು. 31. ಮೈ ತೊಳೆದ ನೀರಿನಿಂದ ಶೈವನ ರೋಗವನ್ನು ನೀಗಿಸಿದ್ದು. 32. ಉಚ್ಛಿಷ್ಟ ಭೋಜನ ಮಾಡಿಸಿ ಉದರ ವ್ಯಾಧಿ ಪರಿಹರಿಸಿದ್ದು. 33. ಅದ್ವೈತ ಮತದ " ಶ್ರೀದ " ನಿಗೆ ದ್ವೈತ ಹೇಳಿ ವೈಷ್ಣವ ಕನ್ಯೆ ಮದುವೆ ಮಾಡಿಸಿದ್ದು. 34. ಮಲ್ಲಣನನ್ನು ಜಯಿಸಿ ಅವನ ವೈಷ್ಣವ ದ್ವೇಷ ಬಿಡಿಸಿದ್ದು. 35. "ನೆನೆವೆನನು ದಿನ ನೀಲನೀರದ ವರ್ಣನಾ ಗುಣ ರನ್ನನಾ! ಮುನಿ ಜನಪ್ರಿಯ ಮುದ್ದು ಉಡುಪಿಯ ರಂಗನಾ ದಯಾಪಾಂಗನ" ಎಂಬ ಹಾಡಿನಿಂದ ದಶಮಸ್ಕಂಧ ಪಾರಾಯಣ ಫಲ ಅನುಗ್ರಹಿಸಿದ್ದು. 36. ಕಡಿಯಲು ಸುತ್ತು ಹಾಕಿದ ಘಟ ಸರ್ಪದ ಗರ್ವ ಭಂಗ ಮಾಡಿದ್ದು. 37. ಕುಮಾರ ಪರ್ವತದ ಬುಡದಲ್ಲಿ ಹುಲಿ ಹಸುಗಳಿಗೆ ಪರಸ್ಪರ ವೈರ ತಪ್ಪಿಸಿ ಬೆಟ್ಟದ ಮೇಲೆ ವಿಷ್ಣು ತೀರ್ಥರನ್ನು ಕಂಡು ಅವರಿಂದ ದೇವರನ್ನು ಪಡೆದು ಬಂದದ್ದು. 38. ಪಂಡರಪುರದ ಬಳಿ ದರೋಡೆಗೆ ಬಂದ ಪಠಾಣರಿಂದಲೇ ಮಠದ ಸಾಮಾನುಗಳನ್ನು ಹೊರಿಸಿಕೊಂಡು ಪಂಡರಪುರಕ್ಕೆ ಬಂದದ್ದು. 39. ಪಂಡರಪುರಕ್ಕೆ ಬಂದಿದ್ದಾಗ ಮಕ್ಕೊಟ್ಟು ಸಂತಾನಕಾರಕರಾಗಿ ತುಕಾರಾಮನನ್ನು ಗೆದ್ದದ್ದು. 40 ಕೃಷ್ಣ ಸ್ತುತಿ (ಯದಿದಿಶಸಿ ನಯನ ಪಟುತಾಂ) ಮತ್ತು ಲಕ್ಷ್ಮೀಸ್ತುತಿ ಮಾಡಿ ಅಂಧತ್ವವನ್ನು ಕಳೆದುಕೊಂಡು ಪರ್ಯಾಯ ಪೂಜೆ ಮಾಡಿದ್ದು. 41. ಮುಂಭಾಗದಲ್ಲಿ ಭೂತರಾಜವಾಹಿತ ಪಲ್ಲಕ್ಕಿ ನೋಡಿ ಹೊಟ್ಟೆಕಿಚ್ಚಿನಿಂದ ಪಿಶಾಚ ವಶ ಮಾಡಿಕೊಂಡು ಎರಡೂ ಕಡೆ ಪೈಶಾಚ ವಾಹಿತ ವಾಹನನಾಗಿ ಬಂದ ಪರ ಮಠಾಧಿಪತಿಗೆ ಗರ್ವಭಂಗ ಮಾಡಿದ್ದು. 42. ಉಡುಪಿಯಲ್ಲಿ ಪರ್ಯಾಯದ ಲಕ್ಷ ದೀಪೋತ್ಸವಕ್ಕೆ ಮಹಾವೃಷ್ಟಿಯಿಂದ ವಿಘ್ನ ಬರಲು " ಪಾಲ್ಗಡಲೊಡೆಯ ಬಾರೋ " ಎಂಬ ಕೀರ್ತನ ಹೇಳುತ್ತಾ ರಥವನ್ನೆಳೆದು ರಥದ ಮೇಲೆ ತೊಟ್ಟೂ ನೀರು ಸುರಿಯದೆ ಅನ್ಯತ್ರ ವೃಷ್ಟಿಯಾಗುವಂತೆ ಮಾಡಿದ್ದು. 43. ಸಂಚಾರ ಕಾಲದಲ್ಲಿ ಒಂದು ರಾತ್ರಿ ಒಂದು ಅರಣ್ಯದಲ್ಲಿ ತನ್ನ ಸೇವಕರು ತನ್ನನ್ನಗಲಿ ಪರದಾಡುತ್ತಿರುವಾಗ " **ಕಂಜಾಕ್ಷ ಕಾಯುಯ್ಯಾ ಕರುಣಾ ನಿಧಿಯೇ ಬಲಭಂಜನನುಜ ಬಾ ಚೆನ್ನ** " ಎಂದು ಹಾಡಿ ಮರೀಯರೆಲ್ಲರನ್ನೂ ತನ್ನ ಬಳಿಗೆ ಬರಮಾಡಿಕೊಂಡದ್ದು. 44. ವೃತ್ತರತ್ನ ಸಂಗ್ರಹ ಬರೆದ ರಘುನಾಥಾಚಾರ್ಯರ ಭಿಕ್ಷೆ ಸ್ವೀಕರಿಸಿ ಅವರ ಹಲ್ಲುನೋವು ವಾಸಿ ಮಾಡಿದ್ದು. 45. ಸಮಗಾರನನ್ನು (ಚರ್ಮ ಹೊಲಿಯುವವನು) ಅವನ ವಿದ್ಯೆಯಲ್ಲಿ ಸೋಲಿಸಿದ್ದು. 46. ಅಂಕೋಲೆಯ ಕೊಡೆಕಣಿ ಗ್ರಾಮದಲ್ಲಿ " ಕೌರವುಳ್ಳು ಈ ಗ್ರಾಮದಲ್ಲೇ ಬೇಡ " ಎಂದು ನಿಯಮಿಸಿದ್ದು. 47. ಕನಕದಾಸರಿಗೆ ದೇವರ ಪ್ರಸಾದ ಕೊಡಿಸುತ್ತಾ ಅವನ ಗಟ್ಟಿ (ಗಂಜಿ) ರೊಟ್ಟಿಯನ್ನು

ಶ್ರೀಕೃಷ್ಣನಿಗೆ ಸಮರ್ಪಣೆ ಮಾಡುವ ಪದ್ಧತಿ ಮಾಡಿದ್ದು. 48. ಪಾಂಡುರಂಗಿ ಆನಂದ ಭಟ್ಟರಿಂದ ಅದ್ವೈತ ಜಯ ಮಾಡಿಸಿ ಸುಪುತ್ರನನ್ನು ಅನುಗ್ರಹಿಸಿದ್ದು (ಆ ಪುತ್ರನೇ ವಿದ್ಯಾಧೀಶ ಸ್ವಾಮಿಗಳು, ಉತ್ತರಾದಿ ಮಠ). 49. ಚಾತುರ್ಥಿಕ ಜ್ವರವನ್ನು ದಂಡದಲ್ಲಿ ಆವಾಹನೆ ಮಾಡಿ ದೇವರ ಪೂಜೆ ಮಾಡಿದ್ದು. 3 ವರ್ಷ. 50. ಪಕ್ಷನಾಥ ಬಲ್ಲಾಳರಿಗೆ ಅನುಗ್ರಹಿಸಿ ಹನುಮ, ಭೀಮ, ಮಧ್ವ, ವಾದಿರಾಜಯುಕ್ತ ಪ್ರಾಣ ಪ್ರತಿಮೆ ಪ್ರತಿಷ್ಠೆ ಮಾಡಿದ್ದು.

51. "ಬೆಳಗೆ" ಎಂಬಲ್ಲಿ ತಮ್ಮ ಗ್ರಂಥಗಳನ್ನು ಸ್ಥಾಪಿಸಿದ್ದು. (Siddapur Taluk). 52. ಸೋದಾ ರಾಜನನ್ನು (ಅರಸಪ್ಪ ನಾಯಕನನ್ನು) ಕುದುರೆಗಳ ಸಹಾಯದಿಂದ ಉದ್ಧರಿಸಿ ಕಾಪಾಡಿದ್ದು, ಅನಂತರ ಅವನ ಲಿಂಗಾಯತ ಗುರುವನ್ನು 14 ದಿನ ವಾದದಲ್ಲಿ ಗೆದ್ದು ಅವನ 18 ಬಿರುದುಗಳನ್ನೂ, ಬಸವನ ಘಂಟೆಯನ್ನೂ ಸಂಪಾದಿಸಿದ್ದು. 53. 1504 ಶಾ. ಶ. 1582 ಕ್ರಿಸ್ತಾಬ್ದ. ತ್ರಿವಿಕ್ರಮ ಸ್ವಾಮಿ ವೈಶಾಖ ಶುದ್ಧ ಪೂರ್ಣಿಮೆ ಪ್ರತಿಷ್ಠೆ ಮಾಡಿದ್ದು. ಸ್ವಪ್ನವಾಗಿ ಲಕ್ಷ್ಮೀ ದೇವಿಯನ್ನೂ ಪ್ರತಿಷ್ಠೆ ಮಾಡಿದ್ದು. 17 ವರ್ಷ ಉತ್ಸವ ಮಾಡಿದ್ದು. 54. ಧವಲಗಂಗಾ ನಿರ್ಮಿಸಿ, ಫಾಲ್ಗುಣ ಶುದ್ಧ ನವಮಿಯಿಂದ ಪೂರ್ಣಿಮಾ ಪರ್ಯಂತ ಉತ್ಸವ ಏರ್ಪಡಿಸಿದ್ದು. (17 ವರ್ಷ ಸೋದೆಯಲ್ಲಿ ಆ ಉತ್ಸವ ಮಾಡಿದ್ದು). 55. ನಾಲ್ಕು ಪರ್ಯಾಯ ಪೂಜೆ ಶ್ರೀಕೃಷ್ಣನಿಗೆ ತಾವೇ ಮಾಡಿ ಐದನೆಯ ಪರ್ಯಾಯಾದಿಗಳನ್ನು ವೇದವೇದ್ಯರಿಂದ ಮಾಡಿಸಿದ್ದು. "ಮನ್ನಿಸೆನ್ನ ಮಧುಸೂದನ" ಎಂದು ಹಾಡಿದ್ದು. ಸೋದೆಯಲ್ಲಿಯೇ ಪರ್ಯಾಯ ಪೂಜೆಯನ್ನು ನೆರವೇರಿಸಿದ್ದು. 56. ಪಂಚಗಂಗಾ, ಅಷ್ಟ ವೃಕ್ಷಗಳು, ವೃಂದಾವನಾಷ್ಟಕ, ಪಂಚ ವೃಂದಾವನ ಸಹಾ ನಿರ್ಮಾಣ ಮಾಡಿದ್ದು. 57. ಹುಣ್ಣಿಮೆ ಬಂದ ವಿಮಾನವನ್ನು ಅಶ್ವತ್ಥ ವೃಕ್ಷದಲ್ಲಿರುವಂತೆ ಆಜ್ಞಾಪಿಸಿ ಫಾಲ್ಗುಣ ಬಹುಳ ತೃತೀಯಾ ಸ್ವಾತೀ ನಕ್ಷತ್ರ ಶಾರ್ವರಿ (1600 A. D.) 1522 ಪ್ರಯಾಣ ಮಾಡಿ ಚಿಕ್ಕ ಘಂಟೆ ಧ್ವನಿ ಕೇಳುವಂತೆ ಮಾಡಿ, ಸ್ವರ್ಣಪಾದುಕೆ, ಕಾವಿಶಾಟಿಗಳನ್ನು ಕೆಳಕ್ಕೆ ಹಾಕಿ ಅಭಯ ಪ್ರದಾನ ಮಾಡಿದ್ದು. 58. ವೇದವೇದ್ಯರಿಗೆ ವೃಂದಾವನದಲ್ಲಿ ದರ್ಶನ ಕೊಟ್ಟದ್ದು. 1614 A. D. ಯಲ್ಲಿ ವೇದವೇದ್ಯರ ಪರ್ಯಾಯ. 1598 ರಲ್ಲೂ ಅವರೇ (ಕೃಷ್ಣ) ಪರ್ಯಾಯ ಪೂಜೆಮಾಡಿದರು. ಸೋದೆಯಲ್ಲಿ ವಾದಿರಾಜರುಪೂಜಿಸಿದರು. 59. ಸೋದೆಯಲ್ಲಿ 1640ರಲ್ಲಿ ವೇಧನಿಧಿಗಳ ಕಾಲದಲ್ಲಿ ಧ್ವಜಸ್ತಂಭ "ಹಂಸಾರೂಢ ವಾದಿರಾಜರ" ಮೂರ್ತಿ ಕೆತ್ತಿಸಿದ ಮೇಲೆ ನಿಲ್ಲುವಂತೆ ಮಾಡಿದ್ದು. 60. ಸ್ವಾಪ್ನ ವೃಂದಾವನಾಖ್ಯಾನ ರಚಿಸಿದ್ದು (1630). 61. ವೃಂದಾವನಾಚಾರ್ಯರಿಗೆ ಅನುಗ್ರಹಿಸಿದ್ದು. (ವೃಂದಾವನದಿಂದ ತಲೆಯ ಮೇಲೆ ಮಂತ್ರಾಕ್ಷತೆ ಹಾಕಿದ್ದು)

ಮೇಲ್ಕಂಡ ಪಟ್ಟಿಗೆ

ಶ್ರೀ ಕುಂಜತಾಯ ಕುಂಜ ವೆಂಕಟಕಾಮಾಚಾರ್ಯರಲ್ಲಿದ್ದ 1924 ನೇ ಇಸವಿಯ ಪಟ್ಟಿಕಾದಿಂದ ಸೇರಿಸಿದ್ದು :—

62. ಕುಮಾರಧಾರೆಯಲ್ಲಿ ದಂಡತೀರ್ಥ ಉಂಟು ಮಾಡಿದ್ದು. (ಪುಂಡೀ ಬೈಲು) 63. ಅಮಾವಾಸ್ಯಾ ದಿನ ಚಂದ್ರೋದಯ ಮಾಡಿಸಿದ್ದು. 64. ಕೈತುಂಬಾ ಉಸುಬು ಎಷ್ಟೆಂತ ಪ್ರಶ್ನೆಮಾಡಿ ಜಯಿಸಿದ್ದು.

65. ಬಹುಮಂದಿ ಸ್ಮಾರ್ತರು ಕೂಡಿ ಬಚ್ಚಿಟ್ಟ ಹುಡುಗನನ್ನು ಹಿಡಿದು ಕೊಟ್ಟಿದ್ದು. (ಕೊಲ್ಲೂರು ಮೂಕಾಂಬಿಕಾ). 66. ಸುಬ್ರಹ್ಮಣ್ಯ ದೇವರಿಂದ ಪ್ರಾರ್ಥಿತರಾಗಿ ಅವರನ್ನು ಸ್ತುತಿಸಿದ್ದು. 67. ಕಾಶಿಯಲ್ಲಿದ್ದ ಹೆಂಗಸಿಗೆ ರಾಮೇಶ್ವರದಲ್ಲಿದ್ದ ಸ್ವಜನರ ದರ್ಶನ ಮಾಡಿಸಿದ್ದು. 68. ಭಾಗೀರಥಿಯಲ್ಲಿ ಅಸಂಖ್ಯ ದ್ರವ್ಯ ಸುರಿಸಿದ್ದು. 69. ಲಕ್ಷಾಭರಣ ಮಾಡುವುದಕ್ಕೆ ವೇದವ್ಯಾಸ ದೇವರ ಆಜ್ಞೆ ಸ್ವೀಕರಿಸಿದ್ದು. 70. ದೊಡ್ಡ ಬದರಿಗೆ ಹೋಗಿ ವ್ಯಾಸ ಮಧ್ವರನ್ನು ದರ್ಶನ ಮಾಡಿ ತ್ರಿವಿಕ್ರಮ ರಥ ಕಳಿಸುವ ಆಜ್ಞೆ ಪಡೆದು ಬಂದದ್ದು. ಯುಕ್ತಿಮಲ್ಲಿಕಾರಚನೆಗೆ ಅನುಜ್ಞೆ ಸ್ವೀಕರಿಸಿದ್ದು. 71. ಮಾತೃಶ್ರೀಯವರ ಪ್ರಾರ್ಥನಾನುಸಾರ ಲಕ್ಷಾಭರಣ ಮಾಡಿದ್ದು. 72. ಗೆರೆಹಾಕಿ ಸರ್ಪ ಮೊಸಳೆ ಮುಂತಾದವುಗಳನ್ನು ತಡೆದದ್ದು (ಕಾಶಿಯಲ್ಲಿ). 73. ಸರ್ವರ ಕಣ್ಣಿಗೆ ಬಿದ್ದು ಕಳ್ಳರ ಕಣ್ಣಿಗೆ ಮಾತ್ರ ಬೀಳದೇ ಇದ್ದದ್ದು. 74. ಕಳ್ಳರು ಬಂದು ಮಠದ ಸುತ್ತ ಸೂರ್ಯೋದಯ ಪರ್ಯಂತ ಸುತ್ತಿ ಮಾರ್ಗಸಿಕ್ಕದೆ ಹೋದದ್ದು. 75. ಕಳ್ಳರು ಬಂದರೆ ಅರ್ಧರಾತ್ರಿ ಪರ್ಯಂತ ಮಠದಲ್ಲಿದ್ದು ಮರುದಿನ ಸೂರ್ಯೋದಯಕ್ಕೆ ನೂರು ಗಾವುದ ಮೇಲೆ ಕಂಡದ್ದು.

76. ಅಶ್ವತ್ಥಾಮಾಚಾರ್ಯರಿಂದ ನಾರಾಯಣ ಭೂತರನ್ನು ಸಂಗ್ರಹ ಮಾಡಿದ್ದು. 77. ಮರುದಿನ ಪಾರ್ಶ್ವ ನಾರಾಯಣ ಭೂತರು ಪಲ್ಲಕ್ಕಿ ಹೊತ್ತದ್ದು. 78. ಯಟಿ (ಕಾಟಿ) ಕಾಯಿಯನ್ನ ಪಾದುಕಾ ಸ್ಪರ್ಶದಿಂದ ಚೂತಫಲ ಮಾಡಿದ್ದು. 79. ಪಾದತಲ ಪ್ರಹಾರದಿಂದ ಪರ್ವತಾಗ್ರದಲ್ಲಿ ಉದಕ ನಿರ್ಮಾಣ ಮಾಡಿದ್ದು. 80. ದಾರದ ಉಂಡಿ ಹಾಕಿ ಹೊರಟು ಹೋದದ್ದು. 81. ಬೌದ್ಧ ದೇವರನ್ನು ವಿಠಲ ಪ್ರತಿಮಾ ಮಾಡಿದ್ದು, 82. ಆರು ತಿಂಗಳು ಶುದ್ಧ ಉಪವಾಸ ಮಾಡಿದ್ದು. 83, ಹಯಗ್ರೀವ ಸಾಲಿಗ್ರಾಮ ಕಂಡು ತಂದು ಪೂಜಿಸಿದ್ದು. 84. ವಡೆಯರ ಜ್ವರ ಪರಿಹಾರ ಮಾಡಿದ್ದು. 85. ತಿರುಪತಿ ಬೆಟ್ಟವನ್ನು ಸುದರ್ಶನವಾಗಿ ಕಂಡದ್ದು, ಮಂಡಿಯಲ್ಲಿಯೇ ಹತ್ತಿದ್ದು. 86. ವೆಂಕಟೇಶ ದೇವರಿಗೆ ಸಾಲಿಗ್ರಾಮ ಸರ ಮಾಡಿಸಿದ್ದು. 87. ವಾಲಿಭಂಡಾರ ರಾಜರಿಗೆ ಕೊಟ್ಟು, ವಾಲಿ, ಸುಗ್ರೀವರ ವಿಠಲ, ರಾಮ ಪ್ರತಿಮೆಗಳ ಸಂಗ್ರಹ ಮಾಡಿ, ಕಾಲಾಂತರ ಪರ್ಯಾಯದಲ್ಲಿ ಅಚ್ಯುತರಾಯನಿಂದ ಕೃಷ್ಣದೇವಾಲಯ ಜೀರ್ಣೋದ್ಧಾರ ಮಾಡಿಸಿದ್ದು. 88. ಪ್ರಸಂಗಾಭರಣರೆಂಬ ಹೆಸರು ಪಡೆದದ್ದು. 89. ಬದರಿಕಾಶ್ರಮದಿಂದ ವಿಮಾನ ಸಹಿತ ತ್ರಿವಿಕ್ರಮ ದೇವರನ್ನು ಭೂತರಾಜರಿಂದ ತರಿಸಿದ್ದು. 90. ತಂಗಿಗೆ ಭೇಟಿ ಕೊಟ್ಟಿದ್ದು (ವೃಂದಾವನದಲ್ಲಿ). 91. ತಾಯಿ ತಮ್ಮಂದಿರಿಗೆ ತಮ್ಮ ಆಕೃತಿ ಮಾಡಿ ಕೊಟ್ಟಿದ್ದು. 92. ವೃಷಭದಿಂದ ಪ್ರಾರ್ಥಿತರಾಗಿ ಸ್ತುತಿಸಿದ್ದು. 93. ಅರಸನ ಭಿಕ್ಷಾಧಿಕ್ಕರಿಸಿ ಬಹು ಪ್ರಾರ್ಥನಾದಿಂದ ಸ್ವೀಕರಿಸಿದ್ದು. 94. ಸಣ್ಣವರಿಗೆ ಸಣ್ಣಮಾರ್ಗ ದೊಡ್ಡವರಿಗೆ ದೊಡ್ಡಮಾರ್ಗವೆಂತ ಅಪ್ಪಣೆ ಕೊಟ್ಟದ್ದು. 95. ವಾದಿರಾಜರೆಂಬ ಇಕ್ಕಲಾಯೆಂತ ಅಪ್ಪಣೆ ಕೊಟ್ಟದ್ದು. 96. ಕಡಲೇ ಜೋಳು (ಹೊನ್ನು) ? ಮಾಡಿದ್ದು. 97. ಒಂದು ಪ್ರಹರ ಕೋಟಿ ಪುಂಜಕ್ಕೆ ಸರಿಯಾಗಿ ಇದ್ದದ್ದು. 98. ಲಕ್ಷ್ಮೀಪದಕ ಮಾಡಿಸಿದ್ದು. 99. ಅರಸಿಗೆ ದೇವರ ದರ್ಶನ ಮಾಡಿಸಿದ್ದು, (ವಾದಿರಾಜಗುರುವರರ ಚರಿತ್ರೆ). 100. ಉಡುಪಿಯಲ್ಲಿ ಪೂಜಾ ಆಗದೇ ಇದ್ದದ್ದು ತಿಳಿದು ಸೋದೆಯಲ್ಲಿ ಪೂಜಾ ಮಾಡಿದ್ದು.

101. ಹಯಗ್ರೀವ ದೇವರಿಗೆ ದಿವ್ಯ ನೈವೇದ್ಯ ತಲೆಯ ಮೇಲಿಟ್ಟುಕೊಂಡು ಸಾಕ್ಷಾತ್ ತಿನ್ನಿಸಿದ್ದು. 102. ಎಲ್ಲಾ ಮಠಕ್ಕೂ ಸರ್ವಜ್ಞರ ಹಾಗೇ ಪ್ರತಿಮೆ ಕೊಟ್ಟದ್ದು. 103. ಬಾದರಾಯಣ ಮೂರ್ತಿಯನ್ನು ಪುನಃ ವ್ಯಾಸರಾಯರಿಂದ ತಂದದ್ದು. 104. ತುರುಕರಾಜ ಸತ್ತನ್ನ ಬದುಕಿಸಿ ಕೊಟ್ಟದ್ದು. 105. ಪತಿವ್ರತೆಗೆ ಗಂಡನ್ನ ಬದುಕಿಸಿ ಕೊಟ್ಟದ್ದು. 106. ತಮ್ಮ ತಂಗಿಗೋಸ್ಕರ ಭಾಗವತಾದಿಗಳನ್ನು ಕನ್ನಡಿಸಿ ಕೊಟ್ಟದ್ದು. 107. ಅನಂತ ಶಯನದಲ್ಲಿ ಲಿಂಗದ ಮೇಲೆ ಸಾಲಿಗ್ರಾಮ ಇಟ್ಟದ್ದು. 108. ಸರ್ವಜ್ಞರು ಮಾಡಿದ ಯತಿಗಳ ಪರ್ಯಾಯ 2 ವರ್ಷ ಮಾಡಿದ್ದು. 109. ಇಲಿ, ಸರ್ಪ ಎರಡನ್ನೂ ಸಂರಕ್ಷಣೆ ಮಾಡಿದ್ದು. 110. ಒಡೆಯಲಿಕ್ಕೆ ಬಾರದ ಕಲ್ಲು ಸ್ಥಂಭ ವನ್ನು ಪಾದದ ಸಂಬಂಧದಿಂದ ಒಡೆದದ್ದು. (P. 67 ವಾ. ಗು. ಚ.). 111. ಬಲವತ್ತರ - ಕಲ್ಲು ಮೇಲೆ ಬೀಳುವಂಥಾದ್ದು ಆಕಾಶ ಮಾರ್ಗದಲ್ಲಿ ನಿಂತದ್ದು. (P. 67 ವಾ. ಗು. ಚ.) 112. ಕಬೀರನನ್ನು ಉದ್ಧಾರ ಮಾಡಿದ್ದು. 113. ಸುವರ್ಣ ವರ್ಷ ವರ್ಷಿಸಿದ್ದು (P. 47 ವಾ. ಗು. ಚ. "ಯಾ ಸುಗಂಧಾಸ್ಯನಾಸಾದಿ" ಮಂತ್ರದಿಂದ). 114. ಮೃತ್ತಿಕಾ ಸೇವಾ ಮಾಡುವ ಹುಡುಗಗೆ ರಾಜಕನ್ಯಾ ವಿವಾಹ ಮಾಡಿಸಿದ್ದು. 115. ವಾದಿರಾಜ ಗುಳ್ಳ ವಿಷ ಪರಿಹಾರ ಕ್ಕಾಗಿ ನಿರ್ಮಾಣ ಮಾಡಿದ್ದು. (ಮಟ್ಟುಗ್ರಾಮ). 116. ವಿಷಪ್ರಯೋಗ ಇನ್ನೊಮ್ಮೆ ಜೀರ್ಣಿಸಿ ಕೊಂಡಿದ್ದು. 117. ವಿಜಯೀಂದ್ರರನ್ನು ಮೂಢದಿಂದ ಇಳಿಸಿದ್ದು. 118. ತುರುಕಗೆ ಪಾದೋದಕ ಸೇವನದಿಂದ ಮೂರ್ಛೆ ಪರಿಹರಿಸಿದ್ದು. 119. ರಾಜರು ಗಂಡೂಷ ಸೇವನದಿಂದ ಅಸಹ್ಯ ಶಿರೋ ವೇದನ ಪರಿಹಾರ ಮಾಡಿದ್ದು. (P. 47 ವಾದಿರಾಜ ಗುರುವರರ ಚರಿತ್ರೆ). 120. ಮುಂದಾಗಿ ವೃಂದಾವನ ಮಾಡಿ ಪೂಜಾ ನಡಿಸಿದ್ದು. 121. ತಾಮ್ರದ ದುಡ್ಡು ಬೆಳ್ಳಿಗೆ ಮಾಡಿ ಶಂಕಾ ಪರಿ ಹರಿಸಿದ್ದು. 122. ವೃಂದಾವನ ಪ್ರವೇಶ ಮಾಡುವ ಸಮಯದಲ್ಲಿ ದೇವತೆಗಳು ಮಂತ್ರಾಕ್ಷತಾ ವರ್ಷಿಸಿದ್ದು.

ಬೇರೆ ಕಡೆಯಿಂದ ಸಂಗ್ರಹಿಸಿದ್ದು.

123. ಶೃಂಗೇರಿಯಲ್ಲಿ ಅದ್ವೈತ ವಾದಿಗಳನ್ನು ಗೆದ್ದು ಅಲ್ಲೆ ಮಠದ ಹತ್ತಿರ ಪ್ರಾಣದೇವರ ಪ್ರತಿಷ್ಠೆ ಮಾಡಿದ್ದು. 124. ಪೈಠೀಣಸಿ ನಾರಾಯಣಾಚಾರ್ಯರ ಗ್ರಂಥಗಳು ನದೀಲಿ ಮುಳುಗಿ ಕವಚ ಪತ್ರಾಳಿ ತೇಲಲಾಗಿ "ಇದೊಂದಿರಲಿ" ಎಂದು ಅನುಗ್ರಹಿಸಿ ವರಕೊಟ್ಟದ್ದು, (ಅದಕ್ಕೆ ವೇದನಿಧಿಗಳು ಧ್ಯಾನ ಶ್ಲೋಕ ಸೇರಿಸಿ ಉಪದೇಶ ಮಾಡಿದ್ದು). 125. ಬೇಲೂರು ವೈಕುಂಠದಾಸರ ಮನೆಗೆ ಹೋಗಿ ಮುದ್ದು ಕೃಷ್ಣನ್ನ ತೊಡೆಯ ಮೇಲೇರಿಸಿಕೊಂಡು ಪದ ಹೇಳಿದ್ದು. 126. ಕಾಶೀಯಲ್ಲಿ ಅದ್ವೈತ ವಾದಿಯನ್ನು ಗೆದ್ದು ಕಾಣಿಕೆ ಕೊಡು ಎಂದು ಕೇಳಲು ತನ್ನ ತೆಲಗುದೇಶದ ಶಿಷ್ಯನನ್ನು ಅರ್ಪಿಸಿದಾಗ, ಆ ವೈಷ್ಣವನಿಗೆ ಶಾಂತಿ ಪಾಠ ವರ್ಷಕಾಲ ದ್ವೈತ ಹೇಳಿ ಹಯಗ್ರೀವ ಸಾಲಿಗ್ರಾಮ ಮತ್ತು ತಾಮ್ರದ ಪ್ರಾಣದೇವರನ್ನು ಅನುಗ್ರಹಿಸಿ ಕೊಟ್ಟದ್ದು. (ಆ ಆಚಾರ್ಯರ ಕುಲದವರು ಗುಂಟೂರಿನಲ್ಲಿ ಈಗಲೂ ಇದ್ದಾರೆ). ಶ್ರೀಕೃಷ್ಣಾರ್ಪಣಮಸ್ತು.